ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ: ಜಾತಿ ಆಧಾರಿತ ಸಣ್ಣ ಪಕ್ಷಗಳ ಕಡೆಗಣನೆ ಸಾಧ್ಯವಿಲ್ಲ

ಬಿಜೆಪಿ–ಎಸ್‌ಪಿ ಮಾತ್ರವಲ್ಲ, ಇತರರೂ ಅಮುಖ್ಯರಲ್ಲ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಅಬ್ಬರದ ಪ್ರಚಾರದಲ್ಲಿ ತೊಡಗಿರುವ ಬಿಜೆಪಿ ಹಾಗೂ ಸಮಾಜವಾದಿ ಪಕ್ಷಗಳು ನೇರ ಎದುರಾಳಿಗಳು ಎಂದು ಬಿಂಬಿತವಾಗಿದೆ. ಆದರೂ ಇತರೆ ಪಕ್ಷಗಳು ಅಲ್ಪವಾದರೂ ಏಟು ನೀಡಬಲ್ಲವು.

ಚುನಾವಣಾ ಪ್ರಚಾರದಿಂದ ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ದೂರ ಇದೆ ಎಂದು ತಿಳಿದರೆ ತಪ್ಪಾಗುತ್ತದೆ ಎಂದು ಆ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ಹೇಳಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವು ಮಹಿಳಾ ಕೇಂದ್ರಿತ ಕಾರ್ಯಸೂಚಿಯ ಮೂಲಕ ಮಹತ್ವದ ಬದಲಾವಣೆ ತರಬಲ್ಲ ಆಶಾಭಾವ ಮೂಡಿಸಿದೆ.

ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಖಿಲೇಶ್ ಯಾದವ್ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸುತ್ತಿದ್ದಾರೆ. ಎಸ್‌ಪಿ ತಮ್ಮ ಪ್ರಮುಖ ಪ್ರತಿಸ್ಪರ್ಧಿ ಎಂದು ಪರಿಗಣಿಸಿದ್ದಾರೆ.

35 ವರ್ಷಗಳಿಂದಲೂ ಯಾವ ಪಕ್ಷವೂ ಎರಡನೇ ಅವಧಿಗೆ ಚುಕ್ಕಾಣಿ ಹಿಡಿಯಲು ಸಾಧ್ಯವಾಗದ ಉತ್ತರ ಪ್ರದೇಶದಲ್ಲಿ ಹಿಂದುತ್ವ ಹಾಗೂ ಅಭಿವೃದ್ಧಿ ಕಾರ್ಯಸೂಚಿಯನ್ನು ಇಟ್ಟುಕೊಂಡ ಬಿಜೆಪಿ, ಹಿಂದುಳಿದ ವರ್ಗಗಳಿಗೆ ಸೇರಿದ ಕೆಲವು ಪಕ್ಷಗಳೊಂದಿಗೆ ಮತ್ತೆ ಅಧಿಕಾರಕ್ಕೆ ಮರಳುವ ಯತ್ನದಲ್ಲಿದೆ. ಅಪ್ನಾದಳ (ಸೋನೇಲಾಲ್) ಮತ್ತು ನಿಶಾದ್ ಪಕ್ಷದ ಜೊತೆ ಬಿಜೆಪಿ ಮೈತ್ರಿ ಮಾಡಿಕೊಂಡಿವೆ.

ಉತ್ತರ ಪ್ರದೇಶದಲ್ಲಿ ಈ ಹಿಂದೆ ಬಿಜೆಪಿ ಮಿತ್ರಪಕ್ಷವಾಗಿದ್ದ, ಓಂಪ್ರಕಾಶ್ ರಾಜ್‌ಭರ್ ನೇತೃತ್ವದ ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ, ರಾಷ್ಟ್ರೀಯ ಲೋಕದಳ ಹಾಗೂ ಶಿವಪಾಲ್ ಯಾದವ್ ಅವರ ಪ್ರಗತಿಶೀಲ ಸಮಾಜವಾದಿ ಪಕ್ಷಗಳ ಜೊತೆ ಅಖಿಲೇಶ್ ಮೈತ್ರಿ ಮಾಡಿಕೊಂಡಿದ್ದು, ಬಿಜೆಪಿ ಲೆಕ್ಕಾಚಾರಗಳನ್ನು ಬುಡಮೇಲು ಮಾಡುವ ಸನ್ನಾಹದಲ್ಲಿದ್ದಾರೆ.

ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ಮೀಸಲಿಡುವ ಪ್ರಿಯಾಂಕಾ ಗಾಂಧಿ ಅವರ ಯೋಜನೆಯು, ರಾಜ್ಯದ ಜಾತಿ



ಲಖನೌದಲ್ಲಿ ಸಮಾಜವಾದಿ ಪಕ್ಷದ ಕಾರ್ಯಕರ್ತರೊಬ್ಬರ ಪ್ರಚಾರದ ವೈಖರಿ –ಪಿಟಿಐ ಚಿತ್ರ

ಸಮೀಕರಣಕ್ಕೆ ಸವಾಲಾಗಲಿದೆಯೇ ಎಂಬುದು ಇನ್ನಷ್ಟೇ ತಿಳಿಯಬೇಕಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಅಮೇಠಿಯಲ್ಲಿ ಪರಾಭವಗೊಂಡ ಬಳಿಕ ಕಾಂಗ್ರೆಸ್ ಭಾರಿ ಸವಾಲು ಎದುರಿಸುತ್ತಿದೆ.

ಚುನಾವಣಾ ಕಣದಲ್ಲಿ ಹಾಗೂ ಡಿಜಿಟಲ್ ವೇದಿಕೆಗಳಲ್ಲಿ ಬಿಎಸ್‌ಪಿ ಅಷ್ಟಾಗಿ ಕಾಣಿಸಿಕೊಳ್ಳದಿದ್ದರೂ, ರಾಜ್ಯದ ಜನಸಂಖ್ಯೆಯ ಶೇ 20ರಷ್ಟು ಪಾಲು ಹೊಂದಿರುವ ದಲಿತರ ಬೆಂಬಲವು ಪಕ್ಷಕ್ಕೆ ಇದೆ ಎನ್ನಲಾಗುತ್ತಿದೆ. 403 ವಿಧಾನಸಭಾ ಕ್ಷೇತ್ರಗಳ ಪೈಕಿ 86 ಕ್ಷೇತ್ರಗಳು ಎಸ್‌ಸಿ ಹಾಗೂ ಎಸ್‌ಟಿ ಮೀಸಲು ಕ್ಷೇತ್ರಗಳಾಗಿವೆ.

> **ಬಿಜೆಪಿ ಈ ಬಾರಿ 325 ಸ್ಥಾನಕ್ಕೆ ತನ್ನ ಸಂಖ್ಯಾಬಲ ಹೆಚ್ಚಿಸಿಕೊಳ್ಳಲಿದೆ. ಪ್ರತಿಪಕ್ಷಗಳು ಏನೇ ಹೇಳಿದರೂ, ಪಕ್ಷಕ್ಕೆ ಭಾರಿ ಮಟ್ಟದ ಜಯ ಸಿಗಲಿದೆ**
> **ಮನೀಶ್ ಶುಕ್ಲಾ**
> ಉತ್ತರ ಪ್ರದೇಶ ಬಿಜೆಪಿ ವಕ್ತಾರ

> **ಕೋವಿಡ್ ಕಳಪೆ ನಿರ್ವಹಣೆ, ಬೆಲೆ ಏರಿಕೆ, ನಿರುದ್ಯೋಗ ಹಾಗೂ ಕಳಪೆ ಕಾನೂನು ಸುವ್ಯವಸ್ಥೆ ಸೇರಿದಂತೆ ಹಲವು ವಿಚಾರಗಳಲ್ಲಿ ಸರ್ಕಾರದ ಮೇಲೆ ಜನರಿಗೆ ಸಿಟ್ಟಿದೆ**
> **ಅಶುತೋಶ್ ಸಿನ್ಹಾ**
> ಎಸ್‌ಪಿ ಶಾಸಕ

2024ರ ಸಾರ್ವತ್ರಿಕ ಚುನಾವಣೆ ದೃಷ್ಟಿಯಿಂದಲೂ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಮಹತ್ವದ ಎಂದು ಪರಿಗಣಿತವಾಗಿದೆ. ಅರವಿಂದ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷ ಹಾಗೂ ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಪಕ್ಷಗಳು ದೊಡ್ಡ ರಾಜ್ಯದಲ್ಲಿ ತಮ್ಮ ಛಾಪು ಒತ್ತಲು ಪ್ರಯತ್ನಿಸುತ್ತಿವೆ.

ಈ ಚುನಾವಣಾ ಫಲಿತಾಂಶವು ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಯಲ್ಲಿ ಪ್ರಭಾವ ಬೀರಲಿದೆ. ಅದಕ್ಕೂ ಮುನ್ನ 73 ರಾಜ್ಯಸಭಾ ಸದಸ್ಯರ ಅವಧಿ ಮುಕ್ತಾಯವಾಗಲಿದ್ದು, ಈ ಪೈಕಿ ಉತ್ತರ ಪ್ರದೇಶದಲ್ಲೇ 11 ಸದಸ್ಯರಿದ್ದಾರೆ. ಗೋವಾ, ಮಣಿಪುರದ ಚುನಾವಣಾ ಕಣಕ್ಕೆ ಧುಮುಕಿರುವ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ, ರಾಜ್ಯದಲ್ಲಿ ಅಖಿಲೇಶ್ ಅವರನ್ನು ಬೆಂಬಲಿಸಿ ಸುಮ್ಮನಾಗಿದೆ.

ಎನ್‌ಡಿಎ ಮಿತ್ರಪಕ್ಷಗಳಾದ ಜೆಡಿಯು, ಹಿಂದೂಸ್ತಾನ್ ಅವಾಮ್ ಮೋರ್ಚಾ, ವಿಕಾಸಶೀಲ ಇನ್ಸಾನ್ ಪಾರ್ಟಿಗಳು ಕೆಲವು ಕ್ಷೇತ್ರಗಳಲ್ಲಿ ಕಣಕ್ಕಿಳಿಯಲಿವೆ.

ಮತ ಎಣಿಕೆ ನಡೆಯಲಿರುವ ಮಾರ್ಚ್ 10ರಂದು ಕ್ರಾಂತಿ ಉಂಟಾಗಲಿದೆ ಎಂದು ಅಖಿಲೇಶ್ ಹೇಳಿದ್ದಾರೆ. ಈ ಮಾತನ್ನು ಮಾಯಾವತಿ ಒಪ್ಪುವುದಿಲ್ಲ. 2007ರ ಚುನಾವಣೆಯಲ್ಲಿ ಬಿಎಸ್‌ಪಿ–ಎಸ್‌ಪಿ ನಡುವೆ ನೇರ ಹಣಾಹಣೆ ಇರಲಿದೆ ಎಂದು ಮತದಾನಪೂರ್ವ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಆದರೆ ಬಿಎಸ್‌ಪಿ ಸರ್ಕಾರ ರಚಿಸಿತ್ತು.

ಚುನಾವಣಾ ಕಣದಲ್ಲಿ...

- **ಮುಝಫ್ಫರ್‌ನಗರಕ್ಕೆ 55 ತುಕಡಿ:** ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ 55 ತುಕಡಿಗಳನ್ನು ಮುಝಫ್ಫರ್‌ನಗರ ಜಿಲ್ಲೆಯಲ್ಲಿ ನಿಯೋಜಿಸಲಾಗುವುದು. ಚುನಾವಣೆಯು ಶಾಂತಿಯುತವಾಗಿ ನಡೆಯುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ. ಫೆಬ್ರುವರಿ 10ರಂದು ಜಿಲ್ಲೆಯಲ್ಲಿ ಮತದಾನ ನಡೆಯಲಿದೆ. ಒಂದು ತುಕಡಿಯಲ್ಲಿ ನೂರು ಸಿಬ್ಬಂದಿ ಇರುತ್ತಾರೆ
- **‘ಅಪೂರ್ಣ ಸೇತುವೆ ಉದ್ಘಾಟನೆ’:** ಗಂಗಾ ನದಿಗೆ ಶಾಜಹಾನ್‌ಪುರ ಸಮೀಪ ನಿರ್ಮಿಸಲಾಗಿರುವ ಅಪೂರ್ಣ ಸೇತುವೆಯನ್ನು ಉತ್ತರ ಪ್ರದೇಶದ ಸಚಿವ ಸುರೇಶ್ ಕುಮಾರ್ ಖನ್ನಾ ಕೆಲ ದಿನಗಳ ಹಿಂದೆ ಉದ್ಘಾಟಿಸಿದ್ದಾರೆ. ಸೇತುವೆ ನಿರ್ಮಾಣದ ಶ್ರೇಯ ಪಡೆದುಕೊಳ್ಳುವುದಕ್ಕಾಗಿ ಅಪೂರ್ಣ ಸೇತುವೆ ಮತ್ತು ಇತರ ಕಾಮಗಾರಿಗಳನ್ನು ಉದ್ಘಾಟಿಸಿ ಜನರನ್ನು ಮೂರ್ಖರನ್ನಾಗಿಸುವ ಪ್ರಯತ್ನ ನಡೆಯುತ್ತಿದೆ ಎಂದು ಎಸ್‌ಪಿ ಜಿಲ್ಲಾ ಘಟಕದ ಅಧ್ಯಕ್ಷ ತನ್ವೀರ್ ಖಾನ್ ಹೇಳಿದ್ದಾರೆ. ಸ್ವಲ್ಪ ಕೆಲಸ ಬಾಕಿ ಇರುವುದು ಹೌದು ಎಂದು ಯೋಜನೆಯ ಮುಖ್ಯ ವ್ಯವಸ್ಥಾಪಕ ದೇವೇಂದ್ರ ಸಿಂಗ್ ಅವರೂ ಹೇಳಿದ್ದಾರೆ
- **ಡಿಜಿಟಲ್ ಪ್ರಚಾರ:** ಇದೇ 15ರವರೆಗೆ ರ್‍ಯಾಲಿಗಳಿಗೆ ನಿಷೇಧ ಇರುವುದರಿಂದ ಉತ್ತರ ಪ್ರದೇಶದ ರಾಜಕೀಯ ಪಕ್ಷಗಳು ವರ್ಚುವಲ್ ಪ್ರಚಾರಕ್ಕೆ ಒತ್ತು ನೀಡುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿಯ ಅಸ್ತಿತ್ವ ಗಮನಾರ್ಹವಾಗಿಯೇ ಇದೆ. ಎಸ್‌ಪಿ ತನ್ನ ಡಿಜಿಟಲ್ ಪ್ರಚಾರವನ್ನು ಬಲಪಡಿಸಲು ಆರಂಭಿಸಿದೆ. ಎರಡೂ ಪಕ್ಷಗಳು ವರ್ಚುವಲ್ ಪ್ರಚಾರದ ಕಾರ್ಯತಂತ್ರ ರೂಪಿಸುತ್ತಿವೆ.
- **ಟಿಕೆಟ್ ಪ್ರತಿಸ್ಪರ್ಧಿಯ ಹತ್ಯೆ:** ಟಿಕೆಟ್ ಆಕಾಂಕ್ಷಿ ಪ್ರತಿಸ್ಪರ್ಧಿಯನ್ನು ಹತ್ಯೆ ಮಾಡಿದ ಆರೋಪದಲ್ಲಿ ಮಾಜಿ ಸಂಸದ ರಿಜ್ವಾನ್ ಝುಹೀರ್, ಅವರ ಮಗಳು ಜೇಬಾ ಮತ್ತು ಅವರ ಗಂಡನನ್ನು ಉತ್ತರ ಪ್ರದೇಶದ ಬಲರಾಂಪುರ ಪೊಲೀಸರು ಸೋಮವಾರ ಬಂಧಿಸಿದ್ದಾರೆ. ನಗರ ಪಂಚಾಯಿತಿಯ ಮಾಜಿ ಅಧ್ಯಕ್ಷ ಫಿರೋಜ್ ಅಲಿಯಾಸ್ ಪಪ್ಪು ತುಳಸೀಪುರ ವಿಧಾನಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದರು.
- **ಕಾಂಗ್ರೆಸ್ ಶಾಸಕ ರಾಜೀನಾಮೆ:** ಮಣಿಪುರದ ಕಾಂಗ್ರೆಸ್ ಶಾಸಕ ಚಾಲ್ಟೊಲಿನ್ ಅಮೊ ಅವರು ಬಿಜೆಪಿ ಸೇರಿದ ಮರುದಿನ ಅಂದರೆ ಸೋಮವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. 2017ರ ಚುನಾವಣೆಯಲ್ಲಿ ಮಣಿಪುರದಲ್ಲಿ ಕಾಂಗ್ರೆಸ್ 28 ಕ್ಷೇತ್ರಗಳಲ್ಲಿ ಗೆದ್ದಿತ್ತು. ಆದರೆ, ಹಲವು ಶಾಸಕರು ಪಕ್ಷಾಂತರ ಮಾಡಿದ್ದಾರೆ. ಫೆ.27 ಮತ್ತು ಮಾರ್ಚ್ 3ರಂದು ಮತದಾನ ನಡೆಯಲಿದೆ.

‘ಕಮಲ’ದ ಹಾದಿ ಕಷ್ಟ, ‘ಕೈ’ಗೆ ನಿರೀಕ್ಷೆ

ಪಣಜಿ (ಪಿಟಿಐ): ಕರಾವಳಿ ರಾಜ್ಯ ಗೋವಾ ದಲ್ಲಿ ಒಂದು ತಿಂಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಮರಳುವ ಬಿಜೆಪಿಯ ಕನಸು ನನಸಾಗುವುದು ಕಷ್ಟ. ಕಾಂಗ್ರೆಸ್ ಪಕ್ಷವೇ ಮತ್ತೆ ಮುನ್ನೆಲೆಗೆ ಬರಬಹುದು. ಈ ಬಾರಿ ಚುನಾವಣಾ ಕಣ ರಂಗೇರುವಂತೆ ಮಾಡಿರುವ ತೃಣಮೂಲ ಕಾಂಗ್ರೆಸ್ ಪಕ್ಷದ ಬಗ್ಗೆ ಜನರಿಗೆ ಅಂತಹ ಒಲವು ಇಲ್ಲ ಎಂದು ರಾಜಕೀಯ ವಿಶ್ಲೇಷಕರು ಅಂದಾಜಿಸಿದ್ದಾರೆ.

‘40 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷವು ಸುಮಾರು 20 ಕ್ಷೇತ್ರಗಳನ್ನು ಗೆಲ್ಲಬಹುದು. ಬಿಜೆಪಿ ಬಲ 15ಕ್ಕೆ ಸೀಮಿತವಾಗಬಹುದು. ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷವು (ಎಂಜಿಪಿ) 3–4 ಕ್ಷೇತ್ರಗಳಲ್ಲಿ ಗೆದ್ದರೆ ಎಎಪಿಗೆ ಎರಡು ಕ್ಷೇತ್ರಗಳು ದೊರಕಬಹುದು ಎಂದು ವಿಶ್ಲೇಷಕರು ಭವಿಷ್ಯ ನುಡಿದಿದ್ದಾರೆ.

ಗೋವಾದ ಮೊದಲ ಮುಖ್ಯಮಂತ್ರಿ ದಯಾನಂದ ಬಾಂದೋಡ್ಕರ್ ಅವರ ನೇತೃತ್ವದಲ್ಲಿ ಪಕ್ಷವು ಪ್ರವರ್ಧಮಾನಕ್ಕೆ ಬಂದಿತ್ತು. ಆದರೆ, ಈಗ ಪಕ್ಷದ ಬಲ ಕುಂದಿದೆ. ತೃಣಮೂಲ ಕಾಂಗ್ರೆಸ್ ಜತೆಗೆ ಪಕ್ಷವು ಮೈತ್ರಿ ಮಾಡಿಕೊಂಡಿದೆ. ಎಂಜಿಪಿ ಏಕಾಂಗಿಯಾಗಿ ಸ್ಪರ್ಧಿಸಿದ್ದರೆ ಬಹಳ ಕಷ್ಟಪಡಬೇಕಾಗುತ್ತಿತ್ತು. ತೃಣಮೂಲ ಕಾಂಗ್ರೆಸ್‌ನ ಹಣ ಬಲವು ಎಂಜಿಪಿಗೆ ನೆರವಾಗಲಿದೆ ಎಂದು ರಾಜ್ಯದ ನಿವೃತ್ತ ಚುನಾವಣಾ ಆಯುಕ್ತ ಪ್ರಭಾಕರ ಟಿಂಬ್ಲೊ ಹೇಳಿದ್ದಾರೆ.

ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ತೀವ್ರವಾಗಿದೆ. ಅದು ಬಿಜೆಪಿಗೆ ಮಾರಕವಾಗಿ ಪರಿಣಮಿಸಲಿದೆ. ಕಾಂಗ್ರೆಸ್ ಪಕ್ಷವು ಸರ್ಕಾರ ರಚಿಸಲಿದೆ ಎಂದು ಟಿಂಬ್ಲೊ ಅಂದಾಜಿಸಿದ್ದಾರೆ.

ಚಲಾವಣೆ ಕಳೆದುಕೊಂಡವರಿಗೆ ಕಾಂಗ್ರೆಸ್ ಪಕ್ಷವು ಮಹತ್ವ ಕೊಡಬಾರದು. ಟಿಎಂಸಿ ಮತ್ತು ಎಎಪಿಯ ಪರಿಣಾಮವು ತೀವ್ರವಾಗಿ ಇರುವುದಿಲ್ಲ ಎಂದು ಟಿಂಬ್ಲೊ ಹೇಳಿದ್ದಾರೆ.

ಆದರೆ, ರಾಜಕೀಯ ವಿಶ್ಲೇಷಕ ಮತ್ತು ಬಿಜೆಪಿ ಬೆಂಬಲಿಗ ಗಿರಿರಾಜ್ ಪೈ ವೆರ್ನೇಕರ್ ಅವರು ಭಿನ್ನ ಅಭಿಪ್ರಾಯ ಹೊಂದಿದ್ದಾರೆ. ‘ಬಿಜೆಪಿಗೆ ಆಡಳಿತ ವಿರೋಧಿ ಅಲೆಯ ಭೀತಿ ಇಲ್ಲ. ಏಕೆಂದರೆ, ರಾಜ್ಯದ ಅಭಿವೃದ್ಧಿಗೆ ಡಬಲ್ ಎಂಜಿನ್ ಸರ್ಕಾರ ಬೇಕು ಎಂಬುದು ಜನರಿಗೆ ತಿಳಿದಿದೆ. ಇಲ್ಲದೇ ಇದ್ದರೆ ಪಶ್ಚಿಮ ಬಂಗಾಳದಲ್ಲಿ ಆದಂತೆ ಕೇಂದ್ರ ಮತ್ತು ರಾಜ್ಯದ ಸಂಘರ್ಷ ಏರ್ಪಡುತ್ತದೆ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿಯ ವಿರುದ್ಧ ಮತ್ತು ಕಾಂಗ್ರೆಸ್–ಗೋವಾ ಫಾರ್ವರ್ಡ್ ಪಾರ್ಟಿಯ (ಜಿಎಫ್‌ಪಿ) ಪರ ಭಾರಿ ಅಲೆ ಸೃಷ್ಟಿಯಾಗಿದೆ ಎಂದು ಜಿಎಫ್‌ಪಿ ಪ್ರಧಾನ ಕಾರ್ಯದರ್ಶಿ ದುರ್ಗಾದಾಸ್ ಕಾಮತ್ ಹೇಳಿದ್ದಾರೆ. ಕಾಂಗ್ರೆಸ್ ಮತ್ತು ಜಿಎಫ್‌ಪಿ ಮೈತ್ರಿ ಮಾಡಿಕೊಂಡಿವೆ.

ಗೋವಾದಲ್ಲಿ ಚುನಾವಣೆಗೆ ಮುನ್ನ ಮತ್ತೆ ಶುರುವಾದ ಪಕ್ಷಾಂತರ ಪರ್ವ

ಬಿಜೆಪಿ ತೊರೆದ ಸಚಿವ ಲೋಬೊ, ಶಾಸಕ ಪ್ರವೀಣ್

ಪಣಜಿ (ಪಿಟಿಐ): ಗೋವಾ ವಿಧಾನಸಭೆ ಚುನಾವಣೆಗೆ ಕೇವಲ ಒಂದು ತಿಂಗಳು ಬಾಕಿ ಇರುವಂತೆ, ಗೋವಾ ಸಚಿವ ಮೈಕೆಲ್ ಲೋಬೊ ಮತ್ತು ಬಿಜೆಪಿ ಶಾಸಕ ಪ್ರವೀಣ್ ಝಾಂತ್ಯೆ ಬಿಜೆಪಿ ಸದಸ್ಯತ್ವಕ್ಕೆ ಮತ್ತು ಗೋವಾ ವಿಧಾನಸಭೆಗೆ ಸೋಮವಾರ ರಾಜೀನಾಮೆ ನೀಡಿದರು.

ಕಲಂಗುಟ್ ವಿಧಾನಸಭೆ ಕ್ಷೇತ್ರದ ಶಾಸಕರಾದ ಲೋಬೊ ಅವರು ಬಂದರು ಮತ್ತು ತ್ಯಾಜ್ಯ ನಿರ್ವಹಣಾ ಸಚಿವರಾಗಿದ್ದರು. ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಗೋವಾ ವಿಧಾನಸಭೆ ಸ್ಪೀಕರ್‌ಗೆ ಅವರು ರಾಜೀನಾಮೆ ಪತ್ರ ನೀಡಿದ್ದಾರೆ. ಈ ಕುರಿತು ಸುದ್ದಿಗಾರರ ಎದುರು ಮಾತನಾಡಿದ ಲೋಬೊ, ‘ಪಕ್ಷದ ಸದಸ್ಯತ್ವ ಮತ್ತು ಸಚಿವ ಸ್ಥಾನಗಳಿಗೆ ನಾನು ರಾಜೀನಾಮೆ ನೀಡಿದ್ದೇನೆ. ಮುಂದೆ ಯಾವ ಹೆಜ್ಜೆ ಇಡಬೇಕು ಎಂಬುದನ್ನು ನಿರ್ಧರಿಸುತ್ತೇನೆ. ಬಿಜೆಪಿ ಆಡಳಿತದ ಕುರಿತು ಗೋವಾ ಜನರು ಅಸಮಾಧಾನ ಹೊಂದಿದ್ದಾರೆ. ಬಿಜೆಪಿ ಸಾಮಾನ್ಯರ ಪಕ್ಷವಾಗಿ ಉಳಿದಿಲ್ಲ ಎಂದು ಮತದಾರರು ನನಗೆ ಹೇಳಿದ್ದಾರೆ. ಪಕ್ಷ ತಮ್ಮನ್ನು ಕಡೆಗಣಿಸುತ್ತಿದೆ ಎಂದು ಬುಡಮಟ್ಟದ ಕಾರ್ಯಕರ್ತರು ಭಾವಿಸಿದ್ದಾರೆ’ ಎಂದರು.

ಕಾಂಗ್ರೆಸ್ ಸೇರುವ ಸಾಧ್ಯತೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬೇರೆಬೇರೆ ಪಕ್ಷಗಳ ಜೊತೆ ಮತುಕತೆ ನಡೆಯುತ್ತಿದೆ ಎಂದರು. ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.


ಲೋಬೊ ರಾಜೀನಾಮೆ ನೀಡಿದ ಕೆಲವೇ ಗಂಟೆಗಳಲ್ಲಿ ಮಾಯೆಮ್ ವಿಧಾನಸಭೆ ಕ್ಷೇತ್ರದ ಶಾಸಕ ಪ್ರವೀಣ್ ಝಾಂತ್ಯೆ ಕೂಡಾ ರಾಜೀನಾಮೆ ನೀಡಿದ್ದಾರೆ. ‘ಮಾಜಿ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರ ಕಾರಣಕ್ಕಾಗಿ ನಾನು ಬಿಜೆಪಿ ಸೇರಿದೆ. ಅವರ ನಿಧನದ ನಂತರ ಪಕ್ಷದಲ್ಲಿ ನನ್ನನ್ನು ಕಡೆಗಣಿಸಲಾಯಿತು’ ಎಂದು ಝಾಂತ್ಯೆ ಹೇಳಿದ್ದಾರೆ. ಅದಲ್ಲದೇ ತಮ್ಮ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆ ಬಾಧಿಸುತ್ತಿದೆ. ಅದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಯಿತು ಎಂದು ಹೇಳಿದ್ದಾರೆ.

ಈ ಬೆಳವಣಿಗೆಗಳಿಂದ ಪಕ್ಷಕ್ಕೆ ಯಾವುದೇ ರೀತಿಯ ನಷ್ಟವಿಲ್ಲ ಎಂದು ಪ್ರಮೋದ್ ಸಾವಂತ್ ಅವರು ಸರಣಿ ಟ್ವೀಟ್‌ಗಳ ಮೂಲಕ ಹೇಳಿದ್ದಾರೆ. ‘ಬಿಜೆಪಿ ಒಂದು ದೊಡ್ಡ ಕುಟುಂಬ. ಅದು ಸಂಪೂರ್ಣ ಸಮರ್ಪಣಾ ಭಾವದಿಂದ ಮಾತೃಭೂಮಿಯ ಸೇವೆಯನ್ನು ಸದಾ ಮಾಡುತ್ತದೆ. ದುರಾಸೆ ಮತ್ತು ವೈಯಕ್ತಿಕ ಹಿತಾಸಕ್ತಿಯ ಕಾರಣದಿಂದ ಕೆಲವರು ಪಕ್ಷಾಂತರ ಮಾಡುತ್ತಾರೆ. ಇದರಿಂದ ಉತ್ತಮ ಆಡಳಿತ ನೀಡಬೇಕು ಎಂಬ ನಮ್ಮ ಉದ್ದೇಶಕ್ಕೆ ಅಡ್ಡಿ ಆಗುವುದಿಲ್ಲ. ಬಿಜೆಪಿಯ ಆಡಳಿತ ಮತ್ತು ಅಭಿವೃದ್ಧಿ ಮಾದರಿಯನ್ನು ಗೋವಾ ಜನರು ಒಂದು ದಶಕದಿಂದ ನೋಡುತ್ತಿದ್ದಾರೆ. ಅವರು ನಮಗೆ ಮತ್ತೊಂದು ಅವಧಿಯನ್ನು ಕೊಡುತ್ತಾರೆ ಎಂಬ ವಿಶ್ವಾಸ ನನಗಿದೆ’ ಎಂದು ಹೇಳಿದ್ದಾರೆ.


ಈ ಬೆಳವಣಿಗೆ ಕುರಿತು ಪ್ರತಿಕ್ರಿಯೆ ನೀಡಿರುವ ಬಿಜೆಪಿ ಗೋವಾ ಅಧ್ಯಕ್ಷ ಸದಾನಂದ್ ಶೇಟ್ ತಾನಾವಾಡೆ, ‘ಲೋಬೊ ಅವರು ಪಕ್ಷ ತೊರೆದಿರುವುದರಿಂದ ಚುನಾವಣೆಯಲ್ಲಿ ಪಕ್ಷದ ಮೇಲೆ ಯಾವುದೇ ರೀತಿಯ ಪರಿಣಾಮ ಆಗುವುದಿಲ್ಲ. ಲೋಬೊ ಮಾನಸಿಕವಾಗಿ ಮೊದಲೇ ಪಕ್ಷ ತೊರೆದಿದ್ದರು. ಕೇವಲ ದೈಹಿಕವಾಗಿ ನಮ್ಮ ಜೊತೆ ಇದ್ದರು. ಕಲಂಗುಟ್ ಬಿಜೆಪಿ ಕಾರ್ಯಕರ್ತರು ಪಕ್ಷದ ಜೊತೆಯೇ ಇದ್ದಾರೆ. ಹೊಸ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಈ ವಿಧಾನಸಭೆ ಕ್ಷೇತ್ರವನ್ನು ಪಕ್ಷ ಮರಳಿ ಪಡೆಯಲಿದೆ’ ಎಂದರು.

ಫೆ.14ರಂದು ಗೋವಾ ವಿಧಾನಸಭೆ ಚುನಾವಣೆ ನಡೆಯಲಿದೆ. ಕಾಂಗ್ರೆಸ್, ಬಿಜೆಪಿ, ಎಂಜಿಪಿ, ಜಿಎಫ್‌ಪಿ ಜೊತೆ ಈ ಬಾರಿ ಟಿಎಂಸಿ, ಎಎಪಿ, ಎನ್‌ಸಿಪಿ ಪಕ್ಷಗಳೂ ಕಣದಲ್ಲಿವೆ.

ನುಡಿ–ಕಿಡಿ



ಉತ್ತರಾಖಂಡದಲ್ಲಿ ಎರಡು ದಶಕಗಳಿಂದ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಅಧಿಕಾರದ ಸಂಗೀತ ಕುರ್ಚಿ ಆಟ ನಡೆಯುತ್ತಿದೆ. ಅದನ್ನು ನಿಲ್ಲಿಸಿ. ಉತ್ತರಾಖಂಡದಲ್ಲಿ ದೆಹಲಿ ಮಾದರಿ ಆಳ್ವಿಕೆಯನ್ನು ಜಾರಿಗೊಳಿಸಲು ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರಿಗೆ ಅವಕಾಶ ಕೊಡಿ
ಮನೀಶ್ ಸಿಸೋಡಿಯಾ, ದೆಹಲಿ ಉಪಮುಖ್ಯಮಂತ್ರಿ



ಉತ್ತರ ಪ್ರದೇಶದ ಆಡಳಿತ ಪಕ್ಷದ ಬಗ್ಗೆ ಜನರು ಆಕ್ರೋಶಗೊಂಡಿದ್ದಾರೆ. ಪ್ರಿಯಾಂಕಾ ಗಾಂಧಿ ಅವರ ಪ್ರಯತ್ನವು ಬದಲಾವಣೆಗೆ ಕಾರಣವಾಗಲಿದೆ. ಚುನಾವಣಾ ಫಲಿತಾಂಶವು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ ಅಚ್ಚರಿ ಮೂಡಿಸಲಿದೆ
ಕಮಲನಾಥ್, ಕಾಂಗ್ರೆಸ್ ಮುಖಂಡ



ಕಾಂಗ್ರೆಸ್ ಮತ್ತು ಭ್ರಷ್ಟಾಚಾರ ಒಂದೇ ನಾಣ್ಯದ ಎರಡು ಮುಖಗಳು. ಕಾಂಗ್ರೆಸ್ ಪಕ್ಷವು ಭ್ರಷ್ಟಾಚಾರದ ಕೇಂದ್ರ. ಉತ್ತರಾಖಂಡದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿ ಇದ್ದಾಗ ಮಾಫಿಯಾಗಳಿಗೆ ರಕ್ಷಣೆ ಕೊಟ್ಟಿತ್ತು. ಈ ಚುನಾವಣೆಯಲ್ಲಿ ಜನರು ನಮ್ಮ ಒಳ್ಳೆಯ ಕೆಲಸ ಮತ್ತು ಅವರ ಕೆಟ್ಟ ಕೆಲಸದಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಿದೆ
ಪುಷ್ಕರ್ ಸಿಂಗ್ ಧಾಮಿ, ಉತ್ತರಾಖಂಡ ಮುಖ್ಯಮಂತ್ರಿ

ನಟ ಸೋನು ಸೂದ್ ತಂಗಿ ಕಾಂಗ್ರೆಸ್‌ಗೆ

ಚಂಡೀಗಢ (ಪಿಟಿಐ): ನಟ, ಸಾಮಾಜಿಕ ಕಾರ್ಯಕರ್ತ ಸೋನು ಸೂದ್ ಅವರ ಸಹೋದರಿ ಮಾಳವಿಕಾ ಸೂದ್ ಸಾಚಾರ್ ಅವರು ಸೋಮವಾರ ಕಾಂಗ್ರೆಸ್‌ಗೆ ಸೇರಿದರು.

ಪಂಜಾಬ್‌ನ ಮೊಗ ಜಿಲ್ಲೆಯಲ್ಲಿರುವ ಸೋನು ನಿವಾಸಕ್ಕೇ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಮತ್ತು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರು ತೆರಳಿ ಮಾಳವಿಕಾ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಮಾಳವಿಕಾರನ್ನು ಪಕ್ಷಕ್ಕೆ ಸ್ವಾಗತಿಸಿದ ಸಿಧು, ‘ಮುಖ್ಯಮಂತ್ರಿ ಮತ್ತು ಪಕ್ಷದ ಮುಖ್ಯಸ್ಥರು ಒಬ್ಬರ ಮನೆಗೆ ತೆರಳಿ ಗೌರವ ಸಲ್ಲಿಸುವುದು ಬಹಳ ಅಪರೂಪ. ಮಾಳವಿಕಾ ಆ ಗೌರವಕ್ಕೆ ಅರ್ಹರಾಗಿದ್ದಾರೆ. ಮಾಳವಿಕಾ



ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರೊಂದಿಗೆ ಸೋನು ಸೂದ್ ಮತ್ತು ತಂಗಿ ಮಾಳವಿಕಾ ಸೂದ್ ಸಾಚಾರ್ ಪಿಟಿಐ ಚಿತ್ರ

ಅವರ ಸೇರ್ಪಡೆಯಿಂದ ಪಕ್ಷಕ್ಕೆ ಭಾರಿ ಬಲ ಬಂದಿದೆ. ಸರ್ಕಾರೇತರ ಸಂಸ್ಥೆ (ಎನ್‌ಜಿಒ) ನಡೆಸುವ ಮೂಲಕ ಮತ್ತು ಜನರ ಸೇವೆ ಸಲ್ಲಿಸುವ ಮೂಲಕ ಹೆಸರು ಮಾಡಿರುವ ಮಹಿಳೆ ನಮ್ಮ ಪಕ್ಷಕ್ಕೆ ಸೇರುತ್ತಿರುವುದು ನಮಗೆ ಬಹಳ ಸಂತೋಷ ತಂದಿದೆ’ ಎಂದರು.

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಮಾಳವಿಕಾ ಸ್ಪರ್ಧಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಚನ್ನಿ, ಮಾಳವಿಕಾ ಅವರನ್ನು ಪಕ್ಷವು ಅಭ್ಯರ್ಥಿಯಾಗಿ ಆಯ್ಕೆ ಮಾಡಲಿದೆ ಎಂದರು. ಜನರ ಸೇವೆ ಮಾಡುವ ಸಲುವಾಗಿ ರಾಜಕೀಯ ಪ್ರವೇಶ ಮಾಡಿದ್ದಾಗಿ ಮಾಳವಿಕಾ ಸೂದ್ ಹೇಳಿದರು. ತಮ್ಮ ಸಹೋದರಿ ರಾಜಕೀಯ ಪ್ರವೇಶಿಸಲಿದ್ದಾರೆ ಎಂದು ಈ ಮೊದಲೇ ಸೋನುಸೂದ್ ಹೇಳಿದ್ದರು.

‘ಎಎಪಿ ಜತೆಗೆ ಮೈತ್ರಿ ಇಲ್ಲ’

ಚಂಡೀಗಢ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಜತೆಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಸಂಯುಕ್ತ ಸಮಾಜ್ ಮೋರ್ಚಾ (ಎಸ್‌ಎಸ್‌ಎಂ) ಹೇಳಿದೆ. ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರ ಹೋರಾಟದಲ್ಲಿ ಎಸ್‌ಎಸ್‌ಎಂ ಪ್ರಮುಖ ಪಾತ್ರ ವಹಿಸಿತ್ತು.

ಪಕ್ಷವು ಎಎಪಿ ಜತೆಗೆ ಮೈತ್ರಿ ಮಾಡಿಕೊಳ್ಳುತ್ತದೆ ಎಂಬ ವದಂತಿ ಹರಿದಾಡುತ್ತಿದ್ದವು. ‘ಮೈತ್ರಿ ಸಂಬಂಧ ಎರಡೂ ಪಕ್ಷಗಳ ನಾಯಕರ ಮಾತುಕತೆ ಮುರಿದುಬಿದ್ದಿದೆ’ ಎಂದು ಮೂಲಗಳು ಹೇಳಿವೆ.

ವಿಚಾರಣೆಯಿಂದ ಹಿಂದೆ ಸರಿದ ಇಬ್ಬರು ನ್ಯಾಯಮೂರ್ತಿಗಳು

ನವದೆಹಲಿ: ಕರ್ನಾಟಕ ಸೇರಿದಂತೆ ದಕ್ಷಿಣದ ನಾಲ್ಕು ರಾಜ್ಯಗಳ ನಡುವಿನ ಕೃಷ್ಣಾ ನದಿ ಜಲವಿವಾದ ಕುರಿತ ಪ್ರಕರಣದ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರು ಹಿಂದೆ ಸರಿದಿದ್ದಾರೆ.

ಸೋಮವಾರ ಪ್ರಕರಣವು ವಿಚಾರಣೆಗೆ ಬರುತ್ತಿದ್ದಂತೆ ನ್ಯಾಯಮೂರ್ತಿ ಚಂದ್ರಚೂಡ್ ಅವರು, ‘ನಾವು ಮೂಲತಃ ಕ್ರಮವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದವರು’ ಎಂಬುದನ್ನು ಉಲ್ಲೇಖಿಸಿದರು.

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ತೆಲಂಗಾಣ ನಡುವೆ ಕೃಷ್ಣಾ ನದಿ ಜಲವಿವಾದವಿದೆ. ವಿವಿಧ ರಾಜ್ಯಗಳನ್ನು ಪ್ರತಿನಿಧಿಸಿದ್ದ ವಕೀಲರು, ‘ತಮ್ಮದೇನೂ ಆಕ್ಷೇಪವಿಲ್ಲ’ ಎಂದು ಪೀಠಕ್ಕೆ ತಿಳಿಸಿದರು.

ಆದರೆ, ಚಂದ್ರಚೂಡ್ ಅವರು, ಇದೇ ಕಾರಣದಿಂದಾಗಿ ಈ ಹಿಂದೆ ನ್ಯಾಯಮೂರ್ತಿಗಳಾದ ಎ.ಎಂ. ಖಾನ್‌ವಿಲ್ಕರ್ ಮತ್ತು ಮೋಹನ್ ಎಂ.ಶಾಂತನಗೌಡರ್ ಅವರು ವಿಚಾರಣೆಯಿಂದ ಹಿಂದೆ ಸರಿದಿದ್ದರು ಎಂಬುದನ್ನು ನೆನಪಿಸಿದರು.

ನಾವು ಈ ಪ್ರಕರಣದಿಂದ ದೂರ ಉಳಿಯುತ್ತೇವೆ. ಈ ವಿಷಯವನ್ನು ಇನ್ನೊಂದು ಪೀಠದ ವಿಚಾರಣೆಗೆ ಬಿಡುವುದು ಸೂಕ್ತ ಎಂದು ಹೇಳಿದರು. ಬೇರೆ ಪೀಠಕ್ಕೆ ವಹಿಸುವ ಕುರಿತು ಮುಖ್ಯ ನ್ಯಾಯಮೂರ್ತಿ ತೀರ್ಮಾನಿಸಬೇಕಿದೆ.

ಜನಸ್ನೇಹಿ ಆಡಳಿತ: ಇಲಾಖೆಗಳಿಗೆ ಶ್ರೇಯಾಂಕ

ಆಡಳಿತ ಸುಧಾರಣೆಗೆ ಸಿ.ಎಂ ಬೊಮ್ಮಾಯಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಸ್ನೇಹಿ ಆಡಳಿತದ ದೃಷ್ಟಿಯಿಂದ ಎಲ್ಲ ಇಲಾಖೆಗಳಿಗೂ ಶ್ರೇಯಾಂಕ ನೀಡುವುದಕ್ಕೆ ಪೂರಕವಾಗಿ ಮಾನದಂಡಗಳನ್ನು ನಿಗದಿಪಡಿಸಲು ಮುಂದಿನ ವರದಿಯಲ್ಲಿ ಸಲಹೆಗಳನ್ನು ನೀಡುವಂತೆ ರಾಜ್ಯ ಆಡಳಿತ ಸುಧಾರಣಾ ಆಯೋಗಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಆಡಳಿತ ಸುಧಾರಣೆ ಕುರಿತು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಟಿ.ಎಂ. ವಿಜಯ ಭಾಸ್ಕರ್, ವಿವಿಧ ಸಚಿವರು ಮತ್ತು ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, ಆಯೋಗದ ಮುಂದಿನ ವರದಿಯಲ್ಲಿ ಕೇಂದ್ರೀಕರಿಸಬೇಕಾದ ವಿಷಯಗಳ ಬಗ್ಗೆ ಸಮಾಲೋಚಿಸಿದರು.

ಕಡತ ವಿಲೇವಾರಿಯ ಹಂತಗಳನ್ನು ಕಡಿಮೆ ಮಾಡಬೇಕು. ಕಡತ ವಿಲೇವಾರಿಯಲ್ಲಿ ಕೇಂದ್ರೀಕೃತ ವ್ಯವಸ್ಥೆ ಬದಲಾಗಿ ವಿಕೇಂದ್ರೀಕೃತ ವ್ಯವಸ್ಥೆ ರೂಪಿಸುವಂತೆ ಸಲಹೆ ನೀಡಬೇಕು. ಸಾರ್ವಜನಿಕರಿಗೆ ಸುಲಭವಾಗಿ ಸರ್ಕಾರಿ ಸೇವೆಗಳನ್ನು ಒದಗಿಸುವುದಕ್ಕೆಪೂರಕವಾಗಿ ನಿರ್ಧಾರ ಕೈಗೊಳ್ಳಯವ ಹಂತಗಳನ್ನು ಕಡಿಮೆ ಮಾಡಬೇಕು. ಕೆಳಹಂತದ ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ನೀಡಬೇಕು. ಕಂದಾಯ ಇಲಾಖೆಯ ಕೆಲವು ಹೊಣೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಬೇಕು ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

ಜಂಟಿ ಕಾರ್ಯದರ್ಶಿಗಳು ಮತ್ತು ಉಪ ಕಾರ್ಯದರ್ಶಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು. ಬೃಹತ್ ನೀರಾವರಿ ಮತ್ತು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರಿಗೆ ನೀಡಬೇಕು. ಲೋಕೋಪಯೋಗಿ, ಜಲ ಸಂಪನ್ಮೂಲ ಇಲಾಖೆಯ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಬದಲಾವಣೆಗಳನ್ನು ತರಬೇಕು ಎಂದರು.

ಕಾಯ್ದೆಗಳಲ್ಲಿ ಬದಲಾವಣೆ ತರುವುದು, ಪುನರಾವರ್ತಿತ ಕಾಯ್ದೆಗಳನ್ನು ಗುರುತಿಸುವುದು, ಸರ್ಕಾರಿ ಯೋಜನೆಗಳು ಮತ್ತು ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ್ದು, ಬ್ಯಾಂಕ್ ಖಾತೆಗಳಲ್ಲೇ ಉಳಿದಿರುವ ಮೊತ್ತವನ್ನು ತ್ವರಿತವಾಗಿ ಬಳಕೆ ಮಾಡುವುದಕ್ಕೂ ಸಲಹೆಗಳನ್ನು ನೀಡಬೇಕು ಎಂದು ಸೂಚಿಸಿದರು.

ಸಚಿವರಾದ ಆರಗ ಜ್ಞಾನೇಂದ್ರ, ಬೈರತಿ ಬಸವರಾಜ, ಡಾ.ಕೆ. ಸುಧಾಕರ್, ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ, ಯೋಜನಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ಪಿ. ಹೇಮಲತಾ, ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಮುನೀಶ್ ಮೌದ್ಗಿಲ್ ಸಭೆಯಲ್ಲಿದ್ದರು.

ನಾಲೆಯಲ್ಲಿ ಓಡಿದ ಗಜಪಡೆ



ಹುಣಸೂರು ತಾಲ್ಲೂಕಿನ ಗುರುಪುರ ಪಂಚಾಯಿತಿ ವ್ಯಾಪ್ತಿಯಲ್ಲಿ ಸೋಮವಾರ ಪಾಲಾ ನಾಲೆಯಲ್ಲಿ ನಾಗರಹೊಳೆ ಅರಣ್ಯದಿಂದ ಬಂದ ಕಾಡಾನೆಗಳು ಕಾಡಿನತ್ತ ಓಡಿದವು

ಹುಣಸೂರು: ಇಲ್ಲಿನ ನಾಗರಹೊಳೆ ವೀರನಹೊಸಹಳ್ಳಿ ವಲಯದಿಂದ ಹೊರಬಂದ ಕಾಡಾನೆ ಹಿಂಡನ್ನು ಲಕ್ಷ್ಮಣತೀರ್ಥ ನದಿಯ ನಾಲೆ ಮೂಲಕ ಕಾಡಿಗೆ ಅಟ್ಟಲಾಗಿದೆ.

ನೀರು ಹರಿಯುತ್ತಿರುವ ನಾಲೆಯಲ್ಲಿ 6 ಕಾಡಾನೆಗಳು ಓಡುತ್ತಿರುವ ಹಾಗೂ ಗ್ರಾಮಸ್ಥರು ಜೋರಾಗಿ ಕೂಗುತ್ತಾ ಅವುಗಳನ್ನು ಓಡಿಸಲು ಪ್ರಯತ್ನಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಆನೆಗಳು ನಾಲೆಯ ಏರಲು ಪ್ರಯತ್ನಿಸಿದ್ದು, ಸಾಧ್ಯವಾಗಿಲ್ಲ.

ಆನೆಗಳು ಕಾಡಿನಿಂದ ಹೊರಬಾರದಂತೆ ತಡೆಯಲು ಅರಣ್ಯ ಇಲಾಖೆ ರಾತ್ರಿ ಪಾಳಿಯಲ್ಲಿ 16 ಸಿಬ್ಬಂದಿ ನಿಯೋಜಿಸಿತ್ತು. ಆದರೆ, ಭಾನುವಾರ ಇವರ ಕಣ್ತಪ್ಪಿಸಿ 6 ಕಾಡಾನೆಗಳು ಗ್ರಾಮಗಳತ್ತ ನುಸುಳಿದ್ದವು.

ಗುರುಪುರ ಟಿಬೆಟ್ ಕ್ಯಾಂಪ್ ಮಾರ್ಗವಾಗಿ ಕಂದಕ ದಾಟಿ ಬಂದ ಕಾಡಾನೆಗಳು ಪಾಲ, ಕೂಡ್ಲೂರು, ತಟ್ಟೆಕೆರೆ, ಚೆನ್ನಸೋಗೆ ಭಾಗಗಳ ರೈತರ ಗದ್ದೆ, ತೋಟಗಳಲ್ಲಿನ ಬೆಳೆಗಳನ್ನು ನಾಶಪಡಿಸಿವೆ. ಬಹಳಷ್ಟು ಕಡೆ ಅಡಿಕೆ ಗಿಡಗಳನ್ನು ಹೊಸಕಿ ಹಾಕಿವೆ.

ಮುಖ್ಯಾಂಶಗಳು
- ಆನೆಗಳ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ
- ಅರಣ್ಯ ಇಲಾಖೆ ಸಿಬ್ಬಂದಿ ಕಣ್ತಪ್ಪಿಸಿ ಗ್ರಾಮಗಳತ್ತ ನುಸುಳಿದ್ದ 6 ಕಾಡಾನೆಗಳು
- ರೈತರ ಗದ್ದೆ, ತೋಟಗಳಲ್ಲಿನ ಬೆಳೆ ಹೊಸಕಿ ಹಾಕಿದ ಆನೆಗಳ ಹಿಂಡು

‘ಸೋಮವಾರ ನಸುಕಿನಿಂದಲೇ ಆನೆ ಓಡಿಸುವ ಕಾರ್ಯಾಚರಣೆ ನಡೆಸಲಾಯಿತು. ನಲ್ಲೂರು ಪಾಲ ನಾಲೆ ಮೂಲಕ ಆನೆಯನ್ನು ಗುರುಪುರ ಟಿಬೆಟ್ ಕ್ಯಾಂಪ್ ಮಾರ್ಗ ಅರಣ್ಯಕ್ಕೆ ಅಟ್ಟಲಾಗಿದೆ’ ಎಂದು ವೀರನಹೊಸಹಳ್ಳಿಯ ವಲಯ ಅರಣ್ಯಾಧಿಕಾರಿ ನಮನ ನಾರಾಯಣ ನಾಯಕ್ ತಿಳಿಸಿದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಿಸಿಎಫ್ ಮಹೇಶ್ ಕುಮಾರ್, ‘ಎಲ್ಲ ಆನೆಗಳನ್ನು ಸುರಕ್ಷಿತವಾಗಿ ಕಾಡಿಗಟ್ಟಲಾಗಿದೆ. ಗುಂಪುಗೂಡಿದ್ದ ಗ್ರಾಮಸ್ಥರನ್ನು ಪೊಲೀಸರ ನೆರವಿನಿಂದ ಚದುರಿಸಲಾಗಿದೆ’ ಎಂದರು.

ಚೀನಾ–ಭಾರತ ನಡುವೆ ಗಡಿ ಬಿಕ್ಕಟ್ಟು

ನಾಳೆ 14ನೇ ಸುತ್ತಿನ ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಬಳಿ ಇರುವ ಅನಿಶ್ಚಿತತೆ ಬಗೆಹರಿಸುವುದು ಸೇರಿದಂತೆ ಗಡಿ ವಿಚಾರದಲ್ಲಿ ಚೀನಾದ ಜೊತೆಗೆ ರಚನಾತ್ಮಕ ಚರ್ಚೆಯನ್ನು ಭಾರತ ನಿರೀಕ್ಷಿಸುತ್ತಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ.

ಉಭಯ ದೇಶಗಳ ನಡುವೆ ಸೇನಾ ಹಂತದಲ್ಲಿ ಚುಶುಲ್–ಮೊಲ್ಡೊ ಬಳಿ ಜನವರಿ 12ರಂದು 14ನೇ ಸುತ್ತಿನ ಮಾತುಕತೆ ನಡೆಯಲಿರುವ ಹಿನ್ನೆಲೆಯಲ್ಲಿ ಭಾರತ ಈ ಪ್ರತಿಕ್ರಿಯೆ ನೀಡಿದೆ.

ಉಭಯ ದೇಶಗಳ ನಡುವೆ ಹಿರಿಯ, ಉನ್ನತ ಮಟ್ಟದ ಸೇನಾ ಕಮಾಂಡರ್ ಹಂತದ ಮಾತುತೆಯು 12ರಂದು ಬೆಳಿಗ್ಗೆ 9.30 ಗಂಟೆಗೆ ಆರಂಭವಾಗಲಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ವಿವಾದಿತ ಪ್ರದೇಶಗಳಿಗೆ ಅನ್ವಯಿಸಿ ಗೊಂದಲ ಬಗೆಹರಿಸಲು ಭಾರತ ರಚನಾತ್ಮಕ ಚರ್ಚೆ ನಿರೀಕ್ಷಿಸುತ್ತಿದೆ.



ಜಮ್ಮು ಮತ್ತು ಕಾಶ್ಮೀರದ ಲೇಹ್ ಸಮೀಪದ ಪೂರ್ವ ಲಡಾಖ್ ಸೇನಾ ವಾಹನದ ಸಂಗ್ರಹ ಚಿತ್ರ

ಬಿಗುವಿನ ಸ್ಥಿತಿ ಇರುವ ಪ್ರದೇಶಗಳಿಂದ ಸೇನೆ ಹಿಂಪಡೆಯುವ ವಿಷಯಕ್ಕೆ ಒತ್ತು ನೀಡಲಾಗುವುದು ಎಂದು ತಿಳಿಸಿವೆ.

13ನೇ ಸುತ್ತಿನ ಚರ್ಚೆ ಅ.10, 2021ರಂದು ನಡೆದಿತ್ತು. ಉಭಯ ದೇಶಗಳು ತಮ್ಮ ನಿಲುವಿಗೆ ಬದ್ಧರಾಗಿದ್ದು, ಯಥಾಸ್ಥಿತಿ ಮುಂದುವರಿದಿತ್ತು. ನವೆಂಬರ್ 18ರಂದು ವರ್ಚುವಲ್ ಸ್ವರೂಪದಲ್ಲಿ ನಡೆದಿದ್ದ ರಾಜತಾಂತ್ರಿಕ ಹಂತದ ಚರ್ಚೆಯಲ್ಲಿ ಸೇನಾ ಹಂತದಲ್ಲಿ 14ನೇ ಸುತ್ತಿನ ಚರ್ಚೆ ನಡೆಸಲು ನಿರ್ಧರಿಸಲಾಗಿತ್ತು.


ಪಾಂಗಾಂಗ್ ಸರೋವರದ ಬಳಿಕ ಉಭಯ ಸೇನೆಯ ತುಕಡಿಗಳ ನಡುವೆ ಘರ್ಷಣೆ ನಡೆದ ಬಳಿಕ ಮೇ 5, 2020ರಿಂದ ಅನಿಶ್ಚಿತ ಸ್ಥಿತಿ ನಿರ್ಮಾಣವಾಗಿದೆ. ಉಭಯ ದೇಶಗಳು ಗಡಿ ರೇಖೆಗೆ ಹೊಂದಿಕೊಂಡಂತೆ 50,000 ರಿಂದ 60000 ಸೈನಿಕರನ್ನು ಜಮಾವಣೆ ಮಾಡಿವೆ.

ರಾಷ್ಟ್ರಪತಿಗೆ ಡಿ.ಲಿಟ್ ನೀಡುವ ಕುರಿತಂತೆ ವಿವಾದ

ಕೇರಳ ವಿ.ವಿ ವಿರುದ್ಧ ರಾಜ್ಯಪಾಲರ ಆಕ್ರೋಶ

ತಿರುವನಂತಪುರ (ಪಿಟಿಐ): ರಾಷ್ಟ್ರಪತಿ ಅವರಿಗೆ ಡಿ.ಲಿಟ್ ಪದವಿ ನೀಡುವ ಬಗ್ಗೆ ತೀರ್ಮಾನಿಸಲು ಸಭೆ ಕರೆಯಬೇಕು ಎಂಬ ತಮ್ಮ ನಿರ್ದೇಶನವನ್ನು, ‘ಕೆಲವರ ಮಾತು’ ಕೇಳಿಕೊಂಡು ಕೇರಳ ವಿಶ್ವವಿದ್ಯಾಲಯದ ಕುಲಪತಿ ಕಡೆಗಣಿಸಿದ್ದಾರೆ ಎಂದು ಕುಲಾಧಿಪತಿಯೂ ಆದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ದೂರಿದ್ದಾರೆ.

‘ಕುಲಾಧಿಪತಿ ಆಗಿಯೇ ನಾನು ಮುಂದುವರಿದರೆ ಇಂತಹ ‘ನಿರಾಕರಣೆಗಳ’ ವಿರುದ್ಧ ಕಠಿಣ ಶಿಸ್ತುಕ್ರಮಗಳನ್ನು ಜರುಗಿಸುವುದು ನಿಶ್ಚಿತ. ಇದರಿಂದ ಹಲವರಿಗೆ ನಿರಾಸೆಯಾಗಬಹುದು. ಹೀಗಾಗಿ, ಕುಲಾಧಿಪತಿಯಾಗಿ ತಮಗಿರುವ ಅಧಿಕಾರ ಹಿಂಪಡೆಯಲು ಕಾಯ್ದೆ ತರಲು ರಾಜ್ಯ ಸರ್ಕಾರಕ್ಕೆ ಸಮಯ ನೀಡುತ್ತಿದ್ದೇನೆ’ ಎಂದೂ ಹೇಳಿದ್ದಾರೆ. ಡಿ.ಲಿಟ್ ಪದವಿ ಕುರಿತಂತೆ ಕುಲಪತಿ ಇತ್ತೀಚೆಗೆ ಬರೆದಿದ್ದ ಪತ್ರವನ್ನು ಉಲ್ಲೇಖಿಸಿ, ಕುಲಪತಿ ವಿರುದ್ಧ



ಆರಿಫ್ ಮೊಹಮ್ಮದ್

ವಾಗ್ದಾಳಿ ನಡೆಸಿದ ರಾಜ್ಯಪಾಲರು, ‘ಡಿಸೆಂಬರ್ 5ರಂದು ತಮ್ಮನ್ನು ಭೇಟಿಯಾಗಿದ್ದ ಕುಲಪತಿ, ‘ಕೆಲವರ’ ನಿರ್ದೇಶನದಂತೆ ಡಾಕ್ಟರೇಟ್ ಕುರಿತು ತೀರ್ಮಾನಿಸಲು ಸಿಂಡಿಕೇಟ್ ಸಭೆ ಕರೆಯಲು ಆಗುವುದಿಲ್ಲ ಎಂದು ತಿಳಿಸಿದ್ದರು‘ ಎಂದರು.

‘ವಿಶ್ವವಿದ್ಯಾಲಯದ ಘಟಿಕೋತ್ಸವ 10 ವರ್ಷದಿಂದ ನಡೆದಿರಲಿಲ್ಲ. ಚರ್ಚೆಯ ವೇಳೆ ನಾನು ದೆಹಲಿಯಿಂದ ಪ್ರಮುಖರನ್ನು (ರಾಷ್ಟ್ರಪತಿ) ಕರೆತರುವ ಕುರಿತು ಸಲಹೆ ಮಾಡಿದ್ದೆ. ಘಟಿಕೋತ್ಸವದಲ್ಲಿಯೇ, ನಿಯಮದ ಅನುಸಾರ ರಾಷ್ಟ್ರಪತಿಗೆ ಡಿ.ಲಿಟ್ ಪದವಿ ನೀಡುವ ಕುರಿತು ಚಿಂತಿಸಬಹುದು ಎಂದೂ ಹೇಳಿದ್ದೆ. ರಾಷ್ಟ್ರಪತಿ ಭವನದ ನೀತಿಯಂತೆ ರಾಷ್ಟ್ರಪತಿಗಳು ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲ. ಇದು, ವಿಶೇಷ ಪ್ರಕರಣ, ಇದು ಹಳೆಯ ವಿಶ್ವವಿದ್ಯಾಲಯ ಎಂದು ಅವರ ಮನವೊಲಿಸುವುದಾಗಿಯೂ ಭರವಸೆ ನೀಡಿದ್ದೆ‘ ಎಂದು ಹೇಳಿದರು.

ಆದರೆ, ಕೆಲ ದಿನಗಳ ನಂತರ ಭೇಟಿ ಮಾಡಿದ್ದ ಕುಲಪತಿ ‘ಕೆಲವರ’ ನಿರ್ದೇಶನದಂತೆ ಸಿಂಡಿಕೇಟ್ ಸಭೆ ಕರೆಯಲಾಗದು ಎಂದು ತಿಳಿಸಿದರು. ಆದರೆ, ಆ ‘ಕೆಲವರು’ ಯಾರು ಎಂದು ರಾಜ್ಯಪಾಲರು ತಿಳಿಸಲಿಲ್ಲ.

ಖಾನ್ ಅವರು ಕಳೆದ ಡಿಸೆಂಬರ್ 8ರಂದು ತಾವು ಕುಲಾಧಿಪತಿ ಕಾರ್ಯಭಾರದಿಂದ ಹಿಂದೆ ಸರಿಯುವ ಇಚ್ಛೆ ಹೊಂದಿದ್ದೇನೆ ಎಂದು ತಿಳಿಸಿದ್ದರು. ವಿಶ್ವವಿದ್ಯಾಲಯಗಳ ಕಾರ್ಯಚಟುವಟಿಕೆಯಲ್ಲಿ ರಾಜಕೀಯ ಹಸ್ತಕ್ಷೇಪ ಇದೆ ಎಂದು ಆಗ ಆರೋಪಿಸಿದ್ದರು. ಒಂದು ಹಂತದಲ್ಲಿ ಕುಲಾಧಿಪತಿಯಾಗಿ ತಮಗಿರುವ ಅಧಿಕಾರಿವನ್ನು ಸಹ ಕುಲಾಧಿಪತಿಯೂ ಆಗಿರುವ ಉನ್ನತ ಶಿಕ್ಷಣ ಸಚಿವರಿಗೆ ವರ್ಗಾಯಿಸಲು ಸಿದ್ಧ ಎಂದು ತಿಳಿಸಿದ್ದರು.

ಮಂಗಳವಾರ, ಜನವರಿ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 11 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ

ಕೋವಿಡ್-19ರ ವಿರುದ್ಧ ಗೆಲುವು ಶತಸ್ಸಿದ್ಧ. ಅನಗತ್ಯ ಆತಂಕಕ್ಕೆ ಒಳಗಾಗದಂತೆ ತಾಳ್ಮೆಯಿಂದ, ಜಾಣ್ಮೆಯಿಂದ, ಸರಿಯಾದ ದಾರಿಯಲ್ಲಿ ಇದನ್ನು ನಿರ್ವಹಿಸಿದರೆ ಬಹಳ ಬೇಗ ಇದರಿಂದ ಜಗತ್ತು ಮುಕ್ತವಾಗುತ್ತದೆ.



ಓಂಶಕ್ತಿ: 22 ಯಾತ್ರಿಕರಿಗೆ ಕೋವಿಡ್ 11

ಆಸ್ಪತ್ರೆಗೆ ದಾಖಲು ಪ್ರಮಾಣ ಶೇ 5ರಿಂದ10ರಷ್ಟು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,395 ▲	18,003 ▲	₹49,050 (ಬೆಂಗಳೂರು)	₹61,900 (ಬೆಂಗಳೂರು)	74.05 ▲

ಕೇಂದ್ರ, ಪಂಜಾಬ್ ಸರ್ಕಾರಗಳು ರಚಿಸಿದ್ದ ಸಮಿತಿಯ ತನಿಖೆಗೆ ಕೋರ್ಟ್ ತಡೆ

ಲೋಪ ತನಿಖೆ: 'ಸುಪ್ರೀಂ' ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಕಳೆದ ವಾರ ಭೇಟಿ ನೀಡಿದ್ದಾಗ ಭದ್ರತೆಯಲ್ಲಿ ಉಂಟಾಗಿದ್ದ ಲೋಪದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ಶೀಘ್ರ ರಚಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಕೇಂದ್ರ ಸರ್ಕಾರ ಮತ್ತು ಪಂಜಾಬ್ ಸರ್ಕಾರ ಆರಂಭಿಸಿದ್ದ ತನಿಖೆಯನ್ನು ಸ್ಥಗಿತಗೊಳಿಸುವಂತೆಯೂ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು ಸೂಚಿಸಿದೆ.

ಪೀಠವು ಪ್ರಕರಣದ ವಿವರವಾದ ವಿಚಾರಣೆ ನಡೆಸಿತು. ಶೀಘ್ರವೇ ಆದೇಶ ಹೊರಡಿಸುವುದಾಗಿ ತಿಳಿಸಿತು. 'ಪ್ರಧಾನಿಯ ಭದ್ರತೆಯಲ್ಲಿ ಆಗಿರುವ ಲೋಪವನ್ನು ನ್ಯಾಯಾಲಯವು ಗಂಭೀರವಾಗಿ ಪರಿಗಣಿಸಿದೆ' ಎಂದು ಪೀಠವು ಹೇಳಿದೆ.

ಅತ್ಯಂತ ಅಲ್ಪ ಅವಧಿಯಲ್ಲಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗುವುದು ಎಂದು ಪೀಠವು ತಿಳಿಸಿದೆ.



ಸಮಿತಿ ಸದಸ್ಯರು

- ಚಂಡೀಗಡದ ಪೊಲೀಸ್ ಮಹಾ ನಿರ್ದೇಶಕ
- ರಾಷ್ಟ್ರೀಯ ತನಿಖಾ ಸಂಸ್ಥೆಯ ಮಹಾ ನಿರೀಕ್ಷಕ
- ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್
- ಪಂಜಾಬ್‌ನ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಭದ್ರತೆ)
- ಸಮಿತಿಯ ಮುಖ್ಯಸ್ಥರನ್ನು ಇನ್ನಷ್ಟೇ ಹೆಸರಿಸಬೇಕಿದೆ

ಪ್ರತಿಭಟನಕಾರರು ರಸ್ತೆ ತಡೆ ನಡೆಸಿದ್ದ ಕಾರಣ, ಪಂಜಾಬ್‌ನ ಫಿರೋಜ್‌ಪುರ ಸಮೀಪದ ಫ್ಲೈ-ಓವರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಬುಧವಾರ ಸುಮಾರು 20 ನಿಮಿಷ ಸಿಲುಕಿಕೊಂಡಿದ್ದರು. ಅಲ್ಲಿ ಆಯೋಜಿಸಲಾಗಿದ್ದ ರ‍್ಯಾಲಿಯಲ್ಲಿ ಭಾಗವಹಿಸದೆಯೇ ಪ್ರಧಾನಿ ಹಿಂದಿರುಗಿದ್ದರು.

ಪಂಜಾಬ್ ಪೊಲೀಸರ ಜತೆಗಿನ ಸಮನ್ವಯದಲ್ಲಿ ಭದ್ರತೆಯನ್ನು ಒದಗಿಸಲಾಗಿತ್ತು. ಇದರಲ್ಲಿ ಲೋಪ ಆಗಿದೆ ಎಂದು ಲಾಯರ್ಸ್ ವಾಯ್ಸ್ ಸಂಸ್ಥೆಯು ಸಲ್ಲಿಸಿದ ಅರ್ಜಿಯಲ್ಲಿ ಹೇಳಲಾಗಿದೆ.

ಶೋಕಾಸ್ ನೋಟಿಸ್‌ಗೆ ತರಾಟೆ

ಮುಖ್ಯ ಕಾರ್ಯದರ್ಶಿಯಿಂದ ಹಿಡಿದು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ-ವರೆಗೆ ಕೇಂದ್ರವು ಏಳು ಶೋಕಾಸ್ ನೋಟಿಸ್ ನೀಡಿದೆ. ಹಾಗಾಗಿ, ಈಗಿನ ತನಿಖೆಯಿಂದ ರಾಜ್ಯದ ಅಧಿಕಾರಿಗಳಿಗೆ ನ್ಯಾಯ ಸಿಗುವ ಭರವಸೆ ಇಲ್ಲ ಎಂದು ಪಂಜಾಬ್ ಸರ್ಕಾರದ ಪರ ವಾದಿಸಿದ್ದ ಅಡ್ವೊಕೇಟ್ ಜನರಲ್ ಡಿ.ಎಸ್. ಪಟವಾಲಿಯ ಹೇಳಿದರು. ಶೋಕಾಸ್ ನೋಟಿಸ್ ನೀಡಿಕೆ ಬಗ್ಗೆ ಪೀಠವು ಅಸಮಾಧಾನ ವ್ಯಕ್ತಪಡಿಸಿತು.

'ನಿಮ್ಮ ಶೋಕಾಸ್ ನೋಟಿಸ್ ವಿರೋಧಾಭಾಸದಿಂದ ಕೂಡಿದೆ. ಲೋಪ ಆಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಸಮಿತಿ ರಚಿಸಿದ್ದೀರಿ. ಜತೆಗೆ, ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರು ತಪ್ಪಿತಸ್ಥರು ಎನ್ನುತ್ತಿದ್ದೀರಿ. ಅವರು ತಪ್ಪಿತಸ್ಥರು ಎಂದು ತೀರ್ಪು ಕೊಟ್ಟವರು ಯಾರು? ನ್ಯಾಯಯುತ ವಿಚಾರಣೆ ನಡೆಯಬೇಕು ಎಂಬುದು ಅರ್ಜಿದಾರರು ಮತ್ತು ರಾಜ್ಯ ಸರ್ಕಾರದ ಬೇಡಿಕೆ. ಅದನ್ನು ತಪ್ಪು ಎನ್ನಲಾಗದು. ಈ ಆಡಳಿತಾತ್ಮಕ ಮತ್ತು ಸತ್ಯಶೋಧನೆ ತನಿಖೆಯ ಅಗತ್ಯವಾದರೂ ಏನು' ಎಂದು ಕೇಂದ್ರವನ್ನು ಪೀಠವು ಪ್ರಶ್ನಿಸಿದೆ. ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಶೋಕಾಸ್ ನೋಟಿಸ್ ಅನ್ನು ಸಮರ್ಥಿಸಿಕೊಂಡರು. 'ಬ್ಲೂ ಬುಕ್' ನಿಯಮಗಳನ್ನು ಉಲ್ಲೇಖಿಸಿದರು.

ಕೇಂದ್ರ ಸರ್ಕಾರವು ತಾನೇ ಕ್ರಮ ಕೈಗೊಳ್ಳಲು ಮುಂದಾಗಿದೆ. ಹಾಗಿರುವಾಗ, ಪ್ರಕರಣವನ್ನು ಪರಿಶೀಲಿಸುವಂತೆ ಕೋರ್ಟ್ ಅನ್ನು ಕೇಳುವ ಅಗತ್ಯ ಏನು? ರಾಜ್ಯದ ಅಧಿಕಾರಿಗಳ ವಿರುದ್ಧ ಕೇಂದ್ರವು ಶಿಸ್ತು ಕ್ರಮ ಕೈಗೊಳ್ಳುವುದಾದರೆ ಕೋರ್ಟ್‌ನ ಕೆಲಸ ಏನು ಎಂದು ಪೀಠವು ಪ್ರಶ್ನಿಸಿತು.

ವಕೀಲರಿಗೆ ಬೆದರಿಕೆ ಕರೆ 5

ಡಿಕೆಶಿ ಪರೀಕ್ಷೆಗೆ ಬಂದಿದ್ದ ಹೆಚ್ಚುವರಿ ಡಿ.ಸಿಗೆ ಕೋವಿಡ್

ನನಗೆ ಸೋಂಕು ಹರಡಿಸಲೆಂದೇ ಸರ್ಕಾರ ಕಳುಹಿಸಿತ್ತು: ಶಿವಕುಮಾರ್ ಆರೋಪ

ಪ್ರಜಾವಾಣಿ ವಾರ್ತೆ

ರಾಮನಗರ: ಭಾನುವಾರ ರಾತ್ರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಕೋವಿಡ್ ಪತ್ತೆ ಪರೀಕ್ಷೆಗೆ ತೆರಳಿದ್ದ ಇಲ್ಲಿನ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಮನೆಯಲ್ಲಿಯೇ ಪ್ರತ್ಯೇಕ ವಾಸಕ್ಕೆ ಒಳಗಾಗಿದ್ದಾರೆ.

'ಸೋಮವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಅವರು ರಾಮನಗರದಲ್ಲಿ ಆಂಟಿಜನ್ ಪರೀಕ್ಷೆಗೆ ಒಳಪಟ್ಟಿದ್ದು, ಅಲ್ಲಿ ಕೋವಿಡ್ ಪಾಸಿಟಿವ್ ಫಲಿತಾಂಶ ಬಂದಿತು. ಅವರನ್ನು ಆರ್‌ಟಿಪಿಸಿಆರ್ ಪರೀಕ್ಷೆಗೂ ಒಳಪಡಿಸಿದ್ದು, ಫಲಿತಾಂಶ ಬರುವುದು ಬಾಕಿ ಇದೆ' ಎಂದು ರಾಮನಗರ ಜಿಲ್ಲಾ ಆರೋಗ್ಯಾಧಿಕಾರಿ ನಿರಂಜನ್ 'ಪ್ರಜಾವಾಣಿ'ಗೆ ತಿಳಿಸಿದರು.

ಭಾನುವಾರ ರಾತ್ರಿ ಡಿ.ಕೆ. ಶಿವಕುಮಾರ್ ಮೇಕೆದಾಟು ಪಾದಯಾತ್ರೆಯ ಮೊದಲ ದಿನದ ನಡಿಗೆ ಮುಗಿಸಿ ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವೇಳೆ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಡಿಎಚ್‌ಒ ಇಬ್ಬರೂ ಅಲ್ಲಿಗೆ ತೆರಳಿದ್ದರು. ಕೋವಿಡ್ ಪತ್ತೆ ಪರೀಕ್ಷೆಗೆ ಒಳಗಾಗುವಂತೆ ಶಿವಕುಮಾರ್ ಅವರಲ್ಲಿ ಮನವಿ ಮಾಡಿದ್ದರು.

ಆದರೆ, ಇದರಿಂದ ಕೆಂಡಾಮಂಡಲವಾದ ಡಿಕೆಶಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. 'ನಾನು ಈಗಷ್ಟೇ 15 ಕಿ.ಮೀ ನಡೆದು ಬಂದಿದ್ದು, ಆರೋಗ್ಯದಿಂದ ಇದ್ದೇನೆ. ಸೋಂಕಿನ ಯಾವ ಲಕ್ಷಣಗಳೂ ಇಲ್ಲ. ನಮ್ಮನ್ನು ನೋಡಿಕೊಳ್ಳಲೆಂದೇ ಇಲ್ಲಿ ನೂರು ಮಂದಿ ವೈದ್ಯರನ್ನು ನೇಮಿಸಿಕೊಂಡಿದ್ದೇವೆ. ಹೀಗಾಗಿ ನಿಮ್ಮ ಪರೀಕ್ಷೆಯ ಅಗತ್ಯ ಇಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

'ನಿಮ್ಮ ಹೆಲ್ತ್ ಮಿನಿಸ್ಟರ್‌ಗೆ ಹೇಳಿ. ಯಾರೋ ಬಚ್ಚಾ ಹತ್ತಿರ ಆಟ ಆಡಲಿ ಅವನು. ಬೇಕಿದ್ದರೆ ಅವನೇ ಟೆಸ್ಟ್ ಮಾಡಿಸಿಕೊಳ್ಳಲಿ. ಕೇಂದ್ರ ಸಚಿವರ ಹೆಣವನ್ನೇ ನಿಮ್ಮ ಸರ್ಕಾರದವರು ಬಿಸಾಡಿ ಬಿಟ್ಟರು. ಆದರೆ ಕನಕಪುರದಲ್ಲಿ ನಮ್ಮವರು ಕೋವಿಡ್ ಕಿಟ್ ತೊಟ್ಟು ಜನರ ಅಂತ್ಯಕ್ರಿಯೆ ಮಾಡಿದ್ದಾರೆ. ನಮಗೆ ಯಾವ ರೋಗವೂ ಇಲ್ಲ' ಎಂದು ಗದರಿಸಿದ್ದರು. ಇದರಿಂದ ಬೆದರಿದ್ದ ಅಧಿಕಾರಿಗಳು ಅಲ್ಲಿಂದ ನಿರ್ಗಮಿಸಿದ್ದರು.

5ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 5



ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಡಿ.ಕೆ.ಶಿವಕುಮಾರ್ ಮತ್ತು ಮುಖಂಡರನ್ನು ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿಯಲ್ಲಿ ಬೆಂಬಲಿಗರು ಹೂಮಳೆಗರೆದು ಸ್ವಾಗತಿಸಿದರು –ಪಿಟಿಐ ಚಿತ್ರ

ಡಿಕೆಶಿ, ಸಿದ್ದರಾಮಯ್ಯ ಸೇರಿ 31 ಮುಖಂಡರ ವಿರುದ್ಧ ಪ್ರಕರಣ

ಕರ್ಫ್ಯೂ ನಿಯಮ ಉಲ್ಲಂಘಿಸಿ ಸಂಗಮದಲ್ಲಿ ಪಾದಯಾತ್ರೆ ನಡೆಸಿದ ಆರೋಪದ ಮೇಲೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ 31 ಮಂದಿ ವಿರುದ್ಧ ಸಾತನೂರು ಪೊಲೀಸರು ವಿಪತ್ತು ನಿರ್ವಹಣೆ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಂಗಳವಾರ ಇನ್ನಷ್ಟು ಜನರ ವಿರುದ್ಧವೂ ಎಫ್‌ಐಆರ್ ದಾಖಲಾಗುವ ಸಾಧ್ಯತೆ ಇದೆ.

ಡಿ.ಕೆ.ಸುರೇಶ್, ವೀರಪ್ಪ ಮೊಯಿಲಿ, ಮಲ್ಲಿಕಾರ್ಜುನ ಖರ್ಗೆ, ಡಾ.ಜಿ. ಪರಮೇಶ್ವರ್, ಈಶ್ವರ ಖಂಡ್ರೆ, ಉಮಾಶ್ರೀ, ಬಿ.ಕೆ. ಹರಿಪ್ರಸಾದ್, ಎಂ.ಬಿ. ಪಾಟೀಲ, ರಾಮಲಿಂಗಾರೆಡ್ಡಿ, ಎಸ್.ರವಿ, ಟಿ.ಬಿ.ಜಯಚಂದ್ರ, ಎಚ್.ಎಂ.ರೇವಣ್ಣ, ಸಲೀಂ ಅಹಮ್ಮದ್, ಎನ್.ಎ.ಹ್ಯಾರಿಸ್, ಲಕ್ಷ್ಮಿ ಹೆಬ್ಬಾಳ್ಕರ್, ವಿನಯ್ ಕುಲಕರ್ಣಿ, ಪ್ರಿಯಾಂಕ್ ಖರ್ಗೆ ಸೇರಿದಂತೆ 26 ರಾಜಕಾರಣಿಗಳು ಹಾಗೂ ಸಾಧು ಕೋಕಿಲ, ಸಾ.ರಾ.ಗೋವಿಂದು, 'ದುನಿಯಾ' ವಿಜಯ್ ಸೇರಿದಂತೆ ಐವರು ಪ್ರಮುಖರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

ಹೆಚ್ಚಿನ ನಿರ್ಬಂಧ ಸಿ.ಎಂ ಸುಳಿವು

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗುತ್ತಿದ್ದು, ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೋವಿಡ್ ಪ್ರಕರಣಗಳ ಸಂಖ್ಯೆಯನ್ನು ಆಧರಿಸಿ ನಿರ್ಬಂಧ ಸಡಿಲಿಕೆ ಕುರಿತು ನಿರ್ಧರಿಸುವುದಾಗಿ ಹಿಂದೆ ಹೇಳಿದ್ದೆ. ಆದರೆ, ಈಗ ಪರಿಸ್ಥಿತಿ ಹಾಗಿಲ್ಲ. ದಿನದಿಂದ ದಿನಕ್ಕೆ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ನಿರ್ಬಂಧಗಳನ್ನು ಹೆಚ್ಚಿಸಬೇಕಾದ ಸ್ಥಿತಿ ಇದೆ' ಎಂದರು.

ತಾರತಮ್ಯವಿಲ್ಲದೇ ಕ್ರಮ: ಸಿ.ಎಂ ಬೊಮ್ಮಾಯಿ

ಬೆಂಗಳೂರು: ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸುವವರ ವಿರುದ್ಧ ಯಾವುದೇ ರೀತಿಯ ತಾರತಮ್ಯವಿಲ್ಲದೇ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಪಾದಯಾತ್ರೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸುವ ಸಾಮಾನ್ಯ ಜನ ಮತ್ತು ದೊಡ್ಡ ನಾಯಕರ ವಿರುದ್ಧ ಒಂದೇ ರೀತಿಯ ಕ್ರಮ ಜರುಗಿಸಲಾಗುವುದು. ಪಾದಯಾತ್ರೆಯ ಸಂಘಟಕರು ಮತ್ತು ಕಾನೂನು ಉಲ್ಲಂಘನೆ ಮಾಡಿರುವವರ ವಿರುದ್ಧ ಪೊಲೀಸರು ನಿಯಮಾನುಸಾರ ಕ್ರಮ ಜರುಗಿಸಿದ್ದಾರೆ' ಎಂದರು. ರಾಮನಗರದಲ್ಲಿ ಪಾದಯಾತ್ರೆ ನಡೆಸುತ್ತಿರುವವರ ವಿರುದ್ಧ ಕ್ರಮ ಜರುಗಿಸುವಲ್ಲಿ ಸರ್ಕಾರ ಹಿಂಜರಿದಿಲ್ಲ. ಎಫ್‌ಐಆರ್ ದಾಖಲಿಸಿರುವುದು ಮೊದಲ ಹಂತ. ಕಾನೂನಿನ ಪ್ರಕಾರ ಮುಂದಿನ ಪ್ರಕ್ರಿಯೆಗಳು ನಡೆಯುತ್ತವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಾದಯಾತ್ರೆಯಲ್ಲಿ ಭಾಗವಹಿಸುತ್ತಿರುವವರ ಆರೋಗ್ಯದ ಕುರಿತು ಸರ್ಕಾರಕ್ಕೆ ಚಿಂತೆ ಇದೆ. ಸುದೀರ್ಘವಾಗಿ ನಡೆದು ಬರುವವರ ಆರೋಗ್ಯ ತಪಾಸಣೆ ನಡೆಸುವುದು ಸರ್ಕಾರದ ಕರ್ತವ್ಯ. ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವವರು ಇದಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4365/-gm
ಬೆಳ್ಳಿ ₹ 57,000/-
ಚಿಕ್ಕಪೇಟೆ: 41300355

ಶೇ 7 ದಾಟಿದ ದೃಢ ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ ಕೋವಿಡ್ ಸೋಂಕು ದೃಢ ಪ್ರಮಾಣ ಶೇ 7.77ಕ್ಕೆ ಏರಿಕೆಯಾಗಿದೆ.

ಆದರೆ, ಸೋಂಕು ಪ್ರಕರಣಗಳು ಕೊಂಚ ಇಳಿಕೆಯಾಗಿವೆ. ಒಟ್ಟು 11,698 ಪ್ರಕರಣಗಳು ಪತ್ತೆಯಾಗಿದ್ದು, ಬೆಂಗಳೂರಿನಲ್ಲೇ ಅತಿ ಹೆಚ್ಚಿನ 9,221 ಪ್ರಕರಣಗಳು ದೃಢಪಟ್ಟಿವೆ. ರಾಜ್ಯದಲ್ಲಿ ಭಾನುವಾರ 12 ಸಾವಿರ ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿತ್ತು.

ಹಾವೇರಿ ಹೊರತುಪಡಿಸಿದರೆ ಉಳಿದ ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ, 13 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಮೈಸೂರಿನಲ್ಲಿ 309, ಮಂಡ್ಯದಲ್ಲಿ 306, ಉಡುಪಿಯಲ್ಲಿ 219 ಪ್ರಕರಣಗಳು ವರದಿಯಾಗಿವೆ. ಇದುವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.63 ಲಕ್ಷ ದಾಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 60,148ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲೇ 48,960 ಸಕ್ರಿಯ ಪ್ರಕರಣಗಳಿವೆ. ದಕ್ಷಿಣ ಕನ್ನಡ (1,383) ಮತ್ತು ಮೈಸೂರಿನಲ್ಲಿ (1,338) ಒಂದು ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಹಾಗೂ ಮೈಸೂರು ಮತ್ತು ರಾಮನಗರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.03 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,374ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 1,148 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.65 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.50 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ.

146 ಓಮೈಕ್ರಾನ್ ಪ್ರಕರಣಗಳು

ಬೆಂಗಳೂರಿನಲ್ಲಿ ಒಂದೇ ದಿನ 146 ಹೊಸ ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿವೆ. ಇದರಿಂದ, ರಾಜ್ಯದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 479ಕ್ಕೆ ತಲುಪಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

ದೇಶದಲ್ಲಿ 1.79 ಲಕ್ಷ ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆಯಾಗುತ್ತಿವೆ. ಕಳೆದ 24 ಗಂಟೆಗಳಲ್ಲಿ ಹೊಸದಾಗಿ 1,79,723 ಪ್ರಕರಣ ದೃಢಪಟ್ಟಿದ್ದು, 146 ಮಂದಿ ಮೃತಪಟ್ಟಿದ್ದಾರೆ.

ಹೊಸದಾಗಿ ದೃಢಪಟ್ಟಿರುವ ಪ್ರಕರಣಗಳಲ್ಲಿ 4,033 ಓಮೈಕ್ರಾನ್ ಪ್ರಕರಣಗಳಾಗಿವೆ. ಇದರೊಂದಿಗೆ ಒಟ್ಟು ಸೋಂಕು ಪ್ರಕರಣಗಳು 3,57,07,727ಕ್ಕೆ ಏರಿದೆ.

ಮುಖ್ಯಮಂತ್ರಿಗೆ ಕೋವಿಡ್ ದೃಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಪ್ರತ್ಯೇಕ ವಾಸಕ್ಕೆ ಒಳಗಾಗಿದ್ದಾರೆ.

ಸೋಮವಾರ ಸಂಜೆ ಈ ಸಂಬಂಧ ಟ್ವೀಟ್ ಮಾಡಿರುವ ಬೊಮ್ಮಾಯಿ ಅವರು, 'ಸಂಜೆ 6 ಗಂಟೆಗೆ ಅಲ್ಪ ಪ್ರಮಾಣದ ಲಕ್ಷಣಗಳೊಂದಿಗೆ ಕೋವಿಡ್ ದೃಢಪಟ್ಟಿದೆ. ನನ್ನ ಆರೋಗ್ಯ ಚೆನ್ನಾಗಿದೆ. ಇತ್ತೀಚಿನ ದಿನಗಳಲ್ಲಿ ನನ್ನ ಸಂಪರ್ಕಕ್ಕೆ ಬಂದವರು ಪ್ರತ್ಯೇಕವಾಗಿ, ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿಯವರು ತಮ್ಮ ಎಲ್ಲ ಅಧಿಕೃತ ಕಾರ್ಯಕ್ರಮಗಳನ್ನು ರದ್ದು ಮಾಡಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೂ ಕೋವಿಡ್ ದೃಢಪಟ್ಟಿದ್ದು, ಅವರು ಪ್ರತ್ಯೇಕವಾಸಕ್ಕೆ ಒಳಗಾಗಿದ್ದಾರೆ.

ಕಾರು, ಬೈಕ್ ಮೇಲೆ ಟಿಪ್ಪರ್ ಪಲ್ಟಿ: ಆರು ಮಂದಿ ಸಾವು

ಬೆಂಗಳೂರು: ಕುಂಬಳಗೋಡು ಸಮೀಪ ಜಲ್ಲಿ ಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ನಿಯಂತ್ರಣ ತಪ್ಪಿ ಎರಡು ಕಾರು ಹಾಗೂ ಬೈಕ್ ಮೇಲೆ ಸೋಮವಾರ ಸಂಜೆ ಉರುಳಿ ಬಿದ್ದು ಆರು ಮಂದಿ ಮೃತಪಟ್ಟಿದ್ದಾರೆ. ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3A

'ಸಂಕ್ರಮಣ'ದ ಪ್ರೊ. ಚಂಪಾ ಇನ್ನಿಲ್ಲ

ಬೆಂಗಳೂರು: ಕನ್ನಡ ನಾಡು–ನುಡಿ ವಿಷಯದಲ್ಲಿ ನಿಷ್ಪಕ್ಷ ಹೋರಾಟದ ಅಚಲ ಕಲಿ, ಯಾರ ಹಂಗಿಗೂ ಒಳಗಾಗದ ಸತ್ಯ ನಿಷ್ಠುರಿ, ಸರ್ವಾಧಿಕಾರಿ ಧೋರಣೆಯ ವಿರುದ್ಧ ತಮ್ಮ ಹರಿತ ಕಾವ್ಯ, ಮೊನಚು ಅಕ್ಷರಗಳ ಬಾಣ ಬಿಟ್ಟು ನಾಡಿನ ಜನರನ್ನು ಸದಾ ಎಚ್ಚರದಲ್ಲಿಡುತ್ತಿದ್ದ 'ಚಂಪಾ' ಅವರು (ಪ್ರೊ. ಚಂದ್ರಶೇಖರ ಪಾಟೀಲ) ಸೋಮವಾರ ಬೆಳಿಗ್ಗೆ ಇಲ್ಲಿ ಆಸ್ಟ್ರಾ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ 82 ವರ್ಷವಾಗಿತ್ತು. ಗೋಕಾಕ್, ಬಂಡಾಯ ಚಳವಳಿಯ ಗಟ್ಟಿ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದ ಚಂಪಾ, ತಾವು ನಂಬಿಕೊಂಡಿದ್ದ ಆದರ್ಶಗಳಿಗೆ ಬದ್ಧರಾಗಿ ಬದುಕಿದವರು. ಕವಿ, ನಾಟಕಕಾರರಾಗಿ ತಮ್ಮದೇ ಶೈಲಿಯ ಸಾಹಿತ್ಯರಸವನ್ನು ಕನ್ನಡಿಗರಿಗೆ ಉಣಬಡಿಸಿದವರು. 1939ರ ಜೂನ್ 18ರಂದು ಜನಿಸಿದ ಚಂಪಾ ಅವರ ಹುಟ್ಟೂರು ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಹತ್ತಿಮತ್ತೂರು. ಅವರಿಗೆ ಪತ್ನಿ ನೀಲಾ ಪಾಟೀಲ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ.

ಪಾರ್ಥಿವ ಶರೀರವನ್ನು ಯಲಚೇನಹಳ್ಳಿಯಲ್ಲಿರುವ ಅವರ ನಿವಾಸದಿಂದ ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ ಕಚೇರಿಗೆ ತಂದು, ಸಾರ್ವಜನಿಕರ ದರ್ಶನಕ್ಕೆ ಇರಿಸಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಹಿತ ವಿವಿಧ ರಾಜಕೀಯ ನಾಯಕರು, ಸಾಹಿತಿಗಳು, ಗಣ್ಯರು ಅಂತಿಮ ದರ್ಶನ ಪಡೆದರು.



18-06-1939 - 10-01-2022

5ನೇ ಪುಟ ನೋಡಿ

ನುಡಿ ನಮನ 9

ದ್ವೇಷ ಭಾಷಣ: ಅರ್ಜಿ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ಹರಿದ್ವಾರ ಮತ್ತು ದೆಹಲಿಯಲ್ಲಿ 2021ರ ಡಿಸೆಂಬರ್ 17–19ರ ನಡುವೆ ಧರ್ಮ ಸಂಸತ್‌ನಲ್ಲಿ ಮಾಡಲಾದ ದ್ವೇಷ ಭಾಷಣದ ವಿರುದ್ಧ ಕ್ರಮ ತೆಗೆದುಕೊಳ್ಳಲು ನಿರ್ದೇಶನ ನೀಡಿ ಎಂದು ಕೋರಲಾಗಿದ್ದ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಕೊಂಡಿದೆ.



ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಈ ಸಂಬಂಧ ವಕಾಲತ್ತು ವಹಿಸಿದ್ದ ಅರ್ಜಿಯು ಸೋಮವಾರ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠದ ಎದುರು ಬಂದಿತ್ತು.

'ಧರ್ಮ ಸಂಸತ್‌ನಲ್ಲಿ ನಡೆದಿದ್ದರ ವಿರುದ್ಧ ನಾನು ಈ ಅರ್ಜಿ ಸಲ್ಲಿಸಿದ್ದೇನೆ. ಇದು ಅತ್ಯಂತ ಕಠಿಣವಾದ ಸಮಯ. ದೇಶದಲ್ಲಿ ಸತ್ಯಮೇವ ಜಯತೆ ಎಂಬುದನ್ನು ಶಸ್ತ್ರಮೇವ ಜಯತೆ ಎಂದು ಬದಲಿಸಲಾಗಿದೆ. ಧರ್ಮ ಸಂಸತ್‌ನಲ್ಲಿ ದ್ವೇಷ ಭಾಷಣ ಮಾಡಿದವರ ವಿರುದ್ಧ ಉತ್ತರಾಖಂಡ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಪೀಠದ ಎದುರು ಸಿಬಲ್ ಅವರು ವಿವರಿಸಿದರು.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು, 'ಸರಿ. ನಾವು ಈ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಳ್ಳುತ್ತೇವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಏನಾದರೂ ನಡೆದಿದೆಯೇ' ಎಂದು ಪ್ರಶ್ನಿಸಿದರು.

'ಈವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈ ನ್ಯಾಯಾಲಯವು ಮಧ್ಯಪ್ರವೇಶಿಸಿದರೆ ಮಾತ್ರವೇ ತನಿಖೆ ನಡೆಯುತ್ತದೆ. ಇಂತಹ ಪ್ರಕರಣಗಳನ್ನು ನಿರ್ವಹಿಸಲು ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳನ್ನು ಹೊರಡಿಸಬೇಕು' ಎಂದು ಕಪಿಲ್ ಸಿಬಲ್ ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗೂಗಲ್ ಪ್ಲೇ ಸ್ಟೋರ್‌ನ ಬಿಲ್ಲಿಂಗ್ ನೀತಿ ಪ್ರಶ್ನಿಸಿ ಸಿಸಿಐ ಮೊರೆ ಹೋಗಿದ್ದ ಎಡಿಐಎಫ್

ಗೂಗಲ್ ಪ್ಲೇ ಸ್ಟೋರ್: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೂಗಲ್ ಪ್ಲೇ ಸ್ಟೋರ್ ಪೇಮೆಂಟ್ ನೀತಿಗೆ ಸಂಬಂಧಿಸಿದಂತೆ ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ವಿಚಾರಣೆಗೆ ನೀಡಲಾಗಿರುವ ಸಹಕಾರ ಮುಂದುವರಿಸಲಾಗುವುದು' ಎಂದು ಗೂಗಲ್ ಇಂಡಿಯಾ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಗೂಗಲ್ ಇಂಡಿಯಾ ಮತ್ತು ಅಲಯನ್ಸ್ ಆಫ್ ಡಿಜಿಟಲ್ ಇಂಡಿಯಾ ಫೌಂಡೇಷನ್ (ಎಡಿಐಎಫ್) ನವೋದ್ಯಮ ಸಂಸ್ಥೆಗಳ ಪರ ವಕೀಲರು ನ್ಯಾಯಾಲಯಕ್ಕೆ ಜಂಟಿ ಜ್ಞಾಪನಾ ಪತ್ರ (ಮೆಮೊ) ಸಲ್ಲಿಸಿದರು.



'ಗೂಗಲ್ ಪ್ಲೇಸ್ಟೋರ್ ಪೇಮೆಂಟ್ ನೀತಿಯ ಕುರಿತಂತೆ ಸಿಸಿಐ ವಿಚಾರಣೆಗೆ ನೀಡಲಾಗಿರುವ ಸಹಕಾರವನ್ನು ಗೂಗಲ್ ಇಂಡಿಯಾ ಮುಂದುವರಿಸಲಿದೆ. ನೀತಿಯನ್ನು 2022ರ ಅಕ್ಟೋಬರ್ 31ರವರೆಗೆ ಜಾರಿ ಮಾಡುವುದಿಲ್ಲ' ಎಂಬ ಹೇಳಿಕೆಯನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಪ್ರಕರಣವೇನು?: ಅಲಯನ್ಸ್ ಆಫ್ ಡಿಜಿಟಲ್ ಇಂಡಿಯಾ ಫೌಂಡೇಷನ್ (ಎಡಿಐಎಫ್) ನವೋದ್ಯಮ ಸಂಸ್ಥೆಗಳ ಒಕ್ಕೂಟ ಗೂಗಲ್ ಪ್ಲೇ ಸ್ಟೋರ್‌ನ ಹೊಸ ಬಿಲ್ಲಿಂಗ್ ನೀತಿಯನ್ನು ಪ್ರಶ್ನಿಸಿ ಸಿಸಿಐ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ್ದ ಸಿಸಿಐ ಪ್ಲೇ ಸ್ಟೋರ್ ನಿಯಮಾವಳಿಗಳ ಬಗ್ಗೆ ತನಿಖೆಗೆ ಆದೇಶಿಸಿ ಕೆಲ ಪ್ರಶ್ನೆಗಳಿಗೆ ಉತ್ತರಿಸುವಂತೆ ಗೂಗಲ್‌ಗೆ ಗಡುವು ನೀಡಿತ್ತು. ತಪ್ಪಿದರೆ, ಕ್ರಮ ಜರುಗಿಸುವುದಾಗಿ ಸೂಚಿಸಿತ್ತು. ಇದನ್ನು ಪ್ರಶ್ನಿಸಿ ಗೂಗಲ್ ಇಂಡಿಯಾ ಹೈಕೋರ್ಟ್ ಮೆಟ್ಟಿಲೇರಿತ್ತು.



ಮೀಷೊದಲ್ಲಿ 'ಸಂಕ್ರಾಂತಿ' ಖರೀದಿ

ಬೆಂಗಳೂರು: ಆನ್‌ಲೈನ್ ಖರೀದಿ ವೇದಿಕೆ 'ಮೀಷೊ'ದಲ್ಲಿ ಮಕರ ಸಂಕ್ರಾಂತಿ ಪ್ರಯುಕ್ತ ಗೃಹಾಲಂಕಾರ, ಉಡುಪು ಸೇರಿದಂತೆ ಹಬ್ಬಕ್ಕೆ ಬೇಕಾದ ವಸ್ತುಗಳು ಕೈಗೆಟುಕುವ ಬೆಲೆಗೆ ಲಭ್ಯ. ಹೂವಿನ ತೋರಣ, ರಂಗೋಲಿ ಸ್ಟಿಕರ್‌ಗಳು, ಬಾಳೆ ಎಲೆಯ ತಟ್ಟೆಗಳು, ಹಣ್ಣಿನ ಬುಟ್ಟಿ, ಸಸ್ಯದ ಮಡಿಕೆ, ಸಾಂಪ್ರದಾಯಿಕ ಮೈಸೂರು ರೇಷ್ಮೆ ಸೀರೆ, ಆಭರಣಗಳು, ಬಿಳಿ ಲುಂಗಿ, ಶರ್ಟ್ ಸೇರಿದಂತೆ ವಿವಿಧ ಶ್ರೇಣಿಯ ಉತ್ಪನ್ನಗಳನ್ನು meesho.comನಲ್ಲಿ ಖರೀದಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವರ್ಷಾಂತ್ಯದಲ್ಲಿ ವೈಟ್‌ಫೀಲ್ಡ್‌ಗೆ ಮೆಟ್ರೊ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಚುರುಕುಗೊಂಡಿದ್ದು, 2022ರ ಡಿಸೆಂಬರ್ ವೇಳೆಗೆ ರೈಲುಗಳ ಸಂಚಾರಕ್ಕೆ ಮಾರ್ಗವನ್ನು ಮುಕ್ತಗೊಳಿಸಲು ಬಿಎಂಆರ್‌ಸಿಎಲ್ (ಬೆಂಗಳೂರು ಮೆಟ್ರೊ ರೈಲು ನಿಗಮ) ಉದ್ದೇಶಿಸಿದೆ.

ರೀಚ್–1 ಮಾರ್ಗ ವಿಸ್ತರಿತ ಮಾರ್ಗ ಇದಾಗಿದ್ದು, ಈ ಮಾರ್ಗದ ಕಾಮಗಾರಿ ಪೂರ್ಣಗೊಂಡರೆ ಕೆಂಗೇರಿಯಿಂದ ವೈಟ್‌ಫೀಲ್ಡ್‌ಗೆ ನಿರಂತರ ಮೆಟ್ರೊ ಸಂಪರ್ಕ ದೊರೆತಂತಾಗಲಿದೆ. ನಗರದ ಅನೇಕ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವಲ್ಲಿ ಈ ಮೆಟ್ರೊ ಮಾರ್ಗ ಮಹತ್ತರ ಪಾತ್ರವಹಿಸಲಿದೆ.



ವೈಟ್‌ಫೀಲ್ಡ್ ಮಾರ್ಗದ ಮೆಟ್ರೊ ರೈಲು ಮಾರ್ಗ –ಪ್ರಜಾವಾಣಿ ಚಿತ್ರ

'ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ 14 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಎತ್ತರಿಸಿದ ರೈಲು ಮಾರ್ಗದ ಸಿವಿಲ್ ಕಾಮಗಾರಿ ಬಹುತೇಕ ಮುಕ್ತಾಯಗೊಂಡಿದೆ. ಹಳಿಗಳ ಜೋಡಣೆ ಮತ್ತು ನಿಲ್ದಾಣಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

'ಕಾಮಗಾರಿ ಪೂರ್ಣಗೊಂಡು ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಡಬಲ್ ಡೆಕ್ಕರ್: ಒಂದೂವರೆ ವರ್ಷ ಕಾಯಬೇಕು

ರಾಗಿಗುಡ್ಡದಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ತನಕದ ಡಬಲ್ ಡೆಕ್ಕರ್ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಒಂದೂವರೆ ವರ್ಷ ಕಾಯಬೇಕಿದೆ. ಕೋವಿಡ್ ಸಂದರ್ಭದಲ್ಲಿ ಕೆಲಸ ಸ್ಥಗಿತಗೊಂಡಿದ್ದರಿಂದ ಮತ್ತು ಲಾಂಚರ್ ಕೆಳಗೆ ಜಾರಿದ್ದರಿಂದ ಕಾಮಗಾರಿ ವಿಳಂಬವಾಗಿದೆ ಎಂದು ಅಂಜುಂ ಪರ್ವೇಜ್ ಹೇಳಿದರು.

'ಈ ಮಾರ್ಗದ ಮೆಟ್ರೊ ನಿಲ್ದಾಣಗಳ ಕಾಮಗಾರಿಗೆ ಇತ್ತೀಚೆಗೆ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. 2023ರ ಜೂನ್ ವೇಳೆಗೆ ಕಾಮಗಾರಿ ಪೂರ್ಣಗೊಂಡು ರೈಲುಗಳ ಸಂಚಾರ ಆರಂಭವಾಗುವ ಸಾಧ್ಯತೆ ಇದೆ' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಹೋಟೆಲ್: ಆಸ್ತಿ ತೆರಿಗೆಯಲ್ಲಿ ಶೇ 50ರಷ್ಟು ವಿನಾಯಿತಿ

ಬೆಂಗಳೂರು: ಕೋವಿಡ್‌ನಿಂದ ನಷ್ಟ ಅನುಭವಿಸಿರುವ ಪ್ರವಾಸೋದ್ಯಮ ವಲಯದ ಪುನಶ್ಚೇತನಕ್ಕಾಗಿ ರಾಜ್ಯ ಸರ್ಕಾರವು ಆಸ್ತಿ ತೆರಿಗೆಯಲ್ಲಿ ವಿನಾಯಿತಿ ಘೋಷಿಸಿದೆ. ಪ್ರವಾಸೋದ್ಯಮ ವಲಯಕ್ಕೆ ಒಳಪಡುವ ಹೋಟೆಲ್, ರೆಸಾರ್ಟ್, ಮನರಂಜನಾ ಪಾರ್ಕ್, ರೆಸ್ಟೋರೆಂಟ್‌ಗಳು 2021-22ನೇ ಸಾಲಿನ ಆಸ್ತಿ ತೆರಿಗೆಯಲ್ಲಿ ಶೇ 50ರಷ್ಟು ಮಾತ್ರ ಪಾವತಿಸಬೇಕು. ಉಳಿದ ಶೇ 50ರಷ್ಟು ವಿನಾಯಿತಿ ನೀಡಲಾಗಿದೆ. 2021ರ ಏಪ್ರಿಲ್‌ನಿಂದ ಜೂನ್‌ವರೆಗಿನ ವಿದ್ಯುತ್ ಶುಲ್ಕದಲ್ಲೂ ವಿನಾಯಿತಿ ನೀಡಲಾಗಿದೆ. ಈ ಯೋಜನೆಯ ಸೌಲಭ್ಯ ಪಡೆಯಲು ಪ್ರವಾಸೋದ್ಯಮ ಇಲಾಖೆಯ ಕೆಟಿಟಿಎಫ್ ಕಾಯ್ದೆಯಡಿ ನೋಂದಣಿ ಕಡ್ಡಾಯ. ₹500 ನೋಂದಣಿ ಶುಲ್ಕ ಪಾವತಿಸಿ, 5 ವರ್ಷಗಳ ಅವಧಿಗೆ ನೋಂದಣಿ ಪ್ರಮಾಣಪತ್ರ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ www.karnatakatourism.org ಅನ್ನು ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಪ್ರಕಟಣೆ ತಿಳಿಸಿದೆ.

ಇ–ಬೈಕ್ ಸ್ಪರ್ಧೆ: ಎಂವಿಜೆ ವಿದ್ಯಾರ್ಥಿಗಳಿಗೆ 4 ಪ್ರಶಸ್ತಿ



ಬೆಂಗಳೂರು: 'ಇಂಪೀರಿಯಲ್ ಸೊಸೈಟಿ ಆಫ್ ಇನ್ನೋವೇಟಿವ್ ಎಂಜಿನಿಯರ್ಸ್' ಸಂಸ್ಥೆಯು ಪಂಜಾಬ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ಇ-ಬೈಕ್' ಸ್ಪರ್ಧೆಗಳಲ್ಲಿ ಎಂವಿಜೆ ಎಂಜಿನಿಯರಿಂಗ್ ಕಾಲೇಜಿನ (ಎಂವಿಜೆಸಿಇ) ವಿದ್ಯಾರ್ಥಿಗಳು ನಾಲ್ಕು ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಬ್ಯಾಟರಿ ಚಾಲಿತ ಇ-ಬೈಕ್‌ಗೆ ಅತ್ಯುತ್ತಮ ವಿನ್ಯಾಸ ಮತ್ತು ಸೌಂದರ್ಯ, ಬೆಟ್ಟ ಹತ್ತುವ ಪರೀಕ್ಷೆ, ಬೆಸ್ಟ್ ಸ್ಪೀಡ್ ಲಿಮಿಟರ್, ಫ್ಯೂಚರ್ ಅವಾರ್ಡ್ ವಿಭಾಗಗಳಲ್ಲಿ ಪ್ರಶಸ್ತಿಗಳು ಸಿಕ್ಕಿವೆ. ಪ್ರಶಸ್ತಿಗಳ ಮೊತ್ತ ಒಟ್ಟು ₹35 ಸಾವಿರ. ರೆಟ್ರೋಫಿಟ್ಟಿಂಗ್ ಮತ್ತು ಸ್ವಯಂ ತಯಾರಿಸಿದ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳ ತಂಡ ಸಿದ್ಧಪಡಿಸಿರುವ ಇ-ಬೈಕ್ ವಿದ್ಯುತ್ ಶಕ್ತಿಯನ್ನು ಪ್ರಾಥಮಿಕ ಮೂಲವಾಗಿ ಬಳಸಿಕೊಳ್ಳುತ್ತದೆ. ಬಳಕೆದಾರ ಸ್ನೇಹಿ, ಮಿತವ್ಯಯ, ಶಕ್ತಿ-ಸಮರ್ಥ ಮತ್ತು ಅಗ್ಗದ ಗುಣಗಳನ್ನು ಈ ಬೈಕ್ ಹೊಂದಿದ್ದು, ಗಂಟೆಗೆ 80 ಕಿ.ಮೀ ವೇಗದಲ್ಲಿ ಸಂಚರಿಸುತ್ತದೆ.

ಸಂಕ್ಷಿಪ್ತ ಸುದ್ದಿ

ಇಸ್ಕಾನ್: ವೈಕುಂಠ ಏಕಾದಶಿ ನೇರಪ್ರಸಾರ

ಬೆಂಗಳೂರು: ಜ.13ರಂದು ಇಸ್ಕಾನ್‌ನಲ್ಲಿ ನಡೆಯುವ ವೈಕುಂಠ ಏಕಾದಶಿಗೆ ಕೋವಿಡ್‌ನಿಂದಾಗಿ ಭಕ್ತರಿಗೆ ಪ್ರವೇಶ ಇರುವುದಿಲ್ಲ. ಆನ್‌ಲೈನ್ ಮೂಲಕ ಧಾರ್ಮಿಕ ಕಾರ್ಯಕ್ರಮಗಳ ನೇರಪ್ರಸಾರ ವ್ಯವಸ್ಥೆ ಕಲ್ಪಿಸಲಾಗಿದೆ.

ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯ ಕ್ರಮವಾಗಿ ದೇವಸ್ಥಾನಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ವಿಶೇಷ ಆಹ್ವಾನಿತರಿಗೆ ಮಾತ್ರ ದರ್ಶನಕ್ಕೆ ಅವಕಾಶ ಇರುತ್ತದೆ.

ದೇವಸ್ಥಾನದ ಅಧಿಕೃತ ಜಾಲತಾಣ www.iskconbangalore.org ಹಾಗೂ 'ಇಸ್ಕಾನ್ ಬೆಂಗಳೂರು ಯೂಟ್ಯೂಬ್ ಚಾನೆಲ್‌'ನಲ್ಲಿ ಉತ್ಸವದ ನೇರ ಪ್ರಸಾರ ಇರಲಿದೆ. ಭಕ್ತರು ಮನೆಯಿಂದಲೇ ದೇವರ ದರ್ಶನ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಉತ್ಸವದ ವೇಳಾಪಟ್ಟಿ: ಬೆಳಿಗ್ಗೆ 3.45ಕ್ಕೆ ಶ್ರೀನಿವಾಸ ಗೋವಿಂದ ಮಹಾಭಿಷೇಕ, 5.45ಕ್ಕೆ ವೈಕುಂಠ ದ್ವಾರ ಅನಾವರಣ, 8.30ಕ್ಕೆ ಉತ್ಸವ, ಬೆಳಿಗ್ಗೆ 11, ಸಂಜೆ 6 ಗಂಟೆಗೆ ಶ್ರೀಕೃಷ್ಣ ದಶಾವತಾರ ಸಹಸ್ರಕಲಶ ಕಲ್ಯಾಣೋತ್ಸವ ನಡೆಯಲಿದೆ.

ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಜ.11ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಸಿಂಧಿ ಆಸ್ಪತ್ರೆ, ನಂಜಪ್ಪ ವೃತ್ತ, ಪ್ರತಿಮಾ ಇಂಡಸ್ಟ್ರಿಯಲ್ ಬಡಾವಣೆ, ವಿಠ್ಠಲ ನಗರ, ಕುಮಾರಸ್ವಾಮಿ ಬಡಾವಣೆ, ಸಿದ್ಧಾಪುರ, ಸೋಮೇಶ್ವರ ನಗರ, ಕೆ.ಆರ್. ರಸ್ತೆ, ಜೆ.ಪಿ. ನಗರ, ವಿನಾಯಕ ನಗರ, ಕಾವೇರಿ ನಗರ, ವಿವೇಕಾನಂದ ನಗರ, ಪ್ರಾರ್ಥನಾ ಶಾಲೆ ಪ್ರದೇಶ, ಮುನೇಶ್ವರ ನಗರ, ಬಾಪೂಜಿ ಬಡಾವಣೆ, ಮಾರೇನಹಳ್ಳಿ, ಲಕ್ಷ್ಮೀದೇವಿ ಬಡಾವಣೆ, ಹೆಗ್ಗನಹಳ್ಳಿ, ಲಕ್ಷ್ಮಣ ನಗರ, ಸಂಜೀವಿನಿ ನಗರ, ವಿಶ್ವೇಶ್ವರ ನಗರ, ಸುಂಕದಕಟ್ಟೆ, ರಾಜೀವಗಾಂಧಿ ನಗರ, ಹನುಮಂತರಾಯನಪಾಳ್ಯ, ರಂಗನಾಥಪುರ, ಕೃಷ್ಣ ಗಾರ್ಡನ್, ಸಾಯಿಬಾಬನಗರ, ಗಾಂಧಿ ನಗರ, ಭುವನೇಶ್ವರಿ ನಗರ, ಎಚ್‌ಎಎಲ್ ಮೂರನೇ ಹಂತ, ಕಸವನಹಳ್ಳಿ, ಅರಕೆರೆ, ಕಾಮಾಕ್ಷಿ ಬಡಾವಣೆ ಸುತ್ತಮುತ್ತ ಪ್ರದೇಶಗಳು

ಅಂಜನಾಪುರ ಮುಖ್ಯರಸ್ತೆ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಅಂತಿಮ

ಅನುಮೋದನೆ ದೊರೆಯದೆ ಕಾಮಗಾರಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಡಳಿತ ಮಂಡಳಿಯಿಂದ ಅನುಮೋದನೆ ದೊರಕುವ ಮುನ್ನವೇ ಅಂಜನಾಪುರ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭವಾಗಿದೆ.

ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರದಿಂದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಸಂಪರ್ಕಿಸುವ ರಸ್ತೆ ಇದಾಗಿದ್ದು, ಸಂಪೂರ್ಣ ಹದಗೆಟ್ಟು ವಾಹನ ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿತ್ತು. ಸ್ಥಳೀಯರು ಹೋರಾಟ ನಡೆಸಿದ ಬಳಿಕ ಈಗ ವಾಹನ ಸಂಚಾರಕ್ಕೆ ಸುಗಮಗೊಳಿಸಲಾಗಿದೆ.

6.8 ಕಿ.ಮೀ ರಸ್ತೆ ಅಭಿವೃದ್ಧಿಗೆ ₹25 ಕೋಟಿ ವೆಚ್ಚಾಗಲಿದೆ ಎಂದು ಅಂದಾಜಿಸಲಾಗಿತ್ತು. ಸಿಮೆಂಟ್ ಕಾಂಕ್ರೀಟ್ ತಂತ್ರಜ್ಞಾನ ಬಳಸಿ ಅಭಿವೃದ್ಧಿಪಡಿಸುವ ಪ್ರಸ್ತಾವ ಕೈಬಿಟ್ಟು ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಬಿಡಿಎ ನಿರ್ಧರಿಸಿದೆ. ಈ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಅಂತಿಮವಾಗಿದ್ದು, ಆಡಳಿತ ಮಂಡಳಿಯಿಂದ ಅನುಮೋದನೆ ಇನ್ನಷ್ಟೇ ದೊರೆಯಬೇಕಿದೆ.



ಅಂಜನಾಪುರ ಮುಖ್ಯರಸ್ತೆ ಅಭಿವೃದ್ಧಿಗೆ ದಾಸ್ತಾನು ಮಾಡಿರುವ ಜಲ್ಲಿ

'ಟೆಂಡರ್ ಪ್ರಕ್ರಿಯೆ ಇತ್ತೀಚೆಗೆ ಅಂತಿಮಗೊಂಡಿದೆ. ಆದರೆ, ಮೂರು ತಿಂಗಳಿಂದಲೂ ಕಾಮಗಾರಿ ನಡೆಯುತ್ತಿದೆ. ಮುಖ್ಯ ಹೋಗಿದ್ದ ರಸ್ತೆ ಬದಿಯ ಚರಂಡಿ ತೆರವು ಮತ್ತು ರಸ್ತೆ ಅಭಿವೃದ್ಧಿಗೆ ಬೇಕಿರುವ ಜಲ್ಲಿ ಸೇರಿ ಇನ್ನಿತರ ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದಾಗಲೇ ಕಾಮಗಾರಿ ಆರಂಭಿಸಲು ಹೇಗೆ ಸಾಧ್ಯ. ತಮಗೆ ಕಾಮಗಾರಿ ದೊರೆಯಲಿದೆ ಎಂಬುದು ಗುತ್ತಿಗೆದಾರರಿಗೆ ಗೊತ್ತಾಗಿದ್ದು ಹೇಗೆ' ಎಂಬುದು ನಾರಾಯಣನಗರದ ನಿವಾಸಿ ಪವನ್ ವಸಿಷ್ಠ ಅವರ ಪ್ರಶ್ನೆ.

'ಕಾಮಗಾರಿ ಮೊದಲೇ ಆರಂಭವಾಗಿರುವುದನ್ನು ನೋಡಿದರೆ ಅನುಮಾನ ಮೂಡುತ್ತಿದೆ. ಕಾಮಗಾರಿ ಆರಂಭಿಸುವ ಮುನ್ನ ಸ್ಥಳೀಯ ನಿವಾಸಿಗಳಿಂದ ಯಾವುದೇ ಆಹವಾಲನ್ನೂ ಬಿಡಿಎ ಕೇಳಿಲ್ಲ. ಜಲಮಂಡಳಿ, ಬೆಸ್ಕಾಂ ಸೇರಿ ಯಾವುದೇ ಇಲಾಖೆಯ ಸಹಮತಿ ಪಡೆದಿಲ್ಲ. ಅಲ್ಲಲ್ಲಿ ಎಂ. ಸ್ಯಾಂಡ್ ಮತ್ತು ಜಲ್ಲಿ ಸುರಿದು ಹೋಗಿದ್ದಾರೆ. ಇದರಿಂದ ದೂಳು ಕುಡಿದು ಹಲವರು ಅನಾರೋಗ್ಯಕ್ಕೆ ತುತ್ತಾಗಲಿದ್ದಾರೆ' ಎಂದು ಹೇಳಿದರು.

'ಬೇರೆ ಇಲಾಖೆಗಳ ಸಹಮತಿ ಇಲ್ಲದೆ ಕಾಮಗಾರಿ ನಿರ್ವಹಿಸಿದರೆ ಮತ್ತೆ ರಸ್ತೆ ಅಗೆಯಬೇಕಾದ ಸ್ಥಿತಿ ಬರಬಹುದು. ಅದಕ್ಕೆ ಅವಕಾಶ ನೀಡಬಾರದು. ಅಲ್ಲಲ್ಲಿ ರಸ್ತೆ ಉಬ್ಬುಗಳು ಬೇಕು, ಸ್ಥಳೀಯರ ಅಭಿಪ್ರಾಯ ಪಡೆಯದೇ ಕಾಮಗಾರಿ ಆರಂಭಿಸಿರುವುದು ಸರಿಯಲ್ಲ' ಎಂದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ, 'ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಬಿಡಿಎ ಆಡಳಿತ ಮಂಡಳಿಯಿಂದ ಅನುಮೋದನೆ ದೊರಕುವುದು ಮಾತ್ರ ಬಾಕಿ ಇದೆ. ಕಡಿಮೆ ಮೊತ್ತ ದಾಖಲಿಸಿರುವ ಗುತ್ತಿಗೆದಾರರಿಗೆ ಟೆಂಡರ್ ಅಂತಿಮಗೊಳ್ಳಲಿದೆ. ಆದ್ದರಿಂದ ಕಾಮಗಾರಿ ಆರಂಭಿಸಲು ತಿಳಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

Government of Madhya Pradesh
Office of the Engineer-in-Chief
Water Resources Department,
Jal Sansadhan Bhawan, Tulsi Nagar, Bhopal (MP.)
Email id: ceproc.encwrd.bpl@nic.in Tel: 0755-2767635 Fax: 0755-2552406

N.I.T. No. 857/2021-22/E-in-C/e-tendering Bhopal, Dated 03.01.2022

Bids for following works are invited on website https://www.mptenders.gov.in Last Date of purchase/download of Bid Document and submission of bid is 08.02.2022, 17:30 hrs. Any amendment/modification can be seen only on the website. Detailed N.I.T. and other details can be viewed on above mentioned website.

Sl. No.	Tender No.	Work	District	Amount (Lakhs)
1	2022_WRD_176597	On Turnkey Basis :-Construction of Pressurized pipe irrigation network of Barkheri Abdulla Scheme, as per detailed scope of work but not limited to that.	Bhopal	1179.93
2	2022_WRD_176598	On Turnkey Basis :- Construction of Patpadi Dam and Pressurized pipe irrigation network, as per detailed scope of work but not limited to that.	Dewas	3510.76
3	2022_WRD_176602	On Turnkey Basis:- Construction of Pressurized pipe irrigation network of karam medium Irrigation project, as per detailed scope of work but not limited to that.	Dhar	26104.38
4	2022_WRD_176605	On Turnkey Basis:- Construction of Pressurized Pipe Irrigation System of Jharbida Lift Irrigation Scheme as per detailed scope of work but not limited to that.	Hoshangabad	14580.43
5	2022_WRD_176606	On Turnkey Basis :- Construction of Micro Irrigation network of Dargarh Project as per detailed scope of work but not limited to that.	Jabalpur	3869.22

G-21149/21 Chief Engineer (Procurement)

दो गज की दूरी, मास्क है जरूरी।

ಶ್ರೀ ಗುರು ರಾಘವೇಂದ್ರ ಕೋಆಪರೇಟಿವ್ ಬ್ಯಾಂಕ್ ಹಗರಣ

ಹೂಡಿಕೆದಾರರಿಂದ ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗುರು ರಾಘವೇಂದ್ರ ಕೋಆಪರೇಟಿವ್ ಬ್ಯಾಂಕ್‌ನಿಂದ ವಂಚನೆಗೊಳಗಾಗಿರುವ ಠೇವಣಿದಾರರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುವ ಮೂಲಕ ಸೋಮವಾರ ಪತ್ರ ಚಳವಳಿ ಆರಂಭಿಸಿದರು.

ಹಗರಣ ನಡೆದು ಎರಡು ವರ್ಷಗಳಾಗಿವೆ. ಹೀಗಿದ್ದರೂ ವಂಚನೆಗೆ ಒಳಗಾಗಿರುವ ತಮಗೆ ನ್ಯಾಯ ಸಿಕ್ಕಿಲ್ಲ ಎಂದು ಆರೋಪಿಸಿ ಠೇವಣಿದಾರರು ಬ್ಯಾಂಕ್ ಎದುರು ಪ್ರತಿಭಟನೆ ನಡೆಸಿದರು.

'ಬ್ಯಾಂಕ್‌ನ ಹಗರಣ ಬಯಲಾದ ಬಳಿಕ ಹಣ ಕಳೆದುಕೊಂಡ ಅನೇಕರು ಆಘಾತದಿಂದ ಜೀವ ಕಳೆದುಕೊಂಡಿದ್ದಾರೆ. ಸಾವಿರಾರು ಮಂದಿಯ ಬದುಕು ಬೀದಿಗೆ ಬಿದ್ದಿದೆ. ಹೂಡಿಕೆ ಮಾಡಿದ್ದವರು ತಮ್ಮ ಮಕ್ಕಳ ವಿದ್ಯಾಭ್ಯಾಸ ಮೊಟಕುಗೊಳಿಸಿ ಅವರನ್ನು ಕೆಲಸಕ್ಕೆ ಕಳುಹಿಸುವಂತಾಗಿದೆ. ಹಲವರು ಜೀವನ ನಿರ್ವಹಣೆಗಾಗಿ ಸಾಲ ಮಾಡಿಕೊಂಡು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಬ್ಯಾಂಕ್‌ನ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಮಹಾ ಪೋಷಕ ಡಾ.ಶಂಕರ್‌ಗುಹಾ ದ್ವಾರಕನಾಥ್ ಬೆಳ್ಳೂರು ತಿಳಿಸಿದರು.



ಬ್ಯಾಂಕ್‌ನ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಸದಸ್ಯರು ಬ್ಯಾಂಕ್‌ನ ಎದುರು ಸೋಮವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

'5 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಠೇವಣಿ ಇಟ್ಟವರಿಗೆ ಪರಿಹಾರ ಯಾವಾಗ ಸಿಗುತ್ತದೆ ಎಂಬುದರ ಬಗ್ಗೆ ಸಂಸದ ತೇಜಸ್ವಿ ಸೂರ್ಯ ಹಾಗೂ ಶಾಸಕ ರವಿ ಸುಬ್ರಹ್ಮಣ್ಯ ಮಾತನಾಡುತ್ತಿಲ್ಲ. ಅವರ ಮೌನ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ತನಿಖೆ ಯಾವ ಹಂತದಲ್ಲಿ ಇದೆ ಎಂಬುದರ ಕುರಿತೂ ಸರಿಯಾಗಿ ಮಾಹಿತಿ ಇಲ್ಲ. ಪ್ರಕರಣವನ್ನು ಕೂಡಲೇ ಸಿಬಿಐ ತನಿಖೆಗೆ ವಹಿಸಬೇಕು. ಠೇವಣಿದಾರರಿಗೆ ಪೂರ್ಣ ಹಣ ಅವರಿಗೆ ಶೀಘ್ರವೇ ಸಿಗುವಂತೆ ಮಾಡಬೇಕು ಎಂದು ಪತ್ರದ ಮೂಲಕ ಪ್ರಧಾನಿ ಅವರಿಗೆ ಮನವಿ ಮಾಡಿದ್ದೇವೆ' ಎಂದರು.

ಪ್ರತಿಭಟನಕಾರರು ಬಸವನಗುಡಿ ಅಂಚೆ ಕಚೇರಿ ಮೂಲಕ ಪ್ರಧಾನಿ ಅವರಿಗೆ ಪತ್ರಗಳನ್ನು ರವಾನಿಸಿದರು.

ನಗರದಲ್ಲಿ ಇಂದು


'ದೇವದಾಸಿ ಪದ್ಧತಿ ನಿಷೇಧ' ಕುರಿತು ಸಮಾಲೋಚನೆ: ಉದ್ಘಾಟನೆ–ಎಚ್. ಶಶಿಧರ್ ಶೆಟ್ಟಿ, ಅಧ್ಯಕ್ಷತೆ–ಫ್ರೊ.ಎಸ್. ಜಾಫೆಟ್, ಅತಿಥಿಗಳು–ಉಮಾ ಮಹಾದೇವನ್, ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಎಚ್.ಪುಷ್ಪಲತಾ, ಆಯೋಜನೆ–ರಾಷ್ಟ್ರ ಕಾನೂನು ಸೇವೆಗಳ ಪ್ರಾಧಿಕಾರ, ವಿಮುಕ್ತ ದೇವದಾಸಿ ಮಹಿಳೆಯರ ಮತ್ತು ಮಕ್ಕಳ ವೇದಿಕೆ ಹಾಗೂ ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್, ಸ್ಥಳ–ಪರಾಗ್ ಹೋಟೆಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

ಕುಮಾರವ್ಯಾಸ ಜಯಂತಿ

ಅಂಗವಾಗಿ ಕುಮಾರವ್ಯಾಸ ನಮನ: ಉದ್ಘಾಟನೆ–ಮಹೇಶ್ ಜೋಶಿ, ಅಧ್ಯಕ್ಷತೆ–ಮಲ್ಲೇಪುರಂ ಜಿ.ವೆಂಕಟೇಶ, ಅತಿಥಿಗಳು–ಎಲ್.ಎನ್.ರವಿಸುಬ್ರಹ್ಮಣ್ಯ, ಬೈರಮಂಗಲ ರಾಮೇಗೌಡ, ಸಂತೋಷ್ ಹಾನಗಲ್, ರತ್ನಾ ಮೂರ್ತಿ, ಎಲ್ಲೇಗೌಡ ಬೆಸಗರಹಳ್ಳಿ, ಆಯೋಜನೆ–ವಿಶ್ವವಾಣಿ ಸಂಗೀತ ಯಾನ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30

ಯುವ ರಂಗ–ಬೆಂಗಳೂರು ನಗರ ಜಿಲ್ಲಾ ಕಾಲೇಜು ರಂಗೋತ್ಸವ: ಆರ್‌ಬಿಎಎನ್‌ಎಂಎಸ್ ಪ್ರಥಮ ದರ್ಜೆ ಕಾಲೇಜು ತಂಡದಿಂದ 'ಗಡಿಗಾರ' ನಾಟಕ ಪ್ರದರ್ಶನ, ಆಯೋಜನೆ–ಶಿವಮೊಗ್ಗ ರಂಗಾಯಣ, ಸ್ಥಳ–ಜನಪದರು ರಂಗಮಂದಿರ, ನಿಂಬಿನಾಥಪುರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಅನಿಕಾ ಆರ್. ಆನಂದ್, ಅತಿಥಿಗಳು–ವಸುಂಧರಾ ದೊರೆಸ್ವಾಮಿ, ಸುಗ್ಗನಹಳ್ಳಿ ಷಡಕ್ಷರಿ, ನವಿಯಾ ನಟರಾಜನ್, ಕೆ.ಚಂದ್ರಕಲಾ, ಆಯೋಜನೆ–ಶಿವೋಹಂ ಪ್ರದರ್ಶನ ಕಲಾ ಶಾಲೆ, ಸ್ಥಳ–ಶಿವರಾತ್ರೀಶ್ವರ ಕೇಂದ್ರ, ಜಯನಗರ 8ನೇ ಬ್ಲಾಕ್, ಸಂಜೆ 6



ಅನಿಕಾ ಆರ್. ಆನಂದ್

ಸಿಜಿಕೆ ರಾಷ್ಟ್ರೀಯ ರಂಗೋತ್ಸವ: 'ಹುಲಿಯ ನೆರಳಿನಾಗೆ' ನಾಟಕ ಪ್ರದರ್ಶನ, ರಂಗರೂಪ–ಮಹಾದೇವ ಹಡಪದ, ತಂಡ–ಆಟ–ಮಾಟ, ಆಯೋಜನೆ–ರಂಗನಿರಂತರ, ಸ್ಥಳ–ಡಾ.ಸಿ.ಅಶ್ವತ್ಥ ವೇದಿಕೆ, ರವೀಂದ್ರ ಕಲಾಕ್ಷೇತ್ರ, ಸಂಜೆ 7

9 ಕೋಟಿ ದಾಟಿದ ಲಸಿಕೆ ವಿತರಣೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ವಿರುದ್ಧದ ಲಸಿಕೆ ವಿತರಣೆ ಸೋಮವಾರ ಒಂಬತ್ತು ಕೋಟಿ ದಾಟಿದೆ.

'ಈ ಕಾರ್ಯದಲ್ಲಿ ಪಾಲ್ಗೊಂಡಿರುವ ಎಲ್ಲ ಆರೋಗ್ಯ ಕಾರ್ಯಕರ್ತರು ಮತ್ತು ಜಿಲ್ಲಾಡಳಿತಗಳಿಗೆ ಅಭಿನಂದನೆಗಳು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 1.58 ಕೋಟಿಗೂ ಹೆಚ್ಚು ಹಾಗೂ ಬೆಳಗಾವಿ ಜಿಲ್ಲೆಯಲ್ಲಿ 67 ಲಕ್ಷಕ್ಕೂ ಹೆಚ್ಚು ಲಸಿಕೆ ವಿತರಿಸಲಾಗಿದೆ.

ನಿಧನ ವಾರ್ತೆ

ಶ್ರೀಧರ್




ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವಿತರಕ ಶ್ರೀಧರ್ (48) ಸೋಮವಾರ ಮೃತರಾಗಿದ್ದಾರೆ. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಕುಂಬಳಗೋಡುವಿನಲ್ಲಿ ಪತ್ರಿಕೆ ವಿತರಿಸಿ ಮನೆಗೆ ಹಿಂದಿರುಗುವಾಗ ಮೈಸೂರು ರಸ್ತೆಯ ಕೆಂಪಿಮಣಿ ಕಾಲೋನಿ ಬಳಿ ಅಪಘಾತವಾಗಿತ್ತು. ಅವರನ್ನು ಕೆಂಗೇರಿಯ ಸುಪ್ರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ಮೃತಪಟ್ಟಿದ್ದಾರೆ.

ಮೃತರ ಅಂತ್ಯಸಂಸ್ಕಾರವನ್ನು ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.


ವೆಂಕಪ್ಪ ಮಲ್ಲಪ್ಪ ಬಡಿಗೇರ



ಬೆಂಗಳೂರು: ನಗರದ ಜ್ಞಾನಭಾರತಿಯ ನಿವಾಸಿ ವೆಂಕಪ್ಪ ಮಲ್ಲಪ್ಪ ಬಡಿಗೇರ (72) ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ನರಗುಂದ ಮೂಲದವರಾದ ವೆಂಕಪ್ಪ ಅವರು ಬಡಗಿ ವೃತ್ತಿಯಲ್ಲಿ ಗುರುತಿಸಿಕೊಂಡಿದ್ದರು.

ರಾಜಮ್ಮ



ಬೆಂಗಳೂರು: ಕಲಾಸಿಪಾಳ್ಯ ನಿವಾಸಿ ರಾಜಮ್ಮ (70) ಸೋಮವಾರ ನಿಧನರಾದರು. ಅವರಿಗೆ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ ಎಂದು ಕುಟುಂಬದವರು ತಿಳಿಸಿದ್ದಾರೆ.



ರವೀಂದ್ರ ಕಲಾಕ್ಷೇತ್ರ: ಆನ್‌ಲೈನ್ ಮೂಲಕ ಕಾಯ್ದಿರಿಸುವಿಕೆಗೆ ಅವಕಾಶ

‘ಡೇಟ್ ಬ್ಲಾಕಿಂಗ್’ಗೆ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದ ಸಭಾಂಗಣದ ‘ಡೇಟ್ ಬ್ಲಾಕಿಂಗ್’ ದಂಧೆಗೆ ಕಡಿವಾಣ ಹಾಕಲು ಮುಂದಾಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಭಾಂಗಣ ಕಾಯ್ದಿರಿಸುವಿಕೆಯನ್ನು ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಲು ನಿರ್ಧರಿಸಿದೆ.

ಸಭಾಂಗಣದ ಕಾಯ್ದಿರಿಸುವಿಕೆಯಲ್ಲಿ ಪ್ರಭಾವಿಗಳು ಮತ್ತು ಮಧ್ಯವರ್ತಿಗಳ ಕೈವಾಡ ಹೆಚ್ಚಾಗಿದ್ದರಿಂದ ನಿಜವಾದ ರಂಗಾಸಕ್ತರು ಹಾಗೂ ಕಲಾತಂಡಗಳಿಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನಕ್ಕೆ ಅವಕಾಶ ಸಿಗುತ್ತಿರಲಿಲ್ಲ. ಹತ್ತಾರು ಕಾರ್ಯಕ್ರಮಗಳನ್ನು ಬೇರೆ ಬೇರೆ ಹೆಸರಿನಲ್ಲಿ ಕಾಯ್ದಿರಿಸಿಕೊಂಡು ಅನ್ಯರಿಗೆ ಹೆಚ್ಚಿನ ಮೊತ್ತಕ್ಕೆ ಸಭಾಂಗಣವನ್ನು ಬಿಟ್ಟುಕೊಡುವ ದಂಧೆ ನಡೆಯುತ್ತಿತ್ತು ಎಂಬ ಆರೋಪ ಕೇಳಿ ಬಂದಿತ್ತು.

ಈ ಹಿಂದೆ ಜಾರಿಗೆ ತಂದ ಆನ್‌ಲೈನ್ ವ್ಯವಸ್ಥೆಯಲ್ಲಿ ಹಲವು ದೋಷಗಳಿದ್ದವು. ಈ ಸಂಬಂಧ ರಂಗಕರ್ಮಿಗಳು, ಹವ್ಯಾಸಿ ನಾಟಕಕಾರರು, ಸಾಹಿತಿಗಳು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ಅವರಿಗೆ ದೂರು ನೀಡಿದ್ದರು. ಆನ್‌ಲೈನ್ ವ್ಯವಸ್ಥೆಯಲ್ಲಿನ ದೋಷಗಳನ್ನು ಸರಿಪಡಿಸಿ, ಪರಿಷ್ಕೃತ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಲು ಸಚಿವರು ಸೂಚನೆ ನೀಡಿದ್ದರು ಎಂದು ಇಲಾಖೆಯ ಮೂಲಗಳು ಹೇಳಿವೆ.

ಅಕ್ರಮಗಳೇನಿದ್ದವು: ಒಂದು ಬ್ಯಾನರ್ ಅಡಿ ಕಾರ್ಯಕ್ರಮ ಬುಕ್ ಮಾಡಿ ಇನ್ನೊಂದು ಬ್ಯಾನರ್‌ನಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿತ್ತು. 30 ದಿನಗಳ ಬುಕ್ಕಿಂಗ್‌ನಲ್ಲಿ 15 ದಿನಗಳು ಮಧ್ಯವರ್ತಿಗಳ ಪಾಲಾಗುತ್ತಿತ್ತು. ಕೆಲವು ಪ್ರಭಾವಿಗಳು ನಿಗದಿತ ದರಕ್ಕೆ ಬುಕ್ ಮಾಡಿ ಹೆಚ್ಚಿನ ದರಕ್ಕೆ ಕಲಾಕ್ಷೇತ್ರವನ್ನು ಬಾಡಿಗೆ ಬಿಡಲಾಗುತ್ತಿತ್ತು. ನೀರು ಮತ್ತು ವಿದ್ಯುತ್ ಬಳಕೆಯ ಬಗ್ಗೆ ನಿಖರತೆ ಇರುತ್ತಿರಲಿಲ್ಲ. ರಂಗ ಪರಿಕರ, ಬೆಳಕಿನ ವ್ಯವಸ್ಥೆಯ ಬಳಕೆಯ ದಾಖಲೆ ಸರ್ಕಾರಕ್ಕೆ ಲಭ್ಯವಾಗುತ್ತಿರಲಿಲ್ಲ.

ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡುವಾಗ ಆಧಾರ್ ಮತ್ತು ಇತರ ದಾಖಲೆಗಳನ್ನು ಸಲ್ಲಿಕೆ ಮಾಡಬೇಕಾಗಿರುವುದರಿಂದ ಮಧ್ಯವರ್ತಿಗಳಿಗೆ ಹೆಚ್ಚುವರಿ ಬುಕ್ಕಿಂಗ್ ಮಾಡಿಕೊಂಡು ಬೇರೆಯವರಿಗೆ ಆ ದಿನಾಂಕದಲ್ಲಿ ವೇದಿಕೆ ಬಿಟ್ಟುಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲ ಮಾಹಿತಿ ಅಪ್‌ಲೋಡ್ ಮಾಡಿ ಹಣ ಪಾವತಿಸಿದ ತಕ್ಷಣವೇ ಸಭಾಂಗಣ ಕಾಯ್ದಿರಿಸಲಾಗುತ್ತದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಕಾರ್ಯಕ್ರಮಗಳಿಗೆ ಹೆಚ್ಚುವರಿಯಾಗಿ ರಂಗಪರಿಕರ ಹಾಗೂ ಬೆಳಕಿನ ವ್ಯವಸ್ಥೆ ಬಳಸಿಕೊಂಡರೆ ಆನ್‌ಲೈನ್ ಮೂಲಕವೇ ಹಣ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಸರ್ಕಾರದ ನಿಯಮಗಳಿಂದ ನಿಗದಿಯಾದ ಕಾರ್ಯಕ್ರಮ ನಿಂತು ಹೋದರೆ ಹಣ ಹಿಂತಿರುಗಿಸುವ ಬದಲು ಮತ್ತೊಂದು ದಿನಾಂಕಕ್ಕೆ ಕಾರ್ಯಕ್ರಮ ಆಯೋಜಿಸುವುದಕ್ಕೂ ವ್ಯವಸ್ಥೆ ಕಲ್ಪಿಸಲಾಗಿದೆ. ಮೂರು ದಿನಗಳಿಗಿಂತಲೂ ಹೆಚ್ಚಿನ ದಿನಕ್ಕೆ ಸತತವಾಗಿ ಸಭಾಂಗಣ ಕಾಯ್ದಿರಿಸುವುದಕ್ಕೆ ಇನ್ನು ಮುಂದೆ ಅವಕಾಶ ಇಲ್ಲ ಎಂದೂ ಮೂಲಗಳು ಹೇಳಿವೆ. ಒಂದು ವೇಳೆ ಸಭಾಂಗಣ ಕಾಯ್ದಿರಿಸಿಕೊಂಡ ಸಂಸ್ಥೆಯ ಬದಲು ಬೇರೆ ಸಂಸ್ಥೆ ಕಾರ್ಯಕ್ರಮ ನಡೆಸಿದರೆ ಅಂಥ ವ್ಯಕ್ತಿ ಹಾಗೂ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಇಲಾಖೆ ನಿರ್ಧರಿಸಿದೆ.



ರವೀಂದ್ರ ಕಲಾಕ್ಷೇತ್ರ

ಸದ್ಯವೇ ದರ ಪರಿಷ್ಕರಣೆ

ರವೀಂದ್ರ ಕಲಾಕ್ಷೇತ್ರದ ಸಭಾಂಗಣದ ಬಾಡಿಗೆ ದರವನ್ನೂ ಪರಿಷ್ಕರಿಸಲು ನಿರ್ಧರಿಸಲಾಗಿದ್ದು, ಸದ್ಯವೇ ದರವನ್ನು ಪ್ರಕಟಿಸಲಾಗುವುದು ಎಂದು ಇಲಾಖೆ ಮೂಲಗಳು ಹೇಳಿವೆ.

‘ಟ್ರೋಲ್‌ಗೆ ಬಗ್ಗಲ್ಲ’: ಪಾದಯಾತ್ರೆ ನಿಲ್ಲುವುದಿಲ್ಲ

ಇಡೀ ಸರ್ಕಾರ ನಮ್ಮ ವಿರುದ್ಧ ನಿಂತಿದೆ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್

• ಆರ್. ಜಿತೇಂದ್ರ

ರಾಮನಗರ: ‘ನನ್ನ ಬಗ್ಗೆ ಟ್ರೋಲ್ ಮಾಡುವುದಿದ್ದರೆ ಮಾಡಿ ಖುಷಿ ಪಡಲಿ. ಅವರಿಗೆ ಅದರಿಂದ ಸಂತೋಷ ಆದರೆ ಸರಿ. ಆದರೆ ಅವರ ಬೇರೆ ಬೇರೆ ಹಗರಣಗಳು ಆಗಿದ್ದವಲ್ಲ. ಅವುಗಳನ್ನೂ ಹೀಗೆ ಟ್ರೋಲ್ ಮಾಡಿದ್ದರೆ ಅದನ್ನು ನೋಡಲು ಆಗುತ್ತಿತ್ತೆ?’

–ಹೀಗೆಂದು ಬಿಜೆಪಿ ಬೆಂಬಲಿಗರನ್ನು ಕುಟುಕಿದ್ದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್. ಪಾದಯಾತ್ರೆಯ ಮೊದಲ ದಿನದಂದು ಆದ ಕೆಲ ಘಟನೆಗಳ ವಿಡಿಯೊಗಳು ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಈ ಬಗ್ಗೆ ಡಿಕೆಶಿ ಎದುರಾಳಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಒತ್ತಾಯಿಸಿ ತಮ್ಮ ನೇತೃತ್ವದಲ್ಲಿ ನಡೆದಿರುವ ಪಾದಯಾತ್ರೆಯ ಎರಡನೇ ದಿನವಾದ ಸೋಮವಾರ ಭೋಜನ ವಿರಾಮದ ವೇಳೆ ಅವರು ಮಾತಿಗೆ ಸಿಕ್ಕರು. ಅವರೊಂದಿಗೆ ‘ಪ್ರಜಾವಾಣಿ’ ನಡೆಸಿದ ಸಂದರ್ಶನ ಇಂತಿದೆ.

• ಈ ಎರಡು ದಿನಗಳ ನಿಮ್ಮ ಪಾದಯಾತ್ರೆ ಹಾಗೂ ಅದಕ್ಕೆ ಸರ್ಕಾರ ಪ್ರತಿಕ್ರಿಯೆ ಹೇಗಿದೆ?

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದಾದರೂ ಒಂದು ಸರ್ಕಾರ ಹೋರಾಟ ಹತ್ತಿಕ್ಕಲು ವಿರೋಧ ಪಕ್ಷಗಳಿಗೆ ಇಷ್ಟೆಲ್ಲ ತೊಂದರೆ ಕೊಟ್ಟಿದ್ದನ್ನು ಈ ಹಿಂದೆ ನಾನು ಎಲ್ಲಿಯೂ ನೋಡಿಲ್ಲ. ಇಡೀ ಸರ್ಕಾರ ನಮ್ಮ ವಿರುದ್ಧ ನಿಂತಿದೆ. ಹಾಗೆಂದು ಪಾದಯಾತ್ರೆಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ.

• ಒಂದು ವೇಳೆ ಬೆಂಗಳೂರಿನ ಗಡಿಯಲ್ಲೇ ನಿಮ್ಮ ಪಾದಯಾತ್ರೆಯನ್ನು ತಡೆಯುವ ಪ್ರಯತ್ನ ಮಾಡಿದರೆ ಏನು ಮಾಡುವಿರಿ?

ನಾನು ಈ ಬಗ್ಗೆ ಈಗಲೇ ಏನನ್ನೂ ಹೇಳಲಾರೆ. ಇದು ಅದಕ್ಕೆ ಸಮಯವೂ ಅಲ್ಲ. ಈಗಾಗಲೇ ನಮ್ಮ ಮೇಲೆ ಪ್ರಕರಣ ದಾಖಲಿಸಿ ನಮನ್ನು ಬೆದರಿಸುವ ಪ್ರಯತ್ನ ನಡೆದಿದೆ. ಮುಂದೆ ನೋಡೋಣ. ಸದ್ಯಕ್ಕಂತೂ ಪಾದಯಾತ್ರೆಯಲ್ಲಿ ಯಾವುದೇ ಬದಲಾವಣೆ ಇಲ್ಲ.

• ಪಾದಯಾತ್ರೆಯಲ್ಲಿ ಬಳಲಿದಂತೆ ಕಂಡಿದ್ದೀರಿ. ಈಗ ಆರೋಗ್ಯ ಹೇಗಿದೆ?

ಐ ಆ್ಯಮ್ ಟೋಟಲಿ ಫಿಟ್ ಅಂಡ್ ಫೈನ್. ಹನ್ನೊಂದು ದಿನದ ಯಾತ್ರೆಯನ್ನೂ ಪೂರ್ಣಗೊಳಿಸುತ್ತೇನೆ. ಅದರಲ್ಲಿ ಸಂಶಯ ಬೇಡ.

• ನಿಮ್ಮ ಪಾದಯಾತ್ರೆಗೆ ಬಿಜೆಪಿ ಸರ್ಕಾರ ಬಗ್ಗಲಿದೆ ಎಂಬ ವಿಶ್ವಾಸ ಇದೆಯಾ?

ಅವರು ಬಗ್ಗದಿದ್ದರೆ ಚಿಂತೆಯಿಲ್ಲ. ಮುಂದೆ ಅವರ ಸರ್ಕಾರ ಹೋಗಿ ನಮ್ಮ ಸರ್ಕಾರ ಬರುತ್ತದೆ. ಆಗ ನಾವೇ ಈ ಯೋಜನೆಯನ್ನು ಜಾರಿಗೆ ತರುತ್ತೇವೆ.

• ಡಿಕೆಶಿ ಅವರನ್ನು ಬಿಜೆಪಿ ಸರ್ಕಾರ ಟಾರ್ಗೆಟ್ ಮಾಡಿದೆಯೇ?

ಅವರಿರುವುದೇ ನನ್ನನ್ನು ಟಾರ್ಗೆಟ್ ಮಾಡಲಿಕ್ಕೆ. ಪ್ರತಿ ವಿಚಾರದಲ್ಲೂ ನನ್ನನ್ನು ಗುರಿಯಾಗಿಸಲಾಗುತ್ತಿದೆ. ನನ್ನನ್ನು ಮಾತ್ರವಲ್ಲ ಇಡೀ ಕಾಂಗ್ರೆಸ್ ಅನ್ನೇ ಅವರು ಗುರಿಯಾಗಿಸಿಕೊಂಡಿದ್ದಾರೆ. ಅವರ ಪಕ್ಷದ ನಾಯಕರು ಮಾಡುವ ಕಾರ್ಯಕ್ರಮಗಳಲ್ಲಿ ಕೋವಿಡ್ ಬರುವುದಿಲ್ಲ. ನಾವು ಮಾಡಿದರೆ ಕೇಸ್ ಹಾಕುತ್ತಾರೆ. ಇದು ಯಾವ ನ್ಯಾಯ?

• ಡಿಕೆಶಿ ಜಲಸಂಪನ್ಮೂಲ ಸಚಿವರಾಗಿದ್ದಾಗ ಮೇಕೆದಾಟು ಬಗ್ಗೆ ಏನನ್ನೂ ಮಾಡಿಲ್ಲ. ಈಗ ತಮ್ಮ ವೈಫಲ್ಯವನ್ನು ಮುಚ್ಚಿಟ್ಟು ಪಾದಯಾತ್ರೆ ಮಾಡತೊಡಗಿದ್ದಾರೆ ಎಂಬುದು ಬಿಜೆಪಿ ಆರೋಪ

ಡಿಕೆಶಿ: ಈ ಬಗ್ಗೆ ಮೊದಲು ತನಿಖೆ ಮಾಡಲಿ. ನನ್ನದೇನಾದರೂ ತಪ್ಪಾಗಿದ್ದರೆ ಜೈಲಿಗೆ ಹಾಕಲಿ.

• ಬಿಜೆಪಿ–ಕಾಂಗ್ರೆಸ್ ಜಾಹೀರಾತು ಸಮರದ ಬಗ್ಗೆ ಏನು ಹೇಳುವಿರಿ?

ಬಿಜೆಪಿಯವರು ಬೇನಾಮಿ ಹೆಸರಿನಲ್ಲಿ ಸುಳ್ಳು ಮಾಹಿತಿಗಳ ಜಾಹೀರಾತು ಕೊಟ್ಟಿದ್ದರು. ನಾವು ಅದಕ್ಕೆ ಪ್ರತಿಯಾಗಿ ಸತ್ಯ ಸಂಗತಿಗಳನ್ನು ಜನರ ಮುಂದೆ ಇಟ್ಟಿದ್ದೇವೆ ಅಷ್ಟೇ.



ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್ ಪ್ರಜಾವಾಣಿ ಚಿತ್ರ

ಸಕಲೇಶಪುರ: ರಸ್ತೆ ಸಂಪರ್ಕಕ್ಕೆ ಸರ್ವೇ ನಡೆಸಲು ಆದೇಶ

ಬೆಂಗಳೂರು: ‘ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹಾನಬಾಳು, ಅವರೇಕಾಡು ಮತ್ತು ಡೋನಹಳ್ಳಿ ಗ್ರಾಮಗಳಿಗೆ ರಸ್ತೆ ನಿರ್ಮಾಣದ ಅಗತ್ಯಕ್ಕೆ ಸಂಬಂಧಿಸಿದಂತೆ ಸರ್ವೇ ಕಾರ್ಯ ನಡೆಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಸ್ವಾತಂತ್ರ್ಯ ಬಂದ ದಿನದಿಂದಲೂ ಈ ಗ್ರಾಮಗಳಿಗೆ ಸೂಕ್ತ ರಸ್ತೆ ಸಂಪರ್ಕ ಕಲ್ಪಿಸಿಲ್ಲ’ ಎಂದು ಆರೋಪಿಸಿ ಎ.ಸಿ. ಅಜಯ್ ಸೇರಿದಂತೆ 12 ಗ್ರಾಮಸ್ಥರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಸಕಲೇಶಪುರ ತಾಲ್ಲೂಕು ಕೇಂದ್ರ ಸಂಪರ್ಕಿಸಲು ಹಾನಬಾಳು, ಅವರೇಕಾಡು ಮತ್ತು ಡೋನಹಳ್ಳಿ ಗ್ರಾಮಗಳಿಗೆ ರಸ್ತೆ ಇಲ್ಲವಾಗಿದೆ. ಸ್ವಾತಂತ್ರ್ಯ ದೊರೆತ ಕಾಲದಿಂದಲೂ ಈ ಮೂರು ಗ್ರಾಮಗಳಿಗೆ ರಸ್ತೆ ಸಂಪರ್ಕ ಇಲ್ಲ. ಇದರಿಂದ ವಿದ್ಯಾರ್ಥಿಗಳು, ಗರ್ಭಿಣಿಯರು, ಮಹಿಳೆಯರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ರೈತರು ತಮ್ಮ ಉತ್ಪನ್ನಗಳನ್ನು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಕೇಂದ್ರಕ್ಕೆ ಕೊಂಡೊಯ್ಯಲು ಕಷ್ಟವಾಗುತ್ತಿದೆ’ ಎಂದು ವಿವರಿಸಿದರು.

‘ಈ ಸಂಬಂಧ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗೆ 2021ರ ಜನವರಿ 13ರಂದು ಮನವಿಪತ್ರ ಸಲ್ಲಿಸಿ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಕೋರಲಾಗಿತ್ತು. ಆದರೆ, ಆ ಮನವಿ ಪತ್ರವನ್ನು ಪರಿಗಣಿಸಿಲ್ಲ. ಅಂತೆಯೇ ಈ ಅರ್ಜಿಯಲ್ಲಿ ಸಕಲೇಶಪುರ ಶಾಸಕರನ್ನೂ ಪ್ರತಿವಾದಿಯನ್ನಾಗಿ ಮಾಡಲಾಗಿದೆ’ ಎಂಬ ಅಂಶವನ್ನು ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ರಸ್ತೆ ಒದಗಿಸುವುದು ಸರ್ಕಾರದ ಜವಾಬ್ದಾರಿ. ಸಂಬಂಧಪಟ್ಟ ಪ್ರಾಧಿಕಾರವು ಅರ್ಜಿದಾರರ ಗ್ರಾಮಗಳಿಗೆ ರಸ್ತೆ ಅಗತ್ಯವಿರುವ ಬಗ್ಗೆ ತಿಳಿಯಲು ಸರ್ವೇ ನಡೆಸಬೇಕು. ಒಂದೊಮ್ಮೆ, ರಸ್ತೆ ನಿರ್ಮಾಣ ಅಗತ್ಯವಿದೆ ಎಂದು ಕಂಡುಬಂದರೆ, ತಕ್ಷಣವೇ ಕಾಮಗಾರಿ ಆರಂಭಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ವ್ಯಂಗ್ಯಚಿತ್ರ ಸ್ಪರ್ಧೆಗಳು

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು 2021ನೇ ಸಾಲಿನ ‘ಮಾಯಾ ಕಾಮತ್ ಸ್ಮಾರಕ ಪ್ರಶಸ್ತಿ’ಗಳಿಗಾಗಿ ವ್ಯಂಗ್ಯಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಿದೆ.

3 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ‘ಉತ್ತಮ ರಾಜಕೀಯ ವ್ಯಂಗ್ಯ ಚಿತ್ರ ಪ್ರಶಸ್ತಿ’ ವಿಭಾಗದಲ್ಲಿ ₹25 ಸಾವಿರ (ಪ್ರಥಮ), ₹15 ಸಾವಿರ (ದ್ವಿತೀಯ), ₹5 ಸಾವಿರ (ತೃತೀಯ), ತೀರ್ಪುಗಾರರಿಂದ ಮೆಚ್ಚುಗೆ ಪಡೆಯುವ ಮೂರು ವ್ಯಂಗ್ಯಚಿತ್ರಗಳಿಗೆ ತಲಾ ₹2,500 ನಗದು ಬಹುಮಾನ ಇರಲಿದೆ.

‘ವಿದೇಶಿ ವ್ಯಂಗ್ಯಚಿತ್ರ ಪ್ರಶಸ್ತಿ’ ವಿಭಾಗದಲ್ಲಿ ಪ್ರಥಮ ₹14,853 (200 ಡಾಲರ್), ದ್ವಿತೀಯ ₹7,427.20 (100 ಡಾಲರ್) ನಗದು ಬಹುಮಾನ ಹಾಗೂ ‘ಅತ್ಯುತ್ತಮ ಉದಯೋನ್ಮುಖ ವ್ಯಂಗ್ಯಚಿತ್ರ ಪ್ರಶಸ್ತಿ’ಯಾಗಿ ₹10 ಸಾವಿರ ನಗದು ಬಹುಮಾನ ನೀಡಲಾಗುವುದು.

ಸ್ಪರ್ಧೆಗೆ ವ್ಯಂಗ್ಯಚಿತ್ರಗಳನ್ನು ತಲುಪಿಸಲು ಮಾರ್ಚ್ 31 ಕೊನೆಯ ದಿನ. ಮೇ ತಿಂಗಳಿನಲ್ಲಿ ವಿಜೇತರನ್ನು ಘೋಷಿಸಲಾಗುವುದು. ಜೂನ್‌ನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಹೆಚ್ಚಿನ ಮಾಹಿತಿಗೆ mkmawards@gmail.com ಅಥವಾ www.cartoonistsindia.com ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ:ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಮಿಡ್‌ಫೋರ್ಡ್ ಹೌಸ್, ಎಂ.ಜಿ.ರಸ್ತೆ. ಸಂಪರ್ಕ:9980091428

ಚಿತ್ರಾವಳಿ



‘ರಂಗನಿರಂತರ’ ನಗರದಲ್ಲಿ ಸೋಮವಾರ ಆಯೋಜಿಸಿದ್ದ ‘ಸಿಜೆಕೆ ರಾಷ್ಟ್ರೀಯ ರಂಗೋತ್ಸವ–2022’ ಕಾರ್ಯಕ್ರಮದಲ್ಲಿ ಚೆನ್ನೈ ಕಲೈ ಕುಜು ತಂಡದವರು ‘ಮತ್ತ ವಿಲಾಸ ಪ್ರಹಸನಂ’ ತಮಿಳು ನಾಟಕ ಪ್ರದರ್ಶಿಸಿದರು– ಪ್ರಜಾವಾಣಿ ಚಿತ್ರ



ಸಖಿ ಸಮೂಹ ಸಂಸ್ಥೆಗಳ ವತಿಯಿಂದ ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್. ಅನಿಲ್‌ಕುಮಾರ್ (ಬಲದಿಂದ ಮೊದಲನೆಯವರು) ಅವರ ‘ದ್ರೋಣಾಚಾರ್ಯರು’ ಪುಸ್ತಕವನ್ನು ನಿವೃತ್ತ ಪ್ರಾಧ್ಯಾಪಕ ಪಿ.ವಿ.ನಾರಾಯಣ ಬಿಡುಗಡೆ ಮಾಡಿದರು. ಕಿರಣ್‌ರಾವ್, ಸಖಿ ಸಮೂಹ ಸಂಸ್ಥೆಯ ಸವಿತಾ ಎ.ರಾವ್, ಆಧ್ಯಾತ್ಮ ಚಿಂತಕ ಪಾವಗಡ ಪ್ರಕಾಶ್ ರಾವ್, ಪ್ರಾಧ್ಯಾಪಕ ಟಿ.ಎನ್. ವಾಸುದೇವಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

ಪಾದಯಾತ್ರೆ ವೇಳೆ ಮಕ್ಕಳ ಭೇಟಿ: ಡಿಕೆಶಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು’ ಪಾದಯಾತ್ರೆ ವೇಳೆ ಶಾಲಾ ಮಕ್ಕಳನ್ನು ಭೇಟಿಯಾಗಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಈ ಸಂಬಂಧ ಪತ್ರ ಬರೆದಿರುವ ಆಯೋಗವು ಕೋವಿಡ್ ನಿಯಮಗಳನ್ನು ಉಲ್ಲಂಘಿಸಿರುವ ಡಿ.ಕೆ.ಶಿವಕುಮಾರ್ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಪ್ರಕರಣದ ಸಂಬಂಧ ವಿಚಾರಣೆ ನಡೆಸಿ 7 ದಿನಗಳ ಒಳಗೆ ವರದಿ ನೀಡುವಂತೆಯೂ ನಿರ್ದೇಶಿಸಿದೆ. ಜೊತೆಗೆ ಡಿ.ಕೆ.ಶಿವಕುಮಾರ್ ಅವರು ಶಾಲಾ ಮಕ್ಕಳೊಂದಿಗೆ ಇರುವ ವಿಡಿಯೊದ ಟ್ವಿಟರ್ ಲಿಂಕ್ ಅನ್ನೂ ಪತ್ರದಲ್ಲಿ ಉಲ್ಲೇಖಿಸಿದೆ.

ಶಿವಕುಮಾರ್ ಅವರು ಪಾದಯಾತ್ರೆ ವೇಳೆ ವಿಶ್ವೋದಯ ಶಾಲೆಗೆ ಭೇಟಿ ನೀಡಿದ್ದರು. ಆ ವೇಳೆ ಮಕ್ಕಳ ಗುಂಪಿನ ನಡುವೆ ಕುಳಿತು ಫೋಟೊ ತೆಗೆಸಿಕೊಂಡಿದ್ದರು. ಮಕ್ಕಳನ್ನು ರಾಜಕೀಯಕ್ಕೆ ಬಳಸಿಕೊಂಡಿರುವ ಕುರಿತೂ ತನಿಖೆ ನಡೆಸುವಂತೆ ಆಯೋಗ ಸೂಚಿಸಿದೆ.

ಲಾಕ್‌ಡೌನ್ ಆದರೆ ಕಾಂಗ್ರೆಸ್ ಹೊಣೆ: ಗೃಹ ಸಚಿವ ಆರಗ

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ಬೆಂಗಳೂರು: ಕೋವಿಡ್ ಉಲ್ಬಣಗೊಂಡು ರಾಜ್ಯದಲ್ಲಿ ತಿಂಗಳುಗಟ್ಟಲೆ ಲಾಕ್‌ಡೌನ್ ಜಾರಿಗೊಳಿಸಬೇಕಾದ ಪರಿಸ್ಥಿತಿ ನಿರ್ಮಾಣವಾದರೆ ಕಾಂಗ್ರೆಸ್ ಪಕ್ಷವೇ ಅದಕ್ಕೆ ಹೊಣೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಕೋವಿಡ್ ಹೆಚ್ಚುತ್ತಿರುವ ಸಂದರ್ಭದಲ್ಲೇ ಪಾದಯಾತ್ರೆ ಕೈಗೊಳ್ಳುವ ಮೂಲಕ ಕಾಂಗ್ರೆಸ್ ನಾಯಕರು ಜನರ ಬದುಕಿನ ಜತೆ ಚೆಲ್ಲಾಟ ಆಡುತ್ತಿದ್ದಾರೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸದೇ ಪಾದಯಾತ್ರೆ ಮಾಡುತ್ತಿದ್ದಾರೆ. ಸೋಂಕು ಉಲ್ಬಣಿಸಿ ಲಾಕ್‌ಡೌನ್ ಅನಿವಾರ್ಯವಾದರೆ ಕಾಂಗ್ರೆಸ್ ಅದರ ಹೊಣೆ ಹೊರಬೇಕಾಗುತ್ತದೆ’ ಎಂದರು.

ವಾರಾಂತ್ಯದ ಕರ್ಫ್ಯೂವನ್ನು ಬೆಂಗಳೂರಿನಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ. ನಿತ್ಯದ ದುಡಿಮೆಯಲ್ಲಿ ಬದುಕುವವರಿಗೆ ಇಂತಹ ಕ್ರಮಗಳಿಂದ ತೊಂದರೆ ಆಗಿದೆ. ಆದರೆ, ಕೊರೊನಾ ವೈರಾಣು ಸೋಂಕಿನಿಂದ ಬೆಂಗಳೂರಿನ ಜನರನ್ನು ರಕ್ಷಿಸಲು ಇದು ಅನಿವಾರ್ಯವಾಗಿದೆ. ಇಂತಹ ಸಮಯದಲ್ಲಿ ಪಾದಯಾತ್ರೆಯಿಂದ ಆತಂಕ ಸೃಷ್ಟಿಸುತ್ತಿದ್ದಾರೆ. ಬೆಂಗಳೂರಿನ ಜನರ ಪ್ರಾಣ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ಸಿದ್ಧ ಎಂದು ಹೇಳಿದರು.

‘ಕೋವಿಡ್ ಮಾರ್ಗಸೂಚಿ ಪಾಲಿಸುವುದಿಲ್ಲ, ಬೇಕಾದರೆ ಜೈಲಿಗೆ ಹಾಕಿ ಎಂದು ಕಾಂಗ್ರೆಸ್ ನಾಯಕರು ಸವಾಲು ಹಾಕಿದ್ದಾರೆ. ಇದು ಅವರ ಉದ್ಧಟತನ ತೋರಿಸುತ್ತದೆ. ಕಾಂಗ್ರೆಸ್ ನಾಯಕರ ಬಗ್ಗೆ ಜನ ಸಾಮಾನ್ಯರಿಗೆ ಜುಗುಪ್ಸೆ ಬರುತ್ತಿದೆ’ ಎಂದರು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಮೇಕೆದಾಟು ಪಾದಯಾತ್ರೆ: 13 ಮಂದಿ ವಿರುದ್ಧ ಎಫ್‌ಐಆರ್

ಕೊಳ್ಳೇಗಾಲ: ಮೇಕೆದಾಟು ಪಾದಯಾತ್ರೆಯಲ್ಲಿ ಭಾಗವಹಿಸಿದ್ದ 13 ಮಂದಿ ಕಾಂಗ್ರೆಸ್ ಮುಖಂಡರ ಮೇಲೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕೋವಿಡ್-19 ನಿಯಂತ್ರಿಸಲು ಸರ್ಕಾರದ ಆದೇಶ ಪಾಲನೆ ಮಾಡದೆ ಮಾರ್ಗಸೂಚಿ ಉಲ್ಲಂಘಿಸಿದ ಆರೋಪದ ಮೇಲೆ ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ರಾಜ್ಯ ಯುವ ಕಾಂಗ್ರೆಸ್ ಘಟಕದ ಸಹ ಕಾರ್ಯದರ್ಶಿ ಚೇತನ್ ದೊರೆರಾಜ್, ಪಾಳ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷ ರವಿ, ಮುಖಂಡರಾದ ಅಕ್ಮಲ್ ಪಾಷ, ಪುಟ್ಟಸ್ವಾಮಿ, ವೆಂಕಟನಾಗ, ಶಾಂತರಾಜು, ರವಿ, ರಂಗಸ್ವಾಮಿ, ರಾಚಪ್ಪಾಜಿ, ರಮೇಶ್, ರಾಜು, ಶಿವಕುಮಾರ್ ವಿರುದ್ಧ ಠಾಣೆಯಲ್ಲಿ ದೂರು ದಾಖಲಾಗಿದೆ.







ಸಂಸದ ಕಟೀಲ್ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಂಗಳೂರು ಸಂಸದ ನಳಿನ್ ಕುಮಾರ್ ಕಟೀಲ್ ವಿರುದ್ಧ ಕದ್ರಿ ಪೂರ್ವ ಠಾಣೆ ಪೊಲೀಸರು ದಾಖಲಿಸಿದ್ದ ಎಫ್ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ಮಂಗಳೂರು 2ನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ವಿಚಾರಣೆಯನ್ನು ರದ್ದುಪಡಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲ ಎಚ್. ಪವನಚಂದ್ರ ಶೆಟ್ಟಿ, 'ಸಂಸದರು ಜನರನ್ನು ಪ್ರಚೋದಿಸುವ ಅಥವಾ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸುವ ಉದ್ದೇಶ ಹೊಂದಿರಲಿಲ್ಲ. ಅವರು ತಮ್ಮ ಕರ್ತವ್ಯ ನಿಭಾಯಿಸಿದ್ದಾರೆ. ಸಂವಿಧಾನದ 105ನೇ ವಿಧಿಯ ಅನುಸಾರ ಅಧಿಕಾರಿಗಳು ತಪ್ಪು ಮಾಡುತ್ತಿದ್ದಾರೆ ಎಂದು ಗೊತ್ತಾದಾಗ ಜನಪ್ರತಿನಿಧಿಗಳು ಮಧ್ಯಪ್ರವೇಶಿಸುವ ಅಧಿಕಾರ ಹೊಂದಿದ್ದಾರೆ. ಅಂತೆಯೇ, ಈ ಪ್ರಕರಣದಲ್ಲಿ ಆರೋಪ ರುಜುವಾತುಪಡಿಸುವಂತಹ ಅಂಶಗಳೇ ಇಲ್ಲ. ಆದ್ದರಿಂದ, ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿದ್ದರು.

ಪ್ರಕರಣವೇನು?: 'ರಾಜ್ಯದಲ್ಲಿ ಕೋಮು ಗಲಭೆ ನಡೆಯುತ್ತಿದೆ ಎಂದು ಆರೋಪಿಸಿ ಬಿಜೆಪಿ ಯುವ ಮೋರ್ಚಾ ವತಿಯಿಂದ 2017ರ ಸೆಪ್ಟೆಂಬರ್ 7ರಂದು ಬೆಂಗಳೂರಿನಿಂದ ಮಂಗಳೂರಿಗೆ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ಅಂದು ಮಧ್ಯಾಹ್ನ 1 ಗಂಟೆಗೆ ಮಂಗಳೂರು ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆ ನಡೆಸಲು ಮುಂದಾಗಿದ್ದ ಬಿಜೆಪಿ ಕಾರ್ಯಕರ್ತರನ್ನು ಮಂಗಳೂರು ಪೂರ್ವ ಠಾಣಾ ಇನ್‌ಸ್ಪೆಕ್ಟರ್ ಬಂಧಿಸಿದ್ದರು.

ಈ ಕುರಿತು ಮಾಹಿತಿ ಪಡೆದಿದ್ದ ನಳೀನ್ ಕುಮಾರ್ ಕಟೀಲ್, ತಕ್ಷಣವೇ ಠಾಣೆಗೆ ತೆರಳಿ ಕಾರ್ಯಕರ್ತರ ಬಂಧನದ ಕುರಿತ ಡೈರಿಯನ್ನು ತೋರಿಸುವಂತೆ ಇನ್‌ಸ್ಪೆಕ್ಟರ್ ಅವರನ್ನು ಕೇಳಿದ್ದರು. ಇದಕ್ಕೆ ಪ್ರತಿಯಾಗಿ ಪೊಲೀಸ್ ಇನ್‌ಸ್ಪೆಕ್ಟರ್ ಮಾರುತಿ ಜಿ. ನಾಯಕ್, ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪದಡಿ ಕಟೀಲ್ ವಿರುದ್ಧ ಮಂಗಳೂರು ಪೂರ್ವ ಪೊಲೀಸ್ ಠಾಣಾಧಿಕಾರಿಗೆ ದೂರು ನೀಡಿದ್ದರು.

31 ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೋವಿಡ್

ಬಳ್ಳಾರಿ: ನಗರದ ವಿಮ್ಸ್‌ನ 31 ವೈದ್ಯಕೀಯ ವಿದ್ಯಾರ್ಥಿಗಳಿಗೆ ಸೋಮವಾರ ಕೊರೊನಾಕ್ಕೆ ಸೋಂಕು ತಗುಲಿದೆ. ಇದರಿಂದ ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ 71 ಏರಿಕೆಯಾಗಿದೆ. ಐವರು ಪ್ರಾಥಮಿಕ ಸೋಂಕಿತರೊಂದಿಗೆ ಈ 31 ವಿದ್ಯಾರ್ಥಿಗಳು ಸಂಪರ್ಕದಲ್ಲಿದ್ದರು ಎಂದು ವಿಮ್ಸ್ ಮೂಲಗಳು ಖಚಿತಪಡಿಸಿವೆ. ಬಳ್ಳಾರಿ 46, ಕುರುಗೋಡು 1, ಸಂಡೂರು 21, ಸಿರುಗುಪ್ಪ 3 ಕೋವಿಡ್ ಪ್ರಕರಣ 24ಗಂಟೆಯಲ್ಲಿ ದೃಢಪಟ್ಟಿವೆ.

'ಒಂಟಿ ಕೈ ವೆಂಕಟೇಶ' ಬಂಧನ


ವೆಂಕಟೇಶ

ಬೆಂಗಳೂರು: ಸಿದ್ದಾಪುರ ಠಾಣೆಯ ರೌಡಿಶೀಟರ್ ವೆಂಕಟೇಶ್ (28) ಯಾನೆ 'ಒಂಟಿ ಕೈ ವೆಂಕಟೇಶ'ನನ್ನು ಪೊಲೀಸರು ಗೂಂಡಾ ಕಾಯ್ದೆ ಅಡಿಯಲ್ಲಿ ಸೋಮವಾರ ಬಂಧಿಸಿದ್ದಾರೆ.

'ಕೋರಮಂಗಲ 5ನೇ ಹಂತದ ಕೊಳೆಗೇರಿಯಲ್ಲಿ ವಾಸವಿದ್ದ ಈತನ ವಿರುದ್ಧ ಸಿದ್ದಾಪುರ ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯು ಕೊಲೆ, ದರೋಡೆ, ಮಾದಕ ವಸ್ತು ಮಾರಾಟ, ವೇಶ್ಯಾವಾಟಿಕೆ, ಕೊಳಚೆ ಪ್ರದೇಶ ಅತಿಕ್ರಮಣ, ಆಡಿಯೊ ಹಾಗೂ ವಿಡಿಯೊ ಕೃತಿಚೌರ್ಯ ಸೇರಿದಂತೆ ವಿವಿಧ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲೇ 10 ಪ್ರಕರಣಗಳು ದಾಖಲಾಗಿದ್ದವು. ಈತ ಅಪ್ಪು, ಮಂಜುನಾಥ ಯಾನೆ ದೊಣ್ಣೆ ಮಂಜ, ಶಂಕರ ಸೇರಿದಂತೆ ಇತರ ರೌಡಿಗಳ ಜೊತೆ ಸೇರಿ ಹಲವು ಅಪರಾಧ ಚಟುವಟಿಕೆಗಳನ್ನು ನಡೆಸಿದ್ದ. ವಿಚಾರಣೆಗಾಗಿ ನ್ಯಾಯಾಲಯಕ್ಕೂ ಹಾಜರಾಗದೆ ತಲೆಮರೆಸಿಕೊಂಡಿದ್ದ. ಸಾಕ್ಷಿಗಳನ್ನು ಬೆದರಿಸುತ್ತಿದ್ದ ಬಗ್ಗೆಯೂ ದೂರುಗಳು ಬಂದಿದ್ದವು' ಎಂದು ವಿವರಿಸಿದ್ದಾರೆ.


ಕುಂಬಳಗೋಡು ಠಾಣೆ ವ್ಯಾಪ್ತಿಯ ಪೆಪ್ಸಿ ಸರ್ಕಲ್ ಬಳಿ ಸೋಮವಾರ ಸಂಭವಿಸಿದ ಅಪಘಾತದಲ್ಲಿ ಟ್ರಕ್ ಅಡಿ ಸಿಲುಕಿದ ಕಾರು ಹಾಗೂ ಬೈಕ್

ಕಾರು, ಬೈಕ್ ಮೇಲೆ ಟಿಪ್ಪರ್ ಪಲ್ಟಿ: ಆರು ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಂಬಳಗೋಡು ಸಮೀಪ ಜಲ್ಲಿ ಕಲ್ಲು ಸಾಗಿಸುತ್ತಿದ್ದ ಟಿಪ್ಪರ್ ನಿಯಂತ್ರಣ ತಪ್ಪಿ ಎರಡು ಕಾರು ಹಾಗೂ ಬೈಕ್ ಮೇಲೆ ಸೋಮವಾರ ಸಂಜೆ ಉರುಳಿ ಬಿದ್ದು ಆರು ಮಂದಿ ಮೃತಪಟ್ಟಿದ್ದಾರೆ. ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಾರಿನಲ್ಲಿದ್ದ ನಿಖಿತಾ ರಾಣಿ (29), ವೀಣಮ್ಮ (42), ಇಂದ್ರಕುಮಾರ್ (14), ಕೀರ್ತಿಕುಮಾರ್ (40), ಟೊಯೊಟಾ ಕಂಪನಿಯ ಸಿಬ್ಬಂದಿ ಟಿ.ಜೆ.ಶಿವಪ್ರಕಾಶ್ ಹಾಗೂ ಬೈಕ್ ಸವಾರ ಜಿತಿನ್ ಬಿ ಜಾರ್ಜ್ ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ರಸ್ತೆ ಕಾಮಗಾರಿ ಪ್ರಗತಿಯಲ್ಲಿತ್ತು. ಹೀಗಿದ್ದರೂ ಟಿಪ್ಪರ್ (ಕೆಎ 42, ಎ-2723) ಚಾಲಕ ವೇಗವಾಗಿ ಚಾಲನೆ ಮಾಡಿಕೊಂಡು ಬಂದಿದ್ದಾನೆ. ಟಿಪ್ಪರ್ ನಿಯಂತ್ರಣ ತಪ್ಪಿ ಕಾರುಗಳು ಹಾಗೂ ಬೈಕ್ ಮೇಲೆ ಉರುಳಿದೆ. ಅದರ ರಭಸಕ್ಕೆ ಕೆಂಪು ಹಾಗೂ ಶ್ವೇತ ವರ್ಣದ ಕಾರುಗಳು ನಜ್ಜುಗುಜ್ಜಾಗಿದ್ದವು. ಜಲ್ಲಿಕಲ್ಲುಗಳ ರಾಶಿಯ ಅಡಿಯಲ್ಲಿ ಅವು ಸಿಲುಕಿದ್ದವು. ಜೆಸಿಬಿ ಮೂಲಕ ಜಲ್ಲಿಕಲ್ಲು ತೆರವು ಮಾಡಲಾಯಿತು' ಎಂದು ತಿಳಿಸಿದ್ದಾರೆ.

'ಮೃತದೇಹಗಳನ್ನೆಲ್ಲಾ ರಾಜರಾಜೇಶ್ವರಿ ಆಸ್ಪತ್ರೆಗೆ ರವಾನಿಸಲಾಗಿದೆ. ಅಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುತ್ತದೆ. ಎರಡು ಕಾರುಗಳಲ್ಲಿ ತಲಾ 5 ಮಂದಿ ಪ್ರಯಾಣಿಸುತ್ತಿದ್ದರು ಎಂಬುದು ಗೊತ್ತಾಗಿದೆ. ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಚಿಕಿತ್ಸೆಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದರು.

'ವೀಣಮ್ಮ, ನಿಖಿತಾ, ಇಂದ್ರಕುಮಾರ್ ಹಾಗೂ ಕೀರ್ತಿಕುಮಾರ್ ಅವರು ಕೆಎ 02, ಎಂಎಂ 7749 ನೋಂದಣಿ ಸಂಖ್ಯೆಯ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಟಿಪ್ಪರ್‌ನಲ್ಲಿ ಸುಮಾರು 20 ಟನ್ ಜಲ್ಲಿಕಲ್ಲು ಸಾಗಿಸಲಾಗುತ್ತಿತ್ತು. ಕೆಎ 05, ಎಂ.ಜೆ.9924 ನೋಂದಣಿ ಸಂಖ್ಯೆಯ ಕಾರು ಕೂಡ ಜಖಂ ಆಗಿದೆ. ಕಾರಿನಲ್ಲಿದ್ದವರೆಲ್ಲಾ ಮಾಗಡಿ ನಿವಾಸಿಗಳು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ' ಎಂದು ಹೇಳಿದ್ದಾರೆ.

10 ಕಿ.ಮೀ.ನಷ್ಟು ಟ್ರಾಫಿಕ್: ಅಪಘಾತದಿಂದಾಗಿ ಸುಮಾರು 10 ಕಿ.ಮೀ.ನಷ್ಟು ದೂರದವರೆಗೂ ಸಂಚಾರ ದಟ್ಟಣೆ ಏರ್ಪಟ್ಟಿತ್ತು. ದಟ್ಟಣೆ ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು.

ಸುದ್ದಿ 2 ನಿಮಿಷ

ತೊಟ್ಟಿಯಲ್ಲಿ ಮುಳುಗಿ ಬಾಲಕ ಸಾವು

ಬೆಂಗಳೂರು: ನೀರು ಶುದ್ಧೀಕರಣ ಘಟಕದ ಬಳಿಯ ತೊಟ್ಟಿಯಲ್ಲಿ ಈಜಲು ಗೆಳೆಯರೊಂದಿಗೆ ಹೋಗಿದ್ದ 14 ವರ್ಷದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಈ ಸಂಬಂಧ ಬಾಣಸವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿಯ ನಾಗಯ್ಯನಪಾಳ್ಯದಲ್ಲಿ ರೈಲ್ವೆ ಇಲಾಖೆಯವರು ನೀರು ಶುದ್ಧೀಕರಣ ಘಟಕ ಸ್ಥಾಪಿಸಿದ್ದು ಅಲ್ಲಿ ತೊಟ್ಟಿಯೊಂದು ಇದೆ. ಅದರ ಸುತ್ತಲೂ ಕಾಂಪೌಂಡ್ ಕೂಡ ಹಾಕಲಾಗಿದೆ. ಹೀಗಿದ್ದರೂ ಮೃತ ಬಾಲಕ ಹಾಗೂ ಆತನ ಸ್ನೇಹಿತರು ಅದರಲ್ಲಿ ಈಜಾಡಿ, ಬಳಿಕ ಮೀನು ಹಿಡಿದುಕೊಂಡು ಬರಲು ಅಲ್ಲಿಗೆ ಹೋಗಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಮೂವರು ವಿದ್ಯಾರ್ಥಿಗಳಿಗೆ ಪ್ರಶಸ್ತಿ



ಬೆಂಗಳೂರು: ರಾಜ್ಯದ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್ (ಐಡಬ್ಲ್ಯುಡಬ್ಲ್ಯುಎ) ಪ್ರಶಸ್ತಿ ಲಭಿಸಿದೆ.

ದಯಾನಂದ ಸಾಗರ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಸ್ನೇಹಾ ಕೆ. ಗೌಡ ಮತ್ತು ಕೆ.ಟಿ. ವಿಕಾಸ್ ಹಾಗೂ ನ್ಯೂ ಹಾರಿಜಾನ್ ಎಂಜಿನಿಯರಿಂಗ್ ಕಾಲೇಜಿನ ಗಾಯತ್ರಿ ನಿವೇದಿತಾ ಅವರಿಗೆ 2021-22ನೇ ಸಾಲಿನ ಯುವ ರಾಯಭಾರಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಪ್ರತಿ ವರ್ಷ ಈ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಜಲ ಮತ್ತು ನೈರ್ಮಲ್ಯ ನಿರ್ವಹಣೆ ಕಾರ್ಯದಲ್ಲಿ ತೊಡಗಿರುವ ಮೂವರು ಯುವಕರನ್ನು ಆಯ್ಕೆ ಮಾಡುತ್ತದೆ. ಈ ಬಾರಿ ಬೆಂಗಳೂರಿನ ಮೂವರು ವಿದ್ಯಾರ್ಥಿಗಳಿಗೆ ಈ ಪ್ರಶಸ್ತಿ ಲಭಿಸಿರುವುದು ವಿಶೇಷವಾಗಿದೆ. ಇತ್ತೀಚೆಗೆ ಲಖನೌದಲ್ಲಿ ನಡೆದ 54ನೇ ಐಡಬ್ಲ್ಯುಡಬ್ಲ್ಯುಎ ವಾರ್ಷಿಕ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಈ ಮೂವರು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಯಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

EDUCATIONAL

Admission

GOVT. RECOGNISED FASHION DESIGN COURSE (Drafting, Cutting, Stitching, Pattern Making & Autocad) 1 year duration Last Date: 15.01.2022, 50% Fees. Contact: 9886948668, 9071020582

Coaching Classes

WANTED TALLY TUTORS, THE CORPORATE ACCOUNTANT is an academy managed by professionals for training aspiring accountants to gain experience before a job. We offer to students 100% practical training using computers. Experienced/ retired tally tutors may apply. Attractive salary offered. Contact 9880173407

JOB OPPORTUNITIES

General

REQUIRMENT BANKING, Work from Home, Telecallers, Documents Collection, Salary 14000/-, 25000/- PUC any Degree. 9538450664.

Hospital & Medical Jobs

D PHARMACY -Both male and female ,branch manager ,both experience and fresher,location RR nagar bangalore contact :-7338133755

WANTED Lab analysists and lab technician (for diagnostics) (both male and female) location RR Nagar Bangalore contact :-7338133755, 7829689303

CONNECT ಕ್ಲಾಸಿಫೈಡ್ಸ್

Grand Flea Market in Collaboration with Chittara Presents
ದ ಸೋಕ್ (ಮಾರ್ಕೆಟ್)
THE SOUQ (MARKET)
10th to 14th Jan 2022
11 AM to 7 PM
5 Days Exhibition Entry Free
Sankranti Shopping Carnival
Art, Craft, Handlooms & Lifestyle Exhibition
Karnataka Chitrakala Parishath
Kumara Krupa Road, Bengaluru
Your safety is our Priority, We have taken precaution & Safety Measures to prevent transmission of covid19
Entry is Permitted only with complete 2 doses of Vaccination Certificate
For Details Contact : 9611835597 / 6364685716 | Direct from The Artisans
Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.
80+ Shopping Stalls | Directly from the Artisans from across India

PERSONAL

Lost

LOST
I, C. Ramesh, R/a, No. 4, Chikkabommasandra, GKVK Post, Yelahanka New Town, Bangalore-65 have lost Gift Deed Reg. No. YAN-1-05558 - 2013-14 Book No.1, CD No.YAND504 dated 3-9-2013 while getting Xerox copy near Yelahanka New Town Bus Stop. Finders please contact: 9342329459 or inform near by Police Station

I, LAKSHMI Devi residing in No. 15/13, Moodalapalya Vijayanagar, Bangalore have lost my original Diploma Convocation Certificate, year 2015, Roll No. 102EC12018, DTE Board. If found, Contact: 9380906281.

Cotton & Silk EXHIBITION
ORG BY: MAARUTHI ENTERPRISES
HANDLOOM & JEWELLERY
SAREES, DRESS MATERIALS, KURTIES SUIT PIECES, HOME DECORATIVES
EXHIBITION CUM SALE
HANDICRAFT - HANDLOOM - JEWELLERY
29-12-2021 to 23-01-2022
- RAJASTHANI BEDSHEETS / BLANKETS
- JAIPUR HAND BLOCK SHIRTS
- CHANDERI SILK SAREES
- MALMAL COTTON SAREES
- KASHMIRI SAREES
- HUBLI SAREES
- KHADI SHIRTS
- KHADI KURTIES
- JAIPURI TOPS
- STONE JEWELLERY
- KODAGU SILK
- KROWN SILK
- BRASS ARTICLES
- RAJASTHANI HAND BAGS
- JAIPUR COTTON
- KEKDA
- PATCHWORK
- KANTHWORK
- SANGAM BEDSHEETS
- TOPS
- BRASS ARTICLES
- KASHMIRI SILK SAREES
- PASHMINA
- KALAMKARI SAREES & MANY
- WINTER WEAR LADIES
- KIDS TOYS/ FOOTWEAR

GRAND SHOPPING EXHIBITION
Mob: 78291 01092, 99299 11293
THE CANARA UNION
Building No, 42, 8th Main Rd, Mount Layout, Maruthi Extension Vinayaka Layout, Malleswara, Bengaluru, Karnataka 560003

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER
BOOK YOUR CLASSIFIEDS ADS ONLINE
WWW.DHCLASSIFIEDS.COM
ಪ್ರಜಾವಾಣಿ ಕ್ಲಾಸಿಫೈಡ್ಸ್
FOR MORE INFORMATION CONTACT 9880856233 | 9886213331
Email: santhoshkumar@deccanherald.co.in

Announcements

I, B. KRUTHIK ARYA residing at #14, 1st Avenue, Teacher's Colony, Venkatapura, 1st Block, Koramangala, Bengaluru-34 here by state that my Father's name has wrongly mentioned as BHUPESH instead of Y. BHUPESH and my Mother's name has MUMTHA instead of P.B. MUMTHA therefore correction made via affidavit dated 10-01-2022 sworn before Notary K.V. Mani, Bangalore.

Change of Name

I, RAJNI BHASKAR, Residing at Bengaluru-61 have changed my daughter name from PRISHA SAI CHADHA to PRISHA SAI BHASKAR, vide affidavit dated-6/1/2022 before Notary K.S. Bammappanavar, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಆರೋಗ್ಯ ತಪಾಸಣಾ ಶಿಬಿರ

ರಾಜರಾಜೇಶ್ವರಿನಗರ: 'ಕೋವಿಡ್‌ನಿಂದ ವಿಶ್ವವೇ ತತ್ತರಿಸಿದೆ. ಇಂತಹ ಕಾಲಘಟ್ಟದಲ್ಲಿ ಮನುಕುಲಕ್ಕೆ ಆರೋಗ್ಯವೇ ಭಾಗ್ಯ ಎಂಬುದು ಮನವರಿಕೆಯಾಗಿದೆ' ಎಂದು ಸ್ಫಟಿಕಪುರಿ ಮಹಾಸಂಸ್ಥಾನದ ನಂಜಾವಧೂತ ಸ್ವಾಮೀಜಿ ಹೇಳಿದರು.

ಜಯದೇವ ಹೃದ್ರೋಗ ಆಸ್ಪತ್ರೆ, ಶಾಂತಾಮಲ್ಲಿ ಸ್ಪೆಷಾಲಿಟಿ ಆಸ್ಪತ್ರೆ, ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ, ಜಯಂತ್ ಸೇವಾ ಫೌಂಡೇಷನ್ ವತಿಯಿಂದ ಜ್ಞಾನಭಾರತಿಯ ರೈಲ್ವೆ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಯಂತ್ ಸೇವಾ ಫೌಂಡೇಷನ್ ವ್ಯವಸ್ಥಾಪಕ ಟ್ರಸ್ಟಿ ಉಮೇಶ್, ಶಾಂತಾಮಲ್ಲಿ ಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಶಿವರಾಜ್‌ಗೌಡ, ಆದಿಚುಂಚನಗಿರಿ ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ, ಕನ್ನಡವೇ ಸತ್ಯ ರಂಗಣ್ಣ, ಪಾಲಿಕೆ ಮಾಜಿ ಸದಸ್ಯ ಜಿ.ಮೋಹನ್‌ಕುಮಾರ್, ಒಕ್ಕಲಿಗರ ಪ್ರಾಧಿಕಾರದ ನಿರ್ದೇಶಕ ಹುತ್ರಿದುರ್ಗ ರಂಗಸ್ವಾಮಿ, ಜ್ಞಾನ ಭಾರತಿ ಮಹಿಳಾ ಒಕ್ಕೂಟಗಳ ಅಧ್ಯಕ್ಷೆ ರಾಜಕುಮಾರಿ, ನಗರಸಭೆ ಮಾಜಿ ಸದಸ್ಯರಾದ ಸುಮಿತ್ರಮ್ಮ, ಹನುಮೇಗೌಡ, ನಟ ದೊಡ್ಡಣ್ಣ ಇದ್ದರು.

ವಿದ್ಯುತ್ ಕೇಬಲ್ ಕಾಮಗಾರಿ ವರದಿ ಕೇಳಿದ ಸಚಿವ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ನಗರದಲ್ಲಿ ನೆಲದೊಳಗೆ ವಿದ್ಯುತ್ ಕೇಬಲ್ ಅಳವಡಿಕೆ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಇಂಧನ ಸಚಿವ ವಿ. ಸುನಿಲ್‌ಕುಮಾರ್ ಅವರು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರು ನಗರದಲ್ಲಿ ಕಂಬಗಳಲ್ಲಿನ ತಂತಿಗಳ ಮೂಲಕ ವಿದ್ಯುತ್ ಸರಬರಾಜು ಮಾಡುವುದನ್ನು ತಪ್ಪಿಸಿ ನೆಲದೊಳಗೆ ಕೇಬಲ್‌ಗಳನ್ನು ತೂರಿಸುವ ಯೋಜನೆಯನ್ನು 2018-19ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಘೋಷಣೆ ಮಾಡಿತ್ತು. ಬೆಸ್ಕಾಂ ವ್ಯಾಪ್ತಿಯಲ್ಲಿನ 63 ಉಪವಿಭಾಗಗಳ ಪೈಕಿ 52 ಉಪವಿಭಾಗಗಳಲ್ಲಿ 6 ಸಾವಿರ ಕಿ.ಮೀ.ನಲ್ಲಿ 11 ಕೆ.ವಿ ವಿದ್ಯುತ್ ಮೇಲ್ಮಾರ್ಗಗಳನ್ನು ನೆಲದೊಳಗೆ ಹುದುಗಿಸುವ ಕಾಮಗಾರಿಯನ್ನು ಬೆಸ್ಕಾಂ ಆರಂಭಿಸಿದೆ.

ಬೆಸ್ಕಾಂ ಜಾಲಹಳ್ಳಿ ವಿಭಾಗ ವ್ಯಾಪ್ತಿಯಲ್ಲಿನ ವಿದ್ಯಾರಣ್ಯಪುರ, ಕೊಡಿಗೇಹಳ್ಳಿ, ವಿರೂಪಾಕ್ಷಪುರ, ಎಂ.ಎಸ್. ಪಾಳ್ಯದಲ್ಲಿ ನಡೆಯುತ್ತಿರುವ ಕಾಮಗಾರಿ ಕಳಪೆಯಾಗಿದೆ ಎಂದು ಸ್ಥಳೀಯರು ಬೆಸ್ಕಾಂಗೆ ದೂರು ನೀಡಿದ್ದರು. ಈ ಸಂಬಂಧ 'ಪ್ರಜಾವಾಣಿ' ಸ್ಥಳಕ್ಕೆ ಭೇಟಿ ನೀಡಿ ವಿಸ್ತೃತ ವರದಿಯನ್ನು ಡಿ.21ರಂದು ಪ್ರಕಟಿಸಿತ್ತು.

ಈ ಬಗ್ಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿರುವ ಸಚಿವರು, ಮೂರು ದಿನಗಳಲ್ಲಿ ವರದಿ ನೀಡಬೇಕು ಎಂದು ತಿಳಿಸಿದ್ದಾರೆ.


ವಿದ್ಯಾರಣ್ಯಪುರದಲ್ಲಿ ನೆಲದ ಮೇಲೆಯೇ ಬಿದ್ದಿರುವ ವಿದ್ಯುತ್ ಕೇಬಲ್ –ಪ್ರಜಾವಾಣಿ ಚಿತ್ರ

ತನಿಖೆ ಬಗ್ಗೆ ಪ್ರತಿಕ್ರಿಯಿಸಿರುವ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, 'ಯೋಜನಾ ನಿರ್ವಹಣಾ ಸಲಹೆಗಾರರಿಂದ (ಪಿಎಂಸಿ) ವರದಿ ಕೇಳಿದ್ದೇನೆ. ಬೆಸ್ಕಾಂ ವ್ಯಾಪ್ತಿಯಲ್ಲಿ 12 ಪಿಎಂಸಿ ತಂಡಗಳಿದ್ದು, ತನಿಖೆ ನಡೆಯುತ್ತಿದೆ. ವರದಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸಚಿವರ ಮಗನಿಗೆ ಬ್ಲ್ಯಾಕ್‌ಮೇಲ್ ಮೂವರು ಸಿಸಿಬಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಚಿವ ಎಸ್.ಟಿ.ಸೋಮಶೇಖರ್ ಅವರ ಪುತ್ರ ನಿಶಾಂತ್ ಅವರನ್ನು ಬೆದರಿಸಿ ₹1 ಕೋಟಿ ಮೊತ್ತಕ್ಕೆ ಬೇಡಿಕೆ ಇಟ್ಟ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು ಮತ್ತೆ ಮೂವರನ್ನು ವಶಕ್ಕೆ ಪಡೆದಿದ್ದಾರೆ.

'ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ರಾಹುಲ್ ಭಟ್‌ನನ್ನು (31) ಆರ್.ಟಿ.ನಗರದಲ್ಲಿ ಬಂಧಿಸಲಾಗಿತ್ತು. ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ಅವರ ಮಗಳಿಗೆ ತನಿಖೆಗೆ ಹಾಜರಾಗುವಂತೆ ಸಮನ್ಸ್ ನೀಡಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ನಿಶಾಂತ್‌ಗೆ ಕಳುಹಿಸಲಾಗಿದೆ ಎನ್ನಲಾದ ಅಶ್ಲೀಲ ವಿಡಿಯೊ ಹಾಗೂ ರಾಹುಲ್‌ನಿಂದ ಜಪ್ತಿ ಮಾಡಿರುವ ಮೂರು ಮೊಬೈಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅದರ ವರದಿಗಾಗಿ ಕಾಯುತ್ತಿದ್ದೇವೆ. ರಾಹುಲ್ 2021ರ ಡಿಸೆಂಬರ್ 20ರಂದು ದುಬೈಗೆ ಪ್ರಯಾಣ ಕೈಗೊಂಡಿದ್ದ. ಆ ಸಮಯದಲ್ಲೇ ನಿಶಾಂತ್‌ಗೆ ಅಶ್ಲೀಲ ವಿಡಿಯೊ ಕಳುಹಿಸಿರುವ ಸಾಧ್ಯತೆ ಇದೆ. ಆ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದಿದ್ದಾರೆ.

'ಪ್ರಕರಣದ ಪ್ರಮುಖ ಆರೋಪಿ ರಾಹುಲ್, ಶಾಸಕರ ಮಗಳು ಹಾಗೂ ಶಂಕಿತ ಇತರ ಆರೋಪಿಗಳೆಲ್ಲಾ ಪರಿಚಿತರು. ಹಿಂದೆ ಜೊತೆಯಾಗಿಯೇ ವ್ಯಾಸಂಗ ಮಾಡಿದ್ದರು. ಅವರ ನಡುವೆ ಯಾವ ವಿಚಾರಕ್ಕೆ ಮನಸ್ತಾಪ ಬಂದಿದೆಯೊ ಗೊತ್ತಿಲ್ಲ. ಈ ವಿಡಿಯೊವನ್ನು ನಿಶಾಂತ್‌ಗೆ ಏಕೆ ಕಳುಹಿಸಿದ್ದಾರೆ ಎಂಬುದೂ ತಿಳಿದಿಲ್ಲ. ಈ ಕುರಿತು ರಾಹುಲ್ ಹೆಚ್ಚಿನ ಮಾಹಿತಿ ನೀಡುತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಪ್ರಕರಣವೊಂದರ ತನಿಖೆ ಕೈಗೊಂಡಾಗ ಅನುಮಾನ ಬಂದವರನ್ನೆಲ್ಲಾ ಕರೆದು ವಿಚಾರಣೆ ನಡೆಸುವುದು ಸಾಮಾನ್ಯ. ಅದೇ ರೀತಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಅವರ ಹೇಳಿಕೆಗಳ ಆಧಾರದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಜಂಟಿ ಪೊಲೀಸ್ ಕಮಿಷನರ್ ರಮಣ್ ಗುಪ್ತ ಹೇಳಿದ್ದಾರೆ.

'ನಿಶಾಂತ್‌ಗೆ ಕಳುಹಿಸಲಾಗಿರುವ ವಿಡಿಯೊದಲ್ಲಿರುವ ಯುವತಿಯನ್ನು ಗುರುತಿಸಲಾಗಿದೆ. ಆಕೆ ರೂಪದರ್ಶಿ ಎಂಬುದು ಗೊತ್ತಾಗಿದೆ. ವಿಚಾರಣೆಗೆ ಹಾಜರಾಗುವಂತೆ ಆಕೆಗೂ ಶೀಘ್ರವೇ ಸಮನ್ಸ್ ನೀಡಲಾಗುತ್ತದೆ' ಎಂದು ಮೂಲಗಳು ಹೇಳಿವೆ.

'ಚಾಕುವಿನಿಂದ ಚುಚ್ಚಿಕೊಂಡು ಆತ್ಮಹತ್ಯೆ'

ಬೆಂಗಳೂರು: ಕೆಲಸಕ್ಕೆ ಹೋಗದೆ ಸ್ನೇಹಿತರ ಜೊತೆ ಸುಮ್ಮನೆ ಅಲೆಯುತ್ತಿದ್ದ ಮಗನಿಗೆ ತಂದೆ ಬೈದಿದ್ದು, ಅಪ್ಪನ ಮಾತುಗಳಿಂದ ಕೆರಳಿದ ಆತ ಚಾಕುವಿನಿಂದ ಹೊಟ್ಟೆಗೆ ಚುಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಜಗಜೀವನ್ ರಾಮ್ ನಗರ (ಜೆ.ಜೆ.ನಗರ) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದರಾಯನಪುರ ನಿವಾಸಿ ಸೈಯದ್ ಸಾಹಿಲ್ (23) ಮೃತ ಯುವಕ. ಈ ಬಗ್ಗೆ ಆತನ ತಾಯಿಯೇ ಠಾಣೆಗೆ ದೂರು ನೀಡಿದ್ದಾರೆ.

'ನನ್ನ ಪತಿ ಅಬ್ಬಾಸ್, ಆಟೊ ಚಾಲಕ. ಮಗಳು ಹಾಗೂ ಇಬ್ಬರು ಪುತ್ರರ ಜೊತೆ ನಾವು ಪಾದರಾಯನ ಪುರದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದೇವು. ಕಿರಿಯ ಮಗ ಸಾಹಿಲ್, ಇತ್ತೀಚಿನ ದಿನಗಳಲ್ಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಇದೇ 9ರಂದು ಸಾಹಿಲ್ ಮನೆಯಲ್ಲಿ ಇರುವುದನ್ನು ಕಂಡ ಪತಿ, ಕೆಲಸಕ್ಕೆ ಹೋಗದೆ ಮನೆಯಲ್ಲಿ ಏಕೆ ಕಾಲಹರಣ ಮಾಡುತ್ತಿದ್ದೀಯಾ ಎಂದು ಗದರಿದ್ದರು. ಇದಕ್ಕೆ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮೂಡಲಪಾಯ ಯಕ್ಷಗಾನ ಪರಿಷತ್ ಉದ್ಘಾಟನೆಯಲ್ಲಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ

'ಎನ್‌ಇಪಿ'ಯಲ್ಲಿ ದೇಸಿ ಕಲೆಗಳ ಕಲಿಕೆಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಮೂಡಲಪಾಯದಂತಹ ದೇಸಿ ಮತ್ತು ಸ್ಥಳೀಯ ಕಲೆಗಳ ಕಲಿಕೆಗೆ ಮತ್ತು ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ನಗರದದಲ್ಲಿ ಸೋಮವಾರ ನಡೆದ ಮೂಡಲಪಾಯ ಯಕ್ಷಗಾನ ಪರಿಷತ್ತಿನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳ ಪರಿಪೂರ್ಣ ವಿಕಸನದ ಗುರಿ ಹೊಂದಿರುವ ಶಿಕ್ಷಣ ನೀತಿಯಲ್ಲಿ ಪೂರ್ವ ಪ್ರಾಥಮಿಕ ತರಗತಿಗಳ ಹಂತದಿಂದಲೇ ಕಲೆಗಳ ಕಲಿಕೆಗೆ ಒತ್ತು ಕೊಡಲಾಗಿದೆ. ಅದಕ್ಕೆ ಬೇಕಾದ ಪರಿಣಾಮಕಾರಿ ಕಾರ್ಯತಂತ್ರಗಳನ್ನು ಈ ನೀತಿ ಒಳಗೊಂಡಿದೆ' ಎಂದರು.


ಮೂಡಲಪಾಯ ಯಕ್ಷಗಾನ ಪರಿಷತ್ತನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಉದ್ಘಾಟಿಸಿದರು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ,ಸೌಮ್ಯನಾಥ ಸ್ವಾಮೀಜಿ, ಶಾಸಕ ಎಂ.ಶ್ರೀನಿವಾಸ್, ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ, ಮಂಡ್ಯ ಕನ್ನಡ ಸಂಘದ ಅಧ್ಯಕ್ಷ ಜಯಪ್ರಕಾಶ ಗೌಡ, ಆದಾಯ ತೆರಿಗೆಯ ಅಧಿಕಾರಿ ಜಯರಾಮ ರಾಯಪುರ ಇದ್ದಾರೆ

'ಮೂಡಲಪಾಯ ಯಕ್ಷಗಾನವು ದಕ್ಷಿಣ ಕರ್ನಾಟಕದ ಸಾಂಸ್ಕೃತಿಕ ಸಿರಿವಂತಿಕೆಗೆ ಒಂದು ನಿದರ್ಶನ. ಹಳೆಯ ಮೈಸೂರು ಭಾಗದಲ್ಲಿ ಮೂಡಲಪಾಯ ಯಕ್ಷಗಾನವು ಕಾರಣಾಂತರಗಳಿಂದ ನೇಪಥ್ಯಕ್ಕೆ ಸರಿದಿದೆ. ಈ ಪ್ರದೇಶದ ಪ್ರತಿ ಮನೆಯಲ್ಲೂ ಕಲಾವಿದರಿದ್ದು, ಒಮ್ಮೆಯಾದರೂ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಅಭಿನಯಿಸಿರುತ್ತಾರೆ. ಇಂತಹ ಶ್ರೀಮಂತ ಕಲಾ ಪ್ರಕಾರವನ್ನು ಕಾಲಕ್ಕೆ ತಕ್ಕಂತೆ ಪುನರುಜ್ಜೀವನಗೊಳಿಸಬೇಕು' ಎಂದು ಹೇಳಿದರು.

'ಯಾವ ವೃತ್ತಿಯಲ್ಲಿ ತೊಡಗಿಕೊಂಡರೂ ವ್ಯಕ್ತಿಗೆ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿರುಚಿಗಳು ಇರಲೇಬೇಕು. ಇಲ್ಲದಿದ್ದರೆ ಬದುಕಿನ ಆನಂದ ಸಿಗುವುದಿಲ್ಲ' ಎಂದರು.

ಮಂಡ್ಯದ ಬೇಲೂರು ಪ್ರೌಢಶಾಲೆಯ ಮಕ್ಕಳು 'ಕರ್ಣಾವಸಾನ' ಮತ್ತು ಹನಕೆರೆಯ ವಿವೇಕ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು 'ದೇವಿ ಮಹಾತ್ಮೆ' ಯಕ್ಷಗಾನ ಪ್ರಸಂಗಗಳನ್ನು ಪ್ರದರ್ಶಿಸಿದರು.

ಬಿಸಿಯೂಟಕ್ಕೆ ಬಿದ್ದ ಹಲ್ಲಿ 70 ವಿದ್ಯಾರ್ಥಿಗಳಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ): ತಾಲ್ಲೂಕಿನ ವಡಕೆಹಳ್ಳದ ಸರ್ಕಾರಿ ಉನ್ನತೀಕರಿಸಿದ ಶಾಲೆಯಲ್ಲಿ ಸೋಮವಾರ ಮಧ್ಯಾಹ್ನ ಬಿಸಿಯೂಟ ಸೇವಿಸಿದ 70ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥಗೊಂಡರು.

ಬಿಸಿಯೂಟಕ್ಕಾಗಿ ಸಿದ್ಧಪಡಿಸಿದ್ದ ಸಾಂಬಾರಿಗೆ ಹಲ್ಲಿ ಬಿದ್ದಿದ್ದರಿಂದ ಈ ಘಟನೆ ನಡೆದಿದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಯಾರಿಗೂ ಗಂಭೀರ ಸಮಸ್ಯೆ ಉಂಟಾಗಿಲ್ಲ.

ಮಧ್ಯಾಹ್ನದ ಊಟ ಮಾಡಿದ ನಂತರ ಕೆಲ ಮಕ್ಕಳು ವಾಂತಿ ಮಾಡಿಕೊಂಡರು. ತಕ್ಷಣ ಅವರನ್ನು ಕೌದಳ್ಳಿ, ರಾಮಾಪುರ ಹಾಗೂ ಹನೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು.

ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ
ಬೆಳಮಾರನಹಳ್ಳಿ, ಕೋಲಾರ ತಾಲ್ಲೂಕು
ಬೆ.ಗ್ರಾ.ಪಂ.ಸಂಖ್ಯೆ:66/2021-2022 ತಾ:28-12-2022
2021-22 ನೇ ಸಾಲಿನ ಮೀನು ಪಾಶುವಾರು ಹರಾಜು ಇಸ್ತಿಹಾರ್
ಸಾರ್ವಜನಿಕ ಪ್ರಕಟಣೆ
ಕೋಲಾರ ತಾಲ್ಲೂಕು, ಬೆಳಮಾರನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಎಲ್ಲಾ ಗ್ರಾಮಗಳ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೋಲಾರ ತಾಲ್ಲೂಕು, ಬೆಳಮಾರನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಒಟ್ಟು 10 ಕೆರೆಗಳು ಮಳೆಯಿಂದ ಸದರಿ ಕೆರೆಗಳಲ್ಲಿ ನೀರು ತುಂಬಿರುವುದರಿಂದ ಮೀನು ಮರಿ ಸಾಕಾಣಿಕೆ ಮಾಡಿಕೊಳ್ಳಲು ಸಾರ್ವಜನಿಕರು ಗ್ರಾಮಪಂಚಾಯ್ತಿಯವರನ್ನು ಕೋರಿರುತ್ತಾರೆ. ಅದರಂತೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಶ್ರೀ. ಚಂದ್ರಶೇಖರ್.ಬಿ.ಎ. ರವರ ಅಧ್ಯಕ್ಷತೆಯಲ್ಲಿ **ತಾ॥ 31-1-2022 ಸೋಮವಾರದಂದು ಸಮಯ ಬೆಳಿಗ್ಗೆ 11.00 ಗಂಟೆಗೆ** ಸರಿಯಾಗಿ ಗ್ರಾಮ, ಪಂಚಾಯ್ತಿ ಆವರಣದಲ್ಲಿ ಮೀನು ಮರಿ ಸಾಕಾಣಿಕೆ ಮಾಡಿಕೊಳ್ಳಲು ಮೀನು ಪಾಶುವಾರು ಹರಾಜನ್ನು ಏರ್ಪಡಿಸಲಾಗಿದೆ. ಆದ್ದರಿಂದ ಆಸಕ್ತಿವುಳ್ಳ ಸಾರ್ವಜನಿಕರು ಗ್ರಾಮ ಪಂಚಾಯಿತಿ ಷರತ್ತುಗಳಿಗೆ ಒಳಪಟ್ಟು ಸದರಿ ಹರಾಜನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.
ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಕೆರೆಗಳ ವಿವರ:
1. ಚಾಕರಸನಹಳ್ಳಿ2, ಕೆರೆ 2.ಸೊಣ್ಣೇನಹಳ್ಳಿ1 ಕೆರೆ, 3. ದಾನವಹಳ್ಳಿ-1 ಕೆರೆ, 4. ತೋರಣಕಂಬದಹಳ್ಳಿ-1 ಕೆರೆ, 5. ಬುವನಹಳ್ಳಿ-1 ಕೆರೆ, 6. ಬೆಳಮಾರನಹಳ್ಳಿ-2 ಕೆರೆ, 7.ಗುಟ್ಟಹಳ್ಳಿ-1 ಕೆರೆ 8.ವಿಶ್ವನಾಥಪುರ-1 ಕೆರೆ ಒಟ್ಟು 10 ಕೆರೆಗಳು.
* ಷರತ್ತುಗಳು ಒಳಪಟ್ಟಿರುತ್ತವೆ.
ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಅಧ್ಯಕ್ಷರು, ಬೆಳಮಾರನಹಳ್ಳಿ ಗ್ರಾ.ಪಂ. ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಜಿಲ್ಲಾ ಪಂಚಾಯಿತಿ ಹಳೇ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು – 560009
ದೂರವಾಣಿ: 080-22010407, ಇ-ಮೇಲ್: kvrdpr@gmail.com, karnatak-vikasa@gov.in
ಸಂಖ್ಯೆ: ಕೆಪಿಆರ್‌ಸಿ-ಕವಿ/3/2021 ದಿನಾಂಕ: 07-01-2022
ಅಲ್ಪಾವದಿ ಮರು ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಮತ್ತು ಇ-ಆಡಳಿತ ಶಾಖೆಗೆ ಸಂಬಂಧಿಸಿದಂತೆ IEC ಚಟುವಟಿಕೆಗಳನ್ನು ಕಾರ್ಯನಿರ್ವಹಿಸಲು Social Media Agency ಯನ್ನು ಆಯ್ಕೆ ಮಾಡಲು ಇ-ಟೆಂಡರ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಟೆಂಡರ್‌ದಾರರು ವಿವರ ಮತ್ತು ಟೆಂಡರ್ ಮಾಹಿತಿಯನ್ನು ಪಡೆಯಲು ದಿನಾಂಕ: 11.01.2022ರ ಮಧ್ಯಾಹ್ನ 12.00 ಗಂಟೆಯಿಂದ ಅಂತರ್ಜಾಲ www.eproc.karnataka.gov.in ಅನ್ನು ಸಂಪರ್ಕಿಸಲು ಕೋರಿದೆ. ದಿನಾಂಕ: 25.01.2022ರ ಸಂಜೆ 4.00 ಗಂಟೆಯೊಳಗಾಗಿ ಅರ್ಜಿ/ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯವನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ಉಪ ಕಾರ್ಯದರ್ಶಿ (ಆಡಳಿತ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
DIPR/DDU/YC/2769/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬಿಟಿಎಂ ಬಡಾವಣೆ ವಿಭಾಗ, ಬೃ.ಬೆಂ.ಮ.ಪಾಲಿಕೆ
ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಸ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು – 30.
ಸಂಖ್ಯೆ: ಕಾಪಾಅ(ಬಿಟಿಎಂ)/ಜೆಇ/12&13/2021–22 ದಿನಾಂಕ: 10.01.2022
ಟೆಂಡರ್ ತಿದ್ದುಪಡಿ
ವಿಷಯ: ಟೆಂಡರ್ ನೋಟಿಫಿಕೇಷನ್‌ನ ಕೆಲ ಕಾಮಗಾರಿಗಳ ಕಾಲಾವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ.
ಈ ಕಚೇರಿಯಲ್ಲಿ ದಿನಾಂಕ: 17.12.2021 & 18.12.2021ರಂದು ಪ್ರಕಟಿಸಿರುವ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಬಿ.ಟಿ.ಎಂ/ಜೆ.ಇ/ಇ–ಪ್ರೊಕ್ಯೂರ್/12&13/2021–22ರ ಕಾಮಗಾರಿಗಳ ವೇಳಾಪಟ್ಟಿಯನ್ನು ಕೆಲ ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ವಿಸ್ತರಿಸಲಾಗಿದೆ.
1) ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **19.01.2022**ರ ಸಂಜೆ **4:00** ಗಂಟೆಯವರೆಗೆ. 2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **13.01.2022**ರ ಮಧ್ಯಾಹ್ನ **3:00** ಗಂಟೆಗೆ ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ ಲೇಔಟ್) ವಿಭಾಗ ಕಚೇರಿ, ಬೃ.ಬೆಂ.ಮ.ಪಾಲಿಕೆ ವಾಣಿಜ್ಯ ಸಂಕೀರ್ಣ, 2ನೇ ಮಹಡಿ, ಲಸ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು ಇಲ್ಲಿ ನಡೆಸಲಾಗುವುದು. 4) ಟೆಂಡರ್ ತೆರೆಯುವ ದಿನಾಂಕ: **20.01.2022**ರ ಸಂಜೆ **4:30** ಗಂಟೆಗೆ.
ಇನ್ನುಳಿದಂತೆ ಮೂಲ ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಬಿಟಿಎಂ ಬಡಾವಣೆ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ಪ್ರಕಟಣೆ
ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತುಗಳಲ್ಲಿ ಐಟಂ No. -1 ರ ಮಾಲೀಕರಾದ ಮೆಸರ್ಸ್. ಸಿನೋ ಇಂಪೋರ್ಟ್ಸ್ & ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಐಟಂ No. -2 ರ ಮಾಲೀಕರಾದ ಶ್ರೀ ಶೋಭಾಗ್ಮಲ್ ರವರ ಮಗನಾದ ಶ್ರೀ ಎಸ್. ಅಮರೀಶ್ ಮತ್ತು ಇವರ ಪತ್ನಿ ಶ್ರೀಮತಿ ವೀಣಾ ಎ., ರವರುಗಳಿಂದ ಖರೀದಿಸಲು ಇಚ್ಚಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು, ಈ ಮೇಲೆ ನಮೂದಿಸಿರುವ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.
ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯಾವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರೂ ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು ಸದರಿ ಮೇಲೆ ತಿಳಿಸಿರುವ ಮೆಸರ್ಸ್. ಸಿನೋ ಇಂಪೋರ್ಟ್ಸ್ & ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ ಎಸ್. ಅಮರೀಶ್ ಮತ್ತು ಶ್ರೀಮತಿ ವೀಣಾ ಎ., ರವರುಗಳ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಖರೀದಿಸಲು ಮುಂದಾಗುವರು.
ಷೆಡ್ಯೂಲ್ ಸ್ವತ್ತಿನ ವಿವರ
ಐಟಂ No.-1
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವೀರಾಪುರ ಗ್ರಾಮದ ಸರ್ವೆ ನಂ. 96, 97 ಮತ್ತು 98 ರ ಜಮೀನುಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರಚಿಸಿರುವ ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದ ರಸ್ತೆ ಸಂಖ್ಯೆ.9 ರಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ ಉತ್ತರದ ಕಡೆ 83.97 ಮೀಟರ್‌ಗಳು ಮತ್ತು ದಕ್ಷಿಣದ ಕಡೆ 95.15 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ ಪೂರ್ವದ ಕಡೆ 91.33 ಮೀಟರ್‌ಗಳು ಮತ್ತು ಪಶ್ಚಿಮದ ಕಡೆ 72.15 ಮೀಟರ್‌ಗಳು, ಒಟ್ಟು 7224.62 ಚದರ ಮೀಟರ್‌ಗಳುಳ್ಳ (77,765.80 ಚದರ ಅಡಿಗಳು), ಆಸ್ತಿ ಐಡಿ. ಸಂಖ್ಯೆ. 10/7B, E–ಖಾತಾ ಸಂಖ್ಯೆ. 150300301700521028 ಯನ್ನು ಹೊಂದಿರುವ ನಿವೇಶನದ ಸಂಖ್ಯೆ.22A ರ ಸ್ವತ್ತಿಗೆ ಚಕ್ಕುಬಂದಿ: **ಉತ್ತರಕ್ಕೆ** : ಖಾಸಗಿ ಸ್ವತ್ತು; **ದಕ್ಷಿಣಕ್ಕೆ** : ಈ ಷೆಡ್ಯೂಲ್ ನಲ್ಲಿ ವಿವರಿಸಿರುವ ಐಟಂ No.–2 ರ ಸ್ವತ್ತು; **ಪೂರ್ವಕ್ಕೆ** : ನಿವೇಶನ ಸಂಖ್ಯೆ.22(B); ಮತ್ತು **ಪಶ್ಚಿಮಕ್ಕೆ** : ಕೆಐಎಡಿಬಿ 8th 'A' ಕ್ರಾಸ್ ರಸ್ತೆ;
ಐಟಂ No.-2
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ವೀರಾಪುರ ಗ್ರಾಮದ ಸರ್ವೆ ನಂ. 96, 97 ಮತ್ತು 98 ರ ಜಮೀನುಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರಚಿಸಿರುವ ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದ ರಸ್ತೆ ಸಂಖ್ಯೆ.9 ರಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ ಉತ್ತರದ ಕಡೆ 95.15 ಮೀಟರ್‌ಗಳು ಮತ್ತು ದಕ್ಷಿಣದ ಕಡೆ 104.55 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ ಪೂರ್ವದ ಕಡೆ 62.01 ಮೀಟರ್‌ಗಳು ಮತ್ತು ಪಶ್ಚಿಮದ ಕಡೆ 59.58 ಮೀಟರ್‌ಗಳು, ಒಟ್ಟು 6070.38 ಚದರ ಮೀಟರ್‌ಗಳುಳ್ಳ (65,341.57 ಚದರ ಅಡಿಗಳು), ಆಸ್ತಿ ಐಡಿ. ಸಂಖ್ಯೆ. 10/7A, ಇ–ಖಾತಾ ಸಂಖ್ಯೆ. 150300301700500219 ಯನ್ನು ಹೊಂದಿರುವ ನಿವೇಶನದ ಸಂಖ್ಯೆ.22A ರ ಸ್ವತ್ತಿಗೆ ಚಕ್ಕುಬಂದಿ: **ಉತ್ತರಕ್ಕೆ** : ಈ ಷೆಡ್ಯೂಲ್ ನಲ್ಲಿ ವಿವರಿಸಿರುವ ಐಟಂ No.–1 ರ ಸ್ವತ್ತು; **ದಕ್ಷಿಣಕ್ಕೆ** : ಕೆಐಎಡಿಬಿ ರಸ್ತೆ ಸಂಖ್ಯೆ.9; **ಪೂರ್ವಕ್ಕೆ** : ನಿವೇಶನ ಸಂಖ್ಯೆ.22(B); ಮತ್ತು **ಪಶ್ಚಿಮಕ್ಕೆ** : ಕೆಐಎಡಿಬಿ 8th 'A' ಕ್ರಾಸ್ ರಸ್ತೆ;
ಬೆಂಗಳೂರು ದಿನಾಂಕ: ಜನವರಿ 11, 2022
ಸಹಿ./- ಸುಪ್ರೀತ್ ಎ, ವಕೀಲರು, ಕ್ರೆಸ್ಟ್ ಲಾ ಪಾರ್ಟ್ನರ್ಸ್, ವಕೀಲರು,
No. 33, ಝುವಿಯರ್ ಲೇಔಟ್, 1 ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ,
ಬೆಂಗಳೂರು – 560 047. ದೂ: 080 41473535 / 41473536

ಕೋವಿಡ್: ಐಸಿಎಂಆರ್ ಹೊಸ ಮಾರ್ಗಸೂಚಿ ಅನ್ವಯ ಕೇಂದ್ರ ಸರ್ಕಾರದಿಂದ ಆದೇಶ

'ಸೋಂಕಿತರ ಸಂಪರ್ಕಕ್ಕೆ ಬಂದವರೆಲ್ಲರಿಗೂ ಪರೀಕ್ಷೆ ಬೇಡ'

ನವದೆಹಲಿ: ಸೋಂಕಿತರ ಸಂಪರ್ಕಕ್ಕೆ ಬಂದವರೆಲ್ಲರೂ ಕೋವಿಡ್ ಪರೀಕ್ಷೆಗೆ ಒಳಪಡುವ ಅಗತ್ಯವಿಲ್ಲ. ಆದರೆ, ಸಂಪರ್ಕಕ್ಕೆ ಬಂದವರು ವಯಸ್ಸಾದವರು ಹಾಗೂ ಇತರ ರೋಗಗಳಿಂದ ಬಳಲುತ್ತಿರುವವರಾದಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ.


ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಹೊಸ ಮಾರ್ಗಸೂಚಿ ಅನ್ವಯ ಈ ನಿರ್ಧಾರ ಪ್ರಕಟಿಸಲಾಗಿದೆ.

ಲಕ್ಷಣವಿಲ್ಲದವರು, ಹೋಂ ಐಸೊಲೇಷನ್ ಮಾರ್ಗದರ್ಶಿ ಪ್ರಕಾರ ಗುಣಮುಖರಾದವರು, ಕೋವಿಡ್ ಚಿಕಿತ್ಸಾ ಕೇಂದ್ರಗಳಿಂದ ಬಿಡುಗಡೆಯಾಗಿ ಡಿಸ್ಚಾರ್ಜ್ ಆದವರು (ಪರಿಷ್ಕೃತ ಮಾರ್ಗಸೂಚಿ ಪ್ರಕಾರ), ಅಂತರರಾಜ್ಯ ಪ್ರಯಾಣಿಕರು ಕೂಡ ಕೋವಿಡ್ ಪರೀಕ್ಷೆಗೆ ಒಳಗಾಗಬೇಕಿಲ್ಲ ಎಂದು ನೂತನ ಮಾರ್ಗಸೂಚಿಯಲ್ಲಿ ಐಸಿಎಂಆರ್ ತಿಳಿಸಿದೆ.

ಹೊಸ ಪರೀಕ್ಷಾ ಮಾರ್ಗಸೂಚಿಯನ್ನು ಕೇಂದ್ರದ ಹೊಸ ಹೋಂ ಐಸೊಲೇಷನ್ ನೀತಿಯ ಜತೆ ತಾಳೆಯಾಗುವಂತೆ ರೂಪಿಸಲಾಗಿದೆ. ಇದರ ಪ್ರಕಾರ, 7 ದಿನಗಳ ಹೋಂ ಐಸೊಲೇಷನ್ ಕೊನೆಯ ಮೂರು ದಿನಗಳಲ್ಲಿ ಜ್ವರ ಅಥವಾ ಯಾವುದೇ ಲಕ್ಷಣ ಇಲ್ಲದಿದ್ದರೆ ಪರೀಕ್ಷೆಗೆ ಒಳಗಾಗುವ ಅಗತ್ಯವಿಲ್ಲ.

ಕೊರೊನಾ ವೈರಸ್‌ನ ರೂಪಾಂತರ ತಳಿ ಓಮೈಕ್ರಾನ್ ವ್ಯಾಪಕವಾಗಿ ಹರಡುತ್ತಿರುವ ಸಂದರ್ಭದಲ್ಲೇ ಮಾರ್ಗಸೂಚಿಯಲ್ಲಿ ಪರಿಷ್ಕರಣೆ ಮಾಡಲಾಗಿದೆ.

ಸಮುದಾಯ ಮಟ್ಟದಲ್ಲಿ ಕೂಡ ರೋಗ ಲಕ್ಷಣ (ಕೆಮ್ಮು, ಜ್ವರ, ಗಂಟಲು ಕೆರೆತ, ರುಚಿ–ವಾಸನೆ ಇಲ್ಲದಿರುವುದು, ಉಸಿರಾಟ ಸಮಸ್ಯೆ ಹಾಗೂ ಉಸಿರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು) ಇದ್ದವರನ್ನು ಮಾತ್ರ ಪರೀಕ್ಷೆಗೆ ಒಳಪಡಿಸಬೇಕು. ಸೋಂಕಿತರ ಸಂಪರ್ಕಕ್ಕೆ ಬಂದವರಾದರೆ 60 ವರ್ಷ ಮೇಲ್ಪಟ್ಟವರು ಮತ್ತು ಇತರ ಆರೋಗ್ಯ ಸಮಸ್ಯೆಗಳಿಂದ (ಮಧುಮೇಹ, ಅಧಿಕ ರಕ್ತದೊತ್ತಡ, ದೀರ್ಘಕಾಲದ ಶ್ವಾಸಕೋಶದ ಅಥವಾ ಕಿಡ್ನಿ ಸಮಸ್ಯೆ, ಬೊಜ್ಜು ಅಥವಾ ಮಾರಣಾಂತಿಕ ಕಾಯಿಲೆ) ಬಳಲುತ್ತಿರುವವರನ್ನು ಪರೀಕ್ಷೆಗೆ ಒಳಪಡಿಸಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.



ಸಿದ್ಧತೆಯಲ್ಲಿ ಯಾವುದೇ ಲೋಪವಾಗಬಾರದು: ಮನ್‌ಸುಖ್ ಮಾಂಡವೀಯ

ನವದೆಹಲಿ (ಪಿಟಿಐ): ಕೋವಿಡ್ ವಿರುದ್ಧದ ಹೋರಾಟದ ಸಿದ್ಧತೆಯಲ್ಲಿ ಯಾವುದೇ ಲೋಪವಾಗದ ಹಾಗೆ ಖಚಿತಪಡಿಸಿಕೊಳ್ಳುವಂತೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಸೋಮವಾರ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಿದ್ದಾರೆ.

ಸಾಂಕ್ರಾಮಿಕ ರೋಗದ ಕದಡಿಕೆ ನಿರ್ವಹಣೆಗೆ ಸೂಕ್ತ ಯೋಜನೆ ರೂಪಿಸಲು ಒತ್ತು ನೀಡಬೇಕು ಎಂದು ಅವರು ಹೇಳಿದರು.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೇಂದ್ರವು ರಾಜ್ಯಗಳಿಗೆ ಸದಾ ಬೆಂಬಲವಾಗಿದ್ದಾರೆ ಎಂದು ಪುನರುಚ್ಚರಿಸಿದ ಅವರು, ದೇಶದಾದ್ಯಂತ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸಲು ಕೋವಿಡ್ ತುರ್ತು ಪ್ರತಿಕ್ರಿಯೆ ಮತ್ತು ಆರೋಗ್ಯ ವ್ಯವಸ್ಥೆಗಳ ಸನ್ನದ್ಧತೆ ಪ್ಯಾಕೇಜ್ ಹಂತ II (ಇಸಿಆರ್‌ಪಿ–II)ರ ಯೋಜನೆಯಡಿ ಕೇಂದ್ರ ಸರ್ಕಾರ ಬೆಂಬಲ ನೀಡಿದೆ ಎಂದು ಅವರು ಹೇಳಿದರು.

'ಇಸಿಆರ್‌ಪಿ–II ಕೇಂದ್ರ ಪ್ರಾಯೋಜಿತ ಯೋಜನೆಯಾಗಿದೆ. ಕೋವಿಡ್ ಸೋಂಕನ್ನು ಪತ್ತೆ ಹಚ್ಚಲು, ಪ್ರತಿಕ್ರಿಯಿಸಲು ಮತ್ತು ತುರ್ತು ಪ್ರತಿಕ್ರಿಯೆ ಮತ್ತು ಸನ್ನದ್ಧತೆಗಾಗಿ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸುತ್ತದೆ.


ಮನ್‌ಸುಖ್ ಮಾಂಡವೀಯ

ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ಗೋವಾ, ದಾದ್ರಾ ಮತ್ತು ನಗರ ಹವೇಲಿ ಹಾಗೂ ದಮನ್ ಮತ್ತು ದಿಯುವಿನ ಆರೋಗ್ಯ ಸಚಿವರು, ಉನ್ನತ ಅಧಿಕಾರಿಗಳು ಮತ್ತು ಮಾಹಿತಿ ಆಯುಕ್ತರೊಂದಿಗಿನ ವರ್ಚುವಲ್ ಸಂವಾದ ನಡೆಸಿದ ಅವರು, 'ಕೋವಿಡ್ ವಿರುದ್ಧದ ನಮ್ಮ ಹೋರಾಟದ ಸಿದ್ಧತೆಯಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು' ಎಂದು ಅವರು ಹೇಳಿದರು.

124 ಪೊಲೀಸ್ ಸಿಬ್ಬಂದಿಗೆ ಕೋವಿಡ್

ಬೆಂಗಳೂರು: 2021ರ ನವೆಂಬರ್‌ನಿಂದ ಈವರೆಗೆ ಒಟ್ಟು 124 ಪೊಲೀಸರಿಗೆ ಕೊರೊನಾ ಸೋಂಕು ತಗುಲಿದೆ. 'ಸೋಮವಾರ ಒಟ್ಟು 22 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ. 124 ಜನರ ಪೈಕಿ 6 ಮಂದಿ ಚೇತರಿಸಿಕೊಂಡಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

'2021ರ ನವೆಂಬರ್‌ನಿಂದ ಈವರೆಗೂ ಕೋವಿಡ್ ನಿಯಮ ಉಲ್ಲಂಘಿಸಿದ 31,439 ಮಂದಿಯಿಂದ ಒಟ್ಟು 80.49 ಲಕ್ಷ ದಂಡ ಮೊತ್ತ ಸಂಗ್ರಹಿಸಲಾಗಿದೆ' ಎಂದು ಪ್ರಕಟಣೆ ಹೇಳಿದೆ.

63 ವಾಹನಗಳ ಜಪ್ತಿ: ಭಾನುವಾರ ರಾತ್ರಿ 8 ಗಂಟೆಯಿಂದ ಸೋಮವಾರ ಬೆಳಿಗ್ಗೆ 8ರ ಅವಧಿಯಲ್ಲಿ ವಾರಾಂತ್ಯ ಕರ್ಫ್ಯೂ ನಿಯಮ ಉಲ್ಲಂಘಿಸಿದ 63 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಅನಗತ್ಯವಾಗಿ ರಸ್ತೆಗೆ ಇಳಿದಿದ್ದ 61 ದ್ವಿಚಕ್ರ ವಾಹನ, ತಲಾ ಒಂದು ತ್ರಿಚಕ್ರ ಹಾಗೂ ಕಾರು ಜಪ್ತಿ ಮಾಡಲಾಗಿದೆ. ಉತ್ತರ (47) ಹಾಗೂ ದಕ್ಷಿಣ (14) ವಿಭಾಗಗಳಲ್ಲೇ ಅಧಿಕ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಐವರ ವಿರುದ್ಧ ಎನ್‌ಐಎ ಆರೋಪಪಟ್ಟಿ

ಕೋಲ್ಕತ್ತ (ಪಿಟಿಐ): ಮುಸ್ಲಿಂ ಯುವಕರಲ್ಲಿ ಉಗ್ರ ವಿಚಾರಗಳನ್ನು ಬಿತ್ತಿ ಅವರನ್ನು ನಿಷೇಧಿತ ಜೆಎಂಬಿ ಅಥವಾ ಅಲ್‌ಕೈದಾ ಉಗ್ರ ಸಂಘಟನೆಗೆ ನೇಮಕ ಮಾಡಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದ ಐವರ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಆರೋಪಪಟ್ಟಿ ಸಲ್ಲಿಸಿದೆ. ಈ ಐವರಲ್ಲಿ ನಾಲ್ವರು ಬಾಂಗ್ಲಾದೇಶದವರು ಮತ್ತು ಒಬ್ಬ ಭಾರತೀಯ ಪ್ರಜೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಷೇಧಿತ ಜಮಾತ್–ಉಲ್–ಮುಜಾಹಿದೀನ್ ಬಾಂಗ್ಲಾದೇಶ್ (ಜೆಎಂಬಿ) ಸಂಘಟನೆಯ ಭಾರತೀಯ ಕಾರ್ಯಕರ್ತನಾಗಿದ್ದ ಲಾಲು ಸೇನ್ ಹೆಸರು ಆರೋಪಪಟ್ಟಿಯಲ್ಲಿ ದಾಖಲಾಗಿದೆ. ಈತ ಪಶ್ಚಿಮ ಬಂಗಾಳದ ಉತ್ತರ 24 ಪರಗಣದ ನಿವಾಸಿ.

ಉಳಿದಂತೆ ಬಾಂಗ್ಲಾದೇಶದ ಪ್ರಜೆಗಳಾದ ಜಿಯುರ್ ರೆಹಮಾನ್ ಪಾವೆಲ್, ಮಿಕೈಲ್ ಖಾನ್, ರಬಿಯುಲ್ ಇಸ್ಲಾಂ ಮತ್ತು ಮೊಹಮ್ಮದ್ ಅಬ್ದುಲ್ ಮನ್ನನ್ ಬಚು ಅವರ ಹೆಸರುಗಳಿವೆ ಎಂದು ಪೊಲೀಸರು ಹೇಳಿದ್ದಾರೆ.

ಸಾರ್ವಜನಿಕ ಪ್ರಕಟಣೆ
ನಮ್ಮ ಕಕ್ಷಿದಾರರು ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದಲ್ಲಿರುವ ವಾಣಿಜ್ಯಕ್ಕಾಗಿ ಪರಿವರ್ತಿತವಾಗಿರುವ ಸರ್ವೆ ನಂ. 355ರ ಪಶ್ಚಿಮ ಭಾಗದ 3 ಎಕರೆ 34.41 ಗುಂಟೆಗಳು ಅಥವಾ 15621.36 ಚದರ ಮೀಟರ್‌ಗಳ (4 ಎಕರೆ 20 ಗುಂಟೆಗಳಲ್ಲಿನ) ಭಾಗವನ್ನು/ಪಾಲನ್ನು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಮತ್ತು ಇನ್ನುಮುಂದೆ **ಷೆಡ್ಯೂಲ್ ಪ್ರಾಪರ್ಟಿ** ಎಂದು ಕರೆಯಲ್ಪಡುವ ಸ್ವತ್ತನ್ನು ಈಗಿನ ಮಾಲೀಕರಾದ ಮೆ॥ **ಟೋಟಲ್ ಎನ್ವಿರಾನ್‌ಮೆಂಟ್ ಬಿಲ್ಡಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್** (ಮಾಲೀಕರು) ಅವರಿಂದ ಕೊಂಡುಕೊಳ್ಳಲು ಇಚ್ಛಿಸಿದ್ದಾರೆ.
ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಸ್ವತ್ತಿನ ಯಾವುದೇ ಭಾಗದ ಮೇಲೆ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಹಕ್ಕು, ಮಾಲೀಕತ್ವ, ಹಿತಾಸಕ್ತಿ ಅಥವಾ ಕ್ಲೈಮ್‌ಗಳನ್ನು ಹೊಂದಿದ್ದಲ್ಲಿ ಸದರಿ ಮಾಲೀಕರುಗಳ ವಿರುದ್ಧ ಆಕ್ಷೇಪಣೆಗಳಿದ್ದಲ್ಲಿ ಅಥವಾ ಸದರಿ ಮಾಲೀಕರಿಂದ ನಮ್ಮ ಕಕ್ಷಿದಾರರ ಪರವಾಗಿ ಆಗುವ ವ್ಯವಹಾರದ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಅಂತಹವರು ಸದರಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ** ಒಳಗಾಗಿ ತಮ್ಮ ಆಕ್ಷೇಪಣೆಯನ್ನು ದಾಖಲಾತಿಗಳ ಪುರಾವೆಯೊಡನೆ ಕೆಳ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲದಿದ್ದರೆ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ ಅಥವಾ ಆಸಕ್ತಿ ಹೊಂದಿರುವುದಿಲ್ಲವೆಂದು ತಿಳಿಯಲಾಗುವುದು ಮತ್ತು ಇದರಂತೆ ನಮ್ಮ ಕಕ್ಷಿದಾರರು ಈ ಸ್ವತ್ತಿನ ಮೇಲೆ ಇತರರ ಹಕ್ಕು ಇಲ್ಲವೆಂದು ಭಾವಿಸಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ವ್ಯವಹರಿಸಲು ಮುಂದಾಗುವರು.
ಷೆಡ್ಯೂಲ್ ಆಸ್ತಿ
ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮದಲ್ಲಿರುವ ವಾಣಿಜ್ಯಕ್ಕಾಗಿ ಪರಿವರ್ತಿತವಾಗಿರುವ ಸರ್ವೆ ನಂ. 355ರ ಪಶ್ಚಿಮ ಭಾಗದ 3 ಎಕರೆ 34.41 ಗುಂಟೆಗಳು ಅಥವಾ 15621.36 ಚದರ ಮೀಟರ್‌ಗಳ, ಅದರಲ್ಲಿ ದಕ್ಷಿಣ ಭಾಗದಲ್ಲಿ ರಸ್ತೆಯ ಅಗಲೀಕರಣಕ್ಕಾಗಿ ಮೀಸಲಿಟ್ಟಿರುವ 1117.83 ಚದರ ಮೀಟರ್‌ಗಳನ್ನು ಒಳಗೊಂಡ (4 ಎಕರೆ 20 ಗುಂಟೆಗಳಲ್ಲಿನ) ಸೇರಿದ ಸಂಪೂರ್ಣ ಸ್ವತ್ತು. ಚಕ್ಕುಬಂದಿ ಪೂರ್ವಕ್ಕೆ: ಬಿಡಿಎಗೆ ರಸ್ತೆಗಾಗಿ ನೀಡಿರುವ ಸರ್ವೆನಂ. 355ರ ಭಾಗ, ಪಶ್ಚಿಮಕ್ಕೆ: ರೈಲ್ವೆ ಹಳಿ ಮತ್ತು ರಸ್ತೆ, ಉತ್ತರಕ್ಕೆ: ಟೋಟಲ್ ಎನ್ವಿರಾನ್‌ಮೆಂಟ್ ಬಿಲ್ಡಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್‌ನವರು ಉಳಿಸಿಕೊಂಡಿರುವ ಸರ್ವೆ ನಂ. 354 ಮತ್ತು ಸರ್ವೆ ನಂ. 355ರ ಭಾಗದ ಆಸ್ತಿ, ದಕ್ಷಿಣಕ್ಕೆ: ರಸ್ತೆ.
ಸಹಿ/- (ಆರ್. ಸುನೀತಾ), ವಕೀಲರು
ಎಎಸ್‌ಎಲ್‌ಎಫ್ ಲಾ ಆಫೀಸಸ್
ನಂ. 34, 7ನೇ ಅಡ್ಡರಸ್ತೆ, ವಸಂತನಗರ
ಕನ್ನಿಂಗ್‌ಹ್ಯಾಂ ರಸ್ತೆ
ಬೆಂಗಳೂರು–560052
ದೂ. +91-80-42423000
ಫ್ಯಾಕ್ಸ್ +91-80-42423030

ಮಣಿಪಾಲ್ ಆಸ್ಪತ್ರೆಯಿಂದ ಲಸಿಕಾ ಅಭಿಯಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆ ವತಿಯಿಂದ ಆಂಬುಲೆನ್ಸ್‌ಗಳ ಚಾಲಕರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗಾಗಿ ವಿಶೇಷ ಲಸಿಕಾ ಅಭಿಯಾನವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಹಳೆಯ ವಿಮಾನ ನಿಲ್ದಾಣ ರಸ್ತೆ, ವೈಟ್‌ಫೀಲ್ಡ್, ಸರ್ಜಾಪುರ ರಸ್ತೆ, ಹೆಬ್ಬಾಳ, ವರ್ತೂರು ರಸ್ತೆ, ಮಲ್ಲೇಶ್ವರ, ಯಶವಂತಪುರ ಮತ್ತು ಜಯನಗರದಲ್ಲಿ ಮಣಿಪಾಲ್ ಆಸ್ಪತ್ರೆಗಳಲ್ಲಿ 100 ಆಂಬುಲೆನ್ಸ್ ಚಾಲಕರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗೆ ಮುನ್ನೆಚ್ಚರಿಕೆ ಡೋಸ್ ನೀಡಲಾಯಿತು.



ಮಣಿಪಾಲ್ ಆಸ್ಪತ್ರೆ ವತಿಯಿಂದ ಆಂಬುಲೆನ್ಸ್‌ಗಳ ಚಾಲಕರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗಾಗಿ ವಿಶೇಷ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.



ಜೆಎಸ್‌ಡಬ್ಲ್ಯು ಸ್ಟೀಲ್ಸ್‌ಗೆ ಹೊರ ಗುತ್ತಿಗೆ ನೌಕರರ ಪ್ರವೇಶ ನಿಷೇಧ


ಬಳ್ಳಾರಿ: ಜೆಎಸ್‌ಡಬ್ಲ್ಯು ಟೌನ್‌ಶಿಪ್ ಮತ್ತು ಸುತ್ತಮುತ್ತಲ ಪ್ರದೇಶ ಸೇರಿದಂತೆ ಸಂಡೂರು ತಾಲ್ಲೂಕಿನಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಗಣನೀಯವಾಗಿ ಏರುತ್ತಿರುವುದರಿಂದ ಜೆಎಸ್‌ಡಬ್ಲ್ಯು ಕಂಪನಿಗೆ ಹೊರ ರಾಜ್ಯಗಳಿಂದ ಬರುವ ಹೊರ ಗುತ್ತಿಗೆ ಕಾರ್ಮಿಕರ ಪ್ರವೇಶ ನಿಷೇಧಿಸಿ ಜಿಲ್ಲಾಡಳಿತ ಸೋಮವಾರ ರಾತ್ರಿ ಆದೇಶ ಹೊರಡಿಸಿದೆ.

ಸಂಡೂರು ತಾಲ್ಲೂಕು ಸೇರಿದಂತೆ ಜಿಲ್ಲೆಯ ಜನರ ಆರೋಗ್ಯ ರಕ್ಷಣೆ ದೃಷ್ಟಿಯಿಂದ ತಕ್ಷಣದಿಂದಲೇ ಜೆಎಸ್‌ಡಬ್ಲ್ಯು ಆಡಳಿತ ಹೊರ ಗುತ್ತಿಗೆ ಕಾರ್ಮಿಕರ ಪ್ರವೇಶ ನಿಷೇಧಿಸುವಂತೆ ಜಿಲ್ಲಾಧಿಕಾರಿ ಪವನ್ ಕುಮಾರ್ ಮಾಲಪಾಟಿ ಈ ಆದೇಶದಲ್ಲಿ ತಿಳಿಸಿದ್ದಾರೆ. ಸೋಂಕು ವ್ಯಾಪಕವಾಗಿ ಹರಡಲು ಹೊರ ರಾಜ್ಯಗಳ ಹೊರ ಗುತ್ತಿಗೆ ಕಾರ್ಮಿಕರೇ ಕಾರಣ ಎಂದೂ ಅವರು ಹೇಳಿದ್ದಾರೆ.

ವಾರಾಂತ್ಯ ಕರ್ಫ್ಯೂ ಬೇಡ: ಹೋಟೆಲುಗಳ ಸಂಘ

ಬೆಂಗಳೂರು: 'ರಾಜಕೀಯ ಮುಖಂಡರಿಗೆ ಅನ್ವಯಿಸದ ಕೋವಿಡ್ ನಿಯಮಗಳು ಹೋಟೆಲ್ ಮಾಲೀಕರು ಮತ್ತು ಜನಸಾಮಾನ್ಯರಿಗೆ ಮಾತ್ರ ಅನ್ವಯಿಸುತ್ತದೆಯೇ? ಈ ತಾರತಮ್ಯದ ವಾರಾಂತ್ಯ ಕರ್ಫ್ಯೂ ಅನ್ನು ಕೂಡಲೇ ರದ್ದು ಮಾಡಿ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ಆಗ್ರಹಿಸಿದ್ದಾರೆ.

'ರಾತ್ರಿ ಮತ್ತು ವಾರಾಂತ್ಯ ಕರ್ಫ್ಯೂ, ಶೇ 50ರಷ್ಟು ಆಸನ ಸಾಮರ್ಥ್ಯದ ನಿಯಮಗಳು ಜನಸಾಮಾನ್ಯರು ಹಾಗೂ ದಿನಗೂಲಿ ನೌಕರರಿಗೆ ಮಾತ್ರ ಅನ್ವಯಿಸುತ್ತದೆ ಎನ್ನುವುದು ಭಾನುವಾರ ಆರಂಭವಾದ ರಾಜಕೀಯ ಮುಖಂಡರ ಮೆರವಣಿಗೆ ಹಾಗೂ ಕಾರ್ಯಕ್ರಮಗಳಿಂದ ಸಾಬೀತಾಗಿದೆ' ಎಂದು ದೂರಿದ್ದಾರೆ.



'ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ಸರ್ಕಾರದ ನೀತಿ ಖಂಡನೀಯ. ಕಾನೂನು ಮಾಡಿದರೆ ಎಲ್ಲರಿಗೂ ಸರಿಸಮಾನವಾಗಿರಬೇಕು. ಕಾನೂನಿನಿಂದ ತೊಂದರೆಯಾಗಿರುವುದು ಜನಸಾಮಾನ್ಯರು ಹಾಗೂ ಉದ್ದಿಮೆದಾರರಿಗೆ ಮಾತ್ರ. ಇಂತಹ ನಿಯಮಗಳನ್ನು ಜಾರಿ ಮಾಡುವುದು ಅರ್ಥಹೀನ. ವಾರಾಂತ್ಯದ ಕರ್ಫ್ಯೂ ರದ್ದು ಮಾಡುವುದೇ ಒಳ್ಳೆಯದು' ಎಂದು ಹೇಳಿದ್ದಾರೆ.

ಚಿಕಿತ್ಸೆ ಪಟ್ಟಿಯಿಂದ ಕೇಂದ್ರ ಆರೋಗ್ಯ ಸಚಿವಾಲಯ ಕೈಬಿಟ್ಟಿದ್ದರೂ ವಿತರಣೆ

ಮನೆಯಲ್ಲಿರುವ ಸೋಂಕಿತರಿಗೆ ಹಳೆಯ ಕೋವಿಡ್ ಕಿಟ್‌ಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಕೋವಿಡ್–19ಗೆ ಚಿಕಿತ್ಸೆ ನೀಡುವ ಔಷಧಗಳ ಪಟ್ಟಿಯಿಂದ 'ಐವರ್‌ಮೆಕ್ಟಿನ್' ಮತ್ತು 'ಡಾಕ್ಸಿಸೈಕ್ಲಿನ್' ಮಾತ್ರೆಗಳನ್ನು ಕೈಬಿಡಲಾಗಿದೆ. ಆದರೆ, ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವ ಸೋಂಕು ಲಕ್ಷಣಗಳಿರುವ ರೋಗಿಗಳಿಗೆ ಈ ಔಷಧಗಳನ್ನು ಬಿಬಿಎಂಪಿ ಒದಗಿಸುತ್ತಿದೆ.

ಡಿಸೆಂಬರ್ 25ರಂದು ಬೊಮ್ಮನಹಳ್ಳಿ ವಲಯದ 43 ವರ್ಷದ ವ್ಯಕ್ತಿಯೊಬ್ಬರಲ್ಲಿ ಸೋಂಕು ಲಕ್ಷಣಗಳು ಕಾಣಿಸಿಕೊಂಡಿದ್ದವು. ಇವರಿಗೆ ಮನೆಯಲ್ಲಿ ಪ್ರತ್ಯೇಕ ವಾಸದಲ್ಲಿರುವರ ಕಿಟ್ (ಎಚ್‌ಐ) ಅನ್ನು ಬಿಬಿಎಂಪಿ ವತಿಯಿಂದ ನೀಡಲಾಗಿತ್ತು. ಈ ಕಿಟ್ ಸ್ಯಾನಿಟೈಸರ್ (100 ಮಿ.ಲೀ.), ಮಾಸ್ಕ್, ವಿಟಮಿನ್ ಸಿ (500 ಮಿ.ಗ್ರಾಂ), ಜಿಂಕ್ ಮಾತ್ರೆಗಳು (50 ಮಿ.ಗ್ರಾಂ), ಆರು ದಿನಗಳಿಗಾಗಿ ಪ್ಯಾರಾಸಿಟಮಾಲ್ ಪ್ಲಸ್ ಮತ್ತು ಮೂರು ದಿನಗಳಿಗಾಗಿ 'ಐವರ್‌ಮೆಕ್ಟಿನ್' ಹಾಗೂ ಐದು ದಿನಗಳಿಗಾಗಿ 'ಡಾಕ್ಸಿಸೈಕ್ಲಿನ್' ಮಾತ್ರೆಗಳನ್ನು ಒಳಗೊಂಡಿತ್ತು. ಖಾಸಗಿ ವೈದ್ಯರೊಬ್ಬರ ಸಲಹೆಯಂತೆ ಈ ಎರಡು ಮಾತ್ರೆಗಳನ್ನು ಅವರು ಸೇವಿಸಿಲ್ಲ.

'ಎರಡನೇ ಅಲೆಯ ಬಳಿಕ ಉಳಿದ ಕಿಟ್ ಅನ್ನು ನೀಡಲಾಗಿದೆ ಎನ್ನುವುದು ನನ್ನ ಅಭಿಪ್ರಾಯ' ಎಂದು ಅವರು ತಿಳಿಸಿದ್ದಾರೆ. ನಗರದ ವಿವಿಧೆಡೆ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿರುವ ಹಲವು ಸೋಂಕಿತರು ಸಹ ಹಳೆಯ ಕಿಟ್‌ಗಳನ್ನು ಪಡೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಸೋಮವಾರವೂ ಹಳೆಯ ಕಿಟ್‌ಗಳನ್ನು ವಿತರಿಸಲಾಗಿದೆ.

ಎರಡನೇ ಅಲೆಯ ಬಳಿಕ ಹೆಚ್ಚುವರಿಯಾಗಿ ಉಳಿದಿರುವ ಹಳೆಯ ಕಿಟ್‌ಗಳನ್ನು ವಿಲೇವಾರಿ ಮಾಡುವುದು ಬಿಬಿಎಂಪಿ ಅಧಿಕಾರಿಗಳ ಉದ್ದೇಶವಾಗಿದೆ ಎಂದು ಕೆಲವರು ದೂರಿದ್ದಾರೆ.

'ಮನೆಯಲ್ಲಿ ಪ್ರತ್ಯೇಕವಾಗಿ ವಾಸವಾಗಿರುವ ಸೋಂಕು ಲಕ್ಷಣಗಳಿರುವ ರೋಗಿಗಳಿಗೆ ನೀಡುವ ಕಿಟ್‌ನಲ್ಲಿ ಪ್ಯಾರಾಸಿಟಮಾಲ್, ವಿಟಮಿನ್ ಮತ್ತು ಜಿಂಕ್ ಮಾತ್ರೆಗಳಿರಬೇಕು. ಕೇಂದ್ರ ಆರೋಗ್ಯ ಸಚಿವಾಲಯ 'ಐವರ್‌ಮೆಕ್ಟಿನ್' ಮತ್ತು 'ಡಾಕ್ಸಿಸೈಕ್ಲಿನ್' ಮಾತ್ರೆಗಳನ್ನು ಜೂನ್ 7ರಿಂದ ಚಿಕಿತ್ಸಾ ಪಟ್ಟಿಯಿಂದ ಕೈಬಿಟ್ಟಿದೆ' ಎಂದು ಕ್ಲಿನಿಕಲ್ ಚಿಕಿತ್ಸೆ ಸಮಿತಿ ಸದಸ್ಯರೊಬ್ಬರು ತಿಳಿಸಿದ್ದಾರೆ.

ಈ ಮಾತ್ರೆಗಳು ಅಪಾಯಕಾರಿಯೇ?

'ಐವರ್‌ಮೆಕ್ಟಿನ್' ಮತ್ತು 'ಡಾಕ್ಸಿಸೈಕ್ಲಿನ್' ಮಾತ್ರೆಗಳನ್ನು ಕೋವಿಡ್ ಮೊದಲ ಅಲೆಯಲ್ಲಿ ನೀಡಲಾಗಿತ್ತು. ಕೆಲವು ಅಂಶಗಳ ಆಧಾರದ ಮೇಲೆ ಈ ಮಾತ್ರೆಗಳನ್ನು ನೀಡಲಾಗುತ್ತಿತ್ತು. ಕಳೆದ ಒಂದೂವರೆ ವರ್ಷದ ದತ್ತಾಂಶವನ್ನು ವಿಶ್ಲೇಷಿಸಿದಾಗ ಕೋವಿಡ್–19 ವಿರುದ್ಧ ಈ ಮಾತ್ರೆಗಳು ಯಾವುದೇ ರೀತಿ ಪರಿಣಾಮ ಬೀರುತ್ತಿಲ್ಲ ಎಂದು ತಜ್ಞ ವೈದ್ಯರಾದ ಡಾ. ರವೀಂದ್ರ ಮೆಹ್ತಾ ಅಭಿಪ್ರಾಯಪಟ್ಟಿದ್ದಾರೆ.

'ಡಾಕ್ಸಿಸೈಕ್ಲಿನ್‌ನಿಂದ ತೀವ್ರ ರೀತಿಯ ಗ್ಯಾಸ್ಟ್ರಿಕ್ ಸಮಸ್ಯೆ ಮತ್ತು ವಾಂತಿಯಾಗಬಹುದು' ಎಂದು ಸೋಂಕು ಕಾಯಿಲೆಗಳ ತಜ್ಞ ಡಾ. ಜೆ. ರಘು ತಿಳಿಸಿದ್ದಾರೆ.

ಹಳೆಯ ಕಿಟ್ ವಿತರಿಸದಂತೆ ಸೂಚನೆ

'ಈ ಸಮಸ್ಯೆ ಗಮನಕ್ಕೆ ಬಂದಿದೆ. ಹಳೆಯ ಕಿಟ್‌ಗಳನ್ನು ನೀಡದಂತೆ ಎಲ್ಲ ವಲಯಗಳ ತಂಡಗಳಿಗೆ ಸೂಚಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯ ಅಧಿಕಾರಿ ಡಾ.ಎ.ಎಸ್. ಬಾಲಸುಂದರ್ ತಿಳಿಸಿದ್ದಾರೆ.

'ಯಾವುದೇ ರೀತಿಯ ಕಿಟ್‌ಗಳನ್ನು ವಿತರಿಸದಂತೆ ತಜ್ಞರು ನಮಗೆ ಹೇಳುತ್ತಿದ್ದಾರೆ. ಆದರೂ, ಹೊಸ ಕಿಟ್‌ಗಳನ್ನು ನೀಡಲು ಉದ್ದೇಶಿಸಲಾಗಿದೆ. ಈ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ' ಎಂದು ತಿಳಿಸಿದ್ದಾರೆ.

ಓಂಶಕ್ತಿ ಯಾತ್ರೆಗೆ ಸಚಿವರ ಸಂಬಂಧಿ ಬಸ್ ವ್ಯವಸ್ಥೆ!

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರ ಭಾವಮೈದ ಹಾಗೂ ಬಿಜೆಪಿ ಮುಖಂಡ ಕೋನಪಲ್ಲಿ ಸತ್ಯನಾರಾಯಣರೆಡ್ಡಿ ಸೋಮವಾರ ಎಂಟು ಬಸ್‌ಗಳಲ್ಲಿ ನೂರಾರು ಜನರನ್ನು ಓಂಶಕ್ತಿ ಯಾತ್ರೆಗೆ ತಮಿಳುನಾಡಿಗೆ ಕಳಿಸಿದರು.

ತಾಲ್ಲೂಕಿನ ಬೂರಗಮಾಕಲಹಳ್ಳಿ ಆಂಜನೇಯಸ್ವಾಮಿ ದೇವಾಲಯದ ಬಳಿ ಬಸ್‌ಗಳಿಗೆ ಪೂಜೆ ಸಲ್ಲಿಸುವ ಮೂಲಕ ಯಾತ್ರೆಗೆ ಸತ್ಯನಾರಾಯಣರೆಡ್ಡಿ ಚಾಲನೆ ನೀಡಿದರು. ಅವರು ಉಚಿತವಾಗಿ ವ್ಯವಸ್ಥೆ ಮಾಡಿದ ಎಂಟು ಬಸ್‌ಗಳಲ್ಲಿ ನೂರಾರು ಮಾಲಧಾರಿಗಳು ತಮಿಳುನಾಡಿನ ಓಂ ಶಕ್ತಿ ಅಮ್ಮನವರ ದೇವಾಲಯಕ್ಕೆ ತೆರಳಿದರು.

ಜನಪ್ರತಿನಿಧಿಗಳು, ಅಧಿಕಾರಿಗಳ ನಿರ್ಲಕ್ಷ್ಯ


ಗುಮ್ಮನಹಳ್ಳಿಗೆ ಶಾಪವಾದ ಹೇಮಾವತಿ

ಪ್ರಜಾವಾಣಿ ವಾರ್ತೆ

ಶಿರಾ: ತಾಲ್ಲೂಕಿಗೆ ಹೇಮಾವತಿ ನೀರು ಒಂದು ರೀತಿಯಲ್ಲಿ ವರವಾದರೆ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಗುಮ್ಮನಹಳ್ಳಿಗೆ ಒಂದು ರೀತಿಯಲ್ಲಿ ಶಾಪವಾಗಿದೆ.

ಕಳ್ಳಂಬೆಳ್ಳ ಕೆರೆಯಿಂದ ಶಿರಾ ಕೆರೆಗೆ ಹೇಮಾವತಿ ನೀರು ಹರಿದುಬರುತ್ತಿದ್ದು ಗುಮ್ಮನಹಳ್ಳಿ ಬಳಿ ಸೇತುವೆ ಮೇಲೆ ನೀರು ಹರಿಯುವುದರಿಂದ ಹೊಲಗದ್ದೆಗಳಿಗೆ ಹೋಗಲು ಹೆಚ್ಚು ತೊಂದರೆಯಾಗುತ್ತಿದೆ.

ಗ್ರಾಮಸ್ಥರು ಹೊಲಗದ್ದೆಗಳಿಗೆ ಈ ನೀರಿನಲ್ಲಿ ಇಳಿದು ಹೋಗಬೇಕಾಗಿದೆ. ದ್ವಿಚಕ್ರ ವಾಹನ ಸಂಚಾರ ಕಷ್ಟವಾಗಿದೆ. ಸುಮಾರು 25 ವರ್ಷಗಳ ಹಿಂದೆ ಹಳ್ಳಕ್ಕೆ ಸೇತುವೆ ನಿರ್ಮಾಣ ಮಾಡಲಾಗಿದೆ. ಆದರೆ. ಈ ಸೇತುವೆ ಕಿರಿದಾಗಿರುವುದೇ ಸಮಸ್ಯೆಗೆ ಕಾರಣವಾಗಿದೆ.


ಶಿರಾ ತಾಲ್ಲೂಕಿನ ಗುಮ್ಮನಹಳ್ಳಿ ಗ್ರಾಮದ ಸೇತುವೆ ಮೇಲೆ ನಿಂತಿರುವ ನೀರು

ರೈತರು ಹೊಲಗದ್ದೆಗಳಿಂದ ಕಾಳು, ಹುಲ್ಲು ತರಲು ಹಾಗೂ ಜಮೀನಿಗೆ ಔಷಧ, ಗೊಬ್ಬರ ತೆಗೆದುಕೊಂಡು ಹೋಗಲು ಕಷ್ಟವಾಗುತ್ತಿದೆ. ದನಕರು ಈ ನೀರಿನಲ್ಲೇ ಹೋಗಬೇಕಿದ್ದು ಕೆಲವು ಸಂದರ್ಭಗಳಲ್ಲಿ ದನಕರು ನೀರಿನಲ್ಲಿ ಹಾದು ಹೋಗಲು ಹಿಂದೇಟು ಹಾಕಿದರೆ ರೈತರ ಗೋಳು ಕೇಳುವವರಿಲ್ಲದಂತಾಗಿದೆ.

ವೃದ್ಧರು ಹಾಗೂ ಚಿಕ್ಕಮಕ್ಕಳು ಈ ಸೇತುವೆ ದಾಟಿ ಜಮೀನು ಬಳಿಗೆ ಹೋಗಲು ಹರಸಾಹಸ ಪಡುವಂತಾಗಿದೆ. ಕುರಿಗಾಹಿಗಳಿಗೆ ಹೆಚ್ಚಿನ ತೊಂದರೆಯಾಗಿದೆ. ಹಳ್ಳದಲ್ಲಿ ನೀರು ತುಂಬಿರುವುದರಿಂದ ಕುರಿಗಳನ್ನು ಮೇಯಿಸಲು ಕಷ್ಟವಾಗುತ್ತಿದೆ.

ಗುಮ್ಮನಹಳ್ಳಿ, ಪದ್ಮಾಪುರ ಹಾಗೂ ತಗ್ಗಿಹಳ್ಳಿಗೆ ಈ ರಸ್ತೆಯ ಮೂಲಕ ಸಾಗಬೇಕಾಗಿದೆ. ನೀರು ತುಂಬಿರುವುದರಿಂದ ಸಂಚಾರ ಕಷ್ಟವಾಗಿದೆ. ಪ್ರತಿ ವರ್ಷ ಶಿರಾ ಕೆರೆಗೆ ಹೇಮಾವತಿ ನೀರು ಹರಿದು ಬರುವುದರಿಂದ ಈ ಸಮಸ್ಯೆ ಪ್ರತಿವರ್ಷ ಸಾಮಾನ್ಯವಾಗಿದೆ. ಹೊಸದಾಗಿ ಸೇತುವೆ ನಿರ್ಮಿಸುವಂತೆ ಹಲವು ಬಾರಿ ಗ್ರಾಮಸ್ಥರು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎನ್ನುವುದು ಗ್ರಾಮಸ್ಥರ ದೂರು.

ಕಟ್ಟಡ ನಿರ್ಮಾಣ – ಉಲ್ಲಂಘನೆ ತಡೆಯಲು ದಾರಿ ಯಾವುದು?



• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡಗಳ ಸರ್ವೆ ಕೈಗೊಂಡಿದ್ದು, ಒಟ್ಟು 65,091 ಅಕ್ರಮ ಕಟ್ಟಡಗಳನ್ನು ಗುರುತಿಸಿದ್ದೇವೆ. ಅವುಗಳಲ್ಲಿ 15,317 ಕಟ್ಟಡಗಳಿಗೆ ಬಿಬಿಎಂಪಿ ಕಾಯ್ದೆಯನ್ವಯ ನೋಟಿಸ್ ಜಾರಿಗೊಳಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ'....

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನ ಪರಿಷತ್ತಿನಲ್ಲಿ ಎನ್.ರವಿಕುಮಾರ್ ಅವರ ಪ್ರಶ್ನೆಗೆ 2021ರ ಡಿ. 16ರಂದು ನೀಡಿರುವ ಲಿಖಿತ ಉತ್ತರ ಇದು. ಬಿಬಿಎಂಪಿಯು ನಗರದ 18.42 ಲಕ್ಷ ಕಟ್ಟಡಗಳಿಂದ ತೆರಿಗೆ ಸಂಗ್ರಹಿಸುತ್ತಿದೆ. ಆದರೆ, ತೆರಿಗೆ ವ್ಯಾಪ್ತಿಗೆ ಬಾರದ ಕಟ್ಟಡಗಳೂ ಸೇರಿದರೆ ಒಟ್ಟು ಕಟ್ಟಡಗಳ ಸಂಖ್ಯೆ ಇನ್ನೂ ಹೆಚ್ಚು ಇದೆ.

'ನಿಯಮಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಮನಬಂದಂತೆ ಕಟ್ಟಡ ನಿರ್ಮಿಸುವ ಪರಿಪಾಠ ಅನೂಚಾನವಾಗಿ ನಡೆದುಬಂದಿದೆ. ಈ ಪರಿಪಾಠಕ್ಕೆ ಕಡಿವಾಣ ಹಾಕುವಂತೆ ಹೈಕೋರ್ಟ್ ಪದೇ ಪದೇ ಬಿಬಿಎಂಪಿಗೆ ಚಾಟಿ ಬೀಸುತ್ತಲೇ ಇದೆ. ಆದರೆ, ಪರಿಣಾಮಕಾರಿ ಕ್ರಮಗಳನ್ನು ಜಾರಿಗೊಳಿಸುವ ಬದಲು ಬಿಬಿಎಂಪಿ ಉಲ್ಲಂಘನೆ ಸಕ್ರಮಗೊಳಿಸುವುದಕ್ಕೆ ಇರುವ ಮಿತಿಯನ್ನು ಶೇ 5ರಿಂದ ಶೇ 15ಕ್ಕೆ ಹೆಚ್ಚಿಸುವಂತಹ ಮಾರ್ಗಗಳ ಬಗ್ಗೆಯೇ ಆಸಕ್ತಿ ತೋರಿಸುತ್ತಿದೆ' ಎಂದು ಬೇಸರ ವ್ಯಕ್ತಪಡಿಸುತ್ತಾರೆ ಕಟ್ಟಡ ನಿರ್ಮಾಣ ತಜ್ಞರು.

'ನಿಯಮ ಉಲ್ಲಂಘಿಸಿ ನಿರ್ಮಾಣವಾಗಿರುವ ಕಟ್ಟಡಗಳ ಸಂಖ್ಯೆ ಕೇವಲ 65,091 ಎಂಬುದನ್ನು ಒಪ್ಪಲಾಗದು. ಈ ಅಂಕಿ–ಅಂಶ ವಾಸ್ತವದಿಂದ ಕೂಡಿಲ್ಲ. ನಗರದಲ್ಲಿ ನಿಯಮಬದ್ಧವಾಗಿ ಕಟ್ಟಿರುವ ಕಟ್ಟಡಗಳನ್ನು ದುರ್ಬೀನು ಹಾಕಿ ಹುಡುಕುವ ಸ್ಥಿತಿ ಇದೆ' ಎಂಬುದು ತಜ್ಞರ ಅಂಬೋಣ.

'ನಗರದಲ್ಲಿರುವ ಶೇ 95ಕ್ಕೂ ಅಧಿಕ ಕಟ್ಟಡಗಳು ಬಿಬಿಎಂಪಿಯ ಕಟ್ಟಡಗಳ ಉಪವಿಧಿಯನ್ನು ಒಂದಿಲ್ಲ ಒಂದು ರೀತಿ ಉಲ್ಲಂಘನೆ ಮಾಡಿವೆ' ಎನ್ನುತ್ತಾರೆ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಸಂಸ್ಥೆಯ (ಎಸಿಸಿಇಐ) ಬೆಂಗಳೂರು ಕೇಂದ್ರದ ಚೇರ್‌ಮನ್ ಶ್ರೀಕಾಂತ್ ಎಸ್.ಚನ್ನಾಳ.

'ಇತ್ತೀಚೆಗೆ ಆಯ್ದ ಕೆಲವು ಪ್ರದೇಶಗಳಲ್ಲಿ ನಾವು ಸಮೀಕ್ಷೆ ನಡೆಸಿದೆವು. ಕೆಲವು ಕಡೆ ಶೇ 95ರಷ್ಟು, ಇನ್ನು ಕೆಲವು ಕಡೆ ಶೇ 98ರಷ್ಟು ಕಟ್ಟಡಗಳು ನಿಯಮ ಉಲ್ಲಂಘಿಸಿರುವುದು ಪತ್ತೆಯಾಗಿದೆ. ಕೆಲವೆಡೆ ಶೇ 100ರಷ್ಟು ಕಟ್ಟಡಗಳೂ ನಿಯಮ ಮೀರಿ ನಿರ್ಮಾಣಗೊಂಡಿರುವುದು ಕಂಡು ಬಂದಿದೆ' ಎಂದು ಅವರು ವಿವರಿಸಿದರು.

ಜನರು ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುವುದಕ್ಕೆ ಪ್ರಮುಖ ಕಾರಣ ಬಿಬಿಎಂಪಿ ಕಟ್ಟಡ ನಿರ್ಮಾಣ ಉಪವಿಧಿಗಳಲ್ಲಿರುವ ಲೋಪಗಳು ಎನ್ನುತ್ತಾರೆ ಶ್ರೀಕಾಂತ್.

'ಬಿಬಿಎಂಪಿ ಕಟ್ಟಡ ಉಪವಿಧಿಗಳನ್ನು ಬಹುಮಹಡಿ ಕಟ್ಟಡಗಳನ್ನಷ್ಟೇ ಆದ್ಯತೆಯಾಗಿಟ್ಟುಕೊಂಡು ರೂಪಿಸಿದಂತಿದೆ. ಆದರೆ, ದೊಡ್ಡ ನಿವೇಶನಗಳಲ್ಲಿ ಟಿಡಿಆರ್ ಬಳಸಿ ಬಹುಮಹಡಿ ಕಟ್ಟಡಗಳ ಎತ್ತರ ಹೆಚ್ಚಿಸಲು ಅವಕಾಶ ಕಲ್ಪಿಸಲಾಗುತ್ತದೆ. ಇಂತಹ ನಿಯಮಗಳು ಬಹುಮಹಡಿ ಕಟ್ಟಡ ನಿರ್ಮಿಸುವವರಿಗೆ ಹೆಚ್ಚು ಅನುಕೂಲ ಕಲ್ಪಿಸುತ್ತವೆ. ಕೇಂದ್ರ ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಮಾಹಿತಿ ಪ್ರಕಾರ, ದೇಶದಲ್ಲಿ ಬಹುಮಹಡಿ ಕಟ್ಟಡಗಳ ಪ್ರಮಾಣ ಶೇ 1.6 ರಷ್ಟು ಮಾತ್ರ. ಇನ್ನುಳಿದ ಶೇ 98.4ರಷ್ಟು ಇತರ ಕಟ್ಟಡಗಳ ಮಾಲೀಕರಿಗೆ ಉಪವಿಧಿಗಳು ಪೂರಕವಾಗಿಲ್ಲ. ಉಲ್ಲಂಘನೆ ಹೆಚ್ಚುವುದಕ್ಕೆ ಇಂತಹ ತಾರತಮ್ಯ ನೀತಿಗಳೂ ಕಾರಣ' ಎಂದು ಅವರು ವಿಶ್ಲೇಷಿಸಿದರು.

'ನಗರದಲ್ಲಿ ಕಟ್ಟಡ ನಿಯಮಗಳ ಉಲ್ಲಂಘನೆ ಮಿತಿಮೀರಿದೆ. ಉಲ್ಲಂಘನೆಯಾಗಿರುವ ಕಟ್ಟಡದ ಭಾಗವನ್ನು ಕೆಡಹುವುದು ವಾಸ್ತವದಲ್ಲಿ ಕಷ್ಟಸಾಧ್ಯ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅವುಗಳನ್ನು ಸಕ್ರಮಗೊಳಿಸುವಂತೆಯೂ ಇಲ್ಲ. ಕೆಡವದಿದ್ದರೆ ನ್ಯಾಯಾಲಯದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಅಡಕತ್ತರಿಯಲ್ಲಿ ಸಿಲುಕಿದ ಪರಿಸ್ಥಿತಿ ನಮ್ಮದು' ಎಂದು ಅಳಲು ತೋಡಿಕೊಳ್ಳುತ್ತಾರೆ ಬಿಬಿಎಂಪಿ ಅಧಿಕಾರಿಗಳು.

'ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದವರನ್ನು ದಂಡಿಸಿ, ಭವಿಷ್ಯದಲ್ಲಿ ಯಾವತ್ತೂ ಇಂತಹ ಉಲ್ಲಂಘನೆ ನಡೆಯದಂತೆ ತಡೆಯುವ ಪರಿಹಾರ ಮಾರ್ಗವನ್ನು ಕಂಡುಕೊಳ್ಳುವ ಸವಾಲು ಸರ್ಕಾರದ ಮುಂದಿದೆ. ಒಂದು ಬಾರಿ ದಂಡ ವಿಧಿಸಿ ಉಲ್ಲಂಘನೆಯನ್ನು ಸಕ್ರಮಗೊಳಿಸುವುದರಲ್ಲೇ ಸರ್ಕಾರಕ್ಕೆ ಹೆಚ್ಚು ಆಸಕ್ತಿ. ಆದರೆ, ಇದು ಸರಿಯಲ್ಲ. ಅದರ ಬದಲು, ಉಲ್ಲಂಘನೆಗೆ ಪ್ರತಿವರ್ಷವೂ ದಂಡ ಪಾವತಿಸುವಂತೆ ಮಾಡುವ ಪರಿಹಾರ ಮಾರ್ಗಗಳೂ ಇವೆ. ಅದನ್ನು ಜಾರಿಗೊಳಿಸಲು ಬೇಕಾದ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೇ' ಎಂದು ಪ್ರಶ್ನಿಸುತ್ತಾರೆ ಕಟ್ಟಡ ನಿರ್ಮಾಣ ತಜ್ಞರು.

ಉಲ್ಲಂಘನೆ– ನಾನಾ ಬಗೆ

- ಸೆಟ್ ಬ್ಯಾಕ್ ಪ್ರದೇಶವನ್ನು ಬಿಡದೇ ಕಟ್ಟಡ ನಿರ್ಮಾಣ
- ಎತ್ತರದ ಮಿತಿಗೆ ಸಂಬಂಧಿಸಿದ ಉಲ್ಲಂಘನೆ
- ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಎಆರ್) ಮಿತಿಯ ಉಲ್ಲಂಘನೆ
- ವಾಸಕ್ಕೆ ಸಂಬಂಧಿಸಿದ ಉಲ್ಲಂಘನೆ (ವಸತಿ ಉದ್ದೇಶದ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಇತ್ಯಾದಿ)
- ರಾಷ್ಟ್ರೀಯ ಕಟ್ಟಡ ಸಂಹಿತೆ (ಎನ್‌ಬಿಡಿ) ಹಾಗೂ ಭಾರತೀಯ ಗುಣಮಟ್ಟ (ಐಎಸ್) ಸಂಹಿತೆ ಉಲ್ಲಂಘನೆ

ಅಕ್ರಮ ತಡೆಯಲು ತಜ್ಞರ ಸಲಹೆಗಳು

- ಸ್ವಾಧೀನಾನುಭವ ಪ್ರಮಾಣ ಪತ್ರ (ಒ.ಸಿ.) ನೀಡುವುದಕ್ಕೂ ಕಟ್ಟಡ ಉಲ್ಲಂಘನೆಗೂ ಸಂಬಂಧ ಕಲ್ಪಿಸಬಾರದು. ಕಟ್ಟಡ ನಿಯಮ ಉಲ್ಲಂಘಿಸಿದ ಕಟ್ಟಡಗಳಿಗೂ ಒ.ಸಿ. ನೀಡಬಹುದು. ಆದರೆ, ಅದನ್ನು ಸರಿಪಡಿಸುವವರೆಗೂ ಪ್ರತಿ ವರ್ಷ ದಂಡ ಅಥವಾ ಹೆಚ್ಚುವರಿ ತೆರಿಗೆ ವಿಧಿಸಬೇಕು. ಇದರಿಂದ ಬಿಬಿಎಂಪಿಗೆ ಪ್ರತಿ ವರ್ಷವು ದಂಡದ ರೂಪದಲ್ಲಿ ಹೆಚ್ಚಿನ ವರಮಾನವೂ ಬರಲಿದೆ. ಪ್ರತಿ ವರ್ಷವೂ ದಂಡ ತೆರುವ ಭಯದಿಂದ ಉಲ್ಲಂಘನೆಯೂ ಕಡಿಮೆ ಆಗಲಿದೆ. ತಪ್ಪು ಸರಿಪಡಿಸುವುದಕ್ಕೆ ಮಾಲೀಕರಿಗೆ ಅವಕಾಶವೂ ಸಿಗಲಿದೆ.
- ಸ್ವಾಧೀನಾನುಭವ ಪತ್ರದಲ್ಲೇ 'ಇದು ನಿಯಮ ಉಲ್ಲಂಘಿಸಿದ ಕಟ್ಟಡ' ಎಂದು ನಮೂದಿಸಬೇಕು. ಆಗ ಅದರ ಮಾರುಕಟ್ಟೆ ಮೌಲ್ಯ ಕಡಿಮೆ ಆಗಲಿದೆ.
- ಬೇರೆ ಬೀದಿ ಗಳಲ್ಲಿ ಸರ್ವೆ ನಡೆಸಿ ಅಲ್ಲಿಗೆ ವಾಸ್ತವದಲ್ಲಿ ಕಟ್ಟಡಗಳು ಹೇಗಿವೆ ಎಂಬುದನ್ನು ಆಧರಿಸಿ ನಿರ್ದಿಷ್ಟ ಎಫ್‌ಎಆರ್ ನಿಗದಿಪಡಿಸಬೇಕು.
- ಸ್ವಾಧೀನಾನುಭವ ಪತ್ರ ಇಲ್ಲದ ಕಟ್ಟಡಗಳಿಗೆ ವಿದ್ಯುತ್, ಕುಡಿಯುವ ನೀರು ಹಾಗೂ ಒಳಚರಂಡಿ ಸಂಪರ್ಕ ಕಲ್ಪಿಸಬಾರದು.
- ನಿಯಮಬದ್ಧವಾಗಿ ಕಟ್ಟಡ ನಿರ್ಮಿಸಿದವರಿಗೆ ತೆರಿಗೆ ವಿನಾಯಿತಿ ಅಥವಾ ಇತರ ರೂಪದಲ್ಲಿ ಉತ್ತೇಜನ ನೀಡಬೇಕು.

ಎನ್‌ಬಿಸಿ ಜಾರಿಗೆ ಮೀನಮೇಷ ಏಕೆ?


ಶ್ರೀಕಾಂತ್ ಚನ್ನಾಳ

'2016ರ ರಾಷ್ಟ್ರೀಯ ಕಟ್ಟಡ ಸಂಹಿತೆಯನ್ನು (ಎನ್‌ಬಿಸಿ) ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ. ಇದು ಕಟ್ಟುನಿಟ್ಟಾಗಿ ಜಾರಿಗೊಳಿಸಿದರೆ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ತನ್ನಿಂದ ತಾನೆ ಕಡಿವಾಣ ಬೀಳಲಿದೆ' ಎಂದು ಅಭಿಪ್ರಾಯಪಡುತ್ತಾರೆ ಶ್ರೀಕಾಂತ್ ಎಸ್.ಚನ್ನಾಳ.

'ಎನ್‌ಬಿಸಿಯ ಪ್ರಕಾರ ಕಟ್ಟಡ ಯೋಜನೆಗೆ ಮಂಜೂರಾತಿ ಪಡೆಯಲು ಅನೇಕ ರೀತಿಯ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ಮಣ್ಣು ಪರೀಕ್ಷೆ ವರದಿ, ಸರ್ವೆ ವರದಿ, ಕಟ್ಟಡ ಸಂರಚನೆಯ ವಿನ್ಯಾಸ, ಎತ್ತರಕ್ಕೆ ಸಂಬಂಧಿಸಿದ ತಾಂತ್ರಿಕ ವಿವರಗಳ ಜೊತೆಗೆ ಅದಕ್ಕೆ ಏನೆಲ್ಲ ಸಾಮಗ್ರಿ ಬಳಸಲಾಗುತ್ತದೆ, ನಿರ್ಮಾಣ ಕಾರ್ಯದಲ್ಲಿ ಯಾವೆಲ್ಲ ತಂತ್ರಜ್ಞರ ಸೇವೆ ಪಡೆಯಲಾಗುತ್ತದೆ ಎಂಬ ವಿವರಗಳನ್ನೂ ಒದಗಿಸಬೇಕು. ನೋಂದಾಯಿತ ತಂತ್ರಜ್ಞರೇ ಈ ಕುರಿತ ಪ್ರಮಾಣಪತ್ರ ನೀಡಬೇಕು. ಇದು ಕಟ್ಟಡ ಮಾಲೀಕರು ಹಾಗೂ ಅದನ್ನು ಪ್ರಮಾಣೀಕರಿಸುವ ತಂತ್ರಜ್ಞರ ಮೇಲಿನ ಹೊಣೆಯನ್ನು ಹೆಚ್ಚಿಸಲಿದೆ' ಎಂದು ಅವರು ವಿವರಿಸಿದರು.

'ಕಟ್ಟಡ ನಿರ್ಮಿಸಲು ಬಿಬಿಎಂಪಿಯಿಂದ ಮಂಜೂರಾತಿ ಪಡೆದರೆ ಸಾಲದು, ಅದಕ್ಕೆ ಸ್ಥಳೀಯ ಜನಪ್ರತಿನಿಧಿಯ ಅಥವಾ ಅವರ ಚೇಲಾಗಳ ಅಪ್ಪಣೆಯನ್ನೂ ಪಡೆಯಬೇಕಾದ ಸ್ಥಿತಿ ಇದೆ. ಇದಕ್ಕೆ ಮೊದಲು ಕಡಿವಾಣ ಹಾಕಬೇಕು' ಎಂದು ಅವರು ಒತ್ತಾಯಿಸಿದರು.

'ತಪ್ಪೆಸಗಿದರೆ ದಂಡ: ಇಲ್ಲ ಖಚಿತತೆ'


ಅಜಿತ್ ಕುಮಾರ್

ಕಟ್ಟಡ ನಿಯಮಗಳಲ್ಲಿ ಇಂತಿಷ್ಟು ಪ್ರಮಾಣದ ಉಲ್ಲಂಘನೆಗೆ ಇಷ್ಟು ದಂಡ ಎಂಬುದನ್ನು ಎಲ್ಲೂ ಉಲ್ಲೇಖಿಸಿಲ್ಲ. ಉಲ್ಲಂಘನೆಗೆ ಬಿಬಿಎಂಪಿ ಕಾಲಕಾಲಕ್ಕೆ ನಿಗದಿಪಡಿಸುವಷ್ಟು ದಂಡ ವಿಧಿಸಬಹುದು ಎಂದು ಉಪವಿಧಿ 6 (ii)ರಲ್ಲಿ ಹೇಳಲಾಗಿದೆ. ಇದನ್ನು ನಿಖರಪಡಿಸುವ ಕಾರ್ಯವೂ ನಡೆದಿಲ್ಲ.

'ಇದೊಂದು ರೀತಿ ಜಾಣ ಕುರುಡು ಇದ್ದಂತೆ. ಇಂತಹ ಅಸಡ್ಡೆಗಳಿಂದಾಗಿಯೇ ಮಧ್ಯವರ್ತಿಗಳ ಹಾವಳಿಗೆ ಭ್ರಷ್ಟಾಚಾರಕ್ಕೆ ಅವಕಾಶ ಕಲ್ಪಿಸಿದಂತಾಗಿದೆ' ಎಂದು ವಿಶ್ಲೇಷಿಸುತ್ತಾರೆ ಎಸಿಸಿಇಐ ಕಾರ್ಯದರ್ಶಿ ಅಜಿತ್ ಕುಮಾರ್.

'ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ನೀತಿನಿಯಮಗಳನ್ನು ರೂಪಿಸುವ ಸಂದರ್ಭದಲ್ಲಿ ಪರಿಣತರ ಸಲಹೆಗಳನ್ನೇನೋ ನೀಡುತ್ತಾರೆ. ಆದರೆ, ಅಂತಿಮವಾಗಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತಮಗೆ ಅನುಕೂಲವಾಗುವಂತಹ ಸಲಹೆಗಳನ್ನಷ್ಟೇ ನಿಯಮಗಳಲ್ಲಿ ಅಳವಡಿಸಿಕೊಳ್ಳುತ್ತಾರೆ' ಎಂದರು.

'ತಪ್ಪಿತಸ್ಥರಿಗೆ ಶಿಕ್ಷೆಯೂ ಸಾಧ್ಯ'


ಶಶಿಕುಮಾರ್

ಜಯನಗರ ಏಳನೇ ಬ್ಲಾಕ್‌ನ ನ್ಯಾಷನಲ್ ಕಾಲೇಜು ಬಳಿ 20X38 ಚದರ ಅಡಿ ವಿಸ್ತೀರ್ಣದ ನಿವೇಶನದಲ್ಲಿ ನಕ್ಷೆ ಮಂಜೂರಾತಿ ಇಲ್ಲದೆಯೇ ಆರು ಅಂತಸ್ತುಗಳ ಕಟ್ಟಡ ನಿರ್ಮಿಸುತ್ತಿದ್ದರೂ ಸ್ವತ್ತಿನ ಮಾಲೀಕರಾದ ಶಾಂತಾ ದೇವರಾಜ್ ವಿರುದ್ಧ ಕ್ರಮಕೈಗೊಳ್ಳದ ಆರೋಪದ ಮೇರೆಗೆ ಬನಶಂಕರಿ ಉಪವಿಭಾಗದಲ್ಲಿ ಕಾರ್ಯಪಾಲಕ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸಿದ್ದ ಜೆ.ಆರ್. ಭಾಸ್ಕರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಎಂ.ಬಿ. ಜಯಕುಮಾರ್, ಆರ್.ಮಧು, ಸಹಾಯಕ ಎಂಜಿನಿಯರ್ ಆಗಿದ್ದ ಪ್ರದೀಪ್ ವಿರುದ್ಧ ಬಿಬಿಎಂಪಿ ಆರೋಪಪಟ್ಟಿ ಸಿದ್ಧಪಡಿಸಿದೆ.

ಈ ಅಧಿಕಾರಿಗಳ ವಿರುದ್ಧ ಉತ್ತರಹಳ್ಳಿಯ ನಿವಾಸಿ ಶಶಿಕುಮಾರ್ ಅವರು ನೀಡಿದ ದೂರಿನ ಅನ್ವಯ ಕರ್ನಾಟಕ ನಾಗರಿಕ ಸೇವಾ ನಿಯಮ (ನಡತೆ) ಅಡಿ ಬಿಬಿಎಂಪಿ ವಿಚಾರಣೆ ಕೈಗೆತ್ತಿಕೊಂಡಿದೆ.

'ಈ ನಾಲ್ವರು ಅಧಿಕಾರಿಗಳ ವಿರುದ್ಧ ಬಿಬಿಎಂಪಿ ವಿಚಾರಣೆ ನಡೆಸುವುದಕ್ಕೆ ನಾಲ್ಕು ವರ್ಷ ಹೋರಾಟ ನಡೆಸಬೇಕಾಯಿತು. ಕಾನೂನು ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಿಸಿರುವ ಕುರಿತು 2017ರ ನ.2ರಂದು ಬಿಬಿಎಂಪಿ ಆಯುಕ್ತರಿಗೆ ದೂರು ನೀಡಿದ್ದೆ. ನಿಯಮ ಉಲ್ಲಂಘಿಸಿ ನಿರ್ಮಿಸಿದ ಭಾಗವನ್ನು ಕೆಡಹುವಂತೆ ಬಿಬಿಎಂಪಿ 2018ರ ಜುಲೈ 28ರಂದು ಆದೇಶ ಮಾಡಿತು. ಇಲ್ಲಿ ಅಧಿಕಾರಿಗಳು ಮತ್ತೊಂದು ತಪ್ಪೆಸಗಿದ್ದರು. ಈ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿತ್ತು. ಆದರೂ ವಸತಿ ಉದ್ದೇಶದ ಕಟ್ಟಡ ಎಂದು ನಮೂದಿಸಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದ್ದರು. ಇವೆಲ್ಲವೂ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ನಡೆಸುವ ತಪ್ಪುಗಳು. ಈ ರೀತಿ ಕರ್ತವ್ಯ ಲೋಪ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು' ಎನ್ನುತ್ತಾರೆ ಶಶಿಕುಮಾರ್.

'ಹೇಗೆ ನಿಯಮ ಉಲ್ಲಂಘನೆ ಮಾಡಬಹುದು ಎಂದು ಅಧಿಕಾರಿಗಳೇ ದಾರಿ ತೋರಿಸುತ್ತಾರೆ. ಇಂತಹ ತಪ್ಪು ಮಾಡುವ ಅಧಿಕಾರಿಗಳಿಗೆ ಪಾಠ ಆಗಬೇಕು. ಆ ಕಾರಣಕ್ಕಾಗಿಯೇ ನಾನು ಈ ಪ್ರಕರಣ ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿದ್ದೇನೆ' ಎಂದು ಅವರು ತಿಳಿಸಿದರು.

ಸ್ವಾಯತ್ತ ಸಂಸ್ಥೆಗಳ ಸಿಬ್ಬಂದಿ ಸರ್ಕಾರಿ ನೌಕರರ ಸೌಲಭ್ಯಕ್ಕೆ ಪಟ್ಟುಹಿಡಿಯಲಾಗದು –'ಸುಪ್ರೀಂ'

ನವದೆಹಲಿ (ಪಿಟಿಐ): ಸರ್ಕಾರಿ ನೌಕರರಿಗೆ ನೀಡುವ ಸೇವಾ ಸೌಲಭ್ಯವನ್ನು ತಮಗೂ ನೀಡುವಂತೆ ಸ್ವಾಯತ್ತ ಸಂಸ್ಥೆಗಳ ಸಿಬ್ಬಂದಿ ಒತ್ತಾಯಿಸಲಾಗದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಂಜೀವ್ ಖನ್ನಾ ಅವರಿದ್ದ ಪೀಠವು, ಕೆಲವೊಂದು ಅನುಕೂಲತೆ ನೀಡಬೇಕೋ ಬೇಡವೋ ಎಂಬುದನ್ನು ಪರಿಣತರ ತಂಡಕ್ಕೆ ಬಿಡಬೇಕು. ಈ ವಿಷಯದಲ್ಲಿ ಕೋರ್ಟ್ ಮಧ್ಯ ಪ್ರವೇಶಿಸಲಾಗದು. ಏಕೆಂದರೆ, ಇದು ಆರ್ಥಿಕ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ ಎಂದು ಹೇಳಿತು.

ಮಹಾರಾಷ್ಟ್ರದ ಜಲ ಮತ್ತು ಭೂಮಿ ಮೇಲ್ವಿಚಾರಣೆ ಸಂಸ್ಥೆ (ವಾಲ್ಮಿ) ಸಿಬ್ಬಂದಿಯ ಪಿಂಚಣಿ ಸೌಲಭ್ಯಕ್ಕೆ ಸಂಬಂಧಿಸಿ ಬಾಂಬೆ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆಯ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಬಾಲಕಿ ಮೇಲೆ ಬಾಲಕರಿಂದ ಸಾಮೂಹಿಕ ಅತ್ಯಾಚಾರ

ಕಲಬುರಗಿ: ನಗರದ ಕಾಲೊನಿಯೊಂದರಲ್ಲಿ 13 ವರ್ಷದ ಬಾಲಕಿಯ ಮೇಲೆ ಐವರು ಬಾಲಕರು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಘಟನೆ ಜನವರಿ 5ರಂದು ನಡೆದಿದ್ದು, ಬಾಲಕಿಯ ಪಾಲಕರು ಸೋಮವಾರ ದೂರು ದಾಖಲಿಸಿದ್ದಾರೆ.

ಬಾಲಕಿ ಬುದ್ಧಿಮಾಂದ್ಯಳಾಗಿದ್ದರಿಂದ ವಿಷಯ ತಡವಾಗಿ ಗೊತ್ತಾಗಿದೆ. ಆಕೆಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ತಮ್ಮ ಮನೆಯ ಹತ್ತಿರದಲ್ಲೇ ಇರುವ 15 ರಿಂದ 16 ವರ್ಷದ ಹುಡುಗರು ಕೃತ್ಯ ಎಸಗಿದ್ದಾರೆ ಎಂದು ಸಂತ್ರಸ್ತೆಯ ಪಾಲಕರು ಗುಲಬರ್ಗಾ ವಿಶ್ವವಿದ್ಯಾಲಯ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

'ಬಾಲಕರೆಲ್ಲರೂ ಬಾಲಕಿಯ ಪಾಲಕರಿಗೆ ಪರಿಚಯಸ್ಥರು. ಅವರನ್ನು ಮಂಗಳವಾರ (ಜ. 11) ವಶಕ್ಕೆ ಪಡೆಯಲಾಗುವುದು' ಎಂದು ಸಿಪಿಐ ಶಿವಾನಂದ ಗಾಣಿಗೇರ ತಿಳಿಸಿದ್ದಾರೆ.

ಚಿತ್ರಾವಳಿ



ಬೆಂಗಳೂರಿನಲ್ಲಿ ಈಚೆಗೆ ನಡೆದ ಕಂಪನಿ ಸೆಕ್ರೆಟರಿಗಳ ರಾಷ್ಟ್ರೀಯ ಸಮಾವೇಶದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬ್ಯಾಂಕ್ ಆಫ್ ಬರೋಡಾದ 'ಐಸಿಎಸ್‌ಐ ಡೈಮಂಡ್ ಕಾರ್ಡ್'ಅನ್ನು ಬಿಡುಗಡೆ ಮಾಡಿದರು. ಬ್ಯಾಂಕ್ ಆಫ್ ಬರೋಡಾದ ಬೆಂಗಳೂರು ವಲಯದ ಮುಖ್ಯಸ್ಥ ಸುಧಾಕರ ಡಿ. ನಾಯಕ್ ಹಾಗೂ ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.



ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆ ವಾರ್ಡ್ ದೊಡ್ಡಮಾರಣ್ಣ ಬಡಾವಣೆಯ ಕಾಂಕ್ರೀಟ್ ಡ್ರೈನೇಜ್ ಕಾಮಗಾರಿಗೆ ಶಾಸಕ ಆರ್. ಮಂಜುನಾಥ್ ಚಾಲನೆ ನೀಡಿದರು. ವಾರ್ಡ್ ಅಧ್ಯಕ್ಷ ಹನುಮಂತರಾಜು, ಜೆಡಿಎಸ್ ಮುಖಂಡರಾದ ಸದಾಶಿವ, ಗಂಗಾಧರಮೂರ್ತಿ, ರಾಜಣ್ಣ, ಲೋಕೇಶ್, ರಂಗನಾಥ್ ನಾಯಕ್, ಗುರುಪ್ರಸಾದ್, ಮಹಿಳಾ ಮುಖಂಡರಾದ ರಾಣಿ ಪ್ರತಾಪ್ ಇದ್ದರು.

ಹೆಣ್ಣಾನೆ ಸಾವು

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಜಿ.ಎಸ್.ಬೆಟ್ಟ ವಲಯದ ಗೋಪಾಲಪುರ ಗಸ್ತಿನ ಮಾದಪ್ಪನ ಅರಣ್ಯ ಪ್ರದೇಶದ ಬಳಿ 35 ವರ್ಷದ ಹೆಣ್ಣಾನೆ ಮೃತಪಟ್ಟಿದೆ.

ಆನೆಯ ಹೊಟ್ಟೆ ಭಾಗಕ್ಕೆ ಲೇಸ್ಮೇನಿಯಾ ಸೋಂಕು ತಗುಲಿದ್ದು, ನಾಲಿಗೆಯ ಭಾಗದಲ್ಲಿ ರಕ್ತಸ್ರಾವವಾಗಿ ದೇಹದ ಕೆಲ ಭಾಗ ಊದಿಕೊಂಡಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಪರಮೇಶ್ ತಿಳಿಸಿದ್ದಾರೆ.

ಸ್ಥಳಕ್ಕೆ ವಲಯ ಅರಣ್ಯಾಧಿಕಾರಿ ನವೀನ್ ಕುಮಾರ್, ಪಶು ವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ ಮತ್ತು ಸರ್ಕಾರೇತರ ಪ್ರತಿನಿಧಿ ಆರ್.ರಘುರಾಂ ಭೇಟಿ ನೀಡಿ ಪರಿಶೀಲಿಸಿದರು.

ತಾಯಿಯಿಂದಲೇ ಮಗುವಿನ ಹತ್ಯೆ

ಎಚ್.ಡಿ.ಕೋಟೆ: ಇಲ್ಲಿನ ಬೂದನೂರು ಗ್ರಾಮದ ನಿವಾಸಿ ಭವಾನಿ (22) ಎಂಬುವವರು ತನ್ನ ನಾಲ್ಕು ವರ್ಷದ ಪುತ್ರನನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ, ಪರಾರಿಯಾಗಿದ್ದಾರೆ.

'ಪತಿ ಆನಂದ್ (28) ಮನೆಯಲ್ಲಿ ಇಲ್ಲದ ಸಮಯದಲ್ಲಿ ಮಗುವನ್ನು ಮಂಚದ ಮೇಲೆ ಮಲಗಿಸಿ ಮಚ್ಚಿನಿಂದ ತಲೆ ಹಾಗೂ ಕುತ್ತಿಗೆಯ ಮೇಲೆ ಹೊಡೆದಿದ್ದಾರೆ. ರಕ್ತದ ಮಡುವಿನಲ್ಲಿ ಚೀರಾಡುತ್ತಿದ್ದ ಮಗುವನ್ನು ಅಕ್ಕಪಕ್ಕದವರು ಆಸ್ಪತ್ರೆಗೆ ಸೇರಿಸಿದ್ದಾರೆ. ಅಷ್ಟರಲ್ಲಿ ಮಗು ಮೃತಪಟ್ಟಿತ್ತು. ಆಕೆಯ ಮೇಲೆ ದೇವರು ಬರುತ್ತಿತ್ತು ಎಂದು ಕುಟುಂಬಸ್ಥರು ಹೇಳಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ. ಎಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರವೇಶಾತಿ ಸಂಖ್ಯೆ ಹೆಚ್ಚಾಯ್ತು, ಸೌಲಭ್ಯ ವೃದ್ಧಿಯಾಗಲಿಲ್ಲ!

ಸೀಟು ಕಳೆದುಕೊಳ್ಳುವ ಭೀತಿಯಲ್ಲಿ ಬಿಮ್ಸ್

• ಎಂ. ಮಹೇಶ

ಬೆಳಗಾವಿ: ಇಲ್ಲಿನ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಬಿಮ್ಸ್) ವಿದ್ಯಾರ್ಥಿಗಳ ಪ್ರವೇಶಾತಿಗೆ ತಕ್ಕಂತೆ ಬೋಧಕ ಸಿಬ್ಬಂದಿ ಮೊದಲಾದ ಸೌಲಭ್ಯಗಳ ಕೊರತೆ ಎದುರಾಗಿದ್ದು, ಸೀಟುಗಳನ್ನು ಕಳೆದುಕೊಳ್ಳುವ ಭೀತಿ ಉಂಟಾಗಿದೆ.

ಇಲ್ಲಿ ಕಾಲೇಜು ಆರಂಭವಾದಾಗ 100 ಸೀಟುಗಳ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಇದನ್ನು 2017–18ನೇ ಸಾಲಿನಿಂದ 150ಕ್ಕೆ ಹೆಚ್ಚಿಸಲಾಗಿದೆ. ಅದಕ್ಕೆ ತಕ್ಕಂತೆ, ಸೌಲಭ್ಯಗಳನ್ನು ನೀಡುವುದು ಸರ್ಕಾರದಿಂದ ಸಾಧ್ಯವಾಗಿಲ್ಲ.

ಮೂರು ವರ್ಷಗಳಿಂದಲೂ ಯಾವುದೇ ವ್ಯತ್ಯಾಸವಾಗದೇ ಇರುವುದರಿಂದ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಗಂಭೀರವಾಗಿ ಪರಿಗಣಿಸಿದೆ. ಬೋಧಕ ಹುದ್ದೆಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡಬೇಕು ಎಂದು ಸೂಚಿಸಿದೆ. ಇಲ್ಲದಿದ್ದಲ್ಲಿ, ಲಭ್ಯವಿರುವ ಸೌಲಭ್ಯಗಳಿಗೆ ತಕ್ಕಂತೆ ಹೆಚ್ಚುವರಿಯಾಗಿ ನೀಡಲಾಗಿದ್ದ 50 ಸೀಟು ಕಡಿತಗೊಳಿಸುವ ಸಾಧ್ಯತೆಯ ಸಂದೇಶವನ್ನೂ ರವಾನಿಸಿದೆ.


ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಟ್ಟಡ –ಪ್ರಜಾವಾಣಿ ಚಿತ್ರ

ಮಾರ್ಗಸೂಚಿ ಪಾಲಿಸಬೇಕು: ಇಲ್ಲಿ ನೂರು ಸೀಟುಗಳಿಗೆ 224 ಬೋಧಕ ಹುದ್ದೆಗಳು ಇವೆ. 260ಕ್ಕೆ ಹೆಚ್ಚಾಗಬೇಕಿತ್ತು. 31 ಸಹ ಪ್ರಾಧ್ಯಾಪಕರ ಹುದ್ದೆಗಳಷ್ಟೆ ಮಂಜೂರಾಗಿದ್ದು, 43 ಮಂದಿ ಬೇಕಾಗಿದ್ದಾರೆ. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು 54 ಮಾತ್ರ ಇವೆ. ಬೇಕಿರುವುದು 71. ಹಿರಿಯ ಸ್ಥಾನಿಕ ವೈದ್ಯರ 26 ಹುದ್ದೆಗಳು ಮಂಜೂರಾಗಿವೆ. ಇನ್ನೂ 13 ಹುದ್ದೆಗಳು ಹೆಚ್ಚುವರಿಯಾಗಿ ಅಗತ್ಯವಾಗಿದೆ. ಜತೆಗೆ ನರ್ಸಿಂಗ್, ಗ್ರೂಪ್ ಡಿ, ವಾರ್ಡ್ ಬಾಯ್ ಹಾಗೂ ಆಯಾಗಳ ಸಂಖ್ಯೆ ಕೂಡ ಮಾರ್ಗಸೂಚಿಗಳ ಪ್ರಕಾರ ಇರಬೇಕಾಗುತ್ತದೆ.

ಎನ್‌ಎಂಸಿಯು ಮುಖ್ಯವಾಗಿ ಬೋಧಕ ಸಿಬ್ಬಂದಿ ಲಭ್ಯತೆಯನ್ನು ಗಮನಿಸುತ್ತದೆ. ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಆ ಹುದ್ದೆಗಳು ಭರ್ತಿಯಾಗಿರಬೇಕು ಮತ್ತು ಗುಣಮಟ್ಟದ ಶಿಕ್ಷಣ ಸಿಗುವಂತಿರಬೇಕು ಎನ್ನುವುದನ್ನು ಪರಿಗಣಿಸುತ್ತದೆ. ಸರಾಸರಿ ಶೇ 10ರಷ್ಟು ಕೊರತೆ ಇದ್ದರೆ ನಿರ್ವಹಿಸಬಹುದು. ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊರತೆ ಇರುವಂತಿಲ್ಲ. ಪರಿಣಾಮ ಮಂಜೂರಾದ ಸೀಟುಗಳು ಕಡಿತಗೊಳ್ಳುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಗಮನ ಸೆಳೆದ ಶಾಸಕ: ಶಾಸಕ ಅನಿಲ ಬೆನಕೆ ಅವರು ಬಿಮ್ಸ್ ಕಾಲೇಜಿನ ಕೊರತೆಗಳ ಕುರಿತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರ ಗಮನಸೆಳೆದಿದ್ದಾರೆ. ಬೋಧನೆ ಹಾಗೂ ಪ್ರಾಯೋಗಿಕ ತರಬೇತಿ ನಿಟ್ಟಿನಲ್ಲಿ ಅಗತ್ಯ ಬೋಧಕ ಸಿಬ್ಬಂದಿ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು ಮತ್ತು ಸೀಟುಗಳು ಕಡಿಮೆ ಆಗದಂತೆ ನೋಡಿಕೊಳ್ಳಬೇಕು ಎಂದು ಕೋರಿದ್ದಾರೆ.

'ಸಂಸ್ಥೆಯಲ್ಲಿ ಬೋಧಕ ಸಿಬ್ಬಂದಿ ಕೊರತೆ ಇರುವುದನ್ನು ಸರ್ಕಾರದ ಗಮನಕ್ಕೆ ತರಲಾಗಿದ್ದು, ಪ್ರಸ್ತಾವವನ್ನೂ ಸಲ್ಲಿಸಲಾಗಿದೆ. ಮಂಜೂರಾತಿ ಆಗಿಲ್ಲವಾದ್ದರಿಂದ ನೇಮಕಾತಿ ಆಗಿಲ್ಲ. ಪ್ರತಿ ವರ್ಷ 150 ಸೀಟುಗಳ ಭರ್ತಿಗೆ ಅವಕಾಶವಿದೆ. ಅದಕ್ಕೆ ತಕ್ಕಂತೆ ಹುದ್ದೆಗಳು ಬೇಕು. ಇದರಿಂದ ಹೆಚ್ಚಿನ ಸೇವೆಯೂ ಸಾಧ್ಯವಾಗುತ್ತದೆ' ಎಂದು ಬಿಮ್ಸ್ ನಿರ್ದೇಶಕ ಡಾ.ಆರ್.ಜಿ. ವಿವೇಕಿ ಪ್ರತಿಕ್ರಿಯಿಸಿದರು.

> ಖಾಲಿ ಇರುವ ಹುದ್ದೆಗಳನ್ನು ತುಂಬುವಂತೆಯೂ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಕೆಲವು ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸುತ್ತಿದ್ದೇವೆ
>
> **ಡಾ.ಆರ್.ಜಿ. ವಿವೇಕಿ**
> ನಿರ್ದೇಶಕರು, ಬಿಮ್ಸ್

> ಬಿಮ್ಸ್ ಕಾಲೇಜಿನಲ್ಲಿರುವ ಸಮಸ್ಯೆಗಳ ಕುರಿತು ಸಚಿವರ ಗಮನಕ್ಕೆ ತಂದಿದ್ದೇನೆ. ಸೀಟುಗಳು ಕಡಿತ ಆಗದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತೆ ಕೋರಿದ್ದೇನೆ
>
> **ಅನಿಲ ಬೆನಕೆ,** ಶಾಸಕರು
> ಉತ್ತರ ಮತಕ್ಷೇತ್ರ

'ಉನ್ನತ ಶಿಕ್ಷಣ ಅಭಿವೃದ್ಧಿಗೆ ಕಾರ್ಯಸೂಚಿ ಸಿದ್ಧಪಡಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: ವಿಜ್ಞಾನ, ತಂತ್ರಜ್ಞಾನ ಹಾಗೂ ಉನ್ನತ ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾರ್ಯಸೂಚಿ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಸೋಮವಾರ ಬೆಂಗಳೂರಿನಲ್ಲಿ ತಮ್ಮನ್ನು ಭೇಟಿ ಮಾಡಿದ ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷ ಪ್ರೊ.ಕೆ.ಎಸ್.ರಂಗಪ್ಪ ನೇತೃತ್ವದ ಸದಸ್ಯರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗೆ ಅಗತ್ಯವಿರುವ ಬದಲಾವಣೆಗಳಿಗೆ ಸಂಬಂಧಿಸಿದಂತೆ ವಿಶ್ರಾಂತ ಕುಲಪತಿಗಳ ವೇದಿಕೆಯು ಚರ್ಚಿಸಿ ಸಮಗ್ರ ವರದಿಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಿ. ಈ ವರದಿ ಆಧರಿಸಿ ಅಗತ್ಯ ಬದಲಾವಣೆ ತರಲಾಗುವುದು' ಎಂದರು.


ಬೆಂಗಳೂರಿನಲ್ಲಿ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದ ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ ಅಧ್ಯಕ್ಷ ಪ್ರೊ.ಕೆ.ಎಸ್. ರಂಗಪ್ಪ, ಸದಸ್ಯರಾದ ಪ್ರೊ. ಕೆ.ನಾರಾಯಣಗೌಡ, ಪ್ರೊ. ಎಸ್.ಎನ್.ಹೆಗ್ಡೆ, ಪ್ರೊ. ಎಸ್.ಆರ್.ನಿರಂಜನ, ಪ್ರೊ. ಎಸ್.ಸಚ್ಚಿದಾನಂದ ಇದ್ದಾರೆ

'ವೇದಿಕೆ ಜತೆ ಸಂಪರ್ಕದಲ್ಲಿದ್ದು, ಶಿಕ್ಷಣ ಕ್ಷೇತ್ರದಲ್ಲಿನ ವಿಚಾರಗಳ ಬಗ್ಗೆ ನೀಡುವ ಸಲಹೆ, ಸೂಚನೆಗಳನ್ನು ಜಾರಿಗೊಳಿಸಲು ಬದ್ಧ' ಎಂದು ಭರವಸೆ ನೀಡಿದರು.

ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯವನ್ನು ಮೇಲ್ದರ್ಜೆಗೇರಿಸುವ ಸಂಬಂಧ ಈ ಸಂದರ್ಭದಲ್ಲಿ ಸಮಾಲೋಚನೆ ನಡೆಸಿದರು.

ವೇದಿಕೆ ಸದಸ್ಯರಾದ ಪ್ರೊ.ಎಸ್.ಎನ್.ಹೆಗ್ಡೆ, ಪ್ರೊ.ಎಸ್.ಆರ್.ನಿರಂಜನ, ಪ್ರೊ.ಕೆ.ನಾರಾಯಣಗೌಡ ಹಾಗೂ ಪ್ರೊ. ಎಸ್.ಸಚ್ಚಿದಾನಂದ ಇದ್ದರು.

ನಂದಿತಾ ಪ್ರಕರಣ ಸಿಬಿಐಗೆ ವಹಿಸಲು ಕಿಮ್ಮನೆ ಆಗ್ರಹ

ಶಿವಮೊಗ್ಗ: ತೀರ್ಥಹಳ್ಳಿಯಲ್ಲಿ 2014ರಲ್ಲಿ ನಡೆದ ನಂದಿತಾ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಮಾಜಿ ಸಚಿವ ಕಿಮ್ಮನೆ ರತ್ನಾಕರ ಜ.30ರಂದು ತೀರ್ಥಹಳ್ಳಿ ತಾಲ್ಲೂಕು ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ.

'ನಂದಿತಾ ಪ್ರಕರಣ ನಡೆದಾಗ ಆರಗ ಜ್ಞಾನೇಂದ್ರ ಸೇರಿ ಬಿಜೆಪಿಯ ಮುಖಂಡರು ಸಿಬಿಐಗೆ ವಹಿಸುವಂತೆ ಆಗ್ರಹಿಸಿದ್ದರು. ಆರಗ ಜ್ಞಾನೇಂದ್ರ ಎಂಬ ಕೋಮುವಾದಿ ಗೃಹಮಂತ್ರಿ ಕೇವಲ ರಾಜಕೀಯ ಕಾರಣಗಳಿಗಾಗಿ ನಂದಿತಾ ಆತ್ಮಹತ್ಯೆ ಪ್ರಕರಣ ಮುಂದಿಟ್ಟುಕೊಂಡು ಕೊಲೆ, ಅತ್ಯಾಚಾರ ಎಂದು ಬಿಂಬಿಸಿದ್ದರು. ಕೋಮುಗಲಭೆ ಸೃಷ್ಟಿಸುವ ಸಂಚು ರೂಪಿಸಿದ್ದರು. ರಾಜಕೀಯ ಲಾಭಕ್ಕಾಗಿ ಕೃಷ್ಣ ಪೂಜಾರಿ ಕುಟುಂಬವನ್ನು ರಸ್ತೆಗೆ ತಂದು ನಿಲ್ಲಿಸಿದ್ದರು. ನನ್ನ ಮೇಲೆ ಆಪಾದನೆ ಹೊರಿಸಿದ್ದರು. ಬ್ರಹ್ಮಾಂಡ ಭ್ರಷ್ಟರು, ನಂಬಿಕೆ ದ್ರೋಹಿಯೊಬ್ಬರು ಸಾಥ್ ನೀಡಿದ್ದರು' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಅಂದು ನಂದಿತಾ ಪ್ರಕರಣ ಇಟ್ಟುಕೊಂಡು ಹೋರಾಟ ಮಾಡಿದ್ದ ಆರಗ ಜ್ಞಾನೇಂದ್ರ ಅವರೇ ಇಂದು ರಾಜ್ಯದ ಗೃಹ ಸಚಿವರಾಗಿದ್ದಾರೆ. ಅಂದು ನಾನು ಹಸ್ತಕ್ಷೇಪ ಮಾಡಿದೆ ಎಂಬ ಆರೋಪ ಹೊರಿಸಿದ್ದರು. ಈಗಲಾದರೂ ನಿರ್ಭೀತಿಯಿಂದ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು. 2014ರಲ್ಲಿ ನಂದಿತಾ ಮೃತಪಟ್ಟ ನಂತರ ಆರಗ ಜ್ಞಾನೇಂದ್ರ ಅವರು 3 ವರ್ಷ ವೈಕುಂಠ ಸಮಾರಾಧನೆ ಮಾಡಿದ್ದರು. ಗೆದ್ದ ಮೇಲೆ ವೈಕುಂಠ ಸಮಾರಾಧನೆ ಮರೆತಿದ್ದಾರೆ. 2018ರ ಚುನಾವಣೆ ಸಮಯದಲ್ಲಿ ನಂದಿತಾ ಮನೆಗೆ ಭೇಟಿ ನೀಡಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಸಿಬಿಐ ತನಿಖೆಗೆ ಒಪ್ಪಿಸುವ ಭರವಸೆ ನೀಡಿದ್ದರು. ಹಾಗಾಗಿ, ಪ್ರಕರಣವನ್ನು ತಕ್ಷಣ ಸಿಬಿಐ ತನಿಖೆ ವಹಿಸಬೇಕು ಎಂದು ಆಗ್ರಹಿಸಿ ಜ.30ರಂದು ಬೆಳಿಗ್ಗೆ 10.30ರಿಂದ ಜ.31ರ ಬೆಳಿಗ್ಗೆ 10.30ರವರೆಗೆ 24 ಗಂಟೆ ಉಪವಾಸ ಕುಳಿತುಕೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

'ಸಿಬಿಐ ತನಿಖೆಯಲ್ಲಿ ನಾನು ತಪ್ಪಿತಸ್ಥ ಎಂದು ಸಾಬೀತಾದರೆ ರಾಜಕೀಯ ನಿವೃತ್ತಿ ಘೋಷಿಸುತ್ತೇನೆ. 6 ತಿಂಗಳ ಒಳಗೆ ಸಿಬಿಐ ತನಿಖಾ ವರದಿ ನೀಡಬೇಕು. ಇಲ್ಲವೇ ಸಚಿವ, ಶಾಸಕ ಸ್ಥಾನಕ್ಕೆ ಆರಗ ರಾಜೀನಾಮೆ ನೀಡಬೇಕು. ಇಲ್ಲವೇ ಅವರನ್ನು ಸಂಪುಟದಿಂದ ವಜಾ ಮಾಡಬೇಕು' ಎಂದು ಒತ್ತಾಯಿಸಿದರು.

ಡಿಕೆಶಿ ಹುಟ್ಟೂರು ದೊಡ್ಡಾಲಹಳ್ಳಿಯಿಂದಲೇ ದಿನದ ನಡಿಗೆ ಆರಂಭ

ಮೇಕೆದಾಟು ಪಾದಯಾತ್ರೆ; ತಗ್ಗಿದ ಅಬ್ಬರ

ಪ್ರಜಾವಾಣಿ ವಾರ್ತೆ

ರಾಮನಗರ: ಮೇಕೆದಾಟು ಪಾದಯಾತ್ರೆಯ ಎರಡನೇ ದಿನವಾದ ಸೋಮವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ರನ್ನು ತವರು ಕ್ಷೇತ್ರದ ಮತದಾರರು ಆತ್ಮೀಯವಾಗಿ ಬರಮಾಡಿಕೊಂಡಿದ್ದು, ಇಡೀ ದಿನದ ಯಾತ್ರೆ ಸೌಮ್ಯವಾಗಿತ್ತು. ಸರ್ಕಾರದ ತಂತ್ರಗಳ ಬಗ್ಗೆ ಬೇಸತ್ತ ಡಿಕೆಶಿ, ಮುಂದಿನ ಮೂರು ದಿನ ಮೌನವಾಗಿಯೇ ನಡೆಯುವ ನಿರ್ಧಾರ ಪ್ರಕಟಿಸಿದರು.

ಮುಂಜಾನೆ 9.30ಕ್ಕೆ ಡಿಕೆಶಿ ಹುಟ್ಟೂರು ದೊಡ್ಡಾಲಹಳ್ಳಿಯಿಂದಲೇ ದಿನದ ನಡಿಗೆ ಆರಂಭಗೊಂಡಿತು. ಮನೆ ಮಗನನ್ನು ಅಲ್ಲಿನ ಗ್ರಾಮಸ್ಥರು ಅದ್ದೂರಿಯಾಗಿ ಮೆರವಣಿಗೆ ಮಾಡಿ ಮುಂದಕ್ಕೆ ಬೀಳ್ಕೊಟ್ಟರು. ಅಲ್ಲಿಂದ 7 ಕಿ.ಮೀ. ಸಾಗಿದ ಪಾದಯಾತ್ರಿಗಳು ಮಧ್ಯಾಹ್ನ 2.50ಕ್ಕೆ ಮಾದಪ್ಪನದೊಡ್ಡಿ ತಲುಪಿದರು. ಕೆಲ ಹೊತ್ತು ವಿಶ್ರಾಂತಿ ಬಳಿಕ ಪಾದಯಾತ್ರೆ ಮುಂದುವರಿದಿದ್ದು, ರಾತ್ರಿ 8 ಗಂಟೆ ಸುಮಾರಿಗೆ ಕನಕಪುರ ಪಟ್ಟಣದಲ್ಲಿ ದಿನದ ನಡಿಗೆ ಸಮಾಪ್ತಿಯಾಯಿತು. ಮೂರನೇ ದಿನ ಇಲ್ಲಿಂದ ರಾಮನಗರ ತಾಲ್ಲೂಕಿನ ಚಿಕ್ಕೇನಹಳ್ಳಿವರೆಗೆ 15 ಕಿ.ಮೀ. ದೂರವನ್ನು ಪಾದಯಾತ್ರಿಗಳು ಕ್ರಮಿಸಲಿದ್ದಾರೆ. ಮೈಸೂರು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಭಾಗಿ ಆಗಲಿದ್ದಾರೆ.



ಮೇಕೆದಾಟು ಪಾದಯಾತ್ರೆಯ ಎರಡನೇ ದಿನ ಸೋಮವಾರ ಕಂಡ ಜನಸ್ತೋಮ

ಸೋಮವಾರದಂದು ಕನಕಪುರದ ಜೊತೆಗೆ ನೆರೆಯ ಚಾಮರಾಜನಗರ, ಕೊಡಗು ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು. ನೂರಾರು ಬಸ್‌ಗಳಲ್ಲಿ ಅವರನ್ನು ಕರೆತರಲಾಗಿತ್ತು. ಕಡಲೆಪುರಿ, ಬೋಂಡಾ ಮೆಲ್ಲುತ್ತ, ಎಳನೀರು, ಮಜ್ಜಿಗೆ ಕುಡಿಯುತ್ತ ಹೆಜ್ಜೆ ಹಾಕಿದ ಜನರು ಮಧ್ಯಾಹ್ನ ಮಾದಪ್ಪನದೊಡ್ಡಿಯಲ್ಲಿ ಊಟ ಮುಗಿಸುತ್ತಲೇ ಬಸ್ ಏರಿದರು. ಹೀಗಾಗಿ ಸಂಜೆ ನಂತರ ಪಾದಯಾತ್ರಿಗರ ಸಂಖ್ಯೆ ಕಡಿಮೆ ಆಗಿತ್ತು. ಮಧ್ಯಾಹ್ನ ಊಟಕ್ಕೆ ಕಾಳು ಸಾರು, ಮುದ್ದೆ, ಅನ್ನ, ರಸಂ, ಮೊಸರನ್ನ, ಪಕೋಡ, ರೈಸ್‌ಬಾತ್ ಅನ್ನು ಸುಮಾರು 8ಸಾವಿರ ಮಂದಿಗೆ ಸಿದ್ಧಪಡಿಸಲಾಗಿತ್ತು.

ಸಿದ್ದರಾಮಯ್ಯ ಆರೋಗ್ಯ ವಿಚಾರಿಸಿದ ಡಿ.ಕೆ. ಶಿವಕುಮಾರ್

ಸೋಮವಾರ ಬೆಳಿಗ್ಗೆ ಡಿ.ಕೆ. ಶಿವಕುಮಾರ್ ದೂರವಾಣಿ ಮೂಲಕ ಸಿದ್ದರಾಮಯ್ಯ ಅವರ ಆರೋಗ್ಯ ವಿಚಾರಿಸಿದರು. 'ಅನಾರೋಗ್ಯ ಇದ್ದರೆ ಇಂದು ಬರುವುದು ಬೇಡ. ನಾಳೆ ಕನಕಪುರಕ್ಕೆ ನೇರವಾಗಿ ಬನ್ನಿ' ಎಂದು ಆಹ್ವಾನ ನೀಡಿದರು. ತಮಗೆ ಅಧಿಕಾರಿಗಳು ಕೋವಿಡ್ ಪರೀಕ್ಷೆ ನಡೆಸಲು ಬಂದಿದ್ದನ್ನೂ ಅವರು ಪ್ರಸ್ತಾಪಿಸಿದರು.

ಏಕಾಂಗಿ ನಡಿಗೆ: ಎರಡನೇ ದಿನದಂದು ಕಾಂಗ್ರೆಸ್‌ನ ಕೆಲವು ನಾಯಕರಷ್ಟೇ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು. ಈಶ್ವರ ಖಂಡ್ರೆ, ಉಮಾಶ್ರೀ, ಬಿ.ಕೆ. ಹರಿಪ್ರಸಾದ್, ಎಂ.ಬಿ.ಪಾಟೀಲ, ಸಲೀಂ ಅಹಮ್ಮದ್, ನರೇಂದ್ರ ಸ್ವಾಮಿ, ಪ್ರಿಯಾಂಕ್ ಖರ್ಗೆ, ವಿನಯ್ ಕುಲಕರ್ಣಿ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್ ಕಾಣಿಸಿಕೊಂಡರು. ಡಿ.ಕೆ. ಶಿವಕುಮಾರ್ ಮಾತ್ರ ಸ್ಥಳೀಯ ಕಾರ್ಯಕರ್ತರ ಜೊತೆಗೂಡಿ ಮುನ್ನಡೆದರು. ಮಧ್ಯಾಹ್ನ ಊಟದ ವೇಳೆ ಕಾಲು ನೋವಿನ ಕಾರಣಕ್ಕೆ ವಿಶ್ರಾಂತಿ ಪಡೆದರು. ಈ ನಡುವೆ ತೊಪ್ಪಲೇಗೌಡನ ದೊಡ್ಡಿಯಲ್ಲಿನ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಕಾಲ ಕಳೆದರು. ಮರಳೇ ಗವಿ ಮಠಕ್ಕೂ ಭೇಟಿ ನೀಡಿದರು.

ದಾರಿಯುದ್ದಕ್ಕೂ ಮಹಿಳೆಯರು ಕಳಸ ಹಿಡಿದು ಸ್ವಾಗತಿಸಿದ್ದು, ಕೆಲವರು ದೃಷ್ಟಿ ತೆಗೆದರು. ಅಂಗವಿಕಲರ ವ್ಯಕ್ತಿಯೊಬ್ಬರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದು, ಉತ್ತರ ಕರ್ನಾಟಕ ಭಾಗದ ವ್ಯಕ್ತಿಯೊಬ್ಬರು ದೀಡ್ ನಮಸ್ಕಾರದೊಂದಿಗೆ ಮುನ್ನಡೆದರು.

ಪಾದಯಾತ್ರೆ ಹಿಂದೆ ನಾಯಕತ್ವದ ಪೈಪೋಟಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಮೇಕೆದಾಟು ಜಲವಿದ್ಯುತ್ ಯೋಜನೆಗೆ 2014ರಲ್ಲಿಯೇ ಒಪ್ಪಿಗೆ ನೀಡಿದ್ದ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅದನ್ನು ಆಗ ಅನುಷ್ಠಾನಕ್ಕೆ ತರಲಿಲ್ಲವೇಕೆ? ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಯೋಜನೆ ಅನುಷ್ಠಾನ ವಿಚಾರದಲ್ಲಿ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ಮಾಡಿದ ಉದಾಸೀನ ಗಮನಿಸಿದರೆ ಈಗ ಕೈಗೊಂಡಿರುವ ಪಾದಯಾತ್ರೆಯ ಹಿಂದೆ ರಾಜ್ಯದ ಜನರ ಹಿತದೃಷ್ಟಿ ಅಡಗಿಲ್ಲ. ಬದಲಿಗೆ ನಾಯಕತ್ವದ ಪೈಪೋಟಿಗೆ ವೇದಿಕೆಯಾಗಿದೆ ಎಂದು ಅವರು ಲೇವಡಿ ಮಾಡಿದರು.

ಕಾವೇರಿ ಜಲವಿವಾದ ಬಗ್ಗೆ ನ್ಯಾಯಮಂಡಳಿಯ ಅಂತಿಮ ಆದೇಶದಂತೆ ಕರ್ನಾಟಕ ತನ್ನ ಪಾಲಿನ ನೀರು ಸಂಪೂರ್ಣ ಬಳಕೆ ಮಾಡಿಕೊಳ್ಳಬೇಕಿದೆ. ಈಗಾಗಲೇ ವಿಳಂಬವೂ ಆಗಿದೆ. ಹೀಗಾಗಿ ಮೇಕೆದಾಟು ಜಲವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ರಾಜ್ಯದ ಅಡ್ವೊಕೇಟ್ ಜನರಲ್ ನೀಡಿದ್ದ ಅಭಿಪ್ರಾಯ ಆಧರಿಸಿ ಅಂದಿನ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ ಟಿಪ್ಪಣಿ ಸಲ್ಲಿಸಿದ್ದರು. ಆಗ ಅದಕ್ಕೆ ಸಿದ್ದರಾಮಯ್ಯ ಅನುಮೋದನೆ ನೀಡಿದ್ದರು ಎಂದು ಕಾರಜೋಳ ದಾಖಲೆ ಬಿಡುಗಡೆ ಮಾಡಿದರು.

ಮುಖ್ಯಮಂತ್ರಿಯಾಗಲು ಡಿಕೆಶಿ ಪಾದಯಾತ್ರೆ: ಈಶ್ವರಪ್ಪ ವ್ಯಂಗ್ಯ

ಶಿವಮೊಗ್ಗ: 'ಸಿದ್ದರಾಮಯ್ಯ ಅವರನ್ನು ಪಕ್ಕಕ್ಕೆ ಸರಿಸಿ ಮುಖ್ಯಮಂತ್ರಿಯಾಗುವ ಸಲುವಾಗಿ ಡಿ.ಕೆ.ಶಿವಕುಮಾರ್ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಅವರು ಡಿ.ಕೆ.ಶಿವಕುಮಾರ್ ಅಲ್ಲ, ಕೆ.ಡಿ.ಶಿವಕುಮಾರ್' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಕುಟುಕಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಶಿವಕುಮಾರ್ ತಿಹಾರ್ ಜೈಲಿಗೆ ಹೋಗಿದ್ದರು. ಅವರನ್ನು ನಾವು ಕಳುಹಿಸಿದ್ದೆವಾ? ಅಕ್ರಮ ಆಸ್ತಿ ಸಂಪಾದನೆ ಮಾಡಿದ್ದರು. ಹಾಗಾಗಿ, ಜೈಲಿಗೆ ಹೋಗಿ ಬಂದರು. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದವರು. ಶಿವಕುಮಾರ್ ಮಂತ್ರಿ ಆಗಿದ್ದವರು. ಈಗ ಪಾದಯಾತ್ರೆ ಮಾಡಿದರೆ ಅವರನ್ನು ಜೈಲಿಗೆ ಹಾಕೋಕೆ ಆಗುತ್ತಾ' ಎಂದು ಛೇಡಿಸಿದರು.

'ಮೇಕೆದಾಟು ಯೋಜನೆಗೆ ಜೆಡಿಎಸ್ ಅಡ್ಡಗಾಲು ಹಾಕಿಲ್ಲ'

ಪ್ರಜಾವಾಣಿ ವಾರ್ತೆ

ಹಾಸನ: ಮೇಕೆದಾಟು ಸೇರಿದಂತೆ ಯಾವುದೇ ನೀರಾವರಿ ಯೋಜನೆಗೆ ಜೆಡಿಎಸ್ ಅಡ್ಡಗಾಲು ಹಾಕಿಲ್ಲ ಎಂದು ಶಾಸಕ ಎಚ್.ಡಿ.ರೇವಣ್ಣ ಸ್ಪಷ್ಟಪಡಿಸಿದರು.

'ಜೆಡಿಎಸ್, ಬಿಜೆಪಿ ಮೇಕೆದಾಟು ಪಾದಯಾತ್ರೆಗೆ ತಡೆಯೊಡ್ಡುತ್ತಿವೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆರೋಪ ಸರಿಯಲ್ಲ. ಜೆಡಿಎಸ್‌ಗೆ ಅಧಿಕಾರ ಮುಖ್ಯವಲ್ಲ. ಕೇಂದ್ರದಲ್ಲಿ ಹಿಂದೆ ಆಡಳಿತ ನಡೆಸಿದ ಕಾಂಗ್ರೆಸ್, ಈಗ ಆಡಳಿತ ನಡೆಸುತ್ತಿರುವ ಬಿಜೆಪಿ ಈ ಯೋಜನೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೂ ಕಾಂಗ್ರೆಸ್‌ನವರೇ ನೀರಾವರಿ ಸಚಿವರಾಗಿದ್ದರು. ಆಗ ಅವರ ಕೊಡುಗೆ ಏನು ಎಂಬುದುನ್ನು ತಿಳಿಸಲಿ. ಈಗ ಪಾದಯಾತ್ರೆ ಹೆಸರಿನಲ್ಲಿ ನಾಟಕ ಮಾಡುತ್ತಿದ್ದಾರೆ' ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಟೀಕಿಸಿದರು.

'ಪಾದಯಾತ್ರೆಯಲ್ಲ, ಪಶ್ಚಾತ್ತಾಪದ ಯಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒಮ್ಮೆಯೂ ಮೇಕೆದಾಟು ಯೋಜನೆ ಕುರಿತು ಸದನದಲ್ಲಿ ಮಾತನಾಡಿಲ್ಲ. ಈಗ ಪ್ರಚಾರಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದಾರೆ. ಇದು ಪಶ್ಚಾತ್ತಾಪದ ಯಾತ್ರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಟೀಕಿಸಿದರು.



ಅಶ್ವತ್ಥ ನಾರಾಯಣ

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಜನರು ಸಂಕಷ್ಟ ಅನುಭವಿಸಿದರೂ ಪರವಾಗಿಲ್ಲ, ತಮಗೆ ಪ್ರಚಾರ ಸಿಕ್ಕಬೇಕು ಎಂಬುದು ಶಿವಕುಮಾರ್ ದುರುದ್ದೇಶ. ತಮ್ಮನ್ನು ತಾವು ಪ್ರತಿಷ್ಠಾಪಿಸಿಕೊಳ್ಳುವ ಸ್ವಾರ್ಥದಿಂದ ಪಾದಯಾತ್ರೆ ಮಾಡುತ್ತಿದ್ದಾರೆ. ಈ ಪಾದಯಾತ್ರೆಯಿಂದ ಕೋವಿಡ್ ಹರಡಬಹುದೇ ವಿನಃ ಮೇಕೆದಾಟು ಯೋಜನೆಗೆ ಸಂಬಂಧಿಸಿದ ಸಮಸ್ಯೆ ಪರಿಹಾರವಾಗುವುದಿಲ್ಲ' ಎಂದು ಹೇಳಿದರು.

ಏಳು ಬಾರಿ ಶಾಸಕರಾಗಿರುವ ಶಿವಕುಮಾರ್ ಅವರಿಗೆ ರಾಮನಗರ ಜಿಲ್ಲೆಯಲ್ಲಿ ಒಂದು ನೀರಾವರಿ ಯೋಜನೆಯನ್ನೂ ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ. ಈಗ ಅವರ ಬುಡ ಅಲ್ಲಾಡುತ್ತಿರುವುದರಿಂದ ವ್ಯರ್ಥ ಕಸರತ್ತಿಗೆ ಇಳಿದಿದ್ದಾರೆ. ಆ ಮೂಲಕ ಜನರ ಎದುರು ಬೆತ್ತಲಾಗಿದ್ದಾರೆ ಎಂದು ಹೇಳಿದರು.

ಪಾದಯಾತ್ರೆಯಿಂದ ಕೋವಿಡ್ ಹೆಚ್ಚಳ: ಸುಧಾಕರ್

ಬೆಂಗಳೂರು: ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ನಾಯಕರು ನಡೆಸುತ್ತಿರುವ ಪಾದಯಾತ್ರೆಯಿಂದ ರಾಜ್ಯದಲ್ಲಿ ಕೋವಿಡ್ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.



ಸುಧಾಕರ್

'ಕಾಂಗ್ರೆಸ್ ರಾಜ್ಯದ ಮೂಲೆ ಮೂಲೆಗಳಿಂದ ಜನರನ್ನು ಕರೆಸಿಕೊಂಡು ಪಾದಯಾತ್ರೆ ನಡೆಸುತ್ತಿದೆ. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನೂ ಪಾಲಿಸುತ್ತಿಲ್ಲ. ಇದರಿಂದ ಕೋವಿಡ್ ಹೆಚ್ಚಾಗಲಿದೆ. ಕೆಲವೇ ದಿನಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 50,000 ದಾಟಲಿದೆ' ಎಂದರು.

ರಾಜ್ಯದ ಹಿತ ಕಾಯುವುದು ಆಡಳಿತ ಮತ್ತು ವಿರೋಧ ಪಕ್ಷಗಳ ಜವಾಬ್ದಾರಿ. ಆದರೆ, ಜನರ ಆರೋಗ್ಯದ ಹಿತವನ್ನು ಕಾಂಗ್ರೆಸ್ ಬಲಿ ಕೊಡುತ್ತಿದೆ. ಈ ಸಂಬಂಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿದೆ. ಸರ್ಕಾರ ಜನರಿಗೊಂದು ಕಾನೂನು ಮತ್ತು ರಾಜಕಾರಣಿಗಳಿಗೆ ಒಂದು ಕಾನೂನು ಎಂಬ ನೀತಿ ಪಾಲಿಸುವುದಿಲ್ಲ ಎಂದು ಹೇಳಿದರು.

'ಕೋವಿಡ್ ವ್ಯಾಪಿಸಿದರೆ ಕಾಂಗ್ರೆಸ್ ಹೊಣೆ'

ಬೆಂಗಳೂರು: ಕಾಂಗ್ರೆಸ್ ಪಕ್ಷ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸದೇ ಸರ್ಕಾರದ ಜತೆ ಸಂಘರ್ಷದಿಂದ ಪಾದಯಾತ್ರೆ ನಡೆಸುತ್ತಿದೆ. ಇದರಿಂದ ಕೋವಿಡ್ ಉಲ್ಬಣಿಸಿದರೆ ಕಾಂಗ್ರೆಸ್ ಪಕ್ಷವೇ ಹೊಣೆ ಹೊರಬೇಕು ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಹೇಳಿದರು.



ಸಿ.ಸಿ.ಪಾಟೀಲ

'ಕೋವಿಡ್ ನಿಯಂತ್ರಣ ಕ್ರಮಗಳಿಗೆ ಸಾರ್ವಜನಿಕರು ಸಹಕಾರ ನೀಡುತ್ತಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರು ವೈಭವೋಪೇತ ಪಾದಯಾತ್ರೆ ನಡೆಸುತ್ತಾ ಅಮಾಯಕ ಜನರ ಆರೋಗ್ಯವನ್ನು ಅಪಾಯಕ್ಕೆ ಒಡ್ಡಿರುವುದು ಆತಂಕಕಾರಿ' ಎಂದರು.

ಅಧಿಕಾರದಲ್ಲಿ ಇದ್ದಾಗ ಮೇಕೆದಾಟು ಯೋಜನೆ ಅನುಷ್ಠಾನಕ್ಕಾಗಿ ಯಾವ ಕೆಲಸವನ್ನೂ ಮಾಡದ ಕಾಂಗ್ರೆಸ್ ನಾಯಕರು ಈಗ ಪಾದಯಾತ್ರೆ ಮೂಲಕ ಮತ್ತಷ್ಟು ಬಿಕ್ಕಟ್ಟು ಸೃಷ್ಟಿಗೆ ಯತ್ನಿಸುತ್ತಿದ್ದಾರೆ. ಇದರಿಂದ ರಾಜ್ಯದ ಹಿತಕ್ಕೆ ಸಂಚಕಾರ ತಂದಂತೆ ಆಗುವುದಿಲ್ಲವೆ ಎಂದು ಪ್ರಶ್ನಿಸಿದರು.

ಕೋವಿಡ್ ಮಾರ್ಗಸೂಚಿ ಪಾಲಿಸುವುದಾಗಿ ಕಾಂಗ್ರೆಸ್ ನಾಯಕರು ಮೊದಲು ಹೇಳಿಕೆ ನೀಡಿದ್ದರು. ಈಗ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

'ಪಾದಯಾತ್ರೆಗೆ ಹೋಗುತ್ತೇನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದ ಕಾರಣಕ್ಕೆ ಮೇಕೆದಾಟು ಪಾದಯಾತ್ರೆಯಿಂದ ಅರ್ಧಕ್ಕೆ ವಾಪಸ್ ಆಗಿದ್ದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಂಗಳವಾರದಿಂದ (ಜ.11) ಮತ್ತೆ ಭಾಗವಹಿಸಲು ನಿರ್ಧರಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಪಾದಯಾತ್ರೆಗೆ ಮಂಗಳವಾರ ಹೋಗಬೇಕೆಂದು ಅಂದುಕೊಂಡಿದ್ದೇನೆ. ಜ್ವರ ಹೆಚ್ಚಿದ ಕಾರಣ ವಾಪಸ್ ಬಂದು ಚಿಕಿತ್ಸೆ ಪಡೆದಿದ್ದೇನೆ' ಎಂದರು.

'ಬಿಜೆಪಿಯವರು ನಮ್ಮ ಮೇಲೆ ಕೇಸ್ ಹಾಕಿದ್ದಾರೆ. ಅವರು ಏನೇನು ಕ್ರಮ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ. ಕೊರೊನಾ ಸೋಂಕು ಹೆಚ್ಚಾಗಲು ನಾವು ಹೇಗೆ ಕಾರಣ ಆಗುತ್ತೇವೆ. ನಾವು ಎಲ್ಲ ರೀತಿಯ ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದೇವೆ. ಲಾಕ್‌ಡೌನ್ ಮಾಡುವುದು ಸರ್ಕಾರದ ನಿರ್ಧಾರ, ನಮ್ಮದಲ್ಲ. ಕಾರ್ಮಿಕರಿಗೆ, ಬಡವರಿಗೆ ಬದುಕಲು ದಾರಿ ಮಾಡಿಕೊಟ್ಟು ಬಳಿಕ ಲಾಕ್‌ಡೌನ್ ಮಾಡಲಿ' ಎಂದರು.

ಮಿತಿ ಮೀರಿದ ಭ್ರಷ್ಟಾಚಾರ: ರುಪ್ಸ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನ್ಯತೆ ನವೀಕರಣ ಮತ್ತು ಆರ್‌ಟಿಇ ಶುಲ್ಕ ಮರು ಪಾವತಿಗೆ ಬಿಇಒ, ಡಿಡಿಪಿಐ ಹೀಗೆ ಕೆಳಹಂತದಲ್ಲಿ ಲಂಚ ನೀಡದಿದ್ದರೆ ಕಡತ ಮುಂದಕ್ಕೆ ಹೋಗುವುದೇ ಇಲ್ಲ. ಇಲಾಖೆಯಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು ತಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಮನವಿ ಸಲ್ಲಿಸಿದೆ.

'ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮಕ್ಕೆ ನಿರಾಕ್ಷೇಪಣಾ ಪತ್ರ ಪಡೆಯಲು ಇಲಾಖೆಯ ಬಿಇಒಗಳಿಂದ ಶಿಕ್ಷಣ ಸಚಿವರವರೆಗೆ ಎಲ್ಲ ಅಧಿಕಾರಿಗಳಿಂದ ಎರಡು ಬಾರಿ ಅನುಮತಿ ಪಡೆಯಬೇಕಾಗಿದೆ. ಇದಕ್ಕೆ ಹೆಚ್ಚಿನ ಕಾಲಾವಕಾಶ ತಗಲುವ ಜೊತೆಗೆ ಲಂಚ ವಸೂಲಿ ಕೂಡಾ ಮೀತಿ ಮೀರಿದೆ' ಎಂದು ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ದೂರಿದ್ದಾರೆ.

'ಹೊಸ ಶಾಲೆಗಳಿಗೆ ಮಾನ್ಯತೆ ಹಾಗೂ ಶಾಲಾ ಕೋಡ್ ಪಡೆಯುವ ವೇಳೆ ಅಧಿಕಾರಿಗಳು ಚಂದಾ ವಸೂಲಿ ಮಾಡುತ್ತಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಣಿಗೆ ಲಂಚ ನೀಡಲೇಬೇಕಾಗಿದೆ. ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರಗಳನ್ನು ಕಡ್ಡಾಯಗೊಳಿಸಿ ಮತ್ತಷ್ಟು ಇಲಾಖೆಗಳನ್ನು ಅದರ ವ್ಯಾಪ್ತಿಗೆ ಸೇರಿಸಿ ವಸೂಲಾತಿ ಹೆಚ್ಚಿಸಲಾಗಿದೆ. ಈ ರೀತಿ ಕಿರುಕುಳದ ಕಾರಣಕ್ಕೇ ಹಲವು ಶಾಲೆಗಳು ಮುಚ್ಚಿವೆ. ಈ ಪರಿಸ್ಥಿತಿ ಮುಂದುವರಿದರೆ ಗ್ರಾಮೀಣ ಭಾಗದ ಇನ್ನಷ್ಟು ಶಾಲೆಗಳು ಮುಚ್ಚಲಿವೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಮಾನ್ಯತೆ ನವೀಕರಣ ವೇಳೆ ನಡೆಯುತ್ತಿದ್ದ ಭ್ರಷ್ಟಾಚಾರದ ವಿರುದ್ಧ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದ ಬಳಿಕ ಅರ್ಜಿ ಸಲ್ಲಿಸಲು ಆನ್‌ಲೈನ್ ಪದ್ಧತಿ ಜಾರಿಗೆ ತರಲಾಗಿದೆ. ಆದರೆ, ಅಧಿಕಾರಿಗಳ ಲಂಚದ ಬೇಡಿಕೆ ಕಡಿಮೆ ಆಗುವ ಬದಲು ವ್ಯಾಪ್ತಿ ಮತ್ತು ಮೊತ್ತ ಹೆಚ್ಚಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಖಾಸಗಿ ಶಾಲೆಗಳು ಸಮಸ್ಯೆಗೆ ಸಿಲುಕುವ ಸಾಧ್ಯತೆ ಇದೆ' ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಡಿಕೆಶಿ ಪರೀಕ್ಷೆಗೆ ಬಂದಿದ್ದ ಹೆಚ್ಚುವರಿ ಜಿಲ್ಲಾಧಿಕಾರಿಗೆ ಕೋವಿಡ್

ಒಂದನೇ ಪುಟದಿಂದ

'ನನ್ನ ವಿರುದ್ಧ ಸರ್ಕಾರದ ಸಂಚು':

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರಿಗೆ ಕೋವಿಡ್ ಸುದ್ದಿ ತಿಳಿಯುತ್ತಲೇ ಕೆಪಿಸಿಸಿ ಡಿ.ಕೆ. ಶಿವಕುಮಾರ್ ಸುದ್ದಿಗೋಷ್ಠಿ ನಡೆಸಿದ್ದು, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. 'ರಾಜ್ಯ ಸರ್ಕಾರ ನನ್ನ ವಿರುದ್ಧ ಸಂಚು ರೂಪಿಸುತ್ತಿದ್ದು, ಕೋವಿಡ್ ಪಾಸಿಟಿವ್ ಇರುವ ಅಧಿಕಾರಿಯನ್ನು ಬೇಕಂತಲೇ ನನ್ನ ಪರೀಕ್ಷೆಗೆ ಕಳುಹಿಸಿದೆ. ಈ ಮೂಲಕ ಶಿವಕುಮಾರ್‌ಗೆ ಕೊರೊನಾ ಸೋಂಕು ಹರಡಿಸಲು ನೋಡುತ್ತಿದೆ. ಇದರ ಹಿಂದೆ ಆರೋಗ್ಯ ಹಾಗೂ ಗೃಹ ಸಚಿವರ ಕೈವಾಡ ಇದೆ' ಎಂದು ದೂರಿದರು.

ಮೂರು ದಿನ ಮೌನ

ರಾಷ್ಟ್ರ ಮಟ್ಟದ ಮಾಧ್ಯಮಗಳನ್ನು ಸರ್ಕಾರ ನನ್ನ ವಿರುದ್ಧ ಎತ್ತಿ ಕಟ್ಟುತ್ತಿದೆ. ಇದನ್ನು ಖಂಡಿಸಿ ಮುಂದಿನ ಮೂರು ದಿನ ಕಾಲ ನಾನು ಮೌನವಾಗಿ ಪಾದಯಾತ್ರೆ ನಡೆಸಲಿದ್ದೇನೆ. ಯಾವ ಮಾಧ್ಯಮದವರೊಂದಿಗೂ ಮಾತನಾಡುವುದಿಲ್ಲ ಎಂದರು.

ಬಿಜೆಪಿಗೆ ಕೋವಿಡ್ ಕಲೆಕ್ಷನ್ ಕಡಿಮೆ ಆಗಿದ್ದು, ಕೋವಿಡ್ ಪ್ರಕರಣಗಳ ಸಂಖ್ಯೆಯನ್ನು ಹೆಚ್ಚು ತೋರಿಸಿ ಹಣ ಮಾಡಲು ಹೊರಟಿದೆ. ಇದರ ವಿರುದ್ಧ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಗೃಹ ಸಚಿವರ ಊರಿನಲ್ಲಿ ಇದೇ 3-4 ರಂದು ಕಾರ್ಯಕ್ರಮ ಮಾಡಿದ್ದಾರೆ. ಶಾಸಕ ರೇಣುಕಾಚಾರ್ಯ ಹೋರಿ ಬೆದರಿಸೋ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದಾರೆ. ಹೀಗೆ ಬಿಜೆಪಿ ನಾಯಕರು ಯಾವುದೇ ಕಾರ್ಯಕ್ರಮ ಮಾಡಿದರೂ ಪ್ರಕರಣ ದಾಖಲಿಸಿಲ್ಲ. ಈಗ ನಮ್ಮ 31 ಮಂದಿ ಮೇಲೆ ಕೇಸ್ ಹಾಕಿದ್ದಾರೆ. ಇದರ ವಿರುದ್ಧ ನಾವು ಕಾನೂನು ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದರು.

'ಸಂಕ್ರಮಣ'ದ ಪ್ರೊ. ಚಂಪಾ ಇನ್ನಿಲ್ಲ

ಒಂದನೇ ಪುಟದಿಂದ

ಬಳಿಕ ಸಂಜೆ ವೇಳೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಯಾವುದೇ ವಿಧಿವಿಧಾನಗಳಿಲ್ಲದೇ ಸಮಾಧಿ ಮಾಡಲಾಯಿತು. ಅಂತ್ಯಕ್ರಿಯೆಗೂ ಮುನ್ನ ಸರ್ಕಾರಿ ಗೌರವ ಸಲ್ಲಿಸಲಾಯಿತು.

ಸುಮಾರು 15 ವರ್ಷಗಳ ಹಿಂದೆ ಚಂಪಾ ಅವರು ಹೃದಯದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆ ಬಳಿಕ ದೈಹಿಕವಾಗಿ ಸ್ವಲ್ಪ ಕುಗ್ಗಿದ್ದರೂ ಅವರ ಹೋರಾಟದ ಕಾವು, ಬಂಡಾಯದ ಧ್ವನಿ ಏರುಗತಿಯಲ್ಲೇ ಇತ್ತು. ಜೆ.ಪಿ. ಚಳವಳಿಯಲ್ಲಿ ಸಕ್ರಿಯರಾಗಿದ್ದ ಅವರು ತುರ್ತು ಪರಿಸ್ಥಿತಿಯ ದಿನಗಳಲ್ಲಿ ಜೈಲುವಾಸವನ್ನೂ ಅನುಭವಿಸಿದ್ದರು.

ಹಾವೇರಿ, ಧಾರವಾಡದಲ್ಲಿ ಶಿಕ್ಷಣ ಪೂರೈಸಿದ ಅವರು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ವಿ.ಕೃ.ಗೋಕಾಕರ ಮಾರ್ಗದರ್ಶನ ಸಿಕ್ಕಿತ್ತು. ವಿದ್ಯಾರ್ಥಿಯಾಗಿದ್ದಾಗಲೇ ಅವರ ಪ್ರಥಮ ಕವನ ಸಂಕಲನ 'ಬಾನುಲಿ' (1960) ಪ್ರಕಟವಾಯಿತು. ನವ್ಯ ಮಾರ್ಗದಲ್ಲಿ ಕಾವ್ಯ ಕೃಷಿ ಆರಂಭಿಸಿದ ಅವರು ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ್ ಸ್ನಾತಕೋತ್ತರ (1962) ಪದವೀಧರರು. ಅದೇ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ 'ಚಂಪಾ' ಅವರು, ಸ್ನೇಹಿತರಾದ ಗಿರಡ್ಡಿ ಗೋವಿಂದರಾಜು, ಸಿದ್ದಲಿಂಗ ಪಟ್ಟಣಶೆಟ್ಟಿ ಅವರ ಜೊತೆ ಸೇರಿ 'ಸಂಕ್ರಮಣ' (1964) ಹೆಸರಿನಲ್ಲಿ ದ್ವೈಮಾಸಿಕ ಸಾಹಿತ್ಯ ಪತ್ರಿಕೆ ಆರಂಭಿಸಿದರು. 2018ರವರೆಗೂ ಆ ಪತ್ರಿಕೆ ಪ್ರಕಟವಾಗಿದೆ.

ಕೃತಿಗಳು: ಕನ್ನಡ ಕನ್ನಡ ಬರ್ರೀ ನಮ್ಮ ಸಂಗಡ, ಸಂಕ್ರಮಣ ಕಾವ್ಯ, ಗಾಂಧಿ ಗಾಂಧಿ, ಜೂನ್ 75 ಮಾರ್ಚ್ 77, ಬಂಡಾಯ ಮತ್ತು ಸಾಹಿತ್ಯ, ನೆಲ್ಸನ್ ಮಂಡೇಲಾ, ಕನ್ನಡನಾಡಿಗೊಂದು ಪ್ರಾದೇಶಿಕ ಪಕ್ಷ, ಸಂಕ್ರಮಣ ಸಾಹಿತ್ಯ (3 ಸಂಪುಟಗಳಲ್ಲಿ), ಗಾಂಧಿ ಎನ್ನುವ ಹೆಸರು... ಬೇಂದ್ರೆ-ನಾ ಕಂಡಂತೆ, ನನಗೆ ಕಂಡಷ್ಟು, 26 ದಿನ 25 ರಾತ್ರಿ

ಸಂಘಟಕರಾಗಿ ಚಂಪಾ

- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ (1996-99); ಪ್ರತಿ ಶನಿವಾರ 'ಪುಸ್ತಕ ಸಂತೆ'
- ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ (2004–08)
- ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕ
- ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಪ್ರಧಾನ ಕಾರ್ಯದರ್ಶಿ
- ಧಾರವಾಡದ ನಾಟಕ ಕೂಟದ ಕಾರ್ಯದರ್ಶಿ
- ಮ್ಯಾಳ ನಾಟಕ ಸಂಘದ ಕಾರ್ಯಾಧ್ಯಕ್ಷ
- ಕರ್ನಾಟಕ ವಿಶ್ವವಿದ್ಯಾಲಯದ ವಿಶ್ವಚೇತನ ಸಾಂಸ್ಕೃತಿಕ ವೇದಿಕೆಯ ನಿಯೋಜಕ

ಪ್ರಶಸ್ತಿಗಳು

- ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (1960, 74, 76)
- ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ (1988)
- ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿ (1989)
- ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (1992)
- ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1995)
- ಕೆ.ವಿ. ಶಂಕರಗೌಡ ರಂಗಭೂಮಿ ಪ್ರಶಸ್ತಿ (1996)
- ಸಂದೇಶ ಮಾಧ್ಯಮ ಪ್ರಶಸ್ತಿ (1996)
- ಕರುನಾಡ ಭೂಷಣ ಪ್ರಶಸ್ತಿ (2006)
- ಆಳ್ವಾಸ್ ನುಡಿಸಿರಿ ಪ್ರಶಸ್ತಿ (2011)
- ಪಂಪ ಪ್ರಶಸ್ತಿ (2011)

ಚಂಪಾ ಅವರು ಕನ್ನಡ ನಾಡು-ನುಡಿಗೆ ಸಲ್ಲಿಸಿದ ಕೊಡುಗೆ ಅಪಾರ. ಗೋಕಾಕ್ ಚಳವಳಿ ಸೇರಿದಂತೆ ಕನ್ನಡಕ್ಕಾಗಿ ನಡೆದ ಹಲವಾರು ಹೋರಾಟಗಳಲ್ಲಿ ಮುಂಚೂಣಿಯಾಗಿ ನಿಂತವರು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಕೋರ್ಟ್ ಕಲಾಪ: ಸೌಕರ್ಯಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧೀನ ನ್ಯಾಯಾಲಯಗಳ ಕಲಾಪಗಳನ್ನು ನೇರಪ್ರಸಾರ ಮಾಡುವುದಕ್ಕೆ ಸಂಬಂಧಿಸಿದಂತೆ ಶೀಘ್ರವೇ ಮೂಲ ಸೌಕರ್ಯ ಒದಗಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.


ಈ ಕುರಿತಂತೆ ವಕೀಲ ದಿಲ್‌ರಾಜ್ ರೋಹಿತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ರಾಜ್ಯದ ಅಧೀನ ನ್ಯಾಯಾಲಯಗಳ ಕಲಾಪಗಳನ್ನು ನೇರ ಪ್ರಸಾರ ಮಾಡುವುದಕ್ಕೆ ಸಂಬಂಧಿಸಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ಶೀಘ್ರವೇ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು' ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

ಹೈಕೋರ್ಟ್ ಕಲಾಪ ನೇರ ಪ್ರಸಾರಕ್ಕೆ ಸಂಬಂಧಿಸಿದ 'ಕರ್ನಾಟಕ ರೂಲ್ಸ್ ಆನ್ ಲೈವ್ ಸ್ಟ್ರೀಮಿಂಗ್ ಆಂಡ್ ರೆಕಾರ್ಡಿಂಗ್ ಆಫ್ ಕೋರ್ಟ್ ಪ್ರೊಸಿಡಿಂಗ್ಸ್' ನಿಯಮಗಳನ್ನು ಈಗಾಗಲೇ ಅನುಷ್ಠಾನ ಗೊಳಿಸಲಾಗಿದೆ.

'ಕಾಂಗ್ರೆಸ್ ಪಾದಯಾತ್ರೆ ಮೂರ್ಖತನದ ಪರಮಾವಧಿ' 'ಸರ್ಕಾರದ ಮೇಲೆ ಗೂಬೆ ಕೂರಿಸೋ ಷಡ್ಯಂತ್ರ'

ಪ್ರಜಾವಾಣಿ ವಾರ್ತೆ

ಹಾವೇರಿ: 'ಕೋವಿಡ್ ಸಂದರ್ಭದಲ್ಲಿ ಜನ ಹಾಳಾಗಲಿ, ಸತ್ತರೆ ಸಾಯಲಿ ಎಂದು ನಿರ್ಲಕ್ಷ್ಯ ತೋರಿ, ತಮ್ಮ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಹಾಗೂ ಸಿದ್ದರಾಮಯ್ಯನವರ ಮುಂದೆ ತಾನು ದೊಡ್ಡ ಜನಾನುರಾಗಿ ಅಂತ ಸಾಬೀತು ಮಾಡೋಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಪಾದಯಾತ್ರೆ ಕೈಗೊಂಡಿದ್ದಾರೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ವಾಗ್ದಾಳಿ ನಡೆಸಿದರು.



ಬಿ.ಸಿ.ಪಾಟೀಲ

ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಡಿ.ಕೆ.ಶಿವಕುಮಾರ್ ಪಾದಯಾತ್ರೆ ಮಾಡುವಾಗಲೇ ಸಿದ್ದರಾಮಯ್ಯ ಕೈ ಕೊಟ್ಟಿದ್ದಾರೆ. ಪಾದಯಾತ್ರೆ ಮಾಡೋ ಸಂದರ್ಭದಲ್ಲಿಯೇ ಪೊಲೀಸರಿಂದ ಅರೆಸ್ಟ್ ಆಗಬೇಕು. ಈ ಮೂಲಕ ಬಿಜೆಪಿ ಸರ್ಕಾರದ ಮೇಲೆ ಗೂಬೆ ಕೂರಿಸೋ ಉದ್ದೇಶ ಶಿವಕುಮಾರ್ ಅವರಿಗಿದೆ. ಮೇಕೆದಾಟು ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದ್ದು, ಒತ್ತಡ ಹೇರಿದರೆ ಕಾನೂನುಬಾಹಿರವಾಗುತ್ತದೆ. ಇದು ಉದ್ಧಟತನ, ಗೂಂಡಾಗಿರಿ, ಮೂರ್ಖತನದ ಪರಮಾವಧಿ' ಎಂದು ಜರಿದರು.

ಸುಪ್ರೀಂ ಕೋರ್ಟ್ ವಕೀಲರಿಗೆ ಬೆದರಿಕೆ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ನ ಹಲವು ವಕೀಲರಿಗೆ ಅಂತರರಾಷ್ಟ್ರೀಯ ಕರೆಯೊಂದು ಸೋಮವಾರ ಬಂದಿದೆ. ಈ ಕರೆಯಲ್ಲಿ, ಪ್ರಧಾನಿಯವರ ಭದ್ರತೆಯಲ್ಲಿ ಆಗಿರುವ ಲೋಪ ಪ್ರಕರಣವನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡು, 'ಮೋದಿ ಸರ್ಕಾರಕ್ಕೆ ನೆರವು' ನೀಡಬಾರದು ಎಂಬ ಧ್ವನಿ ಮುದ್ರಿತ ಸಂದೇಶ ಇತ್ತು ಎಂದು ವಕೀಲರು ಹೇಳಿದ್ದಾರೆ.

ವಕೀಲರಾದ ದೀಪಕ್ ಪ್ರಕಾಶ್, ದಿವ್ಯಾಂಗ ಮಲಿಕ್, ನಚಿಕೇತ ವಾಜಪೇಯಿ ಅವರು ದೆಹಲಿಯ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ರಾಷ್ಟ್ರೀಯ ತನಿಖಾ ಸಂಸ್ಥೆಗೂ ದೂರು ಕೊಡಲಾಗಿದೆ.

ಈ ಧ್ವನಿಮುದ್ರಿತ ಸಂದೇಶವನ್ನು ಕಳುಹಿಸಿದವರೇ ಪ್ರಧಾನಿಯು ಫ್ಲೈಓವರ್‌ನಲ್ಲಿ ಸಿಲುಕಿಕೊಂಡಿದ್ದರ ಹೊಣೆಗಾರರು ಎಂದು ಸಂದೇಶದಲ್ಲಿ ಹೇಳಲಾಗಿದೆ. 1984ರ ದಂಗೆಯಲ್ಲಿ ಹತ್ಯೆಗೊಳಗಾದ ಸಿಖ್ ಸಮುದಾಯದ ಜನರ ಬಗ್ಗೆ ಸುಪ್ರೀಂ ಕೋರ್ಟ್ ಅಗತ್ಯ ಕ್ರಮ ಕೈಗೊಂಡಿಲ್ಲ ಎಂದು ಸಂದೇಶದಲ್ಲಿ ಅಸಮಾಧಾನ ವ್ಯಕ್ತಪಡಿಸಲಾಗಿದೆ.

ಸಂದೇಶದ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ ಒತ್ತಾಯಿಸಿದ್ದಾರೆ.

ಹೊನ್ನಾಳಿ ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಹೋರಿ ಬೆದರಿಸುವ ಕಾರ್ಯಕ್ರಮ

ಕೋವಿಡ್ ನಿಯಮ ಉಲ್ಲಂಘನೆ: ಕ್ಷಮೆಯಾಚಿಸಿದ ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಸೋಮವಾರ ನಡೆದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಕೋವಿಡ್ ನಿಯಮಗಳನ್ನು ಗಾಳಿಗೆ ತೂರಿ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯೂ ಆಗಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರನ್ನು ಅಭಿಮಾನಿಗಳು ಹೆಗಲ ಮೇಲೆ ಹೊತ್ತು ಮೆರವಣಿಗೆ ನಡೆಸಿದರು.



ಹೊನ್ನಾಳಿ ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಹೋರಿ ಬೆದರಿಸುವ ಕಾರ್ಯಕ್ರಮದಲ್ಲಿ ಯುವಕರು ಶಾಸಕ ಎಂ.ಪಿ. ರೇಣುಕಾಚಾರ್ಯ ಅವರನ್ನು ಹೆಗಲ ಮೇಲೆ ಹೊತ್ತು ಮೆರವಣಿಗೆ ನಡೆಸಿದರು.

ಸರ್ಕಾರದ ಭಾಗವಾಗಿರುವ ರೇಣುಕಾಚಾರ್ಯ ಅವರೇ ಕೊರೊನಾ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಟೀಕೆಗಳು ಕೇಳಿ ಬರುತ್ತಿದ್ದಂತೆ, ಅವರು ಬಹಿರಂಗವಾಗಿ ಕ್ಷಮೆಯಾಚಿಸಿದ್ದಾರೆ.

ಹೋರಿ ಬೆದರಿಸುವ ಸ್ಪರ್ಧೆಗೆ ಶಾಸಕ ಎಂ.ಪಿ. ರೇಣುಕಾಚಾರ್ಯ ಚಾಲನೆ ನೀಡಿದರು. ಹೋರಿ ಬೆದರಿಸುವ ಸ್ಪರ್ಧೆಗೆ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರಿದ್ದರು. ಬಹುತೇಕ ಯಾರೂ ಮಾಸ್ಕ್ ಧರಿಸಿರಲಿಲ್ಲ. ಯುವಕರು ರೇಣುಕಾಚಾರ್ಯ ಅವರನ್ನು ಹೆಗಲ ಮೇಲೆ ಹೊತ್ತು ಸಾಗಿದರು. ಶಾಸಕರು ಜನರತ್ತ ಕೈ ಬೀಸುತ್ತ, ಕೈ ಮುಗಿಯುತ್ತಿದ್ದರು. ಅಭಿಮಾನಿಗಳು ಶಾಲು ಹೊದಿಸಿ, ಹೂವಿನ ಹಾರಗಳನ್ನು ಹಾಕಿ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಕ್ಷಮೆಯಾಚನೆ: 'ಯುವಕರ ಅಪೇಕ್ಷೆಯ ಮೇರೆಗೆ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದೆ. ಕೋವಿಡ್ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ರಾಜ್ಯದ ಜನರ, ಮುಖ್ಯಮಂತ್ರಿ ಅವರ ಕ್ಷಮೆಯಾಚಿಸುತ್ತೇನೆ' ಎಂದು ರೇಣುಕಾಚಾರ್ಯ ಪ್ರತಿಕ್ರಿಯಿಸಿದ್ದಾರೆ.

'ಕೋವಿಡ್ ಮೊದಲ ಹಾಗೂ ಎರಡನೇ ಅಲೆಯ ಸಂದರ್ಭದಲ್ಲಿ ಜನರು, ಪಕ್ಷದ ವರಿಷ್ಠರು ಮೆಚ್ಚುವಂತೆ ಕೆಲಸ ಮಾಡಿದ್ದೆ. ಆದರೀಗ ಹೋರಿ ಬೆದರಿಸುವ ಹಬ್ಬದಲ್ಲಿ ಪಾಲ್ಗೊಂಡಿದ್ದು ನನಗೆ ತೀವ್ರ ಮುಜುಗರ ಉಂಟುಮಾಡಿದೆ' ಎಂದು ಹೇಳಿದರು.

'ತಾಲ್ಲೂಕಿನ ವಿವಿಧೆಡೆ ಹಮ್ಮಿಕೊಂಡಿರುವ ಕುರಿ ಕಾಳಗವನ್ನು ಮುಂದೂಡುವಂತೆ ಸಂಬಂಧಪಟ್ಟವರೊಂದಿಗೆ ಮಾತುಕತೆ ನಡೆಸಿದ್ದೇನೆ' ಎಂದರು.

ಆಯೋಜಕರ ಮೇಲೆ ದೂರು ದಾಖಲು

ಹೋರಿ ಬೆದರಿಸುವ ಸ್ಪರ್ಧೆಯ ಆಯೋಜಕರು ಮತ್ತು ಸ್ಪರ್ಧೆಯಲ್ಲಿ ಪಾಲ್ಗೊಂಡವರ ವಿರುದ್ಧ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೋರಿ ಬೆದರಿಸುವ ಕಾರ್ಯಕ್ರಮ ಆಯೋಜಿಸುವ ಸಂಬಂಧ ಯಾವುದೇ ಅನುಮತಿ ಪಡೆದಿರಲಿಲ್ಲ. ಯಾವುದೇ ಸಭೆ–ಸಮಾರಂಭ, ಪ್ರತಿಭಟನೆ, ರ‍್ಯಾಲಿ, ಮೆರವಣಿಗೆ, ಜಾತ್ರೆಗಳನ್ನು ಆಯೋಜಿಸುವಂತಿಲ್ಲ ಎಂದು ಕೋವಿಡ್ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ನಿಯಮ ಮೀರಿ ಹೋರಿ ಬೆದರಿಸುವ ಸ್ಪರ್ಧೆ ಆಯೋಜಿಸಿದ್ದು, ಆಯೋಜಕರು ಮತ್ತು ಸ್ಪರ್ಧೆಯಲ್ಲಿ ಪಾಲ್ಗೊಂಡವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಸಿಪಿಐ ದೇವರಾಜ್ ತಿಳಿಸಿದ್ದಾರೆ.

ಕಾಂಗ್ರೆಸ್ ಪಾದಯಾತ್ರೆ ಬಗ್ಗೆ ಟೀಕಿಸಿದ್ದೆ. ಇದೀಗ ನಾನೇ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿದ್ದು, ನನಗೆ ಮಾತನಾಡುವ ನೈತಿಕತೆ ಇಲ್ಲದಂತಾಗಿದೆ.

ಎಂ.ಪಿ. ರೇಣುಕಾಚಾರ್ಯ, ಶಾಸಕ

ವಾಣಿಜ್ಯ ತೆರಿಗೆಗಳ ಸೇವಾ ಸಂಘಕ್ಕೆ ಆಡಳಿತಾಧಿಕಾರಿ ನೇಮಕ

ಬೆಂಗಳೂರು: ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವಾ (ಅಧಿಕಾರಿಗಳ) ಸಂಘಕ್ಕೆ ಮುಂದಿನ ಆರು ತಿಂಗಳ ಅವಧಿಗೆ ಸಹಕಾರ ಇಲಾಖೆಯ ಸಹಾಯಕ ನಿಬಂಧಕರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಂಘದ ಅಧಿಕಾರವನ್ನು ತಕ್ಷಣ ವಹಿಸಿಕೊಂಡು, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ ಹೊಸ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶದಲ್ಲಿ ಸಹಕಾರ ಇಲಾಖೆ ತಿಳಿಸಿದೆ.

ಚುನಾಯಿತ ಮಂಡಳಿಗೆ ಎರಡು ವರ್ಷಗಳ ಅಧಿಕಾರ ಅವಧಿಯಿದೆ. 2015ರಲ್ಲಿ ಸಂಘದ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದಿದ್ದು, ಅವಧಿಯು 2017ರ ಡಿ. 20ರಂದು ಮುಗಿದಿದೆ. ನಂತರ ಚುನಾವಣೆ ನಡೆಸುವಂತೆ ಮನವಿ ಸಲ್ಲಿಸಿದ್ದರೂ ಚುನಾವಣೆ ನಡೆಸಿಲ್ಲವೆಂದು ಕೆಲವು ಸದಸ್ಯರು ಸಹಕಾರ ಇಲಾಖೆಗೆ ದೂರು ಸಲ್ಲಿಸಿದ್ದರು. ಅಲ್ಲದೆ, ಸಂಘವು ನಿಯಮಾನುಸಾರ ಲೆಕ್ಕಪತ್ರ ಸಲ್ಲಿಸದೆ, ಅವಧಿ ಮೀರಿ ನಡೆಯುತ್ತಿರುವುದರಿಂದ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಮನವಿ ಸಲ್ಲಿಸಿದ್ದರು. ಈ ಮಧ್ಯೆ, ಸಂಘದ ಚುನಾವಣೆಯನ್ನು ಡಿ. 11ರಂದು ನಡೆಸಲು ಪ್ರಕಟಣೆ ಹೊರಡಿಸಲಾಗಿತ್ತು. ಆದರೆ, ಚುನಾವಣೆಯಲ್ಲಿ ಮತ ಚಲಾಯಿಸುವ ಆಜೀವ ಸದಸ್ಯರ ಬಗ್ಗೆ ಗೊಂದಲ ಇದ್ದುದರಿಂದ ಚುನಾವಣೆ ಮುಂದೂಡಲಾಗಿದ್ದು, ಹೊಸತಾಗಿ ಸಂಘದ ಸದಸ್ಯರ ಪಟ್ಟಿ ಸಿದ್ಧಪಡಿಸಬೇಕಾಗಿದೆ. ಈ ಕಾರಣಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ ಎಂದು ಇಲಾಖೆ ಸ್ಪಷ್ಟಪಡಿಸಿದೆ.

ದಕ್ಕಲಿಗರ ಕುರಿತ ನಾರಾಯಣಸ್ವಾಮಿ ಹೇಳಿಕೆ

ಕೇಂದ್ರ ಸಚಿವರ ಸ್ಪಷ್ಟೀಕರಣಕ್ಕೆ ಆದಿಜಾಂಬವ ಮಠ ಒತ್ತಾಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ದಕ್ಕಲಿಗರು ಆದಿ ಜಾಂಬವರ ಬಹಿಷ್ಕೃತ ಮಕ್ಕಳು' ಎಂದು ದಕ್ಕಲಿಗರ ಮತ್ತು ಆದಿಜಾಂಬವ ಒಡನಾಟದ ಕುರಿತು ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ನೀಡಿದ ಹೇಳಿಕೆಗೆ ಆದಿಜಾಂಬವ ಮಠ ಬೇಸರ ವ್ಯಕ್ತಪಡಿಸಿದೆ. ಸಚಿವರು ಕೂಡಲೇ ಸಮುದಾಯಕ್ಕೆ ಸ್ಪಷ್ಟೀಕರಣ ನೀಡಬೇಕು ಎಂದು ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಆಗ್ರಹಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸ್ವಾಮೀಜಿ, 'ದಕ್ಕಲಿಗರ ಶ್ರೇಯೋಭಿವೃದ್ಧಿಗೆ ಶ್ರಮಿಸುವುದಾಗಿ ಸಚಿವರು ನೀಡಿದ ವಾಗ್ದಾನ ಸ್ವಾಗತಾರ್ಹ. ಆದರೆ, 'ದಕ್ಕಲಿಗರು ಆದಿ ಜಾಂಬವರ ಬಹಿಷ್ಕೃತ ಮಕ್ಕಳು' ಎಂಬ ಹೇಳಿಕೆ ತಪ್ಪು ಅರ್ಥಗಳಿಗೆ ಅವಕಾಶ ಕಲ್ಪಿಸಿದೆ. ಅನ್ಯಥಾ ಭಾವಿಸದೆ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಬೇಕು' ಎಂದರು.

'ಸಚಿವರ ಹೇಳಿಕೆಯಿಂದ ಆದಿಜಾಂಬವ ಮಠದ ವೈಚಾರಿಕ ಪರಂಪರೆ, ಸೇವೆ ಮತ್ತು ಘನತೆಗೆ ಚ್ಯುತಿ ಉಂಟಾಗಿದೆ. ಆದಿ ಜಾಂಬವ ಕುಲಗುರುಗಳ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ನಾರಾಯಣಸ್ವಾಮಿ ಅವರ ನಡೆಯಿಂದ ಮಾದಿಗ ಸಮುದಾಯ ಕಳವಳಗೊಂಡಿದೆ. ಮಠದ ನೂರಾರು ಭಕ್ತರು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. 'ಇದು ಸಮಾಜಕ್ಕೆ ತಪ್ಪು ಸಂದೇಶ ರವಾನೆ ಮಾಡಿದೆ' ಎಂದು ಅಭಿಪ್ರಾಯಪಟ್ಟರು.

'ಆದಿಜಾಂಬವ ಪರಂಪರೆಯ ಮಠಾಧೀಶರನ್ನು ಮಾದಿಗ ಉಪಜಾತಿಗಳು ಕುಲಗುರುವಾಗಿ ಶತಮಾನಗಳ ಹಿಂದೆಯೇ ಸ್ವೀಕರಿಸಿವೆ. ಉಪಜಾತಿಗಳಿಂದ ಯಾರಾದರೂ ಬಹಿಷ್ಕಾರಕ್ಕೆ ಒಳಗಾದ ಸಂದರ್ಭದಲ್ಲಿ ಮಠ ಮಧ್ಯಪ್ರವೇಶಿಸಿ ತಪ್ಪುಗಳ ಬಗ್ಗೆ ಅರಿವು ಮೂಡಿಸಿದೆ. ಪ್ರತಿಯೊಬ್ಬರನ್ನೂ ಮುಖ್ಯವಾಹಿನಿಗೆ ಕರೆತರುವ ಪ್ರಯತ್ನ ಮಾಡಿದೆ. ಮಾದಿಗರು ಮತ್ತು ಮಾಶಾಳರ ನಡುವೆ ಮದುವೆ ನಡೆಸಿ ವೈಚಾರಿಕ ನಿಲುವು ಪ್ರಕಟಿಸಿದೆ' ಎಂದು ಹೇಳಿದರು. ಆದಿಜಾಂಬವ ಮಠದ ಶಿವಮುನಿ ಸ್ವಾಮೀಜಿ, ಟ್ರಸ್ಟಿಗಳಾದ ನಾಗಕುಮಾರ, ಚಿದಾನಂದ ಇದ್ದರು.

> ಆದಿಜಾಂಬವ ಮಠಕ್ಕೆ ಕುಲಗುರು ಪಟ್ಟವನ್ನು ಸಮುದಾಯ ನೀಡಿದೆ. ಬೇರೆ ಮಠ ಮತ್ತು ಸ್ವಾಮೀಜಿಯ ಟೀಕೆ, ಸ್ಪರ್ಧೆ ಮಾಡುವುದು ನಮ್ಮ ಉದ್ದೇಶವಲ್ಲ.
> **ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ** ಆದಿಜಾಂಬವ ಮಠ

'ಒಕ್ಕೂಟದಿಂದ ದೂರ ಇಡಲಾಗಿದೆ'

ದಲಿತ ಮತ್ತು ಹಿಂದುಳಿದ ಮಠಾಧೀಶರ ಒಕ್ಕೂಟದಿಂದ ಆದಿಜಾಂಬವ ಮಠವನ್ನು ಉದ್ದೇಶಪೂರ್ವಕವಾಗಿ ದೂರ ಇಡಲಾಗಿದೆ ಎಂದು ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

'ದಲಿತ ಮತ್ತು ಹಿಂದುಳಿದ ಮಠಾಧೀಶರು ಸೇರಿ ಒಕ್ಕೂಟ ರಚನೆಯಾಗಿದೆ. ಆದಿಜಾಂಬವ ಮಠ ಕೂಡ ಹಿಂದುಳಿದಿದೆ. ಈ ಮಠವನ್ನೂ ಒಕ್ಕೂಟದಲ್ಲಿ ಸೇರಿಸಿಕೊಂಡಿದ್ದರೆ ಇನ್ನಷ್ಟು ಬಲ ಬರುತ್ತಿತ್ತು. ನಮ್ಮನ್ನು ದೂರ ಇಟ್ಟಿರುವ ಬಗ್ಗೆ ಭಕ್ತರಲ್ಲಿ ಅಸಮಾಧಾನವಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

ಕೋವಿಡ್ ಕಾರಣ: ಪರ್ಯಾಯ ಉತ್ಸವ ಸರಳ ಹಾಗೂ ಸಂಪ್ರದಾಯ ಬದ್ಧ ಆಚರಣೆ

ಕೃಷ್ಣಾಪುರ ಮಠಾಧೀಶರ ಸರಳ ಪುರಪ್ರವೇಶ

ಪ್ರಜಾವಾಣಿ ವಾರ್ತೆ

ಉಡುಪಿ: ಭಾವಿ ಪರ್ಯಾಯ ಪೀಠಾಧಿಪತಿಗಳಾದ ಕೃಷ್ಣಾಪುರ ಮಠದ ವಿದ್ಯಾಸಾಗರತೀರ್ಥ ಶ್ರೀಗಳು ಸೋಮವಾರ ನಗರದ ಜೋಡುಕಟ್ಟೆಯ ಮೂಲಕ ಪುರಪ್ರವೇಶ ಮಾಡಿದರು.

ಪರ್ಯಾಯ ಪೂರ್ವಭಾವಿಯಾಗಿ ತೀರ್ಥಕ್ಷೇತ್ರಗಳ ಯಾತ್ರೆ ಮುಗಿಸಿ ಬಂದ ವಿದ್ಯಾಸಾಗರತೀರ್ಥ ಶ್ರೀಗಳಿಗೆ ಜಿಲ್ಲಾಧಿಕಾರಿ ಎಂ. ಕೂರ್ಮಾರಾವ್ ಹೂಮಾಲೆ ಹಾಕಿ ಸ್ವಾಗತ ಕೋರಿದರು. ಕೋವಿಡ್ ಕಾರಣದಿಂದ ಈ ಬಾರಿ ಸರಳವಾಗಿ ಪುರಪ್ರವೇಶ ಮೆರವಣಿಗೆ ನಡೆಯಿತು.

ಸ್ತಬ್ಧಚಿತ್ರಗಳು, ಕಲಾತಂಡಗಳ ಪ್ರದರ್ಶನ ಹಾಗೂ ಅದ್ದೂರಿತನ ಇರಲಿಲ್ಲ. ಬದಲಾಗಿ, ಸಾಂಪ್ರದಾಯಿಕ ಚಂಡೆ, ವಾದ್ಯ, ಬ್ಯಾಂಡ್, ಭಜನೆ, ಸಂಕೀರ್ತನಾ ತಂಡಗಳು ಮೆರವಣಿಗೆಯಲ್ಲಿದ್ದವು. ಪಟ್ಟದ ದೇವರಾದ ದ್ವಿಭುಜ ಕಾಳೀಯ ಮರ್ದನ, ಕೃಷ್ಣ, ನರಸಿಂಹ ದೇವರನ್ನು ಚಿನ್ನದ ಪಲ್ಲಕ್ಕಿಯಲ್ಲಿ ಇಡಲಾಗಿತ್ತು.

ತೆರೆದ ವಾಹನದಲ್ಲಿ ಕುಳಿತ ಕೃಷ್ಣಾಪುರ ಮಠದ ಶ್ರೀಗಳು ರಥಬೀದಿ ಪ್ರವೇಶಿಸುತ್ತಿದ್ದಂತೆ ಭವ್ಯ ಸ್ವಾಗತ ಕೋರಲಾಯಿತು. ಕನಕನ ಕಿಂಡಿಯಲ್ಲಿ ಕೃಷ್ಣನ ದರ್ಶನ ಮಾಡಿದ ಬಳಿಕ ಅನಂತೇಶ್ವರ, ಚಂದ್ರಮೌಳೀಶ್ವರ ಹಾಗೂ ಮಧ್ವಾಚಾರ್ಯರ ದರ್ಶನ ಮಾಡಿದರು. ಬಳಿಕ ಅದಮಾರು ಮಠದ ಈಶಪ್ರಿಯ ತೀರ್ಥ ಶ್ರೀಗಳು ಅರಳು ಎರಚಿ ಸಾಂಪ್ರದಾಯಬದ್ಧವಾಗಿ ಸ್ವಾಗತ ಕೋರಿದರು.

ನಂತರ ರಥಬೀದಿಯಲ್ಲಿ ಅಭಿನಂದನೆ ಹಾಗೂ ಪೌರ ಸಮ್ಮಾನ ಕಾರ್ಯಕ್ರಮದಲ್ಲಿ ಅದಮಾರು ಮಠದ ಈಶಪ್ರಿಯ ತೀರ್ಥ ಶ್ರೀಗಳು ಹಾಗೂ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಶ್ರೀಗಳನ್ನು ಸನ್ಮಾನಿಸಲಾಯಿತು.

ಜನವರಿ18ರಂದು ಪರ್ಯಾಯ ಮಹೋತ್ಸವ ನಡೆಯಲಿದೆ. ಅಂದು ಬೆಳಗಿನ ಜಾವ 5.55ಕ್ಕೆ ವಿದ್ಯಾಸಾಗರ ತೀರ್ಥರು ಸರ್ವಜ್ಞ ಪೀಠಾರೋಹಣ ಮಾಡಲಿದ್ದಾರೆ. ಈ ಮೂಲಕ ಮುಂದಿನ 2 ವರ್ಷಗಳ ಕಾಲ ಕೃಷ್ಣನ ಪೂಜಾಧಿಕಾರವನ್ನು ಪಡೆದುಕೊಳ್ಳಲಿದ್ದಾರೆ.

ಕೋವಿಡ್ ಕಾರಣದಿಂದ ಈ ಬಾರಿ ಪರ್ಯಾಯ ಉತ್ಸವವನ್ನು ಸರಳ ಹಾಗೂ ಸಂಪ್ರದಾಯ ಬದ್ಧವಾಗಿ ಆಚರಿಸಲು ನಿರ್ಧರಿಸಲಾಗಿದೆ.



ಪರ್ಯಾಯ ಪೀಠಾಧಿಪತಿಗಳಾದ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಶ್ರೀಗಳ ಪುರಪ್ರವೇಶ ಸೋಮವಾರ ಸರಳವಾಗಿ ನೆರವೇರಿತು.

ಸಿದ್ದೇಶ್ವರ ಸ್ವಾಮೀಜಿಗೆ ಗಾಯ, ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರು ತಾಲ್ಲೂಕಿನ ಬಸವನಾಳಗಡ್ಡೆಯಲ್ಲಿರುವ ಮಗದುಮ್ ಅವರ ತೋಟದ ಮನೆಯ ಸ್ನಾನ ಗೃಹದಲ್ಲಿ ಸೋಮವಾರ ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ.

ಚಿಕ್ಕೋಡಿಯ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ನೆರೆಯ ಮಹಾರಾಷ್ಟ್ರದ ಕನ್ಹೇರಿ ಮಠದ ಆಸ್ಪತ್ರೆಗೆ ದಾಖಲಿಸಲಾಗಿದೆ. ತಾಲ್ಲೂಕಿನ ಕೇರೂರ ಗ್ರಾಮದಲ್ಲಿ 'ಆಧ್ಯಾತ್ಮಿಕ ಪ್ರವಚನ ಸೇವಾ ಸಮಿತಿ'ಯಿಂದ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮದ ಉದ್ಘಾಟನೆಯಲ್ಲಿ ಬೆಳಿಗ್ಗೆ ಪಾಲ್ಗೊಂಡಿದ್ದರು. ಮಧ್ಯಾಹ್ನ ಕಾಗವಾಡ ತಾಲ್ಲೂಕಿನ ಶೇಡಬಾಳದ ವಿದ್ಯಾನಂದ ಮುನಿರಾಜ ಕನ್ನಡ ಪ್ರಾಥಮಿಕ ಶಾಲೆ ಆವರಣದಲ್ಲಿ ಪ್ರತಿಷ್ಠಾಪಿಸಿರುವ ವಿದ್ಯಾನಂದ ಮುನಿರಾಜರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಳಿಕ, ಕೇರೂರಲ್ಲಿ ತಿಂಗಳವರೆಗೆ ಹಮ್ಮಿಕೊಂಡಿದ್ದ ಪ್ರವಚನದ ಮುಖ್ಯ ವೇದಿಕೆ ಪರಿಶೀಲಿಸಿದ್ದರು. ನಂತರ ವಾಸ್ತವ್ಯ ಕಲ್ಪಿಸಿದ್ದ ತೋಟದ ಮನೆಗೆ ಮರಳಿದ್ದರು.

'ಅವರಿಗೆ ಬಲ ಭುಜ ಹಾಗೂ ತೊಡೆಯ ಮೇಲ್ಭಾಗದ ಮೂಳೆ ಮುರಿತವಾಗಿದೆ' ಎಂದು ಮೂಲಗಳು ತಿಳಿಸಿವೆ.

'2023ಕ್ಕೆ ಹೊಸ ಶಕ್ತಿಯೊಂದಿಗೆ ಮತ್ತೆ ಬಿಜೆಪಿ ಅಧಿಕಾರಕ್ಕೆ'

ನಾನೇನೂ ಜ್ಯೋತಿಷಿ ಅಲ್ಲ: ಯತ್ನಾಳ್

ಪ್ರಜಾವಾಣಿ ವಾರ್ತೆ

ಧಾರವಾಡ: 'ನಾನೇನೂ ಜ್ಯೋತಿಷಿ ಅಲ್ಲ. ಕಾಕತಾಳೀಯ ಎಂಬಂತೆ ನಾನು ಹೇಳಿದ್ದು ನಿಜವಾಗುತ್ತದೆ. 2023ಕ್ಕೆ ಬಿಜೆಪಿ ಹೊಸ ಶಕ್ತಿಯೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ಶಾಸಕ ಬಸವನಗೌಡ ಪಾಟೀಲ ಯತ್ನಾಳ ಭವಿಷ್ಯ ನುಡಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಸದ್ಯ ಪಂಚ ರಾಜ್ಯ ಚುನಾವಣೆ ನಡೆದಿದೆ. ಚುನಾವಣೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಬಹುದು. ಆದರೆ ಒಟ್ಟಾರೆ ಒಳ್ಳೆಯ ದಿನಗಳು ಬರಲಿವೆ. ನಾನಂತೂ ಯಾವುದೇ ಅಪೇಕ್ಷಿಸುವುದಿಲ್ಲ' ಎಂದರು.

ಮುಖ್ಯಮಂತ್ರಿ ಸ್ಥಾನ ಕುರಿತು ಸ್ವಾಮೀಜಿಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯಲ್ಲಿ ನನ್ನಷ್ಟು ಅರ್ಹತೆ ಹಾಗೂ ಯೋಗ್ಯತೆ ಯಾರಿಗಿದೆ? ಸಚಿವ ಸಂಪುಟದಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿದ್ದಕ್ಕೆ ವಾಜಪೇಯಿ ಅವರ ಹಸ್ತಾಕ್ಷರದಲ್ಲಿ ಮೆಚ್ಚುಗೆ ಪತ್ರ ಪಡೆದ ವ್ಯಕ್ತಿ ನಾನು. ದುರ್ದೈವ ಅಂದರೆ ರಾಜಕಾರಣದಲ್ಲಿ ನೇರವಾಗಿ ಮಾತನಾಡಬಾರದು. ಇಲ್ಲಿ ಚಮಚಾಗಿರಿ ಮಾಡಬೇಕು. ನನಗೆ ಅದು ಹಿಡಿಸದ ಕಾರಣ ನಾನು ಹಿಂದುಳಿದಿದ್ದೇನೆ' ಖಾರವಾಗಿ ಪ್ರತಿಕ್ರಿಯಿಸಿದರು.

'ನಾನು ಅತಿವೃಷ್ಟಿ, ಸಾಮಾಜಿಕ ನ್ಯಾಯದ ಕುರಿತು ಗುಡುಗಿದ್ದೇನೆಯೇ ಹೊರತು, ಮುಖ್ಯಮಂತ್ರಿ ಅಥವಾ ಮಂತ್ರಿ ಮಾಡಿ ಎಂದು ಗುಡುಗಿಲ್ಲ. 2023ರ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಹೈಕಮಾಂಡ್ ಏನೇ ನಿರ್ಣಯ ಕೈಗೊಂಡರೂ ನಾವು ಅದಕ್ಕೆ ಬದ್ಧ' ಎಂದು ಹೇಳಿದರು.

'ಬೆಳಗಾವಿ ಅಧಿವೇಶನವನ್ನು ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ಹಾಳು ಮಾಡಿದೆ. ಸಿದ್ದರಾಮಯ್ಯ ಅವರು ಎಂಟೆಂಟು ತಾಸು ಮಾತನಾಡುತ್ತಾರೆ. ಅವರ ಶಾಸಕರಿಗೂ ಅವಕಾಶ ಕೊಡುವುದಿಲ್ಲ. ಇದು ದೊಡ್ಡ ದುರಂತ. ಅದೇ ಟಿಪ್ಪು ಸುಲ್ತಾನ್ ವರ್ಣನೆ ಮಾಡುತ್ತಾರೆ. ಟಿಪ್ಪು ವರ್ಣನೆಯಲ್ಲೇ ಕಾಂಗ್ರೆಸ್ ಹಾಳಾಗುತ್ತಿದೆ. ಇದೀಗ ಪಾದಯಾತ್ರೆಯಲ್ಲೂ ಇವರ ಬಣ್ಣ ಬಯಲಾಗುತ್ತಿದೆ' ಎಂದು ಟೀಕಿಸಿದರು.

ಕೂಡಲಸಂಗಮ: ಶರಣಮೇಳ ರದ್ದು

ಕೂಡಲಸಂಗಮ: ಇದೇ 12 ರಿಂದ 14ರ ವರೆಗೆ ಹಮ್ಮಿಕೊಂಡಿದ್ದ 35ನೇ ಶರಣಮೇಳವನ್ನು ಕೋವಿಡ್ 19, ಓಮೈಕ್ರಾನ್ ವೈರಾಣು ದಿನದಿಂದ ದಿನಕ್ಕೆ ಅಧಿಕವಾಗಿ ಹರಡುತ್ತಿರುವುದರಿಂದ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಬಸವ ಧರ್ಮ ಪೀಠವು ರದ್ದು ಪಡಿಸಿದೆ. ಇದೇ 14 ರಂದು ಧಾರ್ಮಿಕ ಕಾರ್ಯಗಳನ್ನು ಸಾಂಕೇತಿಕವಾಗಿ ಆಚರಿಸಲು ನಿರ್ಧರಿಸಿದೆ.

ಜಿಲ್ಲಾಧಿಕಾರಿಗಳು ಜ.6 ರಿಂದ ಬಸವಣ್ಣನ ಐಕ್ಯ ಮಂಟಪ, ಸಂಗಮೇಶ್ವರ ದೇವಾಲಯ, ಬಸವ ಧರ್ಮ ಪೀಠದ ಪ್ರವೇಶ ನಿಷೇಧಿಸಿದ್ದರಿಂದ ಬಸವ ಧರ್ಮ ಪೀಠದ ಆವರಣದಲ್ಲಿ ಹಾಕಿದ ಶಾಮಿಯಾನಗಳನ್ನು ತೆಗೆಯಲಾಗುತ್ತಿದೆ. ಇದೇ 14 ರಂದು ಧಾರ್ಮಿಕ ಕಾರ್ಯಗಳನ್ನು ಸಾಂಕೇತಿಕವಾಗಿ ಆಚರಿಸಲು ನಿರ್ಧರಿಸಲಾಗಿದೆ. ಭಕ್ತರು ಸಹಕರಿಸಬೇಕು ಎಂದು ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಜಗದ್ಗುರು ಮಾತೆ ಗಂಗಾದೇವಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಹರಜಾತ್ರೆ ಮುಂದೂಡಿಕೆ

ಹರಿಹರ: ಓಮೈಕ್ರಾನ್ ಹೆಚ್ಚುತ್ತಿರುವ ಕಾರಣ ಜ. 14 ಮತ್ತು 15ರಂದು ಆಯೋಜಿಸಿದ್ದ ಹರಜಾತ್ರೆಯನ್ನು ಮುಂದೂಡಲಾಗಿದೆ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ವಚನಾನಂದ ಸ್ವಾಮೀಜಿ ತಿಳಿಸಿದರು.

'ಯೋಗಯುಕ್ತ, ರೋಗಮುಕ್ತ ಕರ್ನಾಟಕ ನಿರ್ಮಾಣ' ನಮ್ಮ ಕಲ್ಪನೆಯಾಗಿದೆ. ಜೀವ ಇದ್ದರೆ ಜೀವನ ಎಂಬ ಮಾತಿನ ಮೇಲೆ ನಂಬಿಕೆ ಇದೆ. ಜನರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡುವುದು ನಮ್ಮ ಕರ್ತವ್ಯ. ಸೋಂಕು ನಿಯಂತ್ರಣಕ್ಕೆ ಬಂದ ನಂತರ ಜಾತ್ರೆ ಆಯೋಜಿಸಲಾಗುವುದು' ಎಂದರು.

ನಿಧನ ವಾರ್ತೆ

ಎನ್.ಎಸ್. ದೇವಿಪ್ರಸಾದ್



ಸುಳ್ಯ: ಸಾಹಿತಿ, ಸಿನಿಮಾ ನಿರ್ಮಾಪಕ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪ್ರಥಮ ಅಧ್ಯಕ್ಷ ಎನ್.ಎಸ್. ದೇವಿಪ್ರಸಾದ್ (79) ಸೋಮವಾರ ನಿಧನರಾದರು. ಅವರಿಗೆ ಪತ್ನಿ ಇಂದಿರಾ, ಪುತ್ರಿಯರಾದ ಸಹನಾ, ಪ್ರಜ್ಞಾ ಇದ್ದಾರೆ.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಸಂಪಾಜೆಯ ಮನೆಯಲ್ಲಿ ನಿಧನರಾದರು. ಜ.3ರಂದು ಸುಳ್ಯದ ಅಮರ ಶ್ರೀಭಾಗ್‌ನಲ್ಲಿ ನಡೆದ ಸಮಾರಂಭದಲ್ಲಿ ಅವರು ಕರ್ನಾಟಕ ಅರೆಭಾಷೆ ಅಕಾಡೆಮಿಯ 2019–20ನೇ ಸಾಲಿನ 'ಗೌರವ ಪ್ರಶಸ್ತಿ' ಸ್ವೀಕರಿಸಿದ್ದರು.

ದೇವಿಪ್ರಸಾದ್ ನಿರ್ಮಿಸಿದ 'ಮೂರು ದಾರಿಗಳು' ಸಿನಿಮಾಕ್ಕೆ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳು ಲಭಿಸಿದ್ದವು. 'ಶಿರಾಡಿ ಭೂತ' ನಾಟಕ ರಚಿಸಿ, ನಿರ್ದೇಶಿಸಿ ಹಲವು ಕಡೆ ಭರ್ಜರಿ ಪ್ರದರ್ಶನ ನೀಡುವ ಮೂಲಕ ಉತ್ತಮ ರಂಗಕರ್ಮಿ ಎನಿಸಿಕೊಂಡಿದ್ದರು. 'ಗುಡ್ಡದ ಭೂತ' ಟಿ.ವಿ. ಧಾರಾವಾಹಿಯಲ್ಲಿ ಅವರು ನಟಿಸಿದ್ದರು.

ಸಾಮಾಜಿಕ, ಧಾರ್ಮಿಕ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರು ಕೆಲಸ ಮಾಡಿದ್ದರು. ಸಂಪಾಜೆ ಪಂಚಲಿಂಗೇಶ್ವರ ದೇವಸ್ಥಾನದ ಮೊಕ್ತೇಸರರಾಗಿದ್ದರು. ಸ್ವಗ್ರಾಮ ಸಂಪಾಜೆಯಲ್ಲಿ ಸೋಮವಾರ ರಾತ್ರಿ ಅಂತ್ಯಕ್ರಿಯೆ ನಡೆಯಿತು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರೀಯ ಉಗ್ರಾಣ ಶಾಂತಿನಗರ ಬೆಂಗಳೂರು–560 027
ಸಂಖ್ಯೆ: ಬೆ.ಮ.ಸಾ.ಸಂ./ಕೇಕ/ಉಖನಿ/ಟೆಂಡರ್/07/2021–22 ದಿ. 10.01.2022
ಟೆಂಡರ್ ಆಹ್ವಾನ ಪ್ರಕಟಣೆ
ಬೆ.ಮ.ನ.ಸಾ.ಸಂಸ್ಥೆಗೆ ಅವಶ್ಯಕವಿರುವ ಸರಕು/ಸೇವೆಗಳನ್ನು ಪಡೆಯಲು **e-procurement**ನ ಮೂಲಕ ಬೆಮಸಾಸಂಸ್ಥೆಗೆ ಸ್ವಯಂ ಚಾಲಿತ ಶುಲ್ಕ ಸಂಗ್ರಹ ವ್ಯವಸ್ಥೆ(ಎ.ಎಫ್.ಸಿ.ಎಸ್) ವಿನ್ಯಾಸ, ಅಭಿವೃದ್ಧಿ, ಪೂರೈಕೆ, ಅನುಷ್ಠಾನ, ಏಕೀಕರಣ ಮತ್ತು ನಿರ್ವಹಣೆಗಾಗಿ, ಸಿಸ್ಟಮ್ ಇಂಟಿಗ್ರೇಟರ್‌ರ ಆಯ್ಕೆಗಾಗಿ ಟೆಂಡರ್ ಕರೆಯಲಾಗಿದ್ದು ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಂಖ್ಯೆ. **BMTC/2021/042 Date.10.01.2022.** ಟೆಂಡರ್‌ನ ಅಂದಾಜು ಮೊತ್ತ : ರೂ.**4500.00** ಲಕ್ಷಗಳು. **e-procurement** ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **31.01.2022. 14:30** ಗಂಟೆವರೆಗೆ. ಹೆಚ್ಚಿನ ವಿವರಗಳನ್ನು **www.eproc.karnataka.gov.in** ನಿಂದ ಪಡೆಯಬಹುದು.
ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಪ್ರಇಂ/05/ಪಿಆರ್‌ಎಎಂಸಿ/ರಸು/2021–22/1028 ದಿನಾಂಕ : 10.01.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ರಾಯಚೂರು ಜಿಲ್ಲೆಯ 1 ರಸ್ತೆಗಳ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರಾಕ್‌ನಿಂದ (**www.eproc.karnataka.gov.in**) ದಿನಾಂಕ : 11.01.2022 ರಿಂದ ಪಡೆಯಬಹುದಾಗಿರುತ್ತದೆ. **5:30** ನಂತರ ಇ–ಪ್ರಾಕ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಬೆಂಗಳೂರು ರಲ್ಲಿ ಪಡೆಯಬಹುದಾಗಿರುತ್ತದೆ. ಇ–ಮೇಲ್ : **cepramc@kpwd.gov.in**
ವಾ.ಸಂ.ಇ/ಬೆಂ.ನ/ಶ್ರೇಷ್ಠ/2784/2021–22 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಎಂಸಿ
ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

VISVESVARAYA INDUSTRIAL & TECHNOLOGICAL MUSEUM
(National Council of Science Museums)
Kasturba Road, Bengaluru - 560 001.
ADVERTISEMENT NO.01/2022
Applications are invited from eligible candidates for the following posts:
1. Technician 'A' Electronics – 01 Post (Reserved for EWS) in Pay Matrix Level – 02 (Rs. 19900-63200).
2. Junior Stenographer – 01 Post (Unreserved) in Pay Matrix Level – 04 (Rs. 25500-81100).
For further details please visit our website **www.vismuseum.gov.in** Completed Application may be sent to **The Director, Visvesvaraya Industrial & Technological Museum, Kasturba Road, Bengaluru - 560 001** so as to reach the same on or before **10.02.2022.**
The above posts are presently at Visvesvaraya Industrial & Technological Museum. But incumbents are liable to be transferred to anywhere in India in any of the units of NCSM. The Director, VITM reserves the right to cancel the whole recruitment or any part of it at any stage without assigning any reason whatsoever.

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: pdkldabangalore@gmail.com ಫೋನ್: 080–29533854
No: CAH/KLDA/AI/CONSUMABLES/2021-22 Date: 10/01/2022
ಅಲ್ಪಾವಧಿ ಟೆಂಡರ್ ಅಧಿಸೂಚನೆ
2021–22 ಮತ್ತು 2022–23ನೇ ಸಾಲಿಗೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕೃತಕ ಗರ್ಭಧಾರಣೆಗೆ ಸಂಬಂಧಿಸಿದಂತೆ ಪರಿಕರಗಳ (AI sheaths, AI gloves, Mini straws) ಖರೀದಿಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. e-Procurement Portal ಮೂಲಕ ಬಿಡ್‌ಗಳನ್ನು ದಿನಾಂಕ: 10.01.2022 ರಿಂದ ಅಪ್‌ಲೋಡ್ ಮಾಡಬಹುದಾಗಿದ್ದು, ಕೊನೆಯ ದಿನಾಂಕ: 20.01.2022 5.30 ಗಂಟೆಯವರೆಗೆ. ಅಂದಾಜು ಟೆಂಡರ್ ಮೊತ್ತ ರೂ. 400.00 ಲಕ್ಷಗಳು ವಿವರಗಳಿಗೆ https://eproc.karnataka.gov.in ಅಂತರ್ಜಾಲ ವೀಕ್ಷಿಸುವುದು ಅಥವಾ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ 080–29533854 ಅನ್ನು ಸಂಪರ್ಕಿಸಿ.
ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಟೆಂಡರ್ ಆಹ್ವಾನ ಸಮಿತಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು
DIPR/DDU/Zen/RO-2789/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001
ದೂರವಾಣಿ: 080–22215601, 22211246 ಫ್ಯಾಕ್ಸ್: 22215602
ಸಂಖ್ಯೆ:ಡಿವೈಇಎಸ್/ತಾಂಶಾಖೆ/ಖೇಲೋ/ಇಂ/126/2021–22 ದಿನಾಂಕ:03.01.2022
ಟೆಂಡರ್ ಪ್ರಕಟಣೆ – (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001 ಕರ್ನಾಟಕ ಇವರು **"ಬೆಂಗಳೂರಿನ ಅಕ್ಕಿತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣದ ವಿದ್ಯುದ್ದೀಕರಣ, ಪ್ರೇಕ್ಷಕರ ಗ್ಯಾಲರಿ ಹಾಗೂ ಫ್ಲಡ್‌ಲೈಟ್‌ಗಳನ್ನು ಅಳವಡಿಸುವ ಹಾಗೂ ಇತರೆ ನವೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು"** ಟೆಂಡರ್ ಮೂಲಕ ಕೈಗೊಳ್ಳಲು ಗುತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್ ಮೊತ್ತ : **ರೂ. 91.72 ಲಕ್ಷಗಳು.** ಇಎಂಡಿ ಮೊತ್ತ : **ರೂ. 1.83 ಲಕ್ಷಗಳು.**
ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. 1) ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 18.01.2022ರ ಸಂಜೆ 4.00 ಗಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.01.2022ರ ಸಂಜೆ 4.30 ಗಂಟೆಗೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ : ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ), ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ಬೆಂನ/ಜಿಎ/2747/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ
ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ಜೆಜೆಎಮ್/ಐಎಸ್‌ಆರ್‌ಎ/2021–22/994 ದಿನಾಂಕ: 07.01.2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಏಕಲಕೋಟಿ ಪದ್ಧತಿ (ಇ–ಪ್ರೊಕ್ಯೂರ್ಮೆಂಟ್ ಮೂಲಕ)
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜಿನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಬೀದರ ಜಿಲ್ಲೆಯ 1 service tender "ಇ ಪ್ರೊಕ್ಯುರಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. (1) (NJJM/RWSSD/BDR/ISRA/2021-22) ಟೆಂಡರಿಗಿಟ್ಟ ಮೊತ್ತ ಕ್ರಮವಾಗಿ ರೂ. 123.074 ಲಕ್ಷಗಳು ಮತ್ತು ಮುಂಗಡ ಠೇವಣಿ ಮೊತ್ತ ಕ್ರಮವಾಗಿ ರೂ. 123000.00 service tender ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯೂರಮೆಂಟ್" ವೆಬ್ಸೈಟ್ https://eproc.karnataka.gov.in ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: 07.01.2022, ಪೂರ್ವಭಾವಿ ಸಭೆ ದಿನಾಂಕ: 12.01.2022 ಪ್ರಶ್ನೋತ್ತರದ ಕೊನೆಯ ದಿನಾಂಕ : 14.01.2022 ಟೆಂಡರ ಸ್ವೀಕರೀಸುವ ಕೊನೆಯ ದಿನಂಕ: 17.01.2022 ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ : 19.01.2022, ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ:21.01.2022.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ–ಬೀದರ
ವಾ.ಸಾ.ಸಂ.ಇ/ಬೀದರ/256/ಎಂಸಿ&ಎ/2021–22

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ್, ಕೃಭಾಜನಿನಿ,
ಅಣೆಕಟ್ಟು ವಿಭಾಗ, ನಾರಾಯಣಪೂರ, ತಾ:ಹುಣಸಗಿ ,ಜಿ:ಯಾದಗಿರಿ
ಸಂ:ಕೃಭಾಜನಿನಿ/ಕಾನಿಇಂ/ಆವಿನಾ/ಪಿ.ಬಿ/ಡ್ರಿಪ್–II/ಪಿ–1/2021–22/1449 ದಿ:10.01.2022
ರಾಷ್ಟ್ರೀಯ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು,ಕೃಭಾಜನಿನಿ, ಆಲಮಟ್ಟಿ /ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ರವರು ಈ ಕೆಳಕಂಡ ಕಾಮಗಾರಿಗಾಗಿ ಎರಡು ಕವರ್ ಸಿಸ್ಟಮ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದ್ದು,ಸದರಿ ಕಾಮಗಾರಿಗೆ ಈ ಕಚೇರಿ ಟೆಂಡರ್ ಪ್ರಕಟಣೆ ಸಂ: ಕೃಭಾಜನಿನಿ/ಕಾನಿಇಂ/ಆವಿನಾ/ಪಿ.ಬಿ/ಡ್ರಿಪ್–II/ /ಪಿ–1/ ಟೆಂಡರ್/2021–22/1448 ದಿ:10.01.2022 ಅಡಿಯಲ್ಲಿ ಮೊಹರಾದ ಐಟಂವಾರು ಟೆಂಡರ್ ಗಾಗಿ ಇ–ಪೋರ್ಟಲ್ ಮುಖಾಂತರ **www.eproc.karnataka.gov.in** ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರ ಸಂ	ಕಾಮಗಾರಿಯ ಹೆಸರು	ಕಾಮಗಾರಿಯ ಟೆಂಡರಗಿಟ್ಟ ಮೊತ್ತ (ರೂ_ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪ್ರಾಕ್ಯೂರಮೆಂಟ ಫೀ	ಕಾಮಗಾರಿಯ ಕಾಲಾವಧಿ	ಅರ್ಹ ಗುತ್ತಿಗೆದಾರರು
1	2	3	4	5	6	7
1	Treatment of the Masonry Dam for Block no 38 to 52 below MDDL RL 486.00 M including arresting observed leakages in Drainage gallery of Concrete over flow section of Narayanpur Dam (Package-I) under DRIP Phase-II.	2171.15	21.72	ಇ–ಪ್ರಾಕ್ಯೂರಮೆಂಟ ನಂತೆ	18 ತಿಂಗಳು (ಮಳೆಗಾಲ ಒಳಗೊಂಡು)	ಭಾರತ ಸರ್ಕಾರದ/ ಇತರೆ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ಅಧೀನದಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರು

ಟೆಂಡರ್ ಪೂರ್ವಭಾವಿ ಸಭೆಗೆ ಸಂಬಂದ ಪಟ್ಟಂತೆ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:24.01.2022 ಆಗಿದ್ದು, ಪ್ರಶ್ನಾವಳಿಗಳನ್ನು ಕೇವಲ ಇ–ಪ್ರಾಕ್ಯೂರಮೆಂಟ್ ಹಾಗೂ ಪೂರ್ವಭಾವಿ ಸಭೆಯ ಅವಧಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗುವದು.

ಟೆಂಡರ್ ಪ್ರಕ್ರಿಯೆಯ ಈ ಕೆಳಗಿನಂತೆ ಇರುತ್ತದೆ.

ಕ್ರ ಸಂ	ಟೆಂಡರ್ ಪ್ರಕ್ರಿಯೆ ವಿವರ	ದಿನಾಂಕ
1	ಟೆಂಡರ್ ಪ್ರಕಟಣೆಯನ್ನು www.eproc.karnataka.gov.in ಮೂಲಕ ವೀಕ್ಷಿಸಲು ಹಾಗೂ ಇ–ಪ್ರಾಕ್ಯೂರಮೆಂಟ ಫೀ ಸಲ್ಲಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ:17.01.2022 ರಿಂದ 18.02.2022 ಸಾಯಂಕಾಲ 5.00 ವರೆಗೆ
2	ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ (ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಲೋಕೋಪಯೋಗಿ ಇಲಾಖೆ ಕಚೇರಿ ಆವರಣ, 3 ನೇ ಮಹಡಿ,ಕೆ.ಆರ್ ವೃತ್ತ,ಬೆಂಗಳೂರು ಇವರ ಕಚೇರಿಯಲ್ಲಿ)	ದಿನಾಂಕ:28.01.2022 ಬೆಳಿಗ್ಗೆ 11.00 ಗಂಟೆಗೆ
3	ಟೆಂಡರ್ ಗೆ ಸಂಬಂದಪಟ್ಟಂತೆ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ:24.01.2022, ಸಾಯಂಕಾಲ 5.00 ವರೆಗೆ
4	ಟೆಂಡರ್ ಅನ್ನು ಸಲ್ಲಿಸಲು ಕಡೆಯ ದಿನಾಂಕ	ದಿನಾಂಕ:18.02.2022, ಸಾಯಂಕಾಲ 5.00 ವರೆಗೆ
5	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ(ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಲೋಕೋಪಯೋಗಿ ಇಲಾಖೆ ಕಚೇರಿ ಆವರಣ, 3 ನೇ ಮಹಡಿ,ಕೆ.ಆರ್ ವೃತ್ತ,ಬೆಂಗಳೂರು ಇವರ ಕಚೇರಿಯಲ್ಲಿ)	ದಿನಾಂಕ:21.02.2022, ಬೆಳಿಗ್ಗೆ 11.00 ಗಂಟೆಗೆ
6	ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವದು.

ಇನ್ನೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರ್ ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಶಂಕರ್ ಹೆಚ್ ನಾಯ್ಕೋಡಿ
ಕಾರ್ಯನಿರ್ವಾಹಕ ಇಂಜಿನೀಯರ್
ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ

ಮಂಗಳೂರು ವಿಶ್ವವಿದ್ಯಾನಿಲಯ
ಸಂಖ್ಯೆ:ಮವಿ/ಅಭಿವೃದ್ಧಿವಿಭಾಗ/ಇ–ಟೆಂಡರ್/ಡಿ9 ದಿನಾಂಕ: 10–01–2022
ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗೆ, ಸಂಬಂಧಪಟ್ಟಂತೆ ಇ–ಟೆಂಡರ್/EOI ಆಹ್ವಾನಿಸಿದ್ದು ಟೆಂಡರಿನ ವಿವರಗಳು ಕೆಳಗಿನಂತಿವೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್(E-procurement portal) ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ.
Name of the tender : (1) Rate contract for the Supply of Master roll and Ink for a Period of one year. (ED/2021-22/IND515) Category: Goods, Date of publish through E-procurement:**01/01/2022 12:10:20**
(2) Construction of Audio Visual studio at MCJ department (MU/ED/MCJ/22/S7/CALL-2) Category:Service, Date of publish through E-procurement: **04/01/2022 10:27:17**
DIPR/ADM/MCA/812/21-22 dt. 10.01.2022 ಸಹಿ/– ಕುಲಸಚಿವರು

VIJAYAPUR CITY CORPORATION, VIJAYAPUR
No:VCC/ELE/LED/TN-01/2021-22/3149 Dated: 06.01.2022
E-PROCUREMENT TENDER NOTIFICATION (2nd Call)
Commissioner, City Corporation, Vijayapur invites tender from eligible bidder registered in PWD/ZP/CPD/EI/Valid Registration for the **01** streetlights PPPProject having Tender No: VCC/EE/TN-01/2020-21-CALL-2 through E-Procurement portal. For more details regarding the Tender process,terms and conditions,refer website www.eproc.karnataka.gov.in (download and Refer Tender Document RFP) Or Contact PWD section of Vijayapur City Corporation, Vijayapur.
1) Last date for Tender submission:**18.02.2022**
Sd/- Commissioner, City Corporation, Vijayapur
ವಾಸಾಸಂಇ/ವಿಜಯಪುರ/455/ಎಂಸಿಎ/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194–230102, ಫ್ಯಾಕ್ಸ್:08194–230102, ಇ–ಮೇಲ್ :eeubp.d5cta@gmail.com
ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಟೆಂಡರ್/2021–22/ 1376, 1377, 1378 ದಿನಾಂಕ:04.1.2022
ಸಂಕ್ಷಿಪ್ತ ಟೆಂಡರ್ 1ನೇ ತಿದ್ದುಪಡಿ ಪ್ರಕಟಣೆ
ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ **ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ ಟೆಂಡರ್/2021–22/1321, 1322&1323 ದಿನಾಂಕ:24.12.2021ರಲ್ಲಿ 03 ಕಾಮಗಾರಿಗಳ** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಇಂಡೆಂಟ್ ನಂ. VJNL/2021-22/RD/WORK_INDENT1867, ಇಂಡೆಂಟ್ ನಂ. VJNL/2021-22/RD/WORK_INDENT1868 ಮತ್ತು ಇಂಡೆಂಟ್ ನಂ. VJNL/2021-22/RD/WORK_INDENT1869 ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಮಾರ್ಪಾಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯ ಮಾರ್ಪಾಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. 1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:10.01.2022 ಸಂಜೆ 5.00 ಗಂಟೆಯವರೆಗೆ 2) ಪ್ರಿ–ಬಿಡ್ ಸಭೆಯ ದಿನಾಂಕ:11.01.2022 ರಂದು ಬೆಳಗ್ಗೆ 11.00 ಗಂಟೆಗೆ ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ, ವಲಯ ಚಿತ್ರದುರ್ಗ ಕಛೇರಿಯಲ್ಲಿ ನಿಗಧಿಪಡಿಸಲಾಗಿದೆ 3) **ಟೆಂಡರ್‌ನ್ನು ದಿನಾಂಕ: 13.01.2022 ರಂದು ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ 4) ತಾಂತ್ರಿಕ ಬಿಡ್ಡುಗಳನ್ನು ದಿನಾಂಕ:14.01.2022** ರಂದು ಸಂಜೆ 04.30 ಗಂಟೆ ನಂತರ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ" ತೆರೆಯಲಾಗುವುದು. ಉಳಿದ ಉಪ ವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
DIPR/CTA/MCA/738/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭಮೇಯೋ, ವಿಭಾಗ ನಂ.5, ಚಿತ್ರದುರ್ಗ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಅರ್ಹ ಬಿಡ್‌ದಾರರಿಂದ **ಬೆಂಗಳೂರು ಗ್ರಾಮೀಣ ವೃತ್ತದ ಕೆಲವು ಪ್ರದೇಶಗಳಲ್ಲಿ ಎಲ್.ಟಿ ವಿದ್ಯುತ್ ಜಾಲತಾಣವನ್ನು ಬಲಪಡಿಸಲು ಹಾಲಿ ಇರುವ ಎಲ್.ಟಿ ಮೇಲು ಮಾರ್ಗವನ್ನು ಎಲ್.ಟಿ ಎ.ಬಿ ಕೇಬಲ್‌ಗೆ ಬದಲಾಯಿಸುವ ಕಾಮಗಾರಿ**ಯನ್ನು ಎರಡು ವರ್ಷಗಳ ಅವಧಿಗಾಗಿ ಐಟಂವಾರು ಖಾಯಂದರ ಗುತ್ತಿಗೆ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಶೇಕಡವಾರು ಮೇರೆಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿಚಾರಣೆ ಸಂಖ್ಯೆ	ವಿಭಾಗ
1	ಬೆಸ್ಕಾಂ/ಬಿಸಿಪಿ–1343/2021–22/ನಂದಗುಡಿ	ಹೊಸಕೋಟೆ
2	ಬೆಸ್ಕಾಂ/ಬಿಸಿಪಿ–1344/2021–22/ಹೊಸಕೋಟೆ	ಹೊಸಕೋಟೆ
3	ಬೆಸ್ಕಾಂ/ಬಿಸಿಪಿ–1345/2021–22/ದೇವನಹಳ್ಳಿ	ಹೊಸಕೋಟೆ
4	ಬೆಸ್ಕಾಂ/ಬಿಸಿಪಿ–1346/2021–22/ಆವಲಹಳ್ಳಿ	ಹೊಸಕೋಟೆ
5	ಬೆಸ್ಕಾಂ/ಬಿಸಿಪಿ–1347/2021–22/ದಾಬಸ್‌ಪೇಟೆ	ನೆಲಮಂಗಲ
6	ಬೆಸ್ಕಾಂ/ಬಿಸಿಪಿ–1348/2021–22/ನೆಲಮಂಗಲ	ನೆಲಮಂಗಲ

ಬಿಡ್ ದಸ್ತಾವೇಜುಗಳ ಲಭ್ಯತೆ: 12.01.2022ರ ನಂತರದಿಂದ 27.01.2022ರ 15:00 ಗಂಟೆವರೆಗೆ. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 27.01.2022, 15:00 ಗಂಟೆ. **ಬಿಡ್ ದಸ್ತಾವೇಜು ತೆರೆಯುವುದು:** 28.01.2022, 15:15 ಗಂಟೆಗೆ.
ಎಲ್ಲಾ ರೀತಿಯ ಪಾವತಿ ಅಂದರೆ ಟೆಂಡರ್ ದರ ಮತ್ತು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮೂಲಕ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ 080–25501216 ಮತ್ತು 080–25501227ಗಳಿಗೆ ಸಂಪರ್ಕಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ
ಸಹಿ/– ಪ್ರಧಾನ ವ್ಯವಸ್ಥಾಪಕರು (ಎ.) ಖರೀದಿ, ಬೆವಿಕಂ

ಕೋವಿಡ್: ಆತಂಕ ಬೇಡ, ಇರಲಿ ಎಚ್ಚರ



ಕೋವಿಡ್-19ರ ವಿರುದ್ಧ ಗೆಲುವು ಶತಸಿದ್ಧ. ಅನಗತ್ಯ ಆತಂಕಕ್ಕೆ ಒಳಗಾಗದಂತೆ ತಾಳ್ಮೆಯಿಂದ, ಜಾಣ್ಮೆಯಿಂದ, ಸರಿಯಾದ ದಾರಿಯಲ್ಲಿ ಇದನ್ನು ನಿರ್ವಹಿಸಿದರೆ ಬಹಳ ಬೇಗ ಜಗತ್ತು ಇದರಿಂದ ಮುಕ್ತವಾಗುತ್ತದೆ.



ಡಾ. ಕಿರಣ್ ವಿ. ಎಸ್.

'ಈ ಕೋವಿಡ್ ವೈರಸ್‌ನಿಂದ ಮುಕ್ತಿಯೇ ಇಲ್ಲವೇ? ಒಂದರ ಹಿಂದೆ ಮತ್ತೊಂದು ಹೆಸರಿನ ತಳಿಗಳು; ಇನ್ನೊಂದು ಅಲೆ ಎಂದು ಅಪ್ಪಳಿಸಲಿದೆಯೋ ಎಂಬ ಆತಂಕ; ಮಕ್ಕಳಿಗೆ ಏನಾಗುವುದೋ ಎಂಬ ಭಯ; ಪ್ರತಿ ಬಾರಿ ಲಾಕ್‌ಡೌನ್ ಮಾಡಿದಾಗಲೂ "ಸರ್ಕಾರ ನಮ್ಮಿಂದ ಏನನ್ನೋ ಮುಚ್ಚಿಡುತ್ತಿದೆ" ಎಂಬ ಗುಮಾನಿ; ಎರಡು ಬಾರಿ ಲಸಿಕೆ ಸಾಕೋ ಅಥವಾ ಇನ್ನೆಷ್ಟು ಬಾರಿ ಬೇಕೋ ಎಂದು ತಿಳಿಯದ ಸಂದಿಗ್ಧ; ಇಷ್ಟೆಲ್ಲಾ ಮಾಡಿದರೂ ಯಾರ್ಯಾರಿಗೋ ಕಾಯಿಲೆ ಬಂದಿದೆ ಎಂಬ ಸುದ್ದಿಗಳು. ಸಾಕಾಗಿ ಹೋಗಿದೆ; ಬದುಕು ಸಹಜವಾಗಲು ಇನ್ನೆಷ್ಟು ವರ್ಷಗಳು ಬೇಕೋ ತಿಳಿಯದು' ಎಂಬ ಹತಾಶೆ ಒಬ್ಬಿಬ್ಬರದ್ದಲ್ಲ. ಇದರ ಮೇಲೆ ಅಬ್ಬರಿಸುವ ಟಿ.ವಿ. ಸುದ್ದಿವಾಹಿನಿಗಳು, ಫೋನಿನ ಮೂಲಕ ನೇರವಾಗಿ ಮೆದುಳನ್ನೇ ತಲುಪುವ ಸಾಮಾಜಿಕ ಜಾಲತಾಣಗಳ ವದಂತಿಗಳು ಭೀತಿಯನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ವಾಸ್ತವದ ಅರಿವು ಇಲ್ಲದಾಗ ಗೊಂದಲ, ತಳಮಳ ಸಹಜ. ಇಂತಹ ವಿಷಮ ವಾತಾವರಣದಲ್ಲಿ ಮನಸ್ಸಿನ ಶಾಂತಿ, ನೆಮ್ಮದಿಗಳನ್ನು ಕಾಪಾಡಿಕೊಳ್ಳುವ ಮಾರ್ಗಗಳೇನು?

'ಕೋವಿಡ್-19' ರ ಬಗ್ಗೆ ಎಚ್ಚರವಿರಲಿ, 'ಆತಂಕ ಬೇಡ' ಎಂದು ತಜ್ಞರು ಮೊದಲನೆಯ ದಿನದಿಂದಲೂ ಹೇಳುತ್ತಿದ್ದಾರೆ. ಆದರೆ, ಸಮಾಜದ ಸ್ಥಿತಿ ಇದಕ್ಕೆ ಸಂಪೂರ್ಣ ವಿಲೋಮವಾಗಿದೆ. ಎಚ್ಚರಿಕೆಗಳನ್ನು ಗಾಳಿಗೆ ತೂರಿ, 'ಮಾಡಬೇಡಿ' ಎಂಬ ಕೆಲಸಗಳನ್ನು ಬೇಕೆಂದೇ ಮಾಡುತ್ತಾ, ಅಗತ್ಯಕ್ಕಿಂತ ಹೆಚ್ಚಿನ ಆತಂಕಕ್ಕೆ ಒಳಗಾಗುವುದು ಬಹುತೇಕರ ದಿನಚರಿ. 'ಅಶಿಸ್ತು ಮತ್ತು ಆತಂಕ ಒಟ್ಟಿಗೆ ಸಾಗುತ್ತವೆ' ಎನ್ನುವ ಮಾತು ವಿಪತ್ತಿನ ಕಾಲದಲ್ಲಿ ಸಾಬೀತಾಗುತ್ತದೆ. ಜೀವನದಲ್ಲಿ ಶಿಸ್ತಿನ ಅಗತ್ಯವನ್ನು ಕೋವಿಡ್-19 ಎನ್ನುವ ಜಾಗತಿಕ ವಿಪತ್ತು ಇನ್ನಿಲ್ಲದಂತೆ ಒತ್ತಿ ಹೇಳಿದೆ; ಪ್ರತಿಯೊಂದು ತಳಿ, ಪ್ರತಿಯೊಂದು ಅಲೆ ಮತ್ತೆ ಮತ್ತೆ ಹೇಳುತ್ತಲೇ ಇವೆ. ಪ್ರಸ್ತುತ ಕೋವಿಡ್ ತಳಿಯೂ ಇದಕ್ಕೆ ಹೊರತಲ್ಲ.

ಕಾಯಿಲೆ ಯಾವುದಾದರೂ ಇರಲಿ ಅದರ ತೀವ್ರತೆ ಹೇಗಾದರೂ ಇರಲಿ – ನಮ್ಮ ಮನಸ್ಸು ಮತ್ತು ಚಿಂತನೆಗಳನ್ನು ಅದಕ್ಕೆ ಹೊಂದಿಸಿಕೊಳ್ಳುವುದು ಮುಖ್ಯ. 'ನಾಳೆ ಏನಾಗಬಹುದು' ಎನ್ನುವ ಚಿಂತೆ ನಮ್ಮ ಇಂದಿನ ದಿನವನ್ನು ಕೆಡಿಸುತ್ತದೆ. ಹಾಗಾಗಿ, ವರ್ತಮಾನದಲ್ಲಿ ಜೀವಿಸುವುದು ಮುಖ್ಯ. 'ಈ ದಿನ, ಈ ಗಳಿಗೆ ಕಾಯಿಲೆ ಬಾರದಂತೆ ಮಾಡಲು ಏನು ಮಾಡಬಹುದು' ಎನ್ನುವ ಪ್ರಶ್ನೆಗೆ ಉತ್ತರಿಸಿ, ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಸೂಕ್ತ. ಸಮಾಜದಲ್ಲಿ ಕಾಯಿಲೆ ಸಾಕಷ್ಟು ಹರಡುತ್ತಿರುವ ವೇಳೆಯಲ್ಲಿ ಎಲ್ಲಾದರೂ ಜನಜಂಗುಳಿಯಲ್ಲಿ ಹೋಗಲು, ಸಮಾರಂಭಗಳಲ್ಲಿ ಭಾಗವಹಿಸಲು ಮನಸ್ಸು ಹಾತೊರೆದಾಗ, ಈ ಪ್ರಶ್ನೆ ನಮ್ಮನ್ನು ಎಚ್ಚರದಿಂದ ಇರುವಂತೆ ಮಾಡುತ್ತದೆ. ಈ ಸರಳವಾದ 'ವರ್ತಮಾನದಲ್ಲಿ ಚಿಂತಿಸುವ ಪ್ರಕ್ರಿಯೆ' ಕೋವಿಡ್-19 ಹರಡುವ ಸಮಸ್ಯೆಯಿಂದ ನಮ್ಮನ್ನು ದೂರವಿಡಲು ಸಹಕಾರಿ.

ವಿಪರೀತ ಮಾಹಿತಿ ಹೆಕ್ಕುವಿಕೆ ಗೊಂದಲಗಳಿಗೆ ದೂಡುತ್ತದೆ. 'ಅತಿ ಸರ್ವತ್ರ ವರ್ಜಯೇತ್' ಎಂಬ ಮಾತು ಇಲ್ಲಿ ಅನ್ವಯವಾಗುತ್ತದೆ. ಅಂತರ್ಜಾಲದ ಮೇಲೆ ನಿಂತಿರುವ ಪ್ರಸ್ತುತ ಸುದ್ದಿವ್ಯವಸ್ಥೆ ಕ್ಷಣಾರ್ಧದಲ್ಲಿ ನಮಗೆ ಮಾಹಿತಿಯ ಮಹಾಪೂರವನ್ನೇ ಒದಗಿಸುತ್ತದೆ. ಇದರಲ್ಲಿ ಕಾಳು ಯಾವುದು; ಜೊಳ್ಳು ಯಾವುದು; ಸತ್ಯ ಎಷ್ಟು; ಉತ್ಪ್ರೇಕ್ಷೆ ಎಷ್ಟು ಎಂಬುದನ್ನು ನಿರ್ಧರಿಸುವುದು ಎಲ್ಲರಿಗೂ ಸುಲಭವಲ್ಲ. ಅನಧಿಕೃತ, ಅಸತ್ಯ ಮಾಹಿತಿ ಎಂದಿಗೂ ಅಪಾಯಕಾರಿಯೇ. ಮಾಹಿತಿಯ ಪ್ರಮಾಣ ಹೆಚ್ಚಾದಷ್ಟೂ ತಪ್ಪು ಮಾಹಿತಿ ಸೇರುವ ಸಾಧ್ಯತೆ ಅಧಿಕ. ಹೀಗಾಗಿ, ಕೋವಿಡ್-19 ಕಾಯಿಲೆಯ ಬಗ್ಗೆ ಅಧಿಕೃತ ಮಾಹಿತಿ ಪಡೆಯುವುದು ಮುಖ್ಯ. ವಿಶ್ವಾಸಾರ್ಹ ಸರ್ಕಾರಿ ಜಾಲತಾಣಗಳು, ಪರಿಚಯದ ತಜ್ಞ ವೈದ್ಯರು ಈ ಬಗ್ಗೆ ನೆರವಾಗಬಲ್ಲರು. ಹೆಚ್ಚಿನ ಜನರನ್ನು ಆಕರ್ಷಿಸಲು ರೋಚಕ ಮಾಹಿತಿ ನೀಡುವ ಪೈಪೋಟಿಯಲ್ಲಿ ಮನಸ್ಸಿಗೆ ಘಾಸಿಯಾಗುವ ಸುದ್ದಿವಾಹಿನಿಗಳಿಂದ ಸಂಪೂರ್ಣವಾಗಿ ದೂರವಿರುವುದು ಲೇಸು.

ಜೀವನದಲ್ಲಿ ಶಿಸ್ತಿನ ಅಗತ್ಯವನ್ನು ಕೋವಿಡ್-19 ಎನ್ನುವ ಜಾಗತಿಕ ವಿಪತ್ತು ಇನ್ನಿಲ್ಲದಂತೆ ಒತ್ತಿ ಹೇಳಿದೆ

ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಕೋವಿಡ್-19ಕ್ಕಿಂತ ತೀವ್ರವಾದ, ಅಪಾಯಕಾರಿಯಾದ ನೂರಾರು ಕಾಯಿಲೆಗಳ ಸಂಕ್ರಮಣವನ್ನು ಈ ಪ್ರಪಂಚ ಈಗಾಗಲೇ ಕಂಡಿದೆ. ಅವುಗಳಿಂದ ಗೆದ್ದವರ ಪೀಳಿಗೆಯವರು ಪ್ರಪಂಚವನ್ನು ಈಗ ಮುನ್ನಡೆಸುತ್ತಿದ್ದಾರೆ. ಈ ಹಿಂದೆ ಆದಂತೆಯೇ ಈಗಲೂ ಕೋವಿಡ್-19ರ ವಿರುದ್ಧ ಗೆಲುವು ಶತಸ್ಸಿದ್ಧ. ಅನಗತ್ಯ ಆತಂಕಕ್ಕೆ ಒಳಗಾಗದಂತೆ ತಾಳ್ಮೆಯಿಂದ, ಜಾಣ್ಮೆಯಿಂದ, ಸರಿಯಾದ ದಾರಿಯಲ್ಲಿ ಇದನ್ನು ನಿರ್ವಹಿಸಿದರೆ ಬಹಳ ಬೇಗ ಇದರಿಂದ ಜಗತ್ತು ಮುಕ್ತವಾಗುತ್ತದೆ. ಈ ವಾಸ್ತವದ ಅರಿವು ಎಲ್ಲರಲ್ಲೂ ಮೂಡಬೇಕು; ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪ್ರಯತ್ನಶೀಲರಾಗಬೇಕು. ಈ ರೀತಿಯ ಸಾಂಘಿಕ ಪ್ರಯತ್ನದಿಂದ 'ಕೋವಿಡ್-19' ಎಂಬ ವಿಪತ್ತನ್ನು ಬೇಗನೆ ಗೆಲ್ಲಬಹುದು.

ಕೋವಿಡ್-19ರ ಅನುಕ್ರಮ ತಳಿಗಳು ಯಾವ ರೀತಿ ವರ್ತಿಸುತ್ತಿವೆ ಎಂಬುದನ್ನು ಗಮನಿಸಿದರೆ, ವೈರಸ್ ಭವಿಷ್ಯದಲ್ಲಿ ರೂಪಾಂತರ ಹೊಂದಬಹುದಾದ ಪ್ರಕ್ರಿಯೆಯನ್ನು ಊಹಿಸಬಹುದು. ಈ ಅಧ್ಯಯನಗಳಿಂದ ವಿಜ್ಞಾನಿಗಳು ಮುಂದಿನ ದಿನಗಳನ್ನು ಕಾಯಿಲೆ ಮುಕ್ತವಾಗಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಹಾದಿಯ ಪ್ರತಿಯೊಂದು ಹೆಜ್ಜೆಯೂ ನಮ್ಮನ್ನು ಸುರಕ್ಷಿತವಾಗಿಸುವತ್ತ ಮುನ್ನಡೆಸುತ್ತಿವೆ. ಈ ಅಧ್ಯಯನಗಳ ಫಲಗಳನ್ನು ಈಗಾಗಲೇ ನಾವು ನೋಡುತ್ತಿದ್ದೇವೆ. ಕಾಯಿಲೆ ಪತ್ತೆ ಮಾಡುವ ವಿಧಾನಗಳು, ಲಸಿಕೆಗಳು, ಔಷಧಗಳು, ಜೀವನಶೈಲಿಯಲ್ಲಿನ ಬದಲಾವಣೆಗಳು ಭವಿಷ್ಯದಲ್ಲಿ ಬರಬಹುದಾದ ಮತ್ತಷ್ಟು ಜಾಗತಿಕ ವಿಪತ್ತುಗಳನ್ನು ಎದುರಿಸುವ ಸಾಮರ್ಥ್ಯವನ್ನು ನಮಗೆ ನೀಡುತ್ತಿವೆ. ಕಷ್ಟಗಳು ಕಲಿಸುವುದನ್ನು ಸುಖ ಕಲಿಸಲಾರದು. ಪ್ರಸ್ತುತ ಕೋವಿಡ್-19 ಇದಕ್ಕೆ ಪ್ರಬಲ ಉದಾಹರಣೆ.

ಕಳೆದ ಎರಡು ವರ್ಷಗಳು ನಮಗೆ ಅನೇಕ ಜೀವನಮೌಲ್ಯಗಳನ್ನು ಕಲಿಸಿವೆ. ಕುಟುಂಬದ ಮಹತ್ವ; ಸಮಾಜದ ಬಗ್ಗೆ ಕಳಕಳಿ; ಅಪರಿಚಿತರಿಗೂ ನೆರವಾಗುವ ಮನೋಭಾವ; ಕಷ್ಟಕರ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ವಿಧಾನಗಳು; ಕಲಿಕೆಯ ಹೊಸ ಸಾಧ್ಯತೆಗಳು; ನಮ್ಮ ಸ್ಥಾಪಿತ ಮನೋವೃತ್ತಿಗಳನ್ನು ಪುನಃ ಪರಿಶೀಲಿಸುವ ಗುಣ; ಆಪ್ತರ ವಿಯೋಗವನ್ನು ಸಹಿಸುವ ಸ್ಥೈರ್ಯ; ಮಾನಸಿಕ ಧೃಢತೆ – ಮುಂತಾದ ಪಾಠಗಳು ಜೀವನದತ್ತ ನಮ್ಮ ನಿಲುವುಗಳನ್ನು ಬದಲಾಯಿಸಿವೆ. ಎಂತಹ ವಿಪತ್ತಿನ ಸಂದರ್ಭಗಳಲ್ಲೂ ಆಶಾಭಾವನೆ ಮತ್ತು ಧನಾತ್ಮಕ ಚಿಂತನೆಗಳು ನಮ್ಮ ವರ್ತಮಾನವನ್ನು ಸಹ್ಯವಾಗಿಸಿ, ಭವಿಷ್ಯವನ್ನು ಸುಂದರವಾಗಿಸುತ್ತವೆ. ಪ್ರಸ್ತುತ ವೈರಸ್ ತಳಿ ಕೋವಿಡ್-19ರ ವಿಪತ್ತಿನ ಅಂತ್ಯದ ಆರಂಭವನ್ನು ಸೂಚಿಸುತ್ತಿದೆ ಎಂದು ತಜ್ಞರ ಅಭಿಮತ. ಈ ಮಾತು ನಿಜವಾಗಲಿ ಎಂಬುದು ಪ್ರತಿಯೊಬ್ಬರ ಮನಸ್ಸಿನ ಆಶಯ.

(ಲೇಖಕ: ವೈದ್ಯ)

ಬಂಧನವೋ ಅವಕಾಶವೋ?!

ರಘು ವಿ.

ಲಾಕ್‌ಡೌನ್ ಎಂದ ಕೂಡಲೇ ಬಹುತೇಕ ಮಂದಿಗೆ ನಿರಾಶೆಯ ಮೋಡ ಕವಿಯುತ್ತದೆ. ಇದು ಸಹಜ ಕೂಡ. ಅಂದಿನಂದಿನ ಬದುಕಿಗೆ ಹೊಂದಿಕೊಂಡವರ ಪಾಡು ಕಷ್ಟವೇ. ಆದರೆ ಯಾರು ಮಳೆಗಾಲಕ್ಕೆ ಆಹಾರ ಸಂಗ್ರಹಿಸಿದ ಇರುವೆಯಂತೆ ಪುಡಿಗಾಸನ್ನಾದರೂ ಉಳಿಸಿದ್ದಾರೋ ಅವರು ಇದ್ದುದ್ದರಲ್ಲಿ ಕಷ್ಟದ ನದಿ ದಾಟುತ್ತಾರೆ. ಆದರೆ ಯಾರು ಅಧಿಕ ಆದಾಯವೇ ಇದ್ದರೂ ಅನಿಯಮಿತ ಖರ್ಚಿಗೆ ಬಲಿಯಾಗಿರುತ್ತಾರೋ ಅವರು ಕಷ್ಟಕ್ಕೆ ಸಿಲುಕುತ್ತಾರೆ. ಅದು ಹಾಗಾದರೆ ಮತ್ತೊಂದು ವರ್ಗವಿದೆ. ಅದು ಈ ಅವಕಾಶವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಆರ್ಥಿಕವಾಗಿ ಬೆಳೆಯಲು ಮತ್ತು ವೈಯಕ್ತಿಕ ಕೌಶಲವನ್ನು ಬೆಳೆಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ಉದಾಹರಣೆಗೆ, ಆನ್‌ಲೈನ್ ಉದ್ಯಮ ಈ ಕಾಲದಲ್ಲಿ ಹೆಚ್ಚು ಲಾಭ ದಾಖಲಿಸಿದೆ. ಅನೇಕ ಹೊಸ ಬಗೆಯ ಆನ್‌ಲೈನ್ ತರಗತಿಗಳು ಆರಂಭವಾಗಿವೆ. ಜನರು ಹೊಸ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಹೊಸ ಭಾಷೆಗಳನ್ನು ಕಲಿಯಲು ಆರಂಭಿಸಿದವರು, ಸಂಗೀತ, ಬರವಣಿಗೆ ರೂಢಿಸಿಕೊಂಡವರು ಇದ್ದಾರೆ. ಲಾಕ್‌ಡೌನ್ ಶಾಪವೋ ವರವೋ ಎಂಬುದು ನಮ್ಮ ನಮ್ಮ ಮನಃಸ್ಥಿತಿಗೆ ಅನುಗುಣವಾಗಿ ನಿರ್ಧರಿತವಾಗುತ್ತದೆ.

ಮನುಷ್ಯ ನಿಜವಾಗಿಯೂ ಬೆಳೆಯಬೇಕಾದರೆ ಹೊರಮುಖವಾದ ಅವನ ಮನಸ್ಸು ಅಂತರ್ಮುಖವಾಗಬೇಕು. 'ಹುತ್ತಗಟ್ಟದೆ ಚಿತ್ತ' ವಾಲ್ಮೀಕಿಯಾಗಲೀ ರಾಮಾಯಣವಾಗಲೀ ಹುಟ್ಟುವುದಿಲ್ಲ. ಜಗತ್ತಿಗೆ ವಿಮುಖವಾಗಿ ನಿಲ್ಲುವುದೇ ಒಂದು ತಪಸ್ಸು. ಇದು ನಮ್ಮ ಸ್ವ-ಇಚ್ಛೆಯಿಂದಾದರೆ ಬಹಳ ಸಂತೋಷ. ಇಲ್ಲವಾದರೆ ಕಾಲಘಟ್ಟದಲ್ಲಿ ಅದು ಬಲವಂತವಾಗಿಯಾದರೂ ನಡೆಯುತ್ತದೆ. ರೋಗ, ವೃದ್ಧಾಪ್ಯ ಇವೆಲ್ಲವೂ ಇದರತ್ತ ಒತ್ತಾಯದ ತಳ್ಳುವಿಕೆ. ಇದನ್ನು ಒಪ್ಪಿಕೊಳ್ಳದೆ ತಹತಹಿಸಿ ಒದ್ದಾಡುವುದಕ್ಕಿಂತ ಜಂಜಡವಿಲ್ಲದ ಕನಿಷ್ಠ ಸಂಪರ್ಕದಲ್ಲಿ ಬದುಕಿನ ಅಂತರ್ದನಿಯನ್ನು ಕೇಳಲು ಇವು ಒಂದು ಅವಕಾಶವೆಂದು ತಿಳಿಯಬೇಕು. ಲಾಕ್‌ಡೌನ್ ಕೂಡ ಇದಕ್ಕೆ ಒಂದು ಪೂರ್ವತಯಾರಿ ಎಂದು ಭಾವಿಸಬೇಕು. ಮನುಷ್ಯ ಒಂಟಿತನವನ್ನು ಇಷ್ಟಪಡುವುದಿಲ್ಲ. ಹಾಗೆ ದ್ವೀಪದಂತೆ ಇರಲು ಮಾನಸಿಕ ಸಿದ್ಧತೆ ಬೇಕು. ಜಗತ್ತಿನಿಂದ ತನ್ನನ್ನು ಬೇರ್ಪಡಿಸುವ ಕ್ರಮವೇ ಲಾಕ್‌ಡೌನ್ ಎಂದು ಮನಸ್ಸು ಭಾವಿಸಿ ರಚ್ಚೆ ಹಿಡಿಯುತ್ತದೆ. ಆದರೆ ಯಾವ ಮನಸ್ಸಿಗೆ ಶಿಸ್ತಿದೆಯೋ ಅದು ಈ ಬಗೆಯ ಕ್ರಮಗಳನ್ನು ಸಂತೋಷದಿಂದ ಒಪ್ಪಿಕೊಂಡು ತನ್ನ ಕಾರ್ಯದಲ್ಲಿ ಮಗ್ನವಾಗಿಬಿಡುತ್ತದೆ. ಯಾರಿಗೆ ಒಂಟಿತನ ಸಹನೀಯವಲ್ಲ ಎನಿಸುತ್ತದೋ ಅವರು ಸಂಗವನ್ನೂ ಗದ್ದಲವನ್ನೂ ಬಯಸಿ ಖಿನ್ನರಾಗುತ್ತಾರೆ.

ಇದೀಗ ಲಾಕ್‌ಡೌನ್‌ನ ಆತಂಕ ಮತ್ತೆ ಎದುರಾಗಿದೆ. ಆದರೆ ಇದಕ್ಕೆ ಹೆದರಬೇಕಿಲ್ಲ, ಸರಿಯಾಗಿ ಬಳಸಿಕೊಂಡರೆ ಇದು ನಮ್ಮ ಬೆಳವಣಿಗೆಗೆ ಪೂರಕವೂ ಆಗಬಹುದು.

ನಮ್ಮಲ್ಲಿ ಕೆಲವರಿದ್ದಾರೆ, ಒಂಟಿಯಾಗಿರಲು ಹೆದರಿ ವಾಚಾಳಿಗಾಗಿ ಹಂಬಲಿಸುತ್ತಾರೆ. ಒಂಟಿತನದ ಮೌನ ಅಂತಹವರ ಕಣ್ಣುಗಳಿಗೆ ಅವರದೇ ಬೆತ್ತಲನ್ನು ತೋರಿ ಅವರು ಅದರಿಂದ ಪಾರಾಗಲು ಪರಿತಪಿಸುವಂತಾಗುತ್ತದೆ. ಮತ್ತೆ ಕೆಲವರಿದ್ದಾರೆ, ಯಾವುದೇ ತಿಳಿವಳಿಕೆಯಿಲ್ಲದೆ ಅಥವಾ ಮುಂಗಾಣ್ಕೆ ಇಲ್ಲದೆ ತಮಗೇ ಅರ್ಥವಾಗದ ಸತ್ಯವನ್ನು ಅನಾವರಣಗೊಳಿಸಲು ಪ್ರಯತ್ನಿಸುತ್ತಾರೆ. ಮತ್ತೆ ಕೆಲವರಿದ್ದಾರೆ, ಅವರೊಳಗೆ ಸತ್ಯವಿದೆ. ಆದರೆ ಅದನ್ನು ಅವರು ಮಾತುಗಳಲ್ಲಿ ಹೇಳುವುದಿಲ್ಲ. ಇವರ ಎದೆಯೊಳಗೆ ಚೈತನ್ಯವು ಮೌನದ ತಾಳದೊಂದಿಗೆ ನೆಲೆಸಿರುತ್ತದೆ'. ಇವು ಖಲೀಲ್ ಗಿಬ್ರಾನನ ಮಾತುಗಳು.

ಎಲ್ಲ ಸವಲತ್ತುಗಳು ಇದ್ದರೂ ಮನುಷ್ಯ ಅದೇಕೆ ಲಾಕ್‌ಡೌನ್‌ನಂಥ ಪರಿಸ್ಥಿತಿಗೆ ಹೆದರುತ್ತಾನೆ ಎಂಬುದಕ್ಕೆ ಸ್ಪಷ್ಟ ಉತ್ತರ ಮೇಲಿದೆ. ರೂಮಿ ಇದನ್ನು ಇನ್ನೂ ಸೊಗಸಾಗಿ 'ಮೌನ ಭಗವಂತನ ಭಾಷೆ, ಉಳಿದೆಲ್ಲವು ಕಳಪೆ ಅನುವಾದ' ಎಂದುಬಿಡುತ್ತಾನೆ. ಮನುಷ್ಯ ಗದ್ದಲದ ಜಗದೊಳಗೆ ಮೌನಕ್ಕೂ ಏಕಂಗಿತನಕ್ಕೂ - ಇವೆಲ್ಲವುಗಳಿಗೂ ಮಾನಸಿಕವಾಗಿ ಸಿದ್ಧನಿರಬೇಕಾದ್ದು ಮುಖ್ಯ. 'ಬುದ್ಧಿಮಾತಿದು ನಿನಗೆ: ಸಿದ್ಧನಿರು ಸಕಲಕ್ಕಂ, ಎದ್ದು ಕುಣಿಯಲಿ ಕರ್ಮ, ದೈವ ನಿದ್ರಿಸಲಿ, ಅದ್ಭುತಗಳರಿದಲ್ಲ; ಭವ್ಯಕ್ಕೆ ಹದ್ದಿಲ್ಲ, ಸಿದ್ಧನಾಗೆಲ್ಲಕಂ' ಎಂದಿದ್ದಾರೆ, ಕಗ್ಗದ ಕವಿ. ಲಾಕ್‌ಡೌನ್ ಸಮಯದಲ್ಲಿ ದಿನಕ್ಕೊಂದು ಕಗ್ಗ ಬಾಯಿಪಾಠ ಮಾಡಿಕೊಂಡರೂ ಜೀವನದ ಸೊಗಸು ಹೆಚ್ಚಿದಂತೆ ಅಲ್ಲವೇ?

'ಲಾಕ್‌ಡೌನ್ ಕಾರಣದಿಂದ ಮಗ ಶಾಲೆಗೆ ಹೋಗದೆ ಮನೆಯಲ್ಲಿ ಆನ್‌ಲೈನ್ ಪಾಠ ಕೂಡ ಕೇಳದೆ ಶುದ್ಧ ಶುಂಠಿಯಾಗುತ್ತಿದ್ದಾನೆ ನೋಡಿ...' ಪೋಷಕರೊಬ್ಬರ ಅಹವಾಲು. ಆದರೆ ಆ ವಯಸ್ಸಿನ ಮಕ್ಕಳು ಸುಮ್ಮನಿರುವುದಾದರೆ ಅದು ಕಾಯಿಲೆಯೇ. ವಯೋಸಹಜ ಚೇಷ್ಟೆ, ಚಂಚಲತೆ ಇರಬೇಕು, ಅದೇ ಆರೋಗ್ಯ. 'ಹೌದೇ? ಅವನು ಸಮಯವನ್ನು ಹೇಗೆ ಕಳೆಯುತ್ತಾನೆ?' ನಾನು ಕೇಳಿದೆ, 'ಯಾವ ವಿಷಯದಲ್ಲಿ ಅವನಿಗೆ ಆಸಕ್ತಿ?' ಎಂದೂ ಕೇಳಿದೆ. 'ಅವನಿಗೆ ಶಾಲೆಯ ಯಾವ ವಿಷಯದಲ್ಲಿಯೂ ಆಸಕ್ತಿಯಿಲ್ಲ. ಆದರೆ ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಸಮಯ ಕಳೆಯುತ್ತಾನೆ. ಗಣಿತ ಕಂಡರಂತೂ ಆಗುವುದೇ ಇಲ್ಲ' ಮತ್ತೆ ದೂರು. ನನಗೂ ಕೊಂಚ ಆತಂಕ ಎನಿಸಿತು. ಮೊಬೈಲ್ ಗೀಳು ಬಿಡಿಸುವುದು ಕೊಂಚ ಸವಾಲಿನ ಕೆಲಸ. 'ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಏನು ಮಾಡುತ್ತಿರುತ್ತಾನೆ?' ತಿರುಗಿ ಕೇಳಿದೆ. 'ಓ, ಅದು ಪ್ರೊಗ್ರಾಮಿಂಗ್ ಕಲಿಯುತ್ತಿದ್ದಾನೆ, ಜೊತೆಗೆ ಆ್ಯಪ್‌ಗಳನ್ನೂ ಗೇಮ್‌ಗಳನ್ನೂ ತಯಾರಿಸುತ್ತಿರುತ್ತಾನೆ' ಎಂದರು. 'ಎಂತಹ ಅದೃಷ್ಟಶಾಲಿಗಳು ನೀವು! ಅವನು ಇಂದಿನ ಜಗತ್ತಿಗೆ ಹೊಂದಿಕೊಳ್ಳುವ ಎಲ್ಲ ಲಕ್ಷಣಗಳನ್ನು ತೋರಿಸುತ್ತಿದ್ದಾನೆ. ಖುಷಿಪಡಿ. ಗಣಿತ ಕಲಿಯದಿದ್ದರೇನು, ಅವನ ತರ್ಕ, ಆಲೋಚನೆ ಚಂದವಿದ್ದರೆ ಮಾತ್ರ ಅವನು ಹಾಗೆಲ್ಲ ಕಂಪ್ಯೂಟರ್, ಮೊಬೈಲ್ ಬಳಸಬಲ್ಲ' ಎಂದು ಸಮಾಧಾನ ಹೇಳಿದೆ.

ಲಾಕ್‌ಡೌನ್ ಅನ್ನು ದೂರುವುದನ್ನು ಬಿಟ್ಟು, ಸಮಯದ ಸದ್ಬಳಕೆಯತ್ತ ಗಮನ ಹರಿಸೋಣ.

(ಲೇಖಕ: ಶಿಕ್ಷಣತಜ್ಞ)



ಬಾಯಿ ಶುದ್ಧವಾಗಿರಲಿ

ಡಾ. ಪಲ್ಲವಿ ಹೆಗಡೆ

ಬಾಯಿ ನಮ್ಮ ದೇಹದ ಪ್ರಮುಖ ಅಂಗ. ಆದರೆ ನಾವು ಅದರ ಆರೋಗ್ಯದ ಬಗ್ಗೆ ಗಮನ ಕೊಡುವುದು ಕಡಿಮೆ. ನಮ್ಮ ಬಾಯಿ ಚೆನ್ನಾಗಿದ್ದರೆ ನಾವೂ ಚೆನ್ನಾಗಿರುತ್ತೇವೆ!



ತುಟಿ, ವಸಡು, ಹಲ್ಲುಗಳು, ನಾಲಿಗೆಯ ಮೇಲ್ಮೈ-ಕೆಳಮೈ, ಬಾಯಿಯ ಗಟ್ಟಿ-ಮೆದು ಮೇಲ್ಭಾವಣಿ (ಕಠಿಣ-ಮೃದುತಾಲು ಪ್ರದೇಶ), ಕಿರುನಾಲಿಗೆ ಮತ್ತು ಅದರ ಎರಡು ಬದಿಗಳು - ಇವು ಬಾಯಿಯ ಭಾಗಗಳು. ಬಾಯಿಯೆಂದರೆ ಬರೀ ಬಾಯಲ್ಲ, ಇಡೀ ಜೀರ್ಣಾಂಗವ್ಯೂಹ, ವಿಸರ್ಜನಾಂಗ, ರಕ್ತಪರಿಚಲನೆ, ರಸ-ರಕ್ತ-ಮಾಂಸ-ಮೇದಸ್ಸು-ಮೂಳೆ-ಮಜ್ಜೆಧಾತುಗಳ ಆರೋಗ್ಯದರ್ಶಿ.

ಹೂಸು-ಮೂತ್ರ-ಮಲವಿಸರ್ಜನೆ

ಬಾಯಿಯಿಂದ ತೊಡಗಿ ಗುದದವರೆಗೆ ಜೀರ್ಣಕ್ರಿಯೆ-ವಿಸರ್ಜನೆಯು ಜರುಗುತ್ತದೆ. ಮುಂಜಾನೆ ಘನ-ದ್ರವಾಹಾರವನ್ನು ಸೇವಿಸುವ ಮುನ್ನ ಕರುಳು ಖಾಲಿಯಾಗಲೇ ಬೇಕು. ಆಗಲೇ ಹಸಿವು-ಬಾಯಾರಿಕೆ ನಿಚ್ಚಳವಾಗಿ ಕಾಣಿಸುತ್ತದೆ. ಇದರಿಂದ ಬಾಯಿಯು ಇಡೀ ದಿನ ಗಂಧಮುಕ್ತವಾಗಿ ತಾಜಾತನವನ್ನು ಅನುಭವಿಸಲು ಸಾಧ್ಯ. ಹೊಟ್ಟೆಯುಬ್ಬರ, ಮಲಬದ್ಧತೆ, ಮೂತ್ರದ ತೊಂದರೆಗಳಲ್ಲಿ, ಜೀರ್ಣಾಂಗವ್ಯೂಹವು ವಿವಿಧ ಬಗೆಯ ದುರ್ಗಂಧವನ್ನು ಬಾಯಿಯ ಮೂಲಕ ಹೊರಸೂಸುತ್ತದೆ. ನಾಲಿಗೆಯ ಮೇಲೆ ಬಿಳಿ-ಹಳದಿ ಹಾಸು ಕಂಡುಬರುತ್ತದೆ. ಆಹಾರವು ಕರುಳಿನಲ್ಲಿ ಜೀರ್ಣವಾಗದೆ ಅಮ್ಲತೆಗೆ ಒಳಪಡುತ್ತಿದೆ, ಕೊಳೆಯುತ್ತಿದೆ, ಅಜೀರ್ಣವಾಗಿದೆ ಎಂದರ್ಥ. ತಿಳಿಗುಲಾಬಿ ಬಣ್ಣದ ಸ್ವಚ್ಛನಾಲಿಗೆಯು ಜೀರ್ಣಕ್ರಿಯೆ ಸರಿಯಾಗಿದ್ದಾಗ ಕಾಣಿಸುತ್ತದೆ.

ಹಲ್ಲುಜ್ಜುವುದು

ಮುಂಜಾನೆ ಎದ್ದ ಕೂಡಲೇ ಮಲಶೌಚದ ನಂತರ, ಒಗರು-ಕಹಿ-ಖಾರರುಚಿಯ ದಂತಮಂಜನದ ಪುಡಿಯಿಂದ ಅಥವಾ ಕಹಿಬೇವು/ಕರಿಬೇವು/ಮಾವು/ಹೊಂಗೆ ಮೊದಲಾದ ಹಸಿಮರದ ಕಡ್ಡಿಯನ್ನು ಅಗೆದು ಬ್ರಷ್‌ನಂತೆ ಮಾಡಿಕೊಂಡು ಅಥವಾ ಮೃದುಪ್ಲಾಸ್ಟಿಕ್-ಎಳೆಯ ಬ್ರಷ್‌ನಿಂದ ಒಂದೊಂದೇ ಹಲ್ಲನ್ನು ಉಜ್ಜುವುದು ಸೂಕ್ತ. ಒಗರು-ಕಹಿ-ಖಾರರುಚಿಯ ದಂತಮಂಜನದಿಂದ ದೃಢದಂತ, ಲಾಲಾರಸದ ಉತ್ತೇಜನ, ಗಂಟಲು-ಬಾಯಿಯೊಳಗಿನ ಲೋಳೆಯು ಚೊಕ್ಕಗೊಂಡು ಹಸಿವೆ-ಬಾಯಿರುಚಿಯು ಸ್ಪಷ್ಟವಾಗುವುದು. ಸಿಹಿಯಾದ, ಜೆಲ್, ನೊರೆಬರುವ ಪೇಸ್ಟಿನಿಂದ ಹಲ್ಲುಜ್ಜುವುದರಿಂದ ಹಲ್ಲುಗಳು ದೃಢವಾಗುವುದಿಲ್ಲ, ಬಾಯಿ-ನಾಲಿಗೆ-ಗಂಟಲು-ತಲೆಭಾಗದ ಮಲರೂಪದ ಕಫವೂ ನಿವಾರಣೆಯಾಗುವುದಿಲ್ಲ- ಇದು ಗಮನಾರ್ಹ. ಪ್ರತಿ ಆಹಾರಸೇವನೆಯ ನಂತರ ಹಲ್ಲುಸಂಧಿಯಲ್ಲಿ ಸಿಲುಕಿದ ಆಹಾರಕಣಗಳನ್ನು ತೆಗೆದು, ಉಜ್ಜುವುದು ಉತ್ತಮ.

ವಸಡುಗಳ ಬಲಕ್ಕಾಗಿ

ಹಲ್ಲುಜ್ಜಿದ ನಂತರ, ಜೇನುತುಪ್ಪ ಅಥವಾ ಜೇನು ಬೆರೆಸಿದ ತ್ರಿಫಲಾಪುಡಿಯನ್ನು ವಸುಡಗಳ ಮೇಲೆ ಮೃದುವಾಗಿ ಮಸಾಜ್ ಮಾಡಿಕೊಳ್ಳುವ ಅಭ್ಯಾಸದಿಂದ ಗಟ್ಟಿಯಾಗುತ್ತದೆ. ಬಾಯಿಹುಣ್ಣು, ರಕ್ತಸ್ರಾವ, ಕೀವುಗಳನ್ನು ನಿವಾರಿಸಬಹುದು. ನಸುಗೆಂಪು, ಹೊಳೆಯುವ ಗಟ್ಟಿವಸಡುಗಳೇ ಆಕರ್ಷಕ. ಹಲ್ಲುಗಳನ್ನು ಹಿಡಿದಿಟ್ಟು ಆಹಾರವನ್ನು ಅಗೆಯುವಾಗ, ಬಿಸಿ-ತಣ್ಣಗಿನ ಸೇವನೆಯನ್ನು ಸಹ್ಯಗೊಳಿಸುವಲ್ಲಿ ವಸಡಿನ ಪಾತ್ರವಿದೆ.

ನಾಲಿಗೆಯ ಸ್ವಚ್ಛತೆ

ಘಾಸಿಯಾಗದಂತೆ ನಾಲಿಗೆಯ ಮೇಲಿನ ಪಸೆಯನ್ನು ಕೆರೆದು ತೆಗೆಯಲು ಲೋಹ/ಪ್ಲಾಸ್ಟಿಕ್‌ನ ಟಂಗ್-ಕ್ಲೀನರ್ ಬಳಸಬಹುದು. ಇದು ಮುಂಜಾನೆಯೊಮ್ಮೆ ಮಾಡಿದರೆ ಸಾಕು. ಸ್ವಚ್ಛಗೊಳಿಸಿದ ನಂತರವೂ ನಾಲಿಗೆಯ ಮೇಲೆ ಮತ್ತೆ ಪದರಗಟ್ಟುತ್ತಿದೆ ಅಂದರೆ, ಜೀರ್ಣಕ್ರಿಯೆ-ವಿಸರ್ಜನೆಯಲ್ಲಿ ತೊಂದರೆಯಿದೆ ಎಂದೇ ತಿಳಿಯಬೇಕು. ಜ್ವರ-ವಾಂತಿಯಲ್ಲಿ, ಗರ್ಭಿಣಿಯರಿಗೆ, ಮುಖಕ್ಕೆ ಲಕ್ವಾ ಹೊಡೆದವರಿಗೆ ಹಲ್ಲು-ನಾಲಿಗೆಯನ್ನು ತಿಕ್ಕುವುದು ತೊಂದರೆದಾಯಕ. ಇವರು ಬೆರಳುಗಳಿಂದ ಚೊಕ್ಕಗೊಳಿಸಿಕೊಂಡರೆ ಸಾಕು.

ಬಾಯಿಮುಕ್ಕಳಿಸುವುದು

ಬೇಸಿಗೆಯಲ್ಲಿ ತಣ್ಣೀರಿನಿಂದ, ಶೀತ-ಮಳೆಗಾಲದಲ್ಲಿ ಬೆಚ್ಚಗಿನ ನೀರಿನಿಂದ ಮುಕ್ಕಳಿಸುವುದು ಉಪಯುಕ್ತ. ಮುಂಜಾನೆ ಹಲ್ಲುಜ್ಜಿದ ನಂತರ, ಆಹಾರಸೇವನೆಯ ನಂತರ, ಆಚೆಯಿಂದ ಮನೆಗೆ ಮರಳಿದ ಕೂಡಲೆ, ಬಿಸಿಲಿನಿಂದ ಬಾಯಿ ಒಣಗಿದ್ದಾಗಲೂ ಇದನ್ನು ಮಾಡುವುದು ಅಗತ್ಯ. ಬಾಯಿಮುಕ್ಕಳಿಸುವುದರಿಂದ ತಾಜಾ ಉಸಿರು, ಬಾಯಿ-ಗಂಟಲಿನ ತೇವ-ತಾಪಮಾನ, ಹಲ್ಲು-ವಸಡು-ನಾಲಿಗೆ-ಗಂಟಲಿನಲ್ಲಿ ಸಿಲುಕಿದ ಆಹಾರಕಣಗಳಿಂದ ಮುಕ್ತಿ ದೊರಕುತ್ತದೆ. ಲಾಲಾಸ್ರಾವ ಸರಿದೂಗಿಸಲು ಉಪಕಾರಿ. ಆಹಾರ ಸೇವಿಸುವಾಗ ರುಚಿ ಹೆಚ್ಚುತ್ತದೆ.

ಮುಂಜಾನೆ/ ಖಾಲಿಹೊಟ್ಟೆಯಲ್ಲಿ ಎರಡು-ಮೂರು ಚಮಚ ಬೆಚ್ಚಗಿನ ಎಳ್ಳೆಣ್ಣೆ/ ಕಡಲೆಕಾಯಿಎಣ್ಣೆ/ ಕೊಬ್ಬರಿಎಣ್ಣೆ/ ತುಪ್ಪವನ್ನು ಬಾಯಿಯೊಳಗೆ ತುಂಬಿಕೊಂಡು ಎಂಜಲು ತುಂಬಿಬರುವವರೆಗೂ, ಸುಮಾರು ಎರಡು-ಮೂರು ನಿಮಿಷಗಳಷ್ಟು ಇಟ್ಟುಕೊಳ್ಳುವುದು ಅಥವಾ ಬಾಯಿಮುಕ್ಕಳಿಸಿ ಉಗುಳುವುದರಿಂದ ತುಟಿಗಳು ಮೃದುವಾಗಿ, ತಿಳಿಗೆಂಪಿನಿಂದ ತುಂಬಿಕೊಂಡಿರುತ್ತದೆ. ಚಳಿಗೆ ತುಟಿಬಿರಿಯದೆ ನುಣುಪಾಗಿರುತ್ತದೆ. ಸ್ವರವು ಮೃದುವಾಗಿ ಸುಮಧುರಕಂಠಕ್ಕೆ ಸಹಾಯವಾಗುತ್ತದೆ. ಈ ಅಭ್ಯಾಸವು ಹಲ್ಲುನೋವು ನಿವಾರಕ. ಹುಳುಕುಹಲ್ಲನ್ನು ತಡೆಯಬಹುದು. ಹಲ್ಲುಗಳು ಮಜ್ಜೆ-ಮೂಳೆಯ ಆರೋಗ್ಯಸೂಚಿ. ಒರಟುಮೂಳೆಗಳಿಂದ ಹಲ್ಲು ಕೂಡ ಪುಡಿಪುಡಿಯಾಗುವುದು, ಇದನ್ನು ತಡೆಯಬಹುದು. ಹಲ್ಲುಸಡಿಲಗೊಂಡು ಅಲುಗುವುದು ಸರಿಯಾಗುತ್ತದೆ. ವಸಡು, ಮಾಂಸಧಾತುವಿನ ಆರೋಗ್ಯದರ್ಪಣ. ವಸಡು-ಹಲ್ಲುಗಳ ದೃಢತೆಗೆ ಈ ದಿನಚರಿ ಸಹಾಯಕ.

ಬಾಯಿಮುಕ್ಕಳಿಸುವುದರಿಂದ ಜೀರ್ಣಕ್ರಿಯೆಯು ಉತ್ತೇಜನಗೊಂಡು, ಚುರುಕುಗೊಳ್ಳುತ್ತದೆ. ಇದರಿಂದ ಬಾಯಿಯ, ಉಸಿರಿನ ದುರ್ನಾತವನ್ನು ದೂರವಿಡಬಹುದು.

ಮೂಗಿಗೆ-ಕಿವಿಗೆ-ತಲೆಗೆ ಆರೈಕೆ

ಐದಾರು ಹನಿಗಳಷ್ಟು ಬೆಚ್ಚಗಿನ ಎಣ್ಣೆಯ ಹನಿಗಳನ್ನು ಮೂಗಿಗೆ-ಕಿವಿಗೆ ತುಂಬುವ ದಿನಚರಿ ಹಲ್ಲು-ವಸಡುಗಳ ರಕ್ಷಕ. ಮುಂಜಾನೆ ಹಲ್ಲುಜ್ಜಿದ ನಂತರ/ ಖಾಲಿಹೊಟ್ಟೆಯಲ್ಲಿ/ ಘನ-ದ್ರವಾಹಾರ ಸೇವಿಸುವ ಮೊದಲೇ ಇದನ್ನು ಮಾಡಬೇಕು. ಸದೃಢದಂತ, ಮಾಂಸಲವಸಡು ದೊರೆಯುತ್ತದೆ. ಮೃದು-ನಸುಗೆಂಪು ತುಟಿ, ಸ್ವಚ್ಛಕಂಠದ ಲಾಭ. ತಲೆಯ ಚರ್ಮಕ್ಕೆ, ವಿಶೇಷವಾಗಿ ನೆತ್ತಿಗೆ ನಿತ್ಯವೂ ಎಣ್ಣೆಯನ್ನು ಹಾಕುವುದು ದಂತಗಳ ದೃಢಕರ. ಈ ಅಭ್ಯಾಸಗಳು ಹಲ್ಲು ನೋವುನಿವಾರಕ.

ಆಹಾರ-ಪಾನಕ್ರಮ

ಮೂರು ಹೊತ್ತು ಮಾತ್ರ ಘನ-ದ್ರವಾಹಾರಸೇವನೆ ಮಾಡುವುದರಿಂದ ಜೀರ್ಣಕ್ರಿಯೆಗೆ ಸಾಕಷ್ಟು ಸಮಯಾವಕಾಶ ದೊರಕುವುದರಿಂದ ಅಜೀರ್ಣಕ್ಕೆ ಅವಕಾಶವಿಲ್ಲದಂತಾಗುತ್ತದೆ. ಪದೇಪದೇ ತಿನ್ನುವುದರಿಂದ ಅಜೀರ್ಣ, ಇದರಿಂದ ಹಲ್ಲುಹುಳುಕು, ಉಸಿರಿನ-ಬಾಯಿಯ ದುರ್ಗಂಧ, ಅರುಚಿ, ಕಿರುನಾಲಿಗೆಯ ಊತ, ಗಂಟಲಿನ ಕಫ, ಮೂಳೆ-ಮಜ್ಜೆ-ಮಾಂಸಗಳ ಅವರೋಧಾತ್ಮಕ ತೊಂದರೆಗಳಿಂದ ಹಲ್ಲು-ವಸಡುರೋಗ-ಬಾಯಿಹುಣ್ಣು ಕಾಡುತ್ತದೆ.

ಹಸಿಈರುಳ್ಳಿ/ಬೆಳ್ಳುಳ್ಳಿಯಂತಹ ಗಂಧಕಪ್ರಧಾನ ಆಹಾರದಿಂದ ಬಾಯಿಯ ವಾಸನೆ ಅಸಹನೀಯವಾಗುತ್ತದೆ. ಎಣ್ಣೆ/ತುಪ್ಪದಲ್ಲಿ ಹುರಿದು/ಬೇಯಿಸಿ ಮಿತವಾಗಿ ಸೇವಿಸುವುದು ಕ್ಷೇಮ.

ಬಾಯಾರಿಕೆಗೂ/ದೇಹದ ಅಗತ್ಯಕ್ಕೂ ಮೀರಿ ದ್ರವ/ನೀರಿನ ಸೇವನೆ ರಕ್ತ-ಮಾಂಸ-ಮೂಳೆ-ಮಜ್ಜೆಗಳ ಅನಾರೋಗ್ಯಕ್ಕೆ ಕಾರಣ. ಆಹಾರದೊಂದಿಗೆ ಜೀರ್ಣಕ್ರಿಯೆಗೆ ಸಾಕಾಗುವಷ್ಟು/ ಬಾಯಾರುವಷ್ಟು ನೀರನ್ನು ಗುರುತಿಸಿಕೊಂಡು ವ್ಯಕ್ತಿಗತವಾಗಿ ಸೇವಿಸುವುದು ಉತ್ತಮ ದಿನಚರಿ.


ಕಾರ್ಬೋನೇಟೆಡ್-ಡ್ರಿಂಕ್ಸ್/ಸೋಡಾ/ ಕ್ಷಾರೀಯಪಾನೀಯ/ಹುಳಿಹಣ್ಣಿನ ರಸಗಳ ಸೇವನೆಯ ಅಭ್ಯಾಸದಿಂದ ಮೂಳೆ-ಹಲ್ಲುಗಳ ಸವಕಳಿ/ದುರ್ಬಲತೆ ಉಂಟಾಗುತ್ತದೆ. ಇವುಗಳ ಅಭ್ಯಾಸ ಹಿತಕರವಲ್ಲ.

ಸಕಾಲನಿದ್ರೆ ಸಕಲರೋಗಕ್ಕೂ ಸುರಕ್ಷೆ

ವಾತ-ಮೂತ್ರ-ಮಲಗಳ ಸುಸೂತ್ರವಿಸರ್ಜನೆಗೆ ಅನುವಾಗುವಂತೆ ರಾತ್ರಿಯೂಟ ಎಂಟರೊಳಗೆ/ ಬೇಗನೇ ಮುಗಿಸಿ ಹತ್ತು-ಹತ್ತೂವರೆಗೆ ನಿದ್ರೆ, ಮುಂಜಾನೆ ಎಚ್ಚರಾದ ಕೂಡಲೆ ಏಳುವ ಅಭ್ಯಾಸ ಅಗತ್ಯವಾಗಿರುತ್ತದೆ. ಈ ಅಭ್ಯಾಸವು ಜೀರ್ಣ-ವಿಸರ್ಜನಾಂಗಗಳ ಸಹಜಕ್ರಿಯೆಗೆ ಸಹಾಯಕ.

ತಾಜಾ ಉಸಿರು, ಸ್ವಚ್ಛಬಾಯಿ, ಹೊಳೆವ-ದೃಢಹಲ್ಲು, ಮೃದು-ಕೆಂಪುತುಟಿಗಳು ನಿಜಕ್ಕೂ ಆರೋಗ್ಯಸೂಚಕ.

(ಲೇಖಕಿ: ಆಯುರ್ವೇದವೈದ್ಯೆ)



❦ ಸುಭಾಷಿತ ❦
ಒಳ್ಳೆಯ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುವುದು ಅನುಭವದಿಂದ. ಅನುಭವ ಆಗುವುದು ಕೆಟ್ಟ ನಿರ್ಧಾರಗಳನ್ನು ಕೈಗೊಳ್ಳುವುದರಿಂದ.
-ಮಾರ್ಕ್ ಟ್ವೆಯ್ನ್

ಪಶ್ಚಿಮಘಟ್ಟ ಸಂರಕ್ಷಣೆ ವಿಸ್ತೃತ ಚರ್ಚೆ ನಡೆಯಲಿ

ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತಂತೆ ಕಸ್ತೂರಿ ರಂಗನ್ ವರದಿಯ ಅನುಷ್ಠಾನಕ್ಕೆ ಮತ್ತೆ ಆರು ತಿಂಗಳ ಕಾಲಾವಕಾಶ ಸಿಕ್ಕಿದೆ. ಅದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆಯನ್ನು ಅಂತಿಮಗೊಳಿಸಲು ಕಳೆದ ಡಿಸೆಂಬರ್ 31ರ ಗಡುವನ್ನು ನೀಡಲಾಗಿತ್ತು. ಎರಡು ವರ್ಷಗಳಿಂದ ನಾಲ್ಕು ಬಾರಿ ಗಡುವನ್ನು ವಿಸ್ತರಿಸಲಾಗಿತ್ತು. ಈಗ, ಬರುವ ಜೂನ್ 30ರೊಳಗೆ ಅಂತಿಮಗೊಳಿಸಬೇಕೆಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಐದನೇ ಬಾರಿ ಗಡುವನ್ನು ನೀಡಿದೆ. ಕರ್ನಾಟಕದ ಹಿಂದಿನ ಯಾವ ಸರ್ಕಾರವೂ ಈ ವರದಿಯ ಅನುಷ್ಠಾನ ಕುರಿತು ಆಸಕ್ತಿಯನ್ನು ತೋರಿರಲಿಲ್ಲ. ಬಸವರಾಜ ಬೊಮ್ಮಾಯಿ ನೇತೃತ್ವದ ಈಗಿನ ಸರ್ಕಾರವಂತೂ ಅದನ್ನು ಸಾರಾಸಗಟಾಗಿ ತಿರಸ್ಕರಿಸುವುದಾಗಿ ಹೇಳಿತ್ತು. ಇಂಥ ಏಕಪಕ್ಷೀಯ ನಿರ್ಣಯವು ಪಶ್ಚಿಮಘಟ್ಟಗಳ ಸೂಕ್ಷ್ಮ ಪರಿಸರಕ್ಕೆ ಮಾರಕವಾಗುತ್ತದೆಂದು ವಿಜ್ಞಾನಿಗಳು, ವನ್ಯತಜ್ಞರು ಮತ್ತು ಪರಿಸರ ತಜ್ಞರು ದನಿ ಎತ್ತಿದ್ದರು. ವಿಜ್ಞಾನಿಗಳ ತಂಡ ಸಿದ್ಧಪಡಿಸಿದ ಈ ವರದಿಯಲ್ಲಿ ಏನಿದೆ ಎಂಬುದರ ಕುರಿತು ವಿಸ್ತೃತ ಚರ್ಚೆ ನಡೆದೇ ಇಲ್ಲ. ಈ ವರದಿಯ ಸಮಗ್ರ ಅಂಶಗಳನ್ನು ಸ್ಥಳೀಯ ಭಾಷೆಗಳಿಗೆ ತರ್ಜುಮೆ ಮಾಡಿ ಪಂಚಾಯಿತಿ ಮಟ್ಟದಲ್ಲಿ ಚರ್ಚೆಯಾಗುವಂತೆ ನೋಡಿಕೊಳ್ಳಬೇಕಿತ್ತು. ಕಸ್ತೂರಿ ರಂಗನ್ ವರದಿಗೂ ಮುಂಚೆ ಪ್ರಕಟವಾಗಿದ್ದ ಮಾಧವ ಗಾಡ್ಗೀಳ್ ವರದಿಯಲ್ಲಿ ಅದನ್ನು ಸ್ಪಷ್ಟವಾಗಿ ಹೇಳಲಾಗಿತ್ತು ಕೂಡ. ಗಾಡ್ಗೀಳ್ ವರದಿಗೆ ಹೋಲಿಸಿದರೆ ತದನಂತರ ಬಂದ ಕಸ್ತೂರಿ ರಂಗನ್ ವರದಿ ಬಹಳಷ್ಟು ದುರ್ಬಲವಾಗಿದೆ. ಆದರೂ ವರದಿಗೆ ಸಂಬಂಧಿಸಿದ ಮಾಹಿತಿಗಳನ್ನು ಬೇಕೆಂದೇ ಕತ್ತಲಲ್ಲಿ ಇಟ್ಟು ಘಟ್ಟಪ್ರದೇಶಗಳ ನಿವಾಸಿಗಳಲ್ಲಿ ಬೆದರಿಕೆ ಹುಟ್ಟುವಂತೆ ಮಾಡುತ್ತ ಇತ್ತ ಕಲ್ಲು-ಮರಳಿನ ಗಣಿಗಾರರು, ರಸ್ತೆ-ಸೇತುವೆ-ಸುರಂಗಗಳ ಗುತ್ತಿಗೆದಾರರು, ರೆಸಾರ್ಟ್ ಮಾಲೀಕರೇ ಮುಂತಾದ ಪಟ್ಟಭದ್ರ ಹಿತಾಸಕ್ತಿಗಳನ್ನು ಪೊರೆಯಲೆಂದೇ ವರದಿಯನ್ನು ಮತ್ತೆ ಮತ್ತೆ ತಿರಸ್ಕರಿಸಲಾಗುತ್ತಿದೆ ಎಂಬ ಆಪಾದನೆ ಈ ಎಲ್ಲ ಸರ್ಕಾರಗಳ ಮೇಲಿದೆ.



ವರದಿಯನ್ನು ಪೂರ್ತಿ ಓದದೆ ಯಾರದೋ ಅಭಿಪ್ರಾಯಕ್ಕೆ ಸೈ ಎನ್ನುವವರಿಂದಾಗಿ ಇಡೀ ವರದಿ ತಿರಸ್ಕೃತವಾಗುವುದಾದರೆ ಅದಕ್ಕಿಂತ ವಿಷಾದದ ಸಂಗತಿ ಬೇರೊಂದಿಲ್ಲ

ಕಸ್ತೂರಿ ರಂಗನ್ ವರದಿ ಬೇಡವೆ ಬೇಡವೆಂದು ನಿರ್ಣಯ ಕೈಗೊಳ್ಳುವ ಮುನ್ನ ಕರ್ನಾಟಕ ಸರ್ಕಾರವು ಕೇರಳದ ಮಾರ್ಗವನ್ನಾದರೂ ಅನುಸರಿಸಬೇಕಿತ್ತು. ಅಲ್ಲಿ ಈ ವರದಿ ಕುರಿತು ವಿರೋಧ ವ್ಯಕ್ತವಾದಾಗ ಅಲ್ಲಿನ ಸರ್ಕಾರವು ಸಾರಾಸಗಟಾಗಿ ವರದಿಯನ್ನು ತಿರಸ್ಕರಿಸಲಿಲ್ಲ. ಉಪಗ್ರಹ ಚಿತ್ರಗಳನ್ನು ಆಧರಿಸಿ ಗಡಿ ಎಳೆದಾಗ ಕೆಲವು ಊರುಗಳು ತಪ್ಪಾಗಿ ಅರಣ್ಯ ಪ್ರದೇಶವೆಂದು ಘೋಷಿತವಾಗಿರುವ ಸಂಭವ ಇರುವುದರಿಂದ ಅಂಥ ಸ್ಥಳಗಳ ಮರು ಪರಿಶೀಲನೆ ಮಾಡಿಸಲಾಯಿತು. ಸ್ಥಳೀಯ ಮಟ್ಟದಲ್ಲಿ ಕೆಲವೆಡೆ ಗಡಿರೇಖೆಗಳನ್ನು ತುಸು ಬದಲಿಸಬೇಕಾಗುವುದರಿಂದ ಅಂತಿಮ ಅಧಿಸೂಚನೆಯ ದಿನವನ್ನು ಮುಂದೂಡಬೇಕೆಂದು ಅವರೇ ಕೇಳಿದ್ದಾರೆ. ನಮ್ಮಲ್ಲಿ ಅಂಥ ಯಾವ ಸ್ಥಳೀಯ ಸಮಿತಿಗಳನ್ನೂ ಅಧ್ಯಯನಕ್ಕೆ ಕಳುಹಿಸದೆ ವರದಿಯೇ ಬೇಡವೆಂದು ತಿರಸ್ಕರಿಸಿದ್ದು ಸಮರ್ಥನೀಯವಲ್ಲ. ಗಮನಿಸಬೇಕಾದ ಸಂಗತಿ ಎಂದರೆ, ವರದಿ ಸಮಗ್ರವಾಗಿ ಜಾರಿಗೆ ಬಂದರೆ ಕೇರಳದಲ್ಲಿ ಗುಡ್ಡಗಾಡು ಜನರಿಗೆ ನಿಜಕ್ಕೂ ಅನ್ಯಾಯವಾದೀತೆಂಬ ಕಳಕಳಿ ಎದ್ದು ಕಾಣುತ್ತಿತ್ತು. ಆದರೆ ಅಲ್ಲಿ ಮಾಫಿಯಾಗಳನ್ನು ಸೂಚಿಸಲಾಗಿತ್ತು, ನಮ್ಮಲ್ಲಿ ಹೆದ್ದಾರಿ ವಿಸ್ತರಣೆ, ಕಲ್ಲುಗಣಿಗಾರಿಕೆ ಮುಂತಾದ ಅಭಿವೃದ್ಧಿ ಹಿತಾಸಕ್ತಿಯೇ ವರದಿಯನ್ನು ತಿರಸ್ಕರಿಸಲು ಮುಖ್ಯ ಕಾರಣವಾದಂತೆ ಮೇಲ್ನೋಟಕ್ಕೇ ಕಾಣುತ್ತದೆ. ಕನ್ನಡದಲ್ಲಿ ವರದಿಯನ್ನು ಓದದೇ ಯಾರದೋ ಅಭಿಪ್ರಾಯಕ್ಕೆ ಸೈ ಎನ್ನುವವರಿಂದಾಗಿ ಇಡೀ ವರದಿ ತಿರಸ್ಕೃತವಾಗಿ ಪಶ್ಚಿಮ ಘಟ್ಟಗಳ ಜೀವಮಂಡಲಗಳು, ಅಪರೂಪದ ಸಸ್ಯಪ್ರಭೇದಗಳು ಬಲಿಯಾಗುವುದಾದರೆ ಅದಕ್ಕಿಂತ ವಿಷಾದದ ಸಂಗತಿ ಬೇರೊಂದಿಲ್ಲ. ಅದರಲ್ಲೂ ಪಶ್ಚಿಮ ಘಟ್ಟಗಳ ಶೇಕಡ 65ರಷ್ಟು ಭಾಗ ಕರ್ನಾಟಕದಲ್ಲೇ ಇರುವಾಗ ಅದರ ರಕ್ಷಣೆ ಕುರಿತ ಕಾಳಜಿ ನಮ್ಮಲ್ಲೇ ಹೆಚ್ಚಿಗೆ ವ್ಯಕ್ತವಾಗಬೇಕಿತ್ತು. ಈಗಿನ ಚುನಾಯಿತ ಪ್ರತಿನಿಧಿಗಳ 'ಅಭಿವೃದ್ಧಿಪರ' ಧೋರಣೆಯೇ ಹಿಂದೆ 1960-70ರ ದಶಕಗಳ ಪ್ರತಿನಿಧಿಗಳಿಗೆ ಇದ್ದಿದ್ದರೆ ಈಗ ನಮಗೆ ಅರಣ್ಯಾರು ರಕ್ಷಿತಾರಣ್ಯ ಇರುತ್ತಿರಲಿಲ್ಲ; ದಾಂಡೇಲಿ, ಭದ್ರಾ, ಬ್ರಹ್ಮಗಿರಿ, ಬಿಳಿಗಿರಿರಂಗನ ಬೆಟ್ಟಗಳ ಅಭಯಾರಣ್ಯಗಳೂ ಇರುತ್ತಿರಲಿಲ್ಲ; ಕುದುರೆಮುಖ ರಾಷ್ಟ್ರೀಯ ಉದ್ಯಾನವೂ ಇರುತ್ತಿರಲಿಲ್ಲ. ಮುಂಬರುವ 50-100 ವರ್ಷಗಳ ನಂತರದ ಪೀಳಿಗೆ ನಮ್ಮ ಹೆಜ್ಜೆಗಳನ್ನು ವಿಮರ್ಶಿಸುತ್ತದೆ ಎಂಬ ಮುಂದೋಣೆ ನಮ್ಮದಾಗಬೇಕಿತ್ತು. ಈ ಅಪೂರ್ವ ನಿಸರ್ಗ ಸಿರಿಸಂಪತ್ತು ನಮಗೆ ಬಳುವಳಿಯಾಗಿ ಬಂದಿದ್ದು, ಮುಂದಿನ ಪೀಳಿಗೆಗಳಿಂದ ಎರವಲು ಪಡೆದಿದ್ದು ಎಂಬ ಪರಿಜ್ಞಾನ ನಮಗಿರಬೇಕಿತ್ತು.

ಈಗಲೂ ಕಾಲ ಮಿಂಚಿಲ್ಲ. ವರದಿಯನ್ನು ಸಾರಾಸಗಟಾಗಿ ತಿರಸ್ಕರಿಸುವ ಬದಲು, ಅದನ್ನು ತುರ್ತಾಗಿ ಸರಳ ಕನ್ನಡದಲ್ಲಿ ತರ್ಜುಮೆ ಮಾಡಿಸಿ, ತಾಲ್ಲೂಕು ಮಟ್ಟದಲ್ಲಾದರೂ ಅದರ ಕುರಿತು ವ್ಯಾಪಕ ಚರ್ಚೆಗಳನ್ನು ಸರ್ಕಾರ ವ್ಯವಸ್ಥಿತವಾಗಿ ಏರ್ಪಡಿಸಬೇಕು. ಕಸ್ತೂರಿ ರಂಗನ್ ವರದಿಯನ್ನು ಸಿದ್ಧಪಡಿಸುವಾಗ ಯಾವುದು ಮನುಷ್ಯನಿರ್ಮಿತ ಯಾವುದು ನೈಸರ್ಗಿಕ ಎಂಬುದನ್ನು ಪ್ರತ್ಯೇಕಿಸುವಲ್ಲಿ ಅಲ್ಲಲ್ಲಿ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸುವುದು ಮೊದಲ ಹೆಜ್ಜೆಯಾಗಬೇಕು. ಮಾತುಗಳನ್ನಾಡಲಾಗದ, ಮತ ಹಾಕಲಾರದ ಜೀವಿಗಳ ಮತ್ತು ಈಗಿನ್ನೂ ಹುಟ್ಟದಿರುವ ಪೀಳಿಗೆಗಳ ಯೋಗಕ್ಷೇಮಕ್ಕೂ ಈಗಿನ ಸರ್ಕಾರ ಬಾಧ್ಯಸ್ಥ ತಾನೆ?

ದಿನದ ಟ್ವೀಟ್



ಪ್ರಶ್ನಿಸುವುದು ನಿಮ್ಮ ಹಕ್ಕು

ನೀವು ಯಾವುದೇ ರಾಜಕೀಯ ಪಕ್ಷದೊಡನೆ ಮೃದು ಧೋರಣೆ ಹೊಂದಿದ್ದರೆ ಅದು ಪ್ರಜೆಯಾಗಿ ನೀವು ಮಾಡುವ ಅತಿ ದೊಡ್ಡ ತಪ್ಪು ಹಾಗೂ ಅದು ನಿಮಗೆ ನೀವೇ ಮೋಸಗೊಳಿಸುವ ಕೆಲಸ.

ಸಾಮ್ಯುಯೆಲ್ ಶೈನ್ ಸೋನ್ಸ್, ನಾಗರಿಕ

ಕಿಡಿನುಡಿ

ಸಿನಿಮಾ ನಟರು ಬೇಕಾದರೆ ಕಾಂಗ್ರೆಸ್ ಕಾರ್ಯಕರ್ತರಾಗಿ ಪಾದಯಾತ್ರೆಗೆ ಹೋಗಲಿ. ಕಲಾವಿದರು ಜಾತಿ, ಧರ್ಮ ಮೀರಿದವರು. ಎಲ್ಲ ಪಕ್ಷದವರೂ ಅವರನ್ನು ಇಷ್ಟಪಡುತ್ತಾರೆ. ಕಲಾವಿದರಾಗಿ ಒಂದು ಪಕ್ಷದ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವುದು ಸರಿಯಲ್ಲ.



ಬಿ.ಸಿ.ಪಾಟೀಲ, ಕೃಷಿ ಸಚಿವ

25 ವರ್ಷಗಳ ಹಿಂದೆ

ಶನಿವಾರ, 11-1-1997

● **ಕಾವೇರಿ ಕಣಿವೆಗೆ ಮಾರ್ಚ್‌ನಲ್ಲಿ ನ್ಯಾಯಮಂಡಲಿ ಭೇಟಿ ಸಂಭವ**

ನವದೆಹಲಿ, ಜ. 10– ಕಾವೇರಿ ಕಣಿವೆ ಪ್ರದೇಶಕ್ಕೆ ಖುದ್ದು ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಅರಿತುಕೊಳ್ಳಬೇಕೆಂಬ ರಾಜ್ಯಗಳ ಮನವಿಯನ್ನು ಕಾವೇರಿ ಜಲ ವಿವಾದಗಳ ನ್ಯಾಯಮಂಡಲಿಯ ನೂತನ ಅಧ್ಯಕ್ಷ ನ್ಯಾಯಮೂರ್ತಿ ಎನ್.ಪಿ. ಸಿಂಗ್ ಮತ್ತು ಇಬ್ಬರು ಸದಸ್ಯರು ಒಪ್ಪಿದ್ದು, ಬರುವ ಮಾರ್ಚ್‌ನಲ್ಲಿ ಈ ಭೇಟಿ ಕಾರ್ಯಕ್ರಮವನ್ನು ಕೈಗೊಳ್ಳುವ ಇಂಗಿತವನ್ನು ಅವರು ಇಂದು ವ್ಯಕ್ತಪಡಿಸಿದರು.

ನ್ಯಾಯಮಂಡಲಿಯ ಮುಂದೆ ಕೇರಳದ ಪರ ನ್ಯಾಯವಾದಿ ಮಿಲನ್ ಬ್ಯಾನರ್ಜಿ ಅವರು, ಕಾವೇರಿ ಕಣಿವೆ ಪ್ರದೇಶಕ್ಕೆ ಖುದ್ದು ಭೇಟಿ ನೀಡಿ ಅಧ್ಯಯನ ಮಾಡುವುದು ಸೂಕ್ತ ಎಂದು ಮನವಿ ಮಾಡಿದರು.

● **ಆಂಧ್ರ: ನಕ್ಸಲೀಯರಿಂದ ಠಾಣೆ ಸ್ಫೋಟ–18 ಮಂದಿ ಹತ್ಯೆ**

ಹೈದರಾಬಾದ್, ಜ. 10 (ಪಿಟಿಐ): ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯಲ್ಲಿ ಇಂದು ಬೆಳಗಿನ ಜಾವ ಪೊಲೀಸರೊಂದಿಗೆ ಭೀಕರ ಕಾಳಗ ನಡೆಸಿದ ನಕ್ಸಲೀಯರು ಪೊಲೀಸ್ ಠಾಣೆಯನ್ನು ಸ್ಫೋಟಿಸಿದ್ದರಿಂದ 16 ಪೊಲೀಸರು ಸೇರಿದಂತೆ 18 ಮಂದಿ ಸತ್ತಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 11-1-1972

● **ಪಾಕ್ ಜೊತೆ ಬಾಂಗ್ಲಾದೇಶ ಬಾಂಧವ್ಯ ಶಾಶ್ವತವಾಗಿ ಭಗ್ನ: ಮುಜೀಬ್**

ಢಾಕಾ, ಜ. 10– ಬಾಂಗ್ಲಾದೇಶವು ಪಾಕಿಸ್ತಾನದಿಂದ ಶಾಶ್ವತವಾಗಿ ಬೇರ್ಪಟ್ಟಿದೆ. ಇವೆರಡು ದೇಶಗಳ ನಡುವೆ ರಾಜಕೀಯ ಸಂಪರ್ಕ ಭಗ್ನಗೊಂಡಿದ್ದು, ಸಂಪರ್ಕ ಪುನರ್‌ಸ್ಥಾಪಿಸುವುದು ಇನ್ನು ಸಾಧ್ಯವೇ ಇಲ್ಲ ಎಂದು ವಂಗಪಿತ ಷೇಖ್ ಮುಜೀಬುರ್ ರೆಹಮಾನ್ ಇಲ್ಲಿ ಘೋಷಿಸಿದರು.

ಅವರು ಸ್ವತಂತ್ರ ಬಾಂಗ್ಲಾ ದೇಶದ ಉದಯವನ್ನು ಸಾರ್ವಜನಿಕವಾಗಿ ಘೋಷಿಸಿದರು. ವಿಜಯೋತ್ಸಾಹದಿಂದ ಇಂದು ತಾಯ್ನಾಡಿಗೆ ಮರಳಿದ ಕೂಡಲೇ ರೇಸ್‌ಕೋರ್ಸ್ ಮೈದಾನದಲ್ಲಿ ಸುಮಾರು ಐವತ್ತು ಲಕ್ಷ ಮಂದಿಯ ಭಾರಿ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು 'ಪಾಕಿಸ್ತಾನದ ಜತೆ ಯಾವುದಾದರೊಂದು ಬಗೆಯ ಸಂಪರ್ಕ ಇಟ್ಟುಕೊಂಡಿರಲು ಅಧ್ಯಕ್ಷ ಭುಟ್ಟೊ ತಮ್ಮನ್ನು ರಾವಲ್ಪಿಂಡಿಯಿಂದ ಹೊರಡುವ ಮುನ್ನ ಕೋರಿದರು' ಎಂದು ತಿಳಿಸಿದರು.

● **ಭರವಸೆ ಈಡೇರಿಸಿದ ತೃಪ್ತಿ ಇಂದಿರಾ ವರ್ಣನೆ**

ನವದೆಹಲಿ, ಜ. 10– ವಂಗಬಂಧು ಷೇಖ್ ಮುಜೀಬುರ್ ರೆಹಮಾನರು ತಮ್ಮ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿ ವಿಜಯಶಾಲಿಯಾಗಿ ಹಿಂದಿರುಗಿರುವ ಈ ದಿನ ಅತ್ಯಂತ ಸಂತೋಷದ ದಿನವೆಂದು ಪ್ರಧಾನಿ ಇಂದಿರಾ ಗಾಂಧಿ ಇಲ್ಲಿ ಘೋಷಿಸಿದರು.

ರೆಹಮಾನರನ್ನು ಸ್ವಾಗತಿಸಲು ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.

ಈ ಎರಡರ ನಡುವೆ ಸಮನ್ವಯ ಸಾಧಿಸುವ ಪ್ರಯತ್ನವನ್ನು ಸುಪ್ರೀಂ ಕೋರ್ಟ್ ಮಾಡಿದೆ

ರಾಷ್ಟ್ರೀಯ ಭದ್ರತೆ ಮತ್ತು ಪರಿಸರ ಸಂರಕ್ಷಣೆ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ರಾಷ್ಟ್ರೀಯ ಭದ್ರತೆ ಮತ್ತು ಪರಿಸರ ಸಂರಕ್ಷಣೆಯಂತಹ ಸೂಕ್ಷ್ಮ ವಿಷಯಗಳಲ್ಲಿ ಸಂಘರ್ಷವುಂಟಾದಾಗ ಯಾವುದಕ್ಕೆ ಆದ್ಯತೆ ನೀಡಬೇಕು? ರಾಷ್ಟ್ರೀಯ ಭದ್ರತೆ ಎಂದಾಗ ಅದು ಕೇವಲ ಮಿಲಿಟರಿ ದೃಷ್ಟಿಯ ಭದ್ರತೆಯೇ? ದೇಶದ ಪ್ರಜೆಗಳಿಗೆ ಸರ್ಕಾರ ನೀಡುವ ಆಹಾರದ ಭದ್ರತೆ, ಶುದ್ಧ ಕುಡಿಯುವ ನೀರಿನ, ಆರೋಗ್ಯದ ಭದ್ರತೆಗಳು ರಾಷ್ಟ್ರೀಯ ಭದ್ರತೆಯಲ್ಲವೇ? ರಾಷ್ಟ್ರೀಯ ಭದ್ರತೆಯ ನೆಪವೊಡ್ಡಿ ಪರಿಸರಕ್ಕೆ ಮಾರಕವಾಗುವಂತಹ ಯೋಜನೆಗಳನ್ನು ಸರ್ಕಾರ ಅನುಷ್ಠಾನಗೊಳಿಸಿದರೆ ಏನು ಮಾಡಬೇಕು?

ಈ ರೀತಿಯ ಕೆಲವು ಜಟಿಲವಾದ, ಗಹನವಾದ ಪ್ರಶ್ನೆಗಳ ಕಗ್ಗಂಟನ್ನು ಬಿಡಿಸುವಂತಹ ತೀರ್ಪೊಂದನ್ನು ಸುಪ್ರೀಂ ಕೋರ್ಟ್, ಉತ್ತರಾಖಂಡದ 'ಚಾರ್‌ಧಾಮ್ ಮಹಾಮಾರ್ಗ ವಿಕಾಸ ಪರಿಯೋಜನೆ'ಗೆ ಸಂಬಂಧಪಟ್ಟಂತೆ ಕಳೆದ ತಿಂಗಳು ನೀಡಿದೆ.


ಕೇದಾರನಾಥ್, ಬದರೀನಾಥ್, ಗಂಗೋತ್ರಿ ಮತ್ತು ಯಮುನೋತ್ರಿಯು ಉತ್ತರಾಖಂಡ ರಾಜ್ಯದ ಹಿಮಾಲಯದ ಪರ್ವತಶ್ರೇಣಿಯಲ್ಲಿ ನೆಲೆಸಿರುವ ಚಾರ್‌ಧಾಮ್ ಹೆಸರಿನ ಯಾತ್ರಾ ಸ್ಥಳಗಳು. ವರ್ಷ ವರ್ಷವೂ ಲಕ್ಷಾಂತರ ಸಂಖ್ಯೆಯಲ್ಲಿ ಶ್ರದ್ಧಾವಂತ ಭಕ್ತರನ್ನೂ ಪ್ರವಾಸಿಗರನ್ನೂ ಸೆಳೆಯುವ ಈ ಸ್ಥಳಗಳನ್ನು ಅತ್ಯುತ್ತಮವಾದ, ಸುರಕ್ಷಿತವಾದ ಹೆದ್ದಾರಿಗಳ ಮೂಲಕ ಜೋಡಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು 2016ರಲ್ಲಿ ಪ್ರಾರಂಭಿಸಿತು. ದುರ್ಗಮ ಪರ್ವತ ಪ್ರದೇಶಗಳ ಮೂಲಕ ಹಾದುಹೋಗುವ ಕಿರಿದಾದ ರಸ್ತೆಯನ್ನು 10 ಮೀಟರ್ ಅಗಲದ ದ್ವಿಪಥಕ್ಕೆ ವಿಸ್ತರಿಸಲು ಪರ್ವತದ ಇಳಿಜಾರು ಗೋಡೆಗಳನ್ನು ಕಡಿದು, ಏರುನೆಲವನ್ನು ಸಾಧ್ಯವಾದಷ್ಟು ಮಟ್ಟಸ ಮಾಡಿ, ಇಳಕಲುಗಳನ್ನು ಮುಚ್ಚಿ, ಅಗತ್ಯವಾದೆಡೆಗಳಲ್ಲಿ ಸೇತುವೆಗಳನ್ನು ನಿರ್ಮಿಸಿ, ಸುರಂಗಗಳನ್ನು ಕೊರೆಯುವ ಕೆಲಸಗಳು ಪ್ರಾರಂಭವಾದವು. ಸುಮಾರು 900 ಕಿಲೊ ಮೀಟರ್‌ಗಳಷ್ಟು ಉದ್ದದ ರಸ್ತೆ ಅಗಲೀಕರಣ ಯೋಜನೆಯ ಅಂದಾಜು ವೆಚ್ಚ ₹ 12,000 ಕೋಟಿಯಾಗಿತ್ತು.

ಉತ್ತರಾಖಂಡಕ್ಕೆ ಭೂಕಂಪನ, ಭೂಕುಸಿತ, ಅನಿರೀಕ್ಷಿತ ಪ್ರವಾಹದಂಥ ಅವಘಡಗಳು ಹೊಸವೇನಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದು, ಪ್ರಪಂಚದ ಅತಿ ಕಿರಿಯ ವಯಸ್ಸಿನ ಪರ್ವತ ಶ್ರೇಣಿಯಾದ ಹಿಮಾಲಯದ ಆಂತರಿಕ ರಚನೆ, ಅಸ್ಥಿರತೆ, ನಿರಂತರ ಸ್ಥಿತ್ಯಂತರ ಮುಂತಾದವು. ಎರಡನೆಯ ಕಾರಣವೆಂದರೆ, ದುರ್ಗಮ ಪರ್ವತ ಪ್ರದೇಶದಲ್ಲಿ ಭರದಿಂದ ನಡೆದಿರುವ ಅಭಿವೃದ್ಧಿ ಕಾಮಗಾರಿಗಳು. 36 ಜಲವಿದ್ಯುತ್ ಯೋಜನೆಗಳು ಮತ್ತು ನಿರ್ಮಾಣದ ವಿವಿಧ ಹಂತಗಳಲ್ಲಿರುವ ಮತ್ತೆ 25 ಹೊಸ ಯೋಜನೆಗಳು ಉತ್ತರಾಖಂಡದ ಸೂಕ್ಷ್ಮ ಪರಿಸರ ವ್ಯವಸ್ಥೆಗೆ ತೀವ್ರ ಹಾನಿಯುಂಟು ಮಾಡುತ್ತಿವೆ ಎಂಬುದು ಪರಿಸರ ಸಂಘಟನೆಗಳ ಅಭಿಮತ.

ಚಾರ್‌ಧಾಮ್ ಯೋಜನೆಯು ಜನರ ಬದುಕನ್ನು ಮತ್ತಷ್ಟು ಅತಂತ್ರವಾಗಿಸುತ್ತದೆ ಎಂಬ ಕಾರಣದಿಂದ ಡೆಹ್ರಾಡೂನ್‌ನ ಸಿಟಿಜನ್ಸ್ ಫಾರ್ ಗ್ರೀನ್ ಹಾಗೂ ಮತ್ತೆ ಕೆಲವು ಸಂಘಟನೆಗಳು, ಈ ಯೋಜನೆಯನ್ನು ವಿರೋಧಿಸಿ 2019ರ ಪ್ರಾರಂಭದಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದವು. ಅದೇ ವರ್ಷ ಸೆಪ್ಟೆಂಬರ್‌ನಲ್ಲಿ ಕೆಲವು ಷರತ್ತುಗಳನ್ನು ವಿಧಿಸಿದ ನ್ಯಾಯಮಂಡಳಿಯು ಯೋಜನೆ ಮುಂದುವರಿಸಲು ಅನುಮತಿ ನೀಡಿತು. ಪರಿಸರ ಸಂಘಟನೆಗಳು ಈ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅಪೀಲು ಸಲ್ಲಿಸಿದವು. ಕೋರ್ಟ್ 25 ಸದಸ್ಯರ ಉನ್ನತಾಧಿಕಾರ ಸಮಿತಿಯೊಂದನ್ನು ರಚಿಸಿ, ಯೋಜನೆಯು ಸೂಕ್ಷ್ಮ ಪರಿಸರ ವ್ಯವಸ್ಥೆ ಮೇಲೆ ಬೀರುವ ಪರಿಣಾಮವನ್ನು ಅಧ್ಯಯನ ಮಾಡಿ ವರದಿ ನೀಡುವಂತೆ ನಿರ್ದೇಶಿಸಿತು.

ಸುಮಾರು ಎಂಟು ತಿಂಗಳ ಅಧ್ಯಯನದ ನಂತರವೂ ಒಮ್ಮತಕ್ಕೆ ಬಾರದ ಸಮಿತಿಯು ಎರಡು ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿತು. ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ತಡೆಯುವಂತಹ ಕ್ರಮಗಳನ್ನು ಕೈಗೊಂಡು ರಸ್ತೆಯ ಅಗಲವನ್ನು 12 ಮೀಟರುಗಳಿಗೆ ವಿಸ್ತರಿಸಬಹುದೆಂದು 21 ಸದಸ್ಯರು ಶಿಫಾರಸು ಮಾಡಿದರು. ಸಮಿತಿಯ ಅಧ್ಯಕ್ಷರನ್ನು ಒಳಗೊಂಡ ನಾಲ್ವರ ತಂಡ ಈಗಿರುವ ರಸ್ತೆಯನ್ನು ಅಗಲ ಮಾಡುವುದರ ಬದಲಿಗೆ, ವಿಶೇಷ ತಾಂತ್ರಿಕ ಕ್ರಮಗಳಿಂದ ಪರ್ವತ ಪ್ರದೇಶದ ನೈಸರ್ಗಿಕ ಅವಘಡಗಳನ್ನು ಎದುರಿಸಬಲ್ಲ ಸಾಮರ್ಥ್ಯವನ್ನು ರಸ್ತೆಗಳಿಗೆ ನೀಡುವುದು ಸಾಧ್ಯವಿದೆಯೆಂಬ ವರದಿ ನೀಡಿತು. ಮೂವರು ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠ ನಾಲ್ವರು ಸದಸ್ಯರ ವರದಿಯನ್ನು ಅಂಗೀಕರಿಸಿ, ಪರ್ವತ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ರಸ್ತೆಯ ಅಗಲ 5.5 ಮೀಟರುಗಳನ್ನು ಮೀರಬಾರದೆಂಬ ತೀರ್ಪನ್ನು 2020ರ ಸೆಪ್ಟೆಂಬರ್‌ನಲ್ಲಿ ನೀಡಿತು.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಇದರ ವಿರುದ್ಧ ಮರುಪರಿಶೀಲನಾ ಅರ್ಜಿ ಸಲ್ಲಿಸಿತು. ಆದರೆ ಈ ಮಧ್ಯೆ ಭಾರತ-ಚೀನಾ ಗಡಿಯ ಗಾಲ್ವನ್ ಪ್ರದೇಶದಲ್ಲಿ ಆದ ಘರ್ಷಣೆ ಮತ್ತು ತದನಂತರದ ಬೆಳವಣಿಗೆಗಳು ಪರ್ವತ ಪ್ರದೇಶದ ರಸ್ತೆಗಳಿಗೆ ರಾಷ್ಟ್ರೀಯ ಭದ್ರತೆಯ ಹೊಸ ಆಯಾಮವನ್ನು ನೀಡಿದವು. ಭಾರತ- ಚೀನಾ ಗಡಿಯುದ್ದದ ನೆಲಾಂಗ್, ಮಾನಾ ಪಾಸ್, ರಿಮ್‌ಕಿಮ್ ಪಾಸ್, ನಿತಿ ಪಾಸ್ ಮತ್ತು ಲಿಪುಲೇಕ್ ಪಾಸ್‌ಗಳೊಡನೆ ಸಂಪರ್ಕ ಕಲ್ಪಿಸುವ ಈ ಹೆದ್ದಾರಿಗಳು ಅಗಲಗೊಂಡು, ಸುಭದ್ರವಾಗಿ, ಎಲ್ಲ ಋತುಗಳಲ್ಲೂ ಬಳಸುವಂತಾಗದೆ ಯುದ್ಧೋಪಕರಣಗಳು, ಭಾರಿ ಫಿರಂಗಿಗಳು, ರಾಕೆಟ್ ಲಾಂಚರ್‌ಗಳು, ಸಾಮಾನು ಸರಂಜಾಮು ಮತ್ತು ಸೇನೆಯನ್ನು ತ್ವರಿತಗತಿಯಲ್ಲಿ ಗಡಿ ಭಾಗದಲ್ಲಿ ನಿಯೋಜಿಸುವುದು ಕಷ್ಟಸಾಧ್ಯವೆಂಬುದನ್ನು ಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಯಿತು. 3,000 ಕಿಲೊ ಭಾರದ ಬ್ರಹ್ಮೋಸ್ ಕ್ಷಿಪಣಿಗಳನ್ನು ಕಿರಿದಾದ ರಸ್ತೆಗಳಲ್ಲಿ ಗಡಿ ಭಾಗಕ್ಕೆ ಸಾಗಿಸುವ ಅತ್ಯಂತ ಪ್ರಯಾಸದ ಸವಾಲನ್ನು ವಿವರಿಸಲಾಯಿತು.



ಚೀನಾ ತನ್ನ ಗಡಿಭಾಗದಲ್ಲಿ ಅತ್ಯಾಧುನಿಕ ಮೂಲ-ಸೌಕರ್ಯವನ್ನು ನಿರ್ಮಿಸಿ, ಸೇನೆಯನ್ನು ಜಮಾವಣೆ ಮಾಡುತ್ತಿರುವ ಆತಂಕದ ಸಮಯದಲ್ಲಿ, ಆಧುನಿಕ ಹೆದ್ದಾರಿಗಳು ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದ ತೀರಾ ಅಗತ್ಯವೆಂಬ ವಾದವನ್ನು ಆಲಿಸಿದ ಕೋರ್ಟ್, ಹಿಂದಿನ ತೀರ್ಪನ್ನು ಮಾರ್ಪಡಿಸಿ, 10 ಮೀಟರ್ ಅಗಲದ ದ್ವಿಪಥ ರಸ್ತೆ ವಿಸ್ತರಣೆಗೆ ಕಳೆದ ತಿಂಗಳು ಅನುಮತಿ ನೀಡಿತು. ಆದರೆ ಈ ಪ್ರಕರಣದಲ್ಲಿ ಪರಿಸರ ಸಂರಕ್ಷಣೆಗೆ ಸೋಲಾಯಿತೇ? ಖಂಡಿತವಾಗಿಯೂ ಇಲ್ಲ. ಈ ತೀರ್ಪಿನಲ್ಲಿ ಇನ್ನೊಂದು ಮುಖ್ಯವಾದ ಭಾಗವಿದೆ. ನಿವೃತ್ತ ನ್ಯಾಯಮೂರ್ತಿ ಎ.ಕೆ.ಸಿಕ್ರಿ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಕಣ್ಗಾವಲು ಸಮಿತಿಯೊಂದನ್ನು ಕೋರ್ಟ್ ರಚಿಸಿದೆ. ಈ ಸಮಿತಿಯಲ್ಲಿ ಡೆಹ್ರಾಡೂನ್‌ನ ಫಾರೆಸ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ನಾಗಪುರದ ಎನ್‌ವಿರಾನ್‌ಮೆಂಟಲ್ ಎಂಜಿನಿಯರಿಂಗ್ ಇನ್‌ಸ್ಟಿಟ್ಯೂಟ್‌ನ ಪರಿಣತರಿದ್ದಾರೆ. ಈ ಮುಂಚೆ ಸುಪ್ರೀಂ ಕೋರ್ಟ್ ರಚಿಸಿದ್ದ ಉನ್ನತಾಧಿಕಾರ ಸಮಿತಿಯು ಪರಿಸರ ಸಂರಕ್ಷಣೆಗೆ ಶಿಫಾರಸು ಮಾಡಿದ್ದ ಎಲ್ಲ ಕ್ರಮಗಳನ್ನೂ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸು-ವಂತೆ ಈ ಕಣ್ಗಾವಲು ಸಮಿತಿ ನೋಡಿಕೊಳ್ಳಲಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ರಕ್ಷಣಾ ಸಚಿವಾಲಯ ಮತ್ತು ಈ ಯೋಜನೆಯನ್ನು ಕಾರ್ಯಗತ-ಗೊಳಿಸುತ್ತಿರುವ ಬಾರ್ಡರ್ ರೋಡ್ ಆರ್ಗನೈಸೇಶನ್, ಉತ್ತರಾಖಂಡದ ಲೋಕೋಪಯೋಗಿ ಇಲಾಖೆ ಮತ್ತು ನ್ಯಾಷನಲ್ ಹೈವೇ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಸಂಸ್ಥೆ ಪ್ರತೀ ತಿಂಗಳೂ ಕಣ್ಗಾವಲು ಸಮಿತಿಗೆ ವರದಿ ಸಲ್ಲಿಸಬೇಕು. ಸಮಿತಿಯು ಪ್ರತೀ ನಾಲ್ಕು ತಿಂಗಳಿಗೊಮ್ಮೆ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಬೇಕು. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಪರ್ವತ ಪ್ರದೇಶದ ಸೂಕ್ಷ್ಮವಲಯಗಳನ್ನು ಗುರುತಿಸಲು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆಯ ನೆರವನ್ನು ಪಡೆಯುವುದಾಗಿ ಹೇಳಿದೆ.

ರಾಷ್ಟ್ರೀಯ ಭದ್ರತೆ ಮತ್ತು ಪರಿಸರ ಸಂರಕ್ಷಣೆ ನಡುವೆ ಸಮನ್ವಯ, ಸಮತೋಲನಗಳನ್ನು ಸಾಧಿಸುವ ಪ್ರಯತ್ನ-ವನ್ನು ಸುಪ್ರೀಂ ಕೋರ್ಟ್ ಮಾಡಿದೆ. ಯೋಜನೆಯನ್ನು ಸಿದ್ಧಪಡಿಸುವ ಹಂತದಲ್ಲೇ ಸರ್ಕಾರ ಮತ್ತು ಪರಿಸರ ತಜ್ಞರು, ಸಂಘಟನೆಗಳು ಪ್ರಾಮಾಣಿಕ ಸಮಾಲೋಚನೆ ನಡೆಸಿ, ದೇಶದ, ಪರಿಸರದ, ಜನತೆಯ ಹಿತದೃಷ್ಟಿಯಿಂದ ಯೋಜನೆಯನ್ನು ಸಿದ್ಧಪಡಿಸುವ ಸಾಧ್ಯತೆಯನ್ನು ಪರಿಶೀಲಿಸುವಂತೆ ಕಳಕಳಿಯ ಸಲಹೆಯನ್ನೂ ಅದು ನೀಡಿದೆ.

ಚುರುಮುರಿ



ಸಂಕ್ರಾಂತಿ ಫಲಗಳು

● ಲಿಂಗರಾಜು ಡಿ.ಎಸ್.

2022ರ ಸಂಕ್ರಾಂತಿಯಲ್ಲಿ ಮಿಶ್ರ ಎಂಬ ಹೆಸರಿನ ಸಂಕ್ರಾಂತಿ ಪುರುಷನು ನಮೋ-ನಮೋ ಎನ್ನುತ್ತಾ ಹಸಿರು ಉಡುಗೆಯನ್ನು ಧರಿಸಿ ಕೈಯ್ಯಲ್ಲಿ ಧ್ವಜ ಮತ್ತು ಇವಿಎಂಗಳನ್ನು ಹಿಡಿದು ಶಾ-ದೂರ್ಲ ಅಥವಾ ಹುಲಿವಾಹನನಾಗಿ ಪಂಚ ರಾಜ್ಯಗಳಿಗೆ ತೆರಳುತ್ತಾನೆ. ರಾಜ್ಯಗಳ ಚುನಾವಣೆಯ ಮೇಲೆ ರೈತರ ಹಸಿರು ಪ್ರಭಾವ ದಟ್ಟವಾಗಿ ಬೀಳುವುದರೊಂದಿಗೆ ಪಕ್ಷಗಳಿಗೆ ಮಿಶ್ರ ಫಲ ಸಾಧ್ಯತೆಗಳು ಗೋಚರಿಸುತ್ತಿವೆ. ಸಂಕ್ರಾಂತಿ ಪುರುಷ ಕುಂಕುಮ ಮತ್ತು ಕೇಸರಿ ವಸ್ತ್ರ ಧರಿಸಿರುವುದರಿಂದ ಅವುಗಳ ಪ್ರಾಬಲ್ಯ ಹೆಚ್ಚಲಿದೆ. ಬೆಳ್ಳಿ ಮತ್ತು ಚಿನ್ನ ಗಗನಗಾಮಿಯಾಗಲಿವೆ.

ರಾಜಕಾರಣಿಗಳು ಜನೋದ್ಧಾರಕ್ಕಾಗಿ ಪರದೂಷಣ ಮಂತ್ರ ಜಪಿಸತೊಡಗುತ್ತಾರೆ. ರ‍್ಯಾಲಿ, ಸಭೆ-ಸಮಾರಂಭ, ಪಾದಯಾತ್ರೆಗಳಿಂದಾಗಿ ಜನರಿಗೆ ಉಚಿತ ಸೋಂಕು ಹಂಚಿಕೆ ಹೆಚ್ಚುವುದು. ನಾಯಕರಿಗೆ ಪಾದಗಳಲ್ಲಿ ಬಾವು, ಜ್ವರ ಸಂಭವ. ಮತಬಾಧೆ ನಿವಾರಣೆಗೆ ಚುನಾವಣೆಗಳಲ್ಲಿ ಬೂತುಚೇಷ್ಟೆ, ಬೂತುಬಲಿ ಪ್ರಸಂಗಗಳು ಹೆಚ್ಚಲಿವೆ. ಸ್ವಪಕ್ಷಗಾರರಿಗೆ ಅನುದಾನಗಳು ಹೆಚ್ಚುವುದರಿಂದ ಸರ್ಕಾರಕ್ಕೆ ಆಯುರ್ದಾನ. ರಾಜ್ಯ ಮಂತ್ರಿಗಳಿಗೆ ಸ್ಥಾನಪಲ್ಲಟ ಭಯ. ಪಿತೃಪಕ್ಷದಿಂದ ಮುಖಾಬೆಲೆ ಹೆಚ್ಚಳಕ್ಕೆ ವಾದಪೂಜೆ. ಮಾತೃಪಕ್ಷದಿಂದ ವೃಥಾಶ್ರಮ.

ಕಂತ್ರಾಟುದಾರರ ಪರ್ಸೆಂಟೇಜ್ ಕಾಯಿಲೆಗೆ ನಾಯಕರು ಮಂದಕರ್ಣರಾಗಲಿದ್ದಾರೆ. ರಸ್ತೆ ಗುಂಡಿಗಾರಿಕೆ ಹೆಚ್ಚಿ ಪಾಲಿಕೆಗಳಿಗೆ ಹಬ್ಬ. ಹೊಸ ಅನುದಾನ ಭಾಗ್ಯ. ಲಂಚಕೋರರು, ಕ್ಯಾಶು ಮುಚ್ಚಿಡುವ ಮುಚ್ಚಿಷ್ಟರ ಎಸಿಬಿ, ಲೋಕಾಯುಕ್ತ ಕೇಸುಗಳಿಗೆ ಪಿಂಚಣಿ ಪ್ರಯೋಗ ಸಾಧ್ಯತೆ.

ರೈತರಿಗೆ ಎಂದಿನಂತೆ ಒಣಬಡಿತ. ಖರ್ಚು, ಧನವ್ಯಯ, ಅಲ್ಪಲಾಭ. ಬಡಭರತರಿಗೆ ಬೆಲೆ ಹೇರಿಕೆ, ಜಿಎಸ್‌ಟಿ ಸಂಕಟ. ಕಚೇರಿಗಳಲ್ಲಿ ಕ್ಯಾಶುಪತಾಸ್ತ್ರ ಪ್ರಯೋಗದಿಂದ ವಿತ್ತಭ್ರಮೆ. ಬಂದ್, ಕರ್ಫ್ಯೂಗಳಿಂದಾಗಿ ಜನತೆಗೆ ಶಾಶ್ವತ ಗ್ರಹಣ ಬಾಧೆ.

ಕೊರೊನಾ ವೈರಸ್, ಡೆಲ್ಟಾಗಳಿಗಿಂತ ರಾಜಕಾರಣಿಗಳ ಮಂಗನ್ಯಾಸ ಹೆಚ್ಚು ಅಪಾಯಕಾರಿಯಾಗಲಿದೆ. ರೋಗಬಾಧೆಗಳಿಂದ ಪಾರಾಗಲು ಓಮಿಕ್ರಾಯ ನಮಃ, ಓಂ ಕೋವಿಡಾಯ ನಮಃ, ಹೋಂ ಕ್ವಾರಂಟೈನಾಯ-ನಮಃ ಎಂಬ ಗ್ರಹಶಾಂತಿ ಜಪ ಉತ್ತಮವು.

ಓಂ ಸುಖಃಪ್ರಾರಬ್ಧ ಪ್ರಾಪ್ತಿರಸ್ತು!

ಚರ್ಚೆ

'ಹೊಸ ಬರಹ' ಎಂಬ ನಡುಗಡ್ಡೆ!

ಕನ್ನಡ ವರ್ಣಮಾಲೆಗೆ ಸಂಬಂಧಿಸಿದಂತೆ ಈಗಿನ ಮತ್ತು ಮುಂದಿನ ತಲೆಮಾರಿನಲ್ಲಿ ಗೊಂದಲ ಮೂಡಿಸುವ ಅಗತ್ಯ ಇದೆಯೇ?

'ಹೊಸ ಬರಹ' ದ ಹೆಸರಿನಲ್ಲಿ ಕನ್ನಡ ವರ್ಣಮಾಲೆಗೆ ಕತ್ತರಿ ಪ್ರಯೋಗಕ್ಕೆ ಹೊರಟಿರುವುದನ್ನು ಪ್ರತಿಭಾ ನಂದಕುಮಾರ್ ಅವರು ವಿರೋಧಿಸಿರುವುದು (ಚರ್ಚೆ, ಜ. 7) ಅತ್ಯಂತ ಸರಿಯಾಗಿಯೇ ಇದೆ. ಯಾವುದೇ ಕಾಲದಲ್ಲೂ ಕನ್ನಡದಲ್ಲಿ ಆಡುನುಡಿ ಮತ್ತು ಬರವಣಿಗೆಯ ಭಾಷೆ ಒಂದೇ ಆಗಿರಲಿಲ್ಲ. ಹಳಗನ್ನಡದ ಕೃತಿಗಳಲ್ಲಿ ಬಳಕೆಯಾಗಿರುವ ಭಾಷೆ, ಸಾಹಿತ್ಯ ರಚನೆಗೋಸ್ಕರ ಬರಹಗಾರರು ರೂಪಿಸಿಕೊಂಡದ್ದೇ ವಿನಾ ಆ ಕಾಲದ ಜನರ ಕನ್ನಡವೇನಾಗಿರಲಿಲ್ಲ.

ನಡುಗನ್ನಡದ ಕಾಲದಲ್ಲಾದರೂ ಆಗಿನ ಗದ್ಯ, ಕಾವ್ಯ ಕೃತಿಗಳಲ್ಲಿ, ವಚನಗಳಲ್ಲಿ ಬಳಕೆಯಾಗಿರುವ ಭಾಷೆ ಕೂಡ ಜನರ ಆಡುನುಡಿಗೆ ಹತ್ತಿರವಾದ ಭಾಷೆಯಾಗಿದೆಯೇ ವಿನಾ ಆಡುನುಡಿಯ ತದ್ವತ್ ಅಲ್ಲ. ಅಲ್ಲೂ ಮಹಾ ಪ್ರಾಣಾಕ್ಷರಗಳಿವೆ. ಈಗಲಾದರೂ ಪ್ರಮಾಣಭಾಷೆಯಾಗಿ ಕರ್ನಾಟಕದಲ್ಲೆಲ್ಲಾ ಒಂದೇ ಭಾಷೆಯನ್ನು ಬಳಸುತ್ತಿದ್ದೇವೆ. ಅದರಲ್ಲಿ ಎಲ್ಲರಿಗೂ ಒಪ್ಪಿತವಾದ ಮಹಾಪ್ರಾಣಾಕ್ಷರಗಳು ಇರುವ ಭಾಷೆಯೇ ರೂಢಿಯಲ್ಲಿದೆ ಮತ್ತು ನಾವು ಆಡುವ ಕನ್ನಡಕ್ಕೂ ಅದಕ್ಕೂ ವ್ಯತ್ಯಾಸವಿದ್ದೇ ಇದೆ.

ಒಂದು ಭಾಷೆಗೆ ಸಾಧ್ಯವಾದಷ್ಟೂ ಜಗತ್ತಿನ ಯಾವುದೇ ಭಾಷೆಯ ಎಲ್ಲ ಬಗೆಯ ಉಚ್ಚಾರಗಳನ್ನೂ ಮಾಡಲು ಸಾಧ್ಯವಿರುವಂಥ ವರ್ಣಮಾಲೆಯಿದ್ದರೆ ಅದೊಂದು ಅನುಕೂಲವೇ ವಿನಾ ದೋಷ ಖಂಡಿತಾ ಅಲ್ಲ. ಕನ್ನಡ ವರ್ಣಮಾಲೆಯಲ್ಲಿ ಈಗಿರುವ ಅಕ್ಷರಗಳಿಂದ ಇಂದು ಅದು ಬಹುಮಟ್ಟಿಗೆ ಸಾಧ್ಯವಾಗುತ್ತಿರುವುದು ಎಲ್ಲರ ಅನುಭವಕ್ಕೆ ಬಂದಿರುವಂಥದ್ದೇ. ತಮಿಳಿನ ಮಿತ ಸಂಖ್ಯೆಯ ವರ್ಣಗಳಿಂದ ಅದು ಸಾಧ್ಯ-ವಿಲ್ಲವೆನ್ನುವುದು ಗೊತ್ತಿರುವಂಥದ್ದೇ. ಇಷ್ಟಾಗ್ಯೂ ಇಂಗ್ಲಿಷಿನ 'F' ಮತ್ತು 'Z' ಉಚ್ಚಾರ ಮಾಡಲು ನಾವು ನಮ್ಮ ವರ್ಣಮಾಲೆ ಅಪರ್ಯಾಪ್ತವೆನಿಸಿ 'ಫ'ದ ಕೆಳಗೆ ಮತ್ತು 'ಜ'ದ ಕೆಳಗೆ ಎರಡು ಚುಕ್ಕೆಗಳನ್ನು ಹಾಕುವ ಮೂಲಕ ಸರಿದೂಗಿಸಿಕೊಳ್ಳುತ್ತಿದ್ದೇವೆ.

ಈಗ ಸಾವಿರಕ್ಕೂ ಹೆಚ್ಚು ವರ್ಷಗಳಿಂದ ಇರುವ ಕೃತಿಗಳ ಭಾಷೆಯನ್ನು ಬರೆಯಲು ಅಥವಾ ಓದಿಕೊಳ್ಳಲು ಈ ಹೊಸ ಬರಹಕ್ಕೆ ಪರಿವರ್ತಿಸ-ಬೇಕೇ? ಹಾಗಿಲ್ಲದಿದ್ದರೆ ಈಗಿನ ಅಥವಾ ಇನ್ನು ಮುಂದಿನ ತಲೆಮಾರಿನವರಿಗೆ ಅವನ್ನು ಓದಲು ಈಗ ರೂಢಿಯಲ್ಲಿರುವ ಪ್ರಮಾಣ ಕನ್ನಡದ ವರ್ಣಮಾಲೆಯ ಜೊತೆಗೆ ಹೊಸ ಬರಹದ ವರ್ಣಮಾಲೆಯನ್ನೂ ಕಲಿಯಬೇಕಾಗುತ್ತದೆಯೇ? ಇಲ್ಲ, ಗೊಂದಲಕ್ಕೆ ಬೀಳುವುದೇ ಅವರ ಹಣೆಯಬರಹ ಆಗಬೇಕೇ?


ಕನ್ನಡದ ಮೇಲಿನ ಅತ್ಯುಗ್ರ ಅಭಿಮಾನದಿಂದ ಆಂಡಯ್ಯನು ಸಂಸ್ಕೃತ ಬಳಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಬರೀ ತದ್ಭವಗಳಿಂದ ಮತ್ತು ಕನ್ನಡ ಶಬ್ದಗಳಿಂದ ಕೃತಿ ರಚಿಸಿದ ಪ್ರಯೋಗ ಒಂದು ನಡುಗಡ್ಡೆಯಾಗಿಯೇ ಉಳಿದಿದೆ. ಈ ಹೊಸ ಬರಹ ಕೂಡ ಒಂದು ನಡುಗಡ್ಡೆ-ಯಾಗಿಯೇ ಉಳಿಯುತ್ತದೆ ಅಷ್ಟೆ.

ಡಾ. ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಎಲ್ಲರ ಕನ್ನಡ ಎಂದರೆ...

ಡಿ.ಎನ್.ಶಂಕರ ಬಟ್ ಅವರು ಮೂವತ್ತು ವರ್ಷಗಳಿಂದ ಪ್ರತಿಪಾದಿಸುತ್ತಿರುವ 'ಎಲ್ಲರ ಕನ್ನಡ' ಎಂಬ ಸಂಗತಿಯು ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂಬ ಉದ್ದೇಶವನ್ನು ಹೊಂದಿಲ್ಲ. ಅವರು ಹೇಳುತ್ತಿರುವುದು ಅತ್ಯಂತ ಸರಳವಾಗಿದೆ. 'ಕನ್ನಡ ಬರಹದಲ್ಲಿ ಮಹಾಪ್ರಾಣದಿಂದ ಕೂಡಿದ ಪದಗಳನ್ನು ಬರೆಯುವಾಗ, ಮಹಾಪ್ರಾಣದ ಜಾಗದಲ್ಲಿ ಅಲ್ಪ-ಪ್ರಾಣವನ್ನು ಬರೆದರೆ, ಅದನ್ನು ತಪ್ಪು ಎಂದು ಪರಿಗಣಿಸಬೇಡಿ'. ಉದಾಹರಣೆಗೆ: 1. ಭರತ ಖಂಡದ ಆರ್ಥಿಕ ಪರಿಸ್ಥಿತಿಯು ಈಗ ಸುಧಾರಿಸುತ್ತಿದೆ. 2. ಬರತ ಕಂಡದ ಆರ್ತಿಕ ಪರಿಸ್ತಿತಿಯು ಈಗ ಸುದಾರಿಸುತ್ತಿದೆ.

ಮೇಲ್ಕಂಡ ವಾಕ್ಯಗಳನ್ನು ಯಾವುದೇ ಕನ್ನಡಿಗ ಧ್ವನಿರೂಪದಲ್ಲಿ ಉಚ್ಚರಿಸಿದಾಗ ಒಂದೇ ಬಗೆಯಲ್ಲಿ ಇರುತ್ತದೆ. ಕಾರಣವೇನೆಂದರೆ, ಮಹಾಪ್ರಾಣಯುಕ್ತ-ವಾದ ಪದಗಳನ್ನು ಕನ್ನಡಿಗರು ಉಚ್ಚರಿಸುವಾಗ ಅಲ್ಪ-ಪ್ರಾಣಗಳಾಗಿಯೇ ಉಚ್ಚರಿಸುತ್ತಾರೆ.



ಕನ್ನಡಿಗರು ತಮ್ಮ ಬರಹದಲ್ಲಿ ಪ್ರಾಕೃತ, ಸಂಸ್ಕೃತ, ಅರೇಬಿಕ್, ಪರ್ಶಿಯನ್, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಿಂದ ಸಾವಿರಾರು ಪದಗಳನ್ನು ಪಡೆದುಕೊಂಡು ಬಳಸುತ್ತಿದ್ದಾರೆ. ಇವುಗಳಲ್ಲಿ ಸಂಸ್ಕೃತದಿಂದ ತೆಗೆದುಕೊಂಡಿರುವ ಪದಗಳನ್ನು ಹೊರತುಪಡಿಸಿ ಇನ್ನುಳಿದ ಅನ್ಯಭಾಷೆಯ ಪದಗಳನ್ನು ಕನ್ನಡ ಧ್ವನಿಮಾಗಳ ಉಚ್ಚಾರಣೆಗೆ ತಕ್ಕಂತೆಯೇ ಬರೆಯುತ್ತಿದ್ದಾರೆ. ಉದಾಹರಣೆಗೆ, 'ರಈಯತ್' ಎಂಬ ಅರೇಬಿಕ್ ಭಾಷೆಯ ಪದ ಕನ್ನಡಿಗರಲ್ಲಿ 'ರೈತ' ಎಂದು ಉಚ್ಚಾರಣೆಗೊಳ್ಳುತ್ತಿದೆ.

ಅನ್ಯ ಭಾಷೆಗಳಿಂದ ಸ್ವೀಕರಿಸಿದ ಪದಗಳನ್ನು ಕನ್ನಡಿಗರು ಹೇಗೆ ಉಚ್ಚರಿಸುತ್ತಿದ್ದಾರೆಯೋ ಹಾಗೆಯೇ ಬರಹದಲ್ಲಿ ಬರೆದಾಗ ಅವನ್ನು ಒಪ್ಪಿಕೊಂಡಿರುವಂತೆಯೇ ಮಹಾಪ್ರಾಣಯುಕ್ತವಾದ ಸಂಸ್ಕೃತ ಪದಗಳನ್ನು ಅಲ್ಪಪ್ರಾಣಯುಕ್ತವಾಗಿ ಬರೆಯುವುದನ್ನು ಕನ್ನಡ ಬರಹಲೋಕ ಒಪ್ಪಿಕೊಳ್ಳಬೇಕು ಎಂಬುದು ಶಂಕರ ಬಟ್ ಅವರ ನಿಲುವು.

ಇಂತಹ ನಿಲುವಿಗೆ ಕಾರಣವೇನೆಂದರೆ, ಕನ್ನಡಿಗ-ರಲ್ಲಿ ಬಹುತೇಕರು 'ಎಲ್ಲಿ ಮಹಾಪ್ರಾಣದ ಜಾಗದಲ್ಲಿ ಅಲ್ಪಪ್ರಾಣವನ್ನು ಬರೆದರೆ ಓದಿದವರು ನಮ್ಮನ್ನು ಅಪಹಾಸ್ಯಕ್ಕೆ ಗುರಿಮಾಡುತ್ತಾರೆಯೋ' ಎಂಬ ಹೆದರಿಕೆಯಿಂದ ಕನ್ನಡ ಬರಹದಲ್ಲಿ ತೊಡಗಲು ಹಿಂಜರಿಯುತ್ತಾರೆ. ಆದ್ದರಿಂದ ಕನ್ನಡ ಬರಹದಲ್ಲಿ ಅಲ್ಪಪ್ರಾಣ/ ಮಹಾಪ್ರಾಣಗಳನ್ನು ಸಮಾನವಾಗಿ ಪರಿಗಣಿಸಿದರೆ, ಆಗ ಕನ್ನಡ ಬರಹವನ್ನು ಯಾವುದೇ ಹಿಂಜರಿಕೆಯಿಲ್ಲದೆ ಕನ್ನಡಿಗರೆಲ್ಲರೂ ಮಾಡಬಹುದು. 'ಎಲ್ಲರ ಕನ್ನಡ' ಎಂಬುದು ಕನ್ನಡ ಬರಹಕ್ಕೆ ಸಂಬಂಧಪಟ್ಟ ಸಂಗತಿಯಾಗಿದೆ.

ಸಿ.ಪಿ.ನಾಗರಾಜ, ಬೆಂಗಳೂರು

ವಾಚಕರ ವಾಣಿ

ರಸ್ತೆ ಅಗೆಯದೆ ಪುನರ್‌ನಿರ್ಮಾಣ ಸರಿಯೇ?

ಇತ್ತೀಚಿನ ದಿನಗಳಲ್ಲಿ ಹಳ್ಳಿ, ನಗರಗಳೆನ್ನದೆ ರಸ್ತೆ ದುರಸ್ತಿ ಕಾರ್ಯ ಸರ್ವೇಸಾಮಾನ್ಯ ಎಂಬಂತೆ ನಡೆಯುತ್ತಲೇ ಇರುತ್ತದೆ. ಇದೆಲ್ಲ ಜನರ ಅನುಕೂಲಕ್ಕಾಗಿ ಎಂಬುದೇನೋ ಸರಿ. ಆದರೆ ಗುತ್ತಿಗೆದಾರರು ಹಳೆಯ ರಸ್ತೆಯನ್ನು ಅಗೆಯದೆ ಅದರ ಮೇಲೇ ಡಾಂಬರು/ ಕಾಂಕ್ರೀಟ್ ಹಾಕಿ ದುರಸ್ತಿ ಮಾಡಿದರೆ ಅದು ಮೊದಲಿದ್ದ ರಸ್ತೆಗಿಂತ ಎತ್ತರವಾಗುತ್ತದೆ. ಪ್ರತಿಬಾರಿಯೂ ಹೀಗೆಯೇ ಎತ್ತರವಾಗುತ್ತಾ ಹೋದರೆ ಅಕ್ಕಪಕ್ಕದ ಮನೆ, ಅಂಗಡಿಗಳ ಗತಿಯೇನು? ಎತ್ತರಗೊಳ್ಳುತ್ತಲೇ ಹೋಗುವ ಈ ರಸ್ತೆಯ ಸಲುವಾಗಿ ಅವರು ಪ್ರತಿಬಾರಿಯೂ ತಮ್ಮ ಕಟ್ಟಡಗಳನ್ನು ಕೆಡವಿ ಪುನರ್‌ನಿರ್ಮಾಣ ಮಾಡಲು ಸಾಧ್ಯವೇ? ಇದರಿಂದಾಗಿ ಎಷ್ಟೋ ಮನೆಗಳ ತ್ಯಾಜ್ಯಯುಕ್ತ ನೀರು ಚರಂಡಿ ಸೇರದೆ ಬಹಳ ಕಷ್ಟಕ್ಕೆ ಒಳಗಾದವರಿದ್ದಾರೆ. ಇನ್ನು ಮಳೆ ಬಂದರಂತೂ ಇವರ ಗತಿ ಕೇಳುವವರೇ ಇಲ್ಲ.

ಮೊದಲಿನ ರಸ್ತೆಯನ್ನು ಸಂಪೂರ್ಣ ತೆಗೆದುಹಾಕಿ, ಅದರಷ್ಟೇ ಎತ್ತರದಲ್ಲಿ ಪುನರ್‌ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಈ ಕಾರ್ಯಕ್ಕೆ ಸರ್ಕಾರ ಇಚ್ಛಾಶಕ್ತಿ ತೋರಿಸಬೇಕು. ಗುತ್ತಿಗೆ ಕಾರ್ಯದಲ್ಲಿ ಅಡಿಯಿಂದ ಮುಡಿಯವರೆಗೆ ತಿನ್ನುವವರೇ ಇದ್ದಾರೆಂದು, ಒಂದು ರೂಪಾಯಿಯ ಕೆಲಸವನ್ನು ಎರಡು ರೂಪಾಯಿಗೆ ಸರ್ಕಾರವೇ ನಿಗದಿಪಡಿಸುತ್ತಿರುವಾಗ ಡಿಗ್ಗಿಂಗ್ ಕಾರ್ಯ ಸರಿಯಾದ ಕ್ರಮದಲ್ಲಿ ಆಗಬೇಕಲ್ಲವೇ? ಸಾರ್ವಜನಿಕರು ಸಹ ತಮ್ಮ ಮನೆಯ ಮುಂದೆ ಡಿಗ್ಗಿಂಗ್ ಕಾರ್ಯ ನಿರ್ವಹಿಸದೇ ಇದ್ದಲ್ಲಿ ತಕ್ಷಣವೇ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ತಂದು, ಈ ಕಾರ್ಯ ಆಗಲೇಬೇಕೆಂದು ಒತ್ತಾಯಿಸಬೇಕು. ಇಲಾಖೆಯ ಪಟ್ಟಭದ್ರ ಹಿತಾಸಕ್ತಿಗಳಿಂದ ತೊಂದರೆಯಾದರೆ ನ್ಯಾಯಾಂಗ ವ್ಯವಸ್ಥೆಯ ಸದುಪಯೋಗ ಪಡೆಯಬೇಕು.

ಡಾ. ಜಗದೀಶ ನೂಲಿನವರ, ಯಾದಗಿರಿ

ಬ್ಯಾಂಕ್ ಸಾಲ: ನಿಯಮ ಮರೆಯುವುದೇಕೆ?

ಬ್ಯಾಂಕ್ ಸಾಲವನ್ನು ಮಂಜೂರು ಮಾಡದಿರುವುದಕ್ಕೆ ಗ್ರಾಹಕನೊಬ್ಬ ಬ್ಯಾಂಕಿಗೆ ಬೆಂಕಿ ಹಚ್ಚಿರುವ ಸುದ್ದಿ ವರದಿಯಾಗಿದೆ. ಈ ವರದಿಯ ಸತ್ಯಾಸತ್ಯತೆ ಅಸ್ಪಷ್ಟವಾಗಿದೆ. ಆದರೆ, ಬ್ಯಾಂಕ್ ಸಾಲವು ಗ್ರಾಹಕನ ಹಕ್ಕಾಗಿ ಪರಿಣಮಿಸಿರುವ ಇತ್ತೀಚಿನ ದಿನಗಳಲ್ಲಿ ಈ ವರದಿಯನ್ನು ತಳ್ಳಿಹಾಕಲಾಗದು. ಜನರು ಮೇಜು ಕುಟ್ಟಿ, ಧಮಕಿ ಹಾಕಿ ಬ್ಯಾಂಕ್ ಸಾಲವನ್ನು ಕೇಳುವ ಮತ್ತು ಹೆಚ್ಚು ಸಾಲವನ್ನು ನೀಡುವಂತೆ ಬ್ಯಾಂಕುಗಳ ಮೇಲೆ ಸರ್ಕಾರ ಒತ್ತಡ ಹಾಕುವ ಪರಿಸ್ಥಿತಿಯಲ್ಲಿ ಬ್ಯಾಂಕುಗಳಲ್ಲಿ ಇಂತಹ ಘಟನೆಗಳು ಸಾಮಾನ್ಯ. ಬ್ಯಾಂಕುಗಳು ಸಾಲ ನೀಡುವಾಗ ಸರ್ಕಾರ ನಿಗದಿಪಡಿಸಿದ ಹಲವು ನಿಯಮಾವಳಿಗಳ ಅನ್ವಯ ಸಾಲ ನೀಡುತ್ತವೆ ಎನ್ನುವುದನ್ನು ಮರೆತು ಕೆಲವು ಗ್ರಾಹಕರು ಸಾಲಕ್ಕಾಗಿ ಬ್ಯಾಂಕುಗಳನ್ನು ಒತ್ತಾಯಿಸುವ ಪ್ರಮೇಯಗಳೂ ಇರುತ್ತವೆ. ಜನಾರ್ದನ ಪೂಜಾರಿಯವರ ಸಾಲಮೇಳದ ದಿನಗಳಲ್ಲಿ ಗ್ರಾಹಕರು ಮ್ಯಾನೇಜರ್ ಟೇಬಲ್ ಮೇಲೆ ರೇಷನ್ ಕಾರ್ಡ್ ಇರಿಸಿ ಸಾಲ ಕೇಳಿದ ಉದಾಹರಣೆಗಳು ಇವೆ.

ಸಾಲಕ್ಕಾಗಿ ಬ್ಯಾಂಕಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಗ್ರಾಹಕನ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸದ ಕಾರಣವೊಡ್ಡಿ ಬ್ಯಾಂಕ್ ಅನ್ನೇ ತರಾಟೆಗೆ ತೆಗೆದುಕೊಂಡರೆ ಆಶ್ಚರ್ಯವಿಲ್ಲ. ಬ್ಯಾಂಕ್ ಸಾಲ ನೀಡಲಿಲ್ಲವೆಂದು ಬೊಬ್ಬೆ ಹೊಡೆಯುವವರು ಎಂದಾದರೂ ಗ್ರಾಹಕ ಬ್ಯಾಂಕ್ ಸಾಲ ಮರುಪಾವತಿಸಿಲ್ಲ ಎಂದು ಚಿಂತಿಸುವರೇ? ಸಾಲ ವಸೂಲಿ ಮಾಡಲಿಲ್ಲವೆಂದು ಸಂಬಂಧಪಟ್ಟ ಸಿಬ್ಬಂದಿಯನ್ನೇ ಶಿಕ್ಷಿಸುತ್ತಾರೆ.

ರಮಾನಂದ ಶರ್ಮಾ, ಬೆಂಗಳೂರು

ನಿವೃತ್ತಿ ವಯಸ್ಸು ಏರಿಕೆ: ಮಾರಕ ನಿರ್ಧಾರ

ನಿವೃತ್ತಿ ವಯಸ್ಸು ಹೆಚ್ಚಿಸುವುದು ಯುವಪೀಳಿಗೆಗೆ ಮಾರಕವಾಗುವ ನಿರ್ಧಾರ. ಯಾವುದೇ ರಾಜ್ಯ ತನ್ನ ನೌಕರರ ನಿವೃತ್ತಿ ವಯಸ್ಸು ನಿಗದಿ ಮಾಡುವ ಮುನ್ನ ಸಮಾಜದ ಮೇಲೆ ಅದರಿಂದಾಗುವ ದುಷ್ಪರಿಣಾಮದ ಬಗ್ಗೆ ಅವಲೋಕಿಸಬೇಕಿದೆ. ಸರ್ಕಾರಿ ನೌಕರರ ನಿವೃತ್ತಿ ವಯಸ್ಸು 55 ವರ್ಷ ಇದ್ದಾಗ ಸಮಾಜದಲ್ಲಿ ನಿರುದ್ಯೋಗ ಸಮಸ್ಯೆ ಇರಲಿಲ್ಲ. ಈ ಮಿತಿಯನ್ನು 58 ವರ್ಷಕ್ಕೆ ಏರಿಸಿದಾಗ ತಕ್ಕಮಟ್ಟಿಗೆ ನಿರುದ್ಯೋಗ ಸಮಸ್ಯೆ ಕಾಡಲಾರಂಭಿಸಿತು. ಅದನ್ನು 60 ವರ್ಷಕ್ಕೆ ಹೆಚ್ಚಿಸಿದಾಗ ಸಮಸ್ಯೆ ಉಲ್ಬಣಗೊಂಡಿದ್ದನ್ನು ಅಂಕಿಅಂಶಗಳೇ ದೃಢಪಡಿಸುತ್ತವೆ.

ಇದರ ನಡುವೆ ಆಂಧ್ರಪ್ರದೇಶ ಸರ್ಕಾರ ತನ್ನ ನೌಕರರ ನಿವೃತ್ತಿ ವಯಸ್ಸನ್ನು 62 ವರ್ಷಕ್ಕೆ ಹೆಚ್ಚಿಸಲು ಮುಂದಾಗಿರುವುದು ಉದ್ಯೋಗಾಕಾಂಕ್ಷಿ ಯುವಪೀಳಿಗೆಯ ಕನಸನ್ನು ನುಚ್ಚುನೂರು ಮಾಡುವಂತಿದೆ. ತಜ್ಞರ ವರದಿ ಇಲ್ಲದೆ, ನೌಕರರ ಓಲೈಕೆಗಾಗಿ ಏಕಾಏಕಿ ತೆಗೆದುಕೊಳ್ಳುವ ಇಂತಹ ನಿರ್ಧಾರಗಳು ಯುವಪೀಳಿಗೆಗಷ್ಟೇ ಅಲ್ಲದೆ ಸಮಾಜಕ್ಕೂ ಮಾರಕವಾಗಲಿವೆ. ನಿವೃತ್ತಿ ವಯಸ್ಸು ಹೆಚ್ಚಳದಿಂದ ಸಂಭ್ರಮಿಸುವ ನಿವೃತ್ತಿ ಅಂಚಿನಲ್ಲಿರುವ ನೌಕರರು ಯುವಪೀಳಿಗೆಗಾಗುವ ನಿರುದ್ಯೋಗ ಸಮಸ್ಯೆ ಅರಿತು ಸ್ವತಃ ಈ ನೂತನ ಆದೇಶವನ್ನು ತಿರಸ್ಕರಿಸುವುದು ಒಳಿತು.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಮೊಬೈಲ್ ನಿಷ್ಕ್ರಿಯಗೊಳ್ಳುವ ಈ ಪರಿ...

ನಾನು ಮೊಬೈಲ್ ಬಳಸಲಾರಂಭಿಸಿದ ಕಳೆದ ಇಪ್ಪತ್ತು ವರ್ಷಗಳಿಂದಲೂ ಬಿಎಸ್‌ಎನ್‌ಎಲ್ ಚಂದಾದಾರನಾಗಿದ್ದೇನೆ. ಇದಕ್ಕೆ ಕಾರಣ, ನನ್ನ ಮಿತಿಯಲ್ಲೇ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಬೆಂಬಲವಾಗಿ ನಿಲ್ಲುತ್ತಾ ಅದು ಖಾಸಗಿ ಸಂಸ್ಥೆಗಳೊಡನೆಯ ಸ್ಪರ್ಧೆಯಲ್ಲಿ ಸೋತು ಕಣ್ಮುಚ್ಚಬಾರದೆಂಬ ಕಾಳಜಿ. ಆದರೆ ಕೆಲವು ವರ್ಷಗಳಿಂದ ಇದರ ಸೇವೆಯ ಗುಣಮಟ್ಟ ಕಳಪೆಯಾಗುತ್ತಾ ಹೋಗಿ ನನ್ನ ಈ ಬದ್ಧತೆ ತಪ್ಪೇನೋ ಅನ್ನಿಸತೊಡಗಿದೆ. ಯಾವಾಗ ನೋಡಿದರೂ ಸರ್ವರ್ ಇಲ್ಲವೇ ನೆಟ್‌ವರ್ಕ್ ಸಮಸ್ಯೆ.

ವಿಚಿತ್ರವೆಂದರೆ, ನಮ್ಮೂರಿನಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡ ಅವಧಿಯುದ್ದಕ್ಕೂ ಮೊಬೈಲ್ ಕೆಲಸ ಮಾಡುವುದಿಲ್ಲ. ವಿದ್ಯುತ್ ಪೂರೈಕೆಯನ್ನು ಎಸ್ಕಾಂ ತನ್ನದೇ ಕಾರಣಗಳಿಗಾಗಿ (ಉದಾ: ರಿಪೇರಿ ಕೆಲಸ) ಇಡೀ ಹಗಲು ಸ್ಥಗಿತಗೊಳಿಸಿದರೆ, ಸ್ಥಗಿತಗೊಂಡ ಪ್ರದೇಶದಲ್ಲಿ ಮೊಬೈಲ್ ನಿಷ್ಕ್ರಿಯವಾಗುತ್ತದೆ. ನಮ್ಮೂರು ಸ್ಮಾರ್ಟ್ ಸಿಟಿಯಾಗುತ್ತಿರುವ ಸಿದ್ಧತೆಯಲ್ಲಿರುವುದರಿಂದ ಹಲವು ಕಡೆ ಹಲವು ಕಾಮಗಾರಿಗಳು ನಡೆಯುತ್ತಿದ್ದು, ಹಲವು ಸಂದರ್ಭಗಳಲ್ಲಿ ಅಲ್ಲಲ್ಲ ವಿದ್ಯುತ್ ಪೂರೈಕೆ ಸ್ಥಗಿತಗೊಂಡು ನಮ್ಮ ಮೊಬೈಲ್‌ಗಳೂ ಸ್ಥಗಿತಗೊಳ್ಳುತ್ತವೆ.

ಈ ಗೋಳನ್ನು ಕೇಳುವವರು ಯಾರೂ ಇಲ್ಲ. ಹುಡುಕಿಕೊಂಡು ಹೋಗಿ ಹೇಳಿದರೆ, ಸಿಬ್ಬಂದಿಯ ಅತೀವ ಕೊರತೆಯ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾರೆ. ಹಾಗಾದರೆ ಗ್ರಾಹಕರ ಗತಿ?

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.


ಸಂವಾದದಲ್ಲಿ ಚಂಪಾ

ಕನ್ನಡದ ಗುಡಿ ಕಟ್ಟಿದ್ದ ಚಂಪಾ

ಚಂಪಾ ನೆನಪುಗಳು

ಸರ್ಕಾರಕ್ಕೆ ಸಡ್ಡು

2006ರಲ್ಲಿ ಶಿವಮೊಗ್ಗದಲ್ಲಿ 73 ನೇ ಸಾಹಿತ್ಯ ಸಮ್ಮೇಳನ ನಡೆದಾಗ ಚಂದ್ರಶೇಖರ ಪಾಟೀಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಪ್ರೊ. ಕೆ.ನಿಸಾರ್ ಅಹಮದ್ ಸಮ್ಮೇಳನದ ಅಧ್ಯಕ್ಷರು. ಆಗ ಜೆಡಿಎಸ್–ಬಿಜೆಪಿ 20:20 ಸರ್ಕಾರ. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಮತ್ತು ಬಿ.ಎಸ್.ಯಡಿಯೂರಪ್ಪ ಉಪಮುಖ್ಯಮಂತ್ರಿ ಆಗಿದ್ದರು. ಗೌರಿಲಂಕೇಶ್ ಮತ್ತು ಕಲ್ಕುಳಿ ವಿಠಲ ಹೆಗ್ಡೆ ಅವರನ್ನು ಸಮ್ಮೇಳನದ ಗೋಷ್ಠಿಯೊಂದಕ್ಕೆ ಕರೆದ ಬಗ್ಗೆ ಸಂಘಪರಿವಾರ ಮತ್ತು ಬಿಜೆಪಿಯಿಂದ ವಿರೋಧ ವ್ಯಕ್ತವಾಯಿತು. 'ಸಮ್ಮೇಳನಕ್ಕೆ ಸರ್ಕಾರ ಹಣ ಕೊಟ್ಟಿರುವುದರಿಂದ ಸರ್ಕಾರ ಹೇಳಿದಂತೆ ಕೇಳಬೇಕು. 'ವಿವಾದಾತ್ಮಕ ವ್ಯಕ್ತಿ' ಗಳನ್ನು ಸಮ್ಮೇಳನಕ್ಕೆ ಕರೆಯಬಾರದು' ಎಂದು ಸರ್ಕಾರ ಕಟ್ಟಪ್ಪಣೆ ಮಾಡಿತು. ಆದರೆ ಅದಕ್ಕೆ ಚಂಪಾ ಜಗ್ಗಲಿಲ್ಲ. 'ಸಮ್ಮೇಳನಕ್ಕೆ ಹಣ ಕೊಡುವುದು ನಿಮ್ಮ ಕರ್ತವ್ಯ, ಕೊಟ್ಟಿದ್ದೀರಿ. ಕನ್ನಡಿಗರ ಹಣವನ್ನು ಕೊಟ್ಟಿದ್ದೀರಿ ಅಷ್ಟೆ. ಹಣ ಕೊಟ್ಟ ಮಾತ್ರಕ್ಕೆ ಇಂತಹವರನ್ನು ಕರೆಯಬೇಕು, ಇಂತಹವರನ್ನು ಕರೆಯಬಾರದು ಎಂದು ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದು ಹೇಳಿದರಲ್ಲದೆ ಗೌರಿ ಮತ್ತು ವಿಠಲ ಹೆಗ್ಡೆ ಇಬ್ಬರಿಗೂ ಅವಕಾಶ ನೀಡಿದರು.

ಗೋಕಾಕ್ ಚಳವಳಿಯ ಕಿಡಿ

1980ರಲ್ಲಿ ಪ್ರೊ.ವಿ.ಕೃ.ಗೋಕಾಕ್ ನೇತೃತ್ವದ ಸಮಿತಿ ಶಾಲೆಗಳಲ್ಲಿ ಭಾಷಾ ಕಲಿಕೆ ಕುರಿತು ಅಭಿಪ್ರಾಯ ಸಂಗ್ರಹಿಸಲು ಧಾರವಾಡಕ್ಕೆ ಹೋದಾಗ 'ಗೋಕಾಕ್ ಗೋ ಬ್ಯಾಕ್' ಎಂಬ ಫಲಕ ಹಿಡಿದು ಚಂಪಾ ಧರಣಿ ನಡೆಸಿದರು. ಗೋಕಾಕ್ ಭಾಷಾ ಸೂತ್ರವನ್ನು ಅನುಷ್ಠಾನ ಮಾಡಲು ಸರ್ಕಾರ ನಿರಾಸಕ್ತಿ ತೋರಿತ್ತು. ಅದನ್ನು ಪ್ರತಿಭಟಿಸಲು ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿ ಅಸ್ತಿತ್ವಕ್ಕೆ ಬಂದಿತು. ಚಂಪಾ ಇದರ ಸ್ಥಾಪಕ ಕಾರ್ಯದರ್ಶಿಯಾಗಿದ್ದರು. ಸಮಿತಿ 1982 ರ ಫೆಬ್ರುವರಿ 23ರಂದು ಧಾರವಾಡ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಹಿರಿಯ ಸಾಹಿತಿಗಳ ನೇತೃತ್ವದಲ್ಲಿ ಧರಣಿ ನಡೆಸಿತು. ಈ ಧರಣಿಯೇ ಗೋಕಾಕ್ ಚಳವಳಿಯಾಯಿತು. ಡಾ.ರಾಜ್‌ಕುಮಾರ್ ಅವರನ್ನು ಈ ಹೋರಾಟಕ್ಕೆ ಎಳೆದು ತರಲು ಚಂಪಾ ಪ್ರಮುಖ ಕಾರಣರಾದರು ಎಂದು ಕನ್ನಡ ಗೆಳೆಯರ ಬಳಗದ ರಾ.ನಂ. ಚಂದ್ರಶೇಖರ ನೆನಪಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

ಚಂಪಾ ಅವರು 2004ರಿಂದ 2008ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಅದರ ಹಿಂದಿನ ಅವಧಿಗೂ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಸೋತಿದ್ದರು. ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಅವರು ಸಾಹಿತ್ಯ ಪರಿಷತ್ತನ್ನು ಕನ್ನಡ ಪರ ಹೋರಾಟ ವೇದಿಕೆಯನ್ನಾಗಿ ರೂಪಿಸಿದರು. ಈ ಸಂದರ್ಭದಲ್ಲೇ ರಾಜ್ಯ ಸರ್ಕಾರ 1ನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ನಿರ್ಧಾರ ಮಾಡಿತು. ಆಗ ಪರಿಷತ್ತಿನ ನೇತೃತ್ವದಲ್ಲಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ನಡೆಯಿತು.

ರಾಜಕೀಯಕ್ಕೂ ಪ್ರವೇಶ

ರಾಜಕೀಯ ಪಕ್ಷಗಳ ಜತೆಗೂ ನಂಟು ಹೊಂದಿದ್ದರು. ಜನತಾಪಕ್ಷದ ಸರ್ಕಾರ ಇದ್ದಾಗ ಆ ಪಕ್ಷದ ಸಂಚಾಲಕರಾಗಿದ್ದರು. ಕನ್ನಡನಾಡು ಪಕ್ಷ, ಕೆಜೆಪಿ ಜತೆಗೂ ಚಂಪಾ ನಂಟು ಹೊಂದಿದ್ದರು. ಕೆಜೆಪಿಯ ಪ್ರಣಾಳಿಕೆ ರಚನೆಯಲ್ಲೂ ಪ್ರಮುಖ ಪಾತ್ರವಹಿಸಿದ್ದರು.

ಇಂಗ್ಲಿಷ್ ಫಲಕ ಇಳಿಸಿದರು

ಚಂಪಾ ಯಾವುದೇ ಹುದ್ದೆಯಲ್ಲಿ ಇದ್ದರೂ ಕನ್ನಡ ಪರ ಹೋರಾಟ ಮರೆತವರಲ್ಲ. ಕನ್ನಡ ಪರ ಹೋರಾಟದ ಯಾವುದೇ ವಿಚಾರ ಬಂದಾಗ, ಕನ್ನಡ ಪರ ಹೋರಾಟವನ್ನೇ ಆಯ್ಕೆ ಮಾಡಿಕೊಂಡರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಬ್ರಿಗೇಡ್ ರಸ್ತೆ, ಎಂ.ಜಿ.ರಸ್ತೆಯಲ್ಲಿ ಕನ್ನಡೇತರ ನಾಮಫಲಕಗಳನ್ನು ಕೆಳಗಿಳಿಸಿದ್ದರು.

ಸಾಹಿತಿಗಳ ಮಕ್ಕಳ ಇಂಗ್ಲಿಷ್ ಮಾಧ್ಯಮ

ಕನ್ನಡ ಚಳವಳಿಯ ನೇತಾರರೇ ತಮ್ಮ ಮಕ್ಕಳನ್ನು ಕಾನ್ವೆಂಟ್ (ಇಂಗ್ಲಿಷ್ ಮಾಧ್ಯಮ) ಶಾಲೆಗಳಿಗೆ ಕಳುಹಿಸುತ್ತಾರೆ ಎಂಬ ವ್ಯಾಪಕ ಟೀಕೆಗಳು ಬಂದಾಗ, 'ಕನ್ನಡ ಹೋರಾಟಗಾರರ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದುತ್ತಿರುವುದು ವಾಸ್ತವ. ಇದು ದ್ವಂದ್ವ ನೀತಿ, ಗೋಸುಂಬೆತನ ಅಷ್ಟೆ' ಎಂದು ಚಂಪಾ ಕುಟುಕಿದ್ದರು. ಚಂಪಾ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸಿದ್ದಾರೆ.

• ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

1957ರ ಕಾಲಘಟ್ಟ. ಡಾ. ವಿ.ಕೃ.ಗೋಕಾಕರು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದರು. ಆಶುಭಾಷಣ ಸ್ಪರ್ಧೆಯ ಹಿಂದಿ ಭಾಷಣದಲ್ಲಿ ನನಗೆ ಮೊದಲ ಬಹುಮಾನ ಬಂದಿತ್ತು. 2ನೇ ಬಹುಮಾನ ಪಡೆದಿದ್ದ ಚಂಪಾ (ಡಾ. ಚಂದ್ರಶೇಖರ ಪಾಟೀಲ) ನನ್ನ ತರಗತಿಯತ್ತ ಬಂದು ಅಭಿನಂದನೆ ಹೇಳಿದ. ನಾನು ನಿನ್ನಷ್ಟು ಚೆಂದ ಮಾತಾಡಲಿಲ್ಲ. ಇನ್ನು ಮುಂದೆ ನಾನು ಹಿಂದಿ ಮಾತನಾಡುವುದಿಲ್ಲ' ಎಂಬ ನಿರ್ಧಾರ ತಗೆದುಕೊಂಡಿದ್ದ.

ವಯಸ್ಸಿನಲ್ಲಿ ಆರು ತಿಂಗಳು ದೊಡ್ಡವನಾದ ಚಂಪಾ, ಕಲಿಯುವುದರಲ್ಲಿ ನನಗಿಂತ ಒಂದು ವರ್ಷ ಮುಂದಿದ್ದ. ಆಯ್ಕೆ ಹಾಗೂ ಮೆಚ್ಚುಗೆ ಏಕಕಾಲಕ್ಕೆ ತೆಗೆದುಕೊಳ್ಳುವುದು ಆತನ ಸ್ವಭಾವವಾಗಿತ್ತು. ಕೊನೆಯವರೆಗೂ ಎಷ್ಟೇ ಜಗಳ ಮಾಡಿಕೊಂಡರೂ, ಸ್ನೇಹವನ್ನು ಮರೆತಿರಲಿಲ್ಲ.

ಗೋಕಾಕರ ಮನೆಯಲ್ಲಿ ಪ್ರತಿ ಭಾನುವಾರ ಸೇರುತ್ತಿದ್ದ ಚಂಪಾ, ಡಾ.ಗಿರಡ್ಡಿ ಗೋವಿಂದರಾಜ ಹಾಗೂ ಇನ್ನೂ ಅನೇಕರು ಸ್ನೇಹ ಕುಂಜ ಎಂಬ ಗುಂಪು ಕಟ್ಟಿಕೊಂಡು ಅಲ್ಲಿ ನಮ್ಮ ಬರಹಗಳ ಓದು, ಟೀಕೆ, ವಿಮರ್ಶೆಆರಂಭಿಸಿದೆವು. ಆ ಹೊತ್ತಿಗೆ 'ಬಾನುಲಿ' ಎಂಬ ಕವನ ಸಂಕಲನ ಪ್ರಕಟಿಸಿದ್ದ ಚಂಪಾಗೆ ಅಂದಿಗೆ ಅತ್ಯಧಿಕ ₹750 ನಗದು ಪುರಸ್ಕಾರದ ಬಹುಮಾನ ಲಭಿಸಿತ್ತು.

1964ರ ಮೇನಲ್ಲಿ ಗೋಕಾಕರನ್ನು ನೋಡಲು ಮೊದಲ ಸಲ ಬೆಂಗಳೂರಿಗೆ ಹೋಗಿದ್ದೆವು. ಅಂದು ನರಸಿಂಹಸ್ವಾಮಿ, ವಿ.ಸೀತಾರಾಮಯ್ಯ, ಡಿವಿಜಿ ಅವರನ್ನು ಭೇಟಿಯಾದೆವು. ಅಲ್ಲಿಂದ ಮೈಸೂರಿಗೆ ತೆರಳಿ ಅಡಿಗರನ್ನು ಭೇಟಿಯಾದೆವು. ಕುವೆಂಪು ಹಾಗೂ ತೇಜಸ್ವಿ ಭೇಟಿ ಸಾಧ್ಯವಾಗಲಿಲ್ಲ. ಲಹರಿ ಪತ್ರಿಕೆ ನೋಡಬೇಕೆಂಬ ನಮ್ಮ ಹಂಬಲ ಈಡೇರದಿದ್ದರೂ, ಸಂಕ್ರಮಣ ಆರಂಭ ಅಲ್ಲಿಯೇ ಆಯಿತು.

ಧಾರವಾಡಕ್ಕೆ ಮರಳಿ ಈ ಕುರಿತು ಚರ್ಚೆ ನಡೆಸುತ್ತಿದ್ದ ಸಂದರ್ಭದಲ್ಲಿ ಬಂದ ಗಿರಡ್ಡಿ, ನಾನೂ ನಿಮ್ಮ ಕೂಡ ಸೇರ್ಕೋತೀನಿ ಅಂದ. ಎಲ್ಲರೂ ತಲಾ ₹10 ಹಾಕಿ 'ಸಂಕ್ರಮಣ' ಆರಂಭಿಸಿದೆವು. ಸಂಕ್ರಮಣದಲ್ಲಿ ಕವಿತೆ ನನ್ನ ಕ್ಷೇತ್ರ, ಗಿರಡ್ಡಿ ಕಥೆ ಹಾಗೂ ವಿಮರ್ಶೆಗಳ್ನು ನೋಡಿಕೊಳ್ಳುತ್ತಿದ್ದ. ಚಂಪಾ ನಾಟಕ, ವಿಮರ್ಶೆ ಹಾಗೂ ವ್ಯಂಗ್ಯ ಬರಹಗಳತ್ತ ಒಲವು ತೋರಿದ. ಗಿರಡ್ಡಿ ಹಾಗೂ ಚಂಪಾ ಅವರ ಬರಹದ ಒಲವು ನಂತರ ಈ ಕ್ಷೇತ್ರಗಳತ್ತಲೇ ವಾಲಿತು. ಸಂಕ್ರಮಣದ 11ನೇ ವರ್ಷ ನಡೆಯುತ್ತಿದ್ದ ಸಂದರ್ಭದಲ್ಲಿ 'ಮನೋಹರ'ವಾಗುತ್ತಿದ್ದ ಗಿರಡ್ಡಿ ವರ್ತನೆ ಕುರಿತೇ ಚಂಪಾ ಲೇಖನ ಬರೆದ. ಅದರಿಂದ ಬೇಸರಗೊಂಡ ಗಿರಡ್ಡಿ, ಪತ್ರಿಕೆಯಿಂದ ಹೊರ ನಡೆದ.

ನಂತರ ಮೈಸೂರಿನಲ್ಲಿ ನಡೆದ ಬರಹಗಾರರ ಒಕ್ಕೂಟದ ಸಭೆಯಲ್ಲಿ ಬ್ರಾಹ್ಮಣರ ಪತ್ರಿಕೆಗೆ ಬರೆಯುವುದು ಹಾಗೂ ತರಿಸುವುದನ್ನು ನಿಲ್ಲಿಸುವ ನಿರ್ಣಯ ತೆಗೆದುಕೊಳ್ಳಲಾಯಿತು.


ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಸೋಮವಾರ ಚಂಪಾ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸುವ ವೇಳೆ ಪತ್ನಿ ನೀಲಾ ಪಾಟೀಲ್ (ಬಲಗಡೆಯವರು) ಮತ್ತು ಕುಟುಂಬ ಸದಸ್ಯರು ಭಾವುಕರಾದರು ಪ್ರಜಾವಾಣಿ ಚಿತ್ರ/ ರಂಜು ಪಿ

ಪ್ರೊ. ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶರದ್ದು ಮುಖ್ಯಧ್ವನಿ. ಜಿ.ಎಸ್.ಶಿವರುದ್ರಪ್ಪ ಅವರ ಅಧ್ಯಕ್ಷರಾಗಿ, ಚಂಪಾ ಕಾರ್ಯದರ್ಶಿಯಾಗಿದ್ದರು ಆ ಒಕ್ಕೂಟಕ್ಕೆ. ಇದಕ್ಕೆ ನಮ್ಮ 'ಸಂಕ್ರಮಣ' ಬಳಸಿಕೊಳ್ಳುವ ನಿರ್ಧಾರಕ್ಕೆ ನನ್ನ ವಿರೋಧವಿತ್ತು. ಇವ'ಬಿಡುವುದಾದರೆ ಬಿಟ್ಟುಬಿಡು. ನಾನೇ ಪತ್ರಿಕೆಯನ್ನು ನೋಡಿಕೊಳ್ಳುತ್ತೇನೆ' ಎಂದು ಚಂಪಾ ಹೇಳಿದ. ನಂತರ ಪತ್ರಿಕೆಯನ್ನು ತಾನೊಬ್ಬನೇ ನಡೆಸಿದ.

ರಾಜಕೀಯ ಒಲವು ಹೊಂದಿದ್ದ ಚಂಪಾ ಜೆ.ಪಿ.ಚಳವಳಿ ಸೇರಿದಂತೆ ಹಲವು ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ. ಜೆ.ಪಿ. ಚಳವಳಿಯಲ್ಲಿ ಚಂಪಾ ಬಂಧನವೂ ಆಯಿತು. ಜನರನ್ನು ಬಳಸಿಕೊಳ್ಳುವ ಹಾಗೂ ತನ್ನನ್ನು ಬೆಳೆಸಿಕೊಳ್ಳುವ ಚಾತುರ್ಯ ಆತನಲ್ಲಿತ್ತು. ಮೈಸೂರಿನ ಒಕ್ಕೂಟದಿಂದ ಜಾತಿ ಒಕ್ಕೂಟದತ್ತ, ನಂತರ ಬಂಡಾಯದತ್ತ ವಾಲಿದ.

> **ನಾಟಕಕ್ಕೆ ಪ್ರಜಾವಾಣಿ ದೀಪಾವಳಿ ವಿಶೇಷಾಂಕ ಬಹುಮಾನ**
>
> ಚಂಪಾ ಬರೆದಿದ್ದ ಏಕಾಂಕ ನಾಟಕ 'ಗುರ್ತಿನವರು' ಗೆ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಮೊದಲ ಬಹುಮಾನ ಲಭಿಸಿತ್ತು. ದೆಹಲಿಯಿಂದ ಕರ್ನಾಟಕಕ್ಕೆ ಮರಳಿದ ಬಿ.ವಿ. ಕಾರಂತರು ಮಾಡಿದ ಮೊದಲ ನಾಟಕ ಅದಾಗಿತ್ತು. ಇಂಗ್ಲೆಂಡಿಗೆ ಹೋದ ಚಂಪಾ ಅಲ್ಲಿಂದಲೇ 'ಗೋಕರ್ಣದ ಗೌಡಶಾನಿ' ನಾಟಕವನ್ನು ಬರೆದು ಅಂಚೆ ಮೂಲಕ ಕಳುಹಿಸಿದ್ದ. ಅದರಲ್ಲಿ ಗಿರೀಶ ಕಾರ್ನಾಡ ಹಾಗೂ ಶ್ರೀರಂಗರನ್ನು ಟೀಕಿಸಿದ್ದ. ಅದನ್ನೂ ಪ್ರದರ್ಶಿಸಿದಾಗ ಸಾಕಷ್ಟು ಮೆಚ್ಚುಗೆಯೂ ಲಭಿಸಿತು.

ನನ್ನ 'ಧಾರವಾಡದಲ್ಲಿ ಇನ್ನೂ ಕತ್ತಲೆ ಇತ್ತು' ಎಂಬ ಕವಿತೆಗೆ ಪತ್ರ ಬರೆದು ಪ್ರತಿಕ್ರಿಯಿಸಿದ ಚಂಪಾ, 'ಶೆಟ್ಟಿ. ನೀನು ನೀಚ. ತಾಯಿಗಂಡ' ಎಂದು ಬರೆದ. ಆದರೆ ಒಂದು ದಿನ 'ಏನೂ ತಪ್ಪು ತಿಳಿಬ್ಯಾಡ. ಒಮ್ಮೊಮ್ಮೆ ಕೆಟ್ಟದ್ದು ಬರೆದಿರುತ್ತೇನೆ' ಎಂದ. ಇತರರಿಗೆ ಬೈಯ್ಯುವಾಗ ಬಹಿರಂಗವಾಗಿ ಹೇಳುತ್ತಿದ್ದ ಚಂಪಾ, ತನ್ನ ತಪ್ಪು ಇದ್ದಾಗ, ಯಾರಿಗೆ ಹೇಳಬೇಕೋ ಅವರಿಗಷ್ಟೇ ಹೇಳಿ ನಿರಾಳನಾಗುತ್ತಿದ್ದ.

ಗೋಕಾಕ್ ವರದಿ ಇನ್ನೂ ಸಲ್ಲಿಸದ ಸಂದರ್ಭದಲ್ಲೇ ತನ್ನ ಗುರುಗಳಾದ ವಿ.ಕೃ. ಗೋಕಾಕರ ವಿರುದ್ಧ 'ಗೋಕಾಕ್ ಗೋಬ್ಯಾಕ್' ಎಂದು ಘೋಷಣೆ ಕೂಗಿ ಪ್ರತಿಭಟಿಸಿದ್ದ. ಇಂಗ್ಲಿಷ್ ಫಲಕಗಳಿಗೆ ವಿದ್ಯಾರ್ಥಿಗಳ ಜತೆ ಕಪ್ಪುಮಸಿ ಬಳಿದ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಸರ್ಕಾರಿ ಕಚೇರಿಗಳ ಇಂಗ್ಲಿಷ್ ಟೈಪ್‌ರೈಟರ್ ಅನ್ನು ಜಿಲ್ಲಾಧಿಕಾರಿ ಕಚೇರಿಗೆ ಹಾಕಿದ್ದ. ಇಂಥ ದಿಟ್ಟತನ ಇರುವ ಅಧ್ಯಕ್ಷರು ಬರಲೇ ಇಲ್ಲ.

ಬೆಂಗಳೂರಿಗೆ ಹೋದಮೇಲಂತೂ ಆತ ಮತ್ತು ಸಂಕ್ರಮಣ ಸಂಪೂರ್ಣ ಬದಲಾಯಿತು. ಚಿಂತನೆಯ ಸ್ವರೂಪ ಬದಲಾದಂತೆ ನನ್ನ ಅವನ ಒಡನಾಟವೂ ಕಡಿಮೆಯಾಯಿತು. ಆತನೊಳಗೆ ಹೇಳಲಾರದ ನೋವೊಂದಿತ್ತು. ಧಾರವಾಡದಲ್ಲೇ ಬೇರು ಬಿಟ್ಟ ಆ ಸಂಗತಿಯನ್ನು ಚಂಪಾ ಕೊನೆಯವರೆಗೂ ಮರೆಯಲು ಸಾಧ್ಯವಾಗಲಿಲ್ಲ.

ಗಿರಡ್ಡಿ ಹೋದಾಗ ಮುಂದಿನಪಾಳಿ ಯಾರದಪ್ಪಾ ಎಂದು ಕೇಳಿದ್ದೆ. ಆಗ ಚಂಪಾ ಅತ್ತುಬಿಟ್ಟಿದ್ದ.



ಪತ್ರಕರ್ತೆ ಗೌರಿ ಲಂಕೇಶ್ ಹಂತಕರ ಪತ್ತೆಗೆ ಇನ್ನೆಷ್ಟು ದಿನ ಎಂಬ ಪ್ರಶ್ನೆ ಮುಂದಿಟ್ಟು ಪ್ರತಿಭಟನಾ ನಡಿಗೆಯಲ್ಲಿ ಪಾಲ್ಗೊಂಡಿದ್ದ ಚಂಪಾ.

ಸಹಜ ಬಂಡುಕೋರ ಕವಿ


• ನಟರಾಜ್ ಹುಳಿಯಾರ್

ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಲೋಹಿಯಾವಾದಿ ಸಮಾಜವಾದಿ ಚಿಂತನೆಯಿಂದ ರೂಪುಗೊಂಡ ಸ್ವತಂತ್ರ ಪ್ರಜ್ಞೆಯ, ನಿರ್ಭೀತ ಲೇಖಕರಲ್ಲಿ ಚಂದ್ರಶೇಖರ ಪಾಟೀಲರೂ ಒಬ್ಬರು. ಸಮಾಜವಾದಿ ನೋಟ, ಇಂಗ್ಲಿಷ್ ಸಾಹಿತ್ಯದಿಂದ ಪಡೆದ ಆಧುನಿಕ ಚಿಂತನೆಗಳಿಂದ ತೀವ್ರ ವ್ಯಂಗ್ಯವನ್ನು ಬಳಸಬಲ್ಲ ಕವಿ-ನಾಟಕಕಾರರಾಗಿ ರೂಪುಗೊಂಡ ಇಂಗ್ಲಿಷ್ ಪ್ರೊಫೆಸರ್ ಚಂಪಾ, ತುರ್ತುಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದ ಕಾಲದಲ್ಲಿ 'ಗಾಂಧೀ ಸ್ಮರಣೆ' ಸಂಕಲನದ ಪದ್ಯಗಳನ್ನು ಬರೆದರು. ಈ ಕವನಗಳಲ್ಲಿ ಇಂದಿರಾಗಾಂಧಿಯವರ ಸರ್ವಾಧಿಕಾರದ ವಿರುದ್ಧ-ಚಂಪಾ ಮಾತಿನಲ್ಲೇ ಹೇಳುವುದಾದರೆ 'ದುಶ್ಶಾಸನ ಪರ್ವ'ದ ವಿರುದ್ಧ-ಕಟಕಿ; ಗಾಂಧಿ ಮಾರ್ಗಕ್ಕೆ ಹಿನ್ನಡೆಯಾದದ್ದರ ಬಗ್ಗೆ ಗಾಢ ವಿಷಾದ; ಕವಿಯ ಗಂಭೀರ ಪ್ರತಿಭಟನೆ ಎಲ್ಲವೂ ಹಬ್ಬಿದ್ದವು: 'ಹಿಂದಿಬ್ಬರು ಮುಂದಿಬ್ಬರು ರಾಜಭಟರ ನಡುವೆ/ ನಡೆದಾಗ ದೊಡ್ಡ ಗೇಟು ಕಿರುಗುಡುತ್ತದೆ./ ಒಂದು ಮೂಲೆಗೆ ಗಾಂಧಿ. ಇನ್ನೊಂದು ಮೂಲೆಗೆ ನೆಹರೂ./ ಗೋಡೆಯ ತುಂಬ ಮತ್ತೊಬ್ಬ ಗಾಂಧಿಯ ಅಮರ ಸಂದೇಶ.' ಇಂಥದೇ ತುರ್ತುಸ್ಥಿತಿ ಈಗಲೂ ಎರಗುತ್ತಿರುವುದರ ಬಗ್ಗೆ ಎಚ್ಚರಿಸುತ್ತಲೇ ಇದ್ದ ಚಂಪಾರ 1976ರ ಕವನಗಳಲ್ಲಿರುವ ರಾಜಕೀಯ ವಿಮರ್ಶೆ, ಮತ್ತೆ ದುಶ್ಶಾಸನ ಪರ್ವ ಮುತ್ತುತ್ತಿರುವ ಕಾಲಘಟ್ಟದಲ್ಲಿ ಹೊಸ ದನಿ ಪಡೆಯುತ್ತದೆ: 'ಸರಕಾರದ ಕೆಲಸ ದೇವರ ಕೆಲಸವಾಗಿ/ ತುಪ್ಪದ ದೀಪ ಥಾಳಾಗಿ ಉರಿಯುತ್ತಿವೆ./ ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ/ ಜಿಟಿ ಜಿಟಿ ಮಳೆ ಹಿಡಿದಿದೆ/...ಹೆದ್ದಾರಿಯ ಮೇಲೆ ಕೆಟ್ಟು ನಿಂತ ಟ್ರಕ್ಕು ಕೂಡ/ ನಾಡು ಮುನ್ನಡೆದಿದೆ ಎಂಬ ಸಂದೇಶ ಹೊತ್ತಿದೆ.'

'ಗಾಂಧೀ ಸ್ಮರಣೆ'ಯ ಕಾಲದಲ್ಲಿ ಘೋಷಣೆಗಳಿಲ್ಲದ ಗಾಢ ವಿಷಾದ, ಚೂಪುತಿವಿತಗಳ ರಾಜಕೀಯ ಕವಿತೆಗಳನ್ನು ಕೊಟ್ಟಿದ್ದ ಚಂಪಾ ಮುಂದೆ ಬಂಡಾಯ ಕವಿಯಾಗಿದ್ದು, ಬಂಡಾಯ ಸಂಘಟನೆಯ ಭಾಗವಾಗಿದ್ದು ಸಹಜವಾಗಿತ್ತು. ಬಂಡಾಯದ ಕಾಲಕ್ಕಾಗಲೇ 'ಸಂಕ್ರಮಣ'ದ ಸಂಪಾದಕತ್ವ ಚಂಪಾ ಕೈಗೆ ಬಂದಿತ್ತು. 'ಸಂಕ್ರಮಣ' ಬಂಡಾಯ ಮಾರ್ಗದ ತಾತ್ವಿಕತೆಯ ಸಮರ್ಥನೆ, ಬಂಡಾಯ ಕಾವ್ಯತತ್ವದ ಪ್ರತಿಪಾದನೆ, ದಲಿತ, ಬಂಡಾಯ ಹಾಗೂ ಸ್ತ್ರೀವಾದಿ ಕವಿತೆ, ಕತೆಗಳ ಪ್ರಕಟಣೆ, ವೈಚಾರಿಕ ಚರ್ಚೆಗಳ ಮೂಲಕ ಕನ್ನಡದ ಪ್ರಗತಿಪರ ದನಿಗಳನ್ನು ಗಟ್ಟಿಗೊಳಿಸಿತು. ಚೂಪುಭಾಷೆಯ ಅಸಂಗತ ನಾಟಕಗಳನ್ನು ಬರೆದಿದ್ದ ಚಂಪಾ, 'ಲಂಕೇಶ್ ಪತ್ರಿಕೆ'ಯಲ್ಲಿ ವ್ಯಂಗ್ಯ, ವಿಡಂಬನೆಗಳ ಚುರುಕಾದ ರಾಜಕೀಯ ಬರವಣಿಗೆಯನ್ನು ವಿಸ್ತರಿಸಿಕೊಂಡರು. 'ಸಂಕ್ರಮಣ' ವಾರಪತ್ರಿಕೆ ಮಾಡಲು ಹೋಗಿ ಸೋತ ಚಂಪಾ, ಕಳೆದ ಕೆಲವು ವರ್ಷಗಳವರೆಗೂ 'ಸಂಕ್ರಮಣ' ಸಂಸ್ಕೃತಿ ಪತ್ರಿಕೆಯನ್ನು ಛಲ ಬಿಡದೆ ಹೊರತರುತ್ತಾ ಹೊಸ ಲೇಖಕ, ಲೇಖಕಿಯರನ್ನು ರೂಪಿಸುತ್ತಿದ್ದರು. ಕಹಿವ್ಯಂಗ್ಯ ವಿಜೃಂಭಿಸುತ್ತಿರುವಾಗಲೂ ಆಕರ್ಷಕ ಶೈಲಿಯಿದ್ದ 'ಚಂಪಾದಕೀಯ'ದ ಮೂಲಕ ತಮ್ಮ ಒಗರನ್ನು ಉಳಿಸಿಕೊಂಡಿದ್ದರು.

ಯಾರನ್ನಾದರೂ ಗೇಲಿ ಮಾಡಬಲ್ಲ ಸ್ವಾತಂತ್ರ್ಯ ಗಳಿಸಿಕೊಂಡಿದ್ದ ಚಂಪಾ, ಲಂಕೇಶ್, ಗಿರೀಶ ಕಾರ್ನಾಡ, ಅನಂತಮೂರ್ತಿ, ರಾಮಕೃಷ್ಣ ಹೆಗಡೆ... ಎಲ್ಲರನ್ನೂ ಟೀಕಿಸುತ್ತಿದ್ದರು; ಈ ಮೂರ್ತಿಭಂಜನೆಯಲ್ಲಿ ವಿಚಿತ್ರ ಸತ್ಯಗಳನ್ನೂ ಹೊರಡಿಸುತ್ತಿದ್ದರು.

ಧಾರವಾಡದ ನೆಲದಲ್ಲಿ ಅಂತರಗಂಗೆಯಂತೆ ಹರಿಯುವ ಶಾಲ್ಮಲಾ ನದಿ ಅವರ 'ಶಾಲ್ಮಲಾ ನನ್ನ ಶಾಲ್ಮಲಾ' ಕವನದ ಗಾಢಪ್ರತಿಮೆಯಾಗಿ ಕನ್ನಡದ ಆಕರ್ಷಕ ಕವಿತೆಗಳಲ್ಲೊಂದಾಯಿತು. ಚಂಪಾ ಕಾವ್ಯ ವ್ಯಂಗ್ಯ, ವಿರೋಧಾಭಾಸಗಳಿಂದ ಒಳಧ್ಯಾನಕ್ಕೆ ತಿರುಗಿದಾಗಲೂ, ಆ ಧ್ಯಾನದ ಪ್ರಭಾವ ಅವರ ವ್ಯಕ್ತಿತ್ವದ ಮೇಲೇನೂ ಆದಂತಿರಲಿಲ್ಲ! ಕೊನೆಕೊನೆಗೆ ಹಾಸಿಗೆ ಹಿಡಿಯುವವರೆಗೂ, ಕಟು ಸತ್ಯ ನುಡಿಯುವ, ವ್ಯವಸ್ಥೆಯ ವಿರುದ್ಧ ದಿಟ್ಟವಾಗಿ ಮಾತಾಡುವ ಖಡಕ್ ವ್ಯಕ್ತಿಯಾಗಿದ್ದ ಚಂಪಾ ಎಪ್ಪತ್ತರ ದಶಕದ ಬಂಡುಕೋರತನವನ್ನು ಕೊನೆವರೆಗೂ ಕಾಯ್ದುಕೊಂಡಿದ್ದರು.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 16

ಮುನಿಗಳಿಂದ ಪ್ರಶ್ನೆಗಳ ಸುರಿಮಳೆ

ಪ್ರಯಾಗದಲ್ಲಿ ನಡೆಯುತ್ತಿದ್ದ ಮಹಾಸತ್ರಯಾಗದ ಸ್ಥಳಕ್ಕೆ ಬಂದ ವ್ಯಾಸರ ಪರಮ ಶಿಷ್ಯ ಸೂತಮುನಿಗೆ ಯಾಗದ ಮುನಿಗಳು ಪ್ರಶ್ನೆಗಳ ಸುರಿಮಳೆಗಳನ್ನೇ ಸುರಿಸುತ್ತಾರೆ. ಕಲಿಯುಗದಲ್ಲಿ ಜನ ಕೆಟ್ಟ ಮಾರ್ಗದಲ್ಲಿ ಸಾಗುತ್ತಿರುವುದರ ಬಗ್ಗೆ ಪ್ರಯಾಗದ ಋಷಿಗಳು ಆತಂಕಿತರಾಗಿ, ಪ್ರಾಜ್ಞನಾದ ಸೂತಮುನಿಗೆ ಅನೇಕ ವಿಧದ ಪ್ರಶ್ನೆಗಳನ್ನು ಕೇಳುತ್ತಾರೆ.

ಮಹಾಮಹಿಮ ವ್ಯಾಸರ ಪರಮಶಿಷ್ಯರೇ, ನಿಮಗೆ ತಿಳಿಯದ ವಿಷಯವಿಲ್ಲ. ಇಂದು ವಿಶ್ವದಲ್ಲಿ ಘೋರವಾದ ಕಲಿಯುಗ ಆರಂಭವಾದ ನಂತರ, ಜನಗಳೆಲ್ಲ ಪುಣ್ಯಕಾರ್ಯಗಳನ್ನು ಬಿಟ್ಟು, ಕೆಟ್ಟ ಕೆಲಸಗಳಲ್ಲಿ ಆಸಕ್ತರಾಗಿದ್ದಾರೆ. ಸತ್ಯಮಾರ್ಗ ಬಿಟ್ಟು ಸುಳ್ಳನ್ನು ವೈಭವೀಕರಿಸಿಕೊಂಡು ಬದುಕುತ್ತಿದ್ದಾರೆ. ತಾವು ಸರಿ ಇಲ್ಲದಿದ್ದರೂ ಇತರರನ್ನು ದೂಷಣೆ ಮಾಡುವುದರಲ್ಲಿ ನಿಸ್ಸೀಮರಾಗಿದ್ದಾರೆ. ಶ್ರಮ ಪಟ್ಟು ದುಡಿಯದೆ, ಮತ್ತೊಬ್ಬರ ಆಸ್ತಿಯನ್ನು ಅಪಹರಿಸಲು ಹೊಂಚು ಹಾಕುತ್ತಿದ್ದಾರೆ. ಪರಸ್ತ್ರೀಯರಲ್ಲಿ ಮನಸ್ಸುಳ್ಳ ದುರ್ಜನರು, ದುರ್ಬಲರನ್ನು ಹಿಂಸಿಸುವುದರಲ್ಲಿ ನಿಪುಣರಾಗಿದ್ದಾರೆ. ತಮ್ಮ ಶರೀರವೇ ಆತ್ಮವೆಂದು ಭ್ರಮಿಸಿ, ಸನಾತನಧರ್ಮದಲ್ಲಿ, ಈಶ್ವರನಲ್ಲಿ ನಂಬಿಕೆಯಿಲ್ಲದೆ ನಾಸ್ತಿಕರಾಗಿ ಪಶುಗಳಂತೆ ವರ್ತಿಸುತ್ತಿದ್ದಾರೆ. ಹೆತ್ತು-ಹೊತ್ತು-ಸಲಹಿದ ತಂದೆತಾಯಿಯನ್ನೂ ದ್ವೇಷಿಸುತ್ತಾ, ಉಪಕಾರಸ್ಮರಣೆ ಇಲ್ಲದಂತೆ ಬದುಕುತ್ತಿದ್ದಾರೆ. ಕಾಮಾಂಧರಾದ ಜನ ಸ್ತ್ರೀಯಿಂದಲೇ ತಮಗೆ ಎಲ್ಲಾ ಸುಖ ಸಿಗುತ್ತದೆಂದು ಭ್ರಮಿಸುತ್ತಿದ್ದಾರೆ. ವಿದ್ಯೆಯನ್ನು ಮಾರಿ ಬದುಕುವುದೇ ಜೀವನದ ಮುಖ್ಯ ಗುರಿಯಾಗಿದೆ. ಹಣದ ಅಹಂಕಾರದಿಂದ ಮೆರೆಯುತ್ತಿರುವ ಜನ ಸತ್ಯ-ಧರ್ಮ-ನ್ಯಾಯ-ನೀತಿ ಹಾಳು ಮಾಡಿ, ಸಮಾಜದಲ್ಲಿ ಕ್ಷೋಭೆ ಉಂಟು ಮಾಡುತ್ತಿದ್ದಾರೆ. ಪ್ರಾಣಿಗಳಲ್ಲಿ ದಯಾಹೀನರಾಗಿ, ಅಲ್ಪವಿದ್ಯೆ ಕಲಿತು ತಾವೇ ಪಂಡಿತರೆಂದು ದುರಂಹಕಾರದಿಂದ ಮೆರೆಯುತ್ತಿದ್ದಾರೆ.

ರಾಜರು ತಮ್ಮ ಸ್ವಧರ್ಮವಾದ ಪ್ರಜಾಪಾಲನೆ ಬಿಟ್ಟು, ಕೆಟ್ಟ ಸಹವಾಸ ಮಾಡುತ್ತಾ, ಪಾಪಬುದ್ಧಿಯಿಂದ ಪರಸ್ತ್ರೀ ವ್ಯಾಮೋಹದಲ್ಲಿ ಮೈಮರೆತಿದ್ದಾರೆ. ಶಸ್ತ್ರವಿದ್ಯೆಗಳನ್ನು ಕಲಿಯದೆ ಹೇಡಿಗಳಾಗಿ ಯುದ್ಧದಲ್ಲಿ ಸೋತು ಓಡಿಹೋಗುತ್ತಿದ್ದಾರೆ. ಪ್ರಜಾಪಾಲನೇ ಮಾಡುವ ಕ್ಷತ್ರಿಯರಿಗೆ ವಿಧಿಸಿರುವ ಸ್ವಧರ್ಮ ನಿಯಮಗಳನ್ನ ತ್ಯಜಿಸಿ, ಯಾವಾಗಲೂ ಭೋಗಲಾಲಸರಾಗಿ ಪ್ರಜಾಕ್ಷೋಭೆಯಲ್ಲಿ ನಿರತರಾಗಿದ್ದಾರೆ. ಇನ್ನು ವ್ಯಾಪಾರಿಗಳು ಷೋಡಶಕರ್ಮರಹಿತರಾಗಿದ್ದಾರೆ. ಮಾರಾಟದಲ್ಲಿ ಧರ್ಮ ಮರೆತು ಸುಲಭವಾಗಿ ಹಣಗಳಿಸುವ ಅಕ್ರಮ ವ್ಯಾಪಾರದಲ್ಲಿ ತೊಡಗಿದ್ದಾರೆ. ಹಣಕ್ಕಾಗಿ ಎಂಥ ಅನ್ಯಾಯ, ವಂಚನೆ, ಘೋರ ಅಪರಾಧಗಳನ್ನು ಮಾಡಲೂ ಸಿದ್ಧರಾಗುವ ವ್ಯಾಪಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೆಟ್ಟಮಾರ್ಗಗಳನ್ನು ಅನುಸರಿಸುತ್ತ, ಅಕ್ರಮ ಹಣ ಸಂಪಾದನೆಯಿಂದ ಸ್ತ್ರೀಲಪಂಟರಾಗಿ ಹಾಳಾಗಿದ್ದಾರೆ. ಪ್ರಜೆಗಳು ಮೂಢಬುದ್ಧಿಯಿಂದ ವರ್ತಿಸುತ್ತಿದ್ದಾರೆ. ಬಲವಂತರು ತಾವು ಉತ್ತಮಕುಲದಲ್ಲಿ ಹುಟ್ಟಿದವರೆಂದು ಗರ್ವಪಡುತ್ತಾ ಕೆಳವರ್ಗದವರನ್ನು ಶೋಷಿಸುತ್ತಿದ್ದಾರೆ. ಒಟ್ಟಾರೆ ಸಮಾಜದ ಎಲ್ಲಾ ವರ್ಗದ ಜನರು, ಧರ್ಮಮಾರ್ಗಗಳನ್ನು ಬಿಟ್ಟು, ಮೂಢಬುದ್ಧಿಯಿಂದ ಒಬ್ಬರನ್ನೊಬ್ಬರು ತುಳಿಯುತ್ತಾ, ಹೀಯಾಳಿಸುತ್ತಾ ಮಹಾಗರ್ವದಿಂದ ಮೆರೆಯುತ್ತಿದ್ದಾರೆ.

ಈ ಕಲಿಕಾಲದ ಸ್ತ್ರೀಯರು ಸಹ ಭ್ರಷ್ಟರಾಗಿದ್ದಾರೆ. ತಮ್ಮ ಪತಿಗೆ ಅವಮಾನ ಮಾಡಿ, ಹೀನದೃಷ್ಟಿಯಿಂದ ನೋಡುತ್ತಿದ್ದಾರೆ. ಅತ್ತೆಮಾವಂದಿರನ್ನು ಆದರಿಸದೆ, ದುರ್ಮಾರ್ಗದಲ್ಲಿ ಬದುಕುತ್ತಿದ್ದಾರೆ. ಕಾಮವಿಕಾರದಿಂದ ಕೆಟ್ಟ ನಡತೆಯುಳ್ಳವರಾಗಿ, ಪತಿಯಲ್ಲಿ ಅನಾದರ ತೋರುತ್ತಿದ್ದಾರೆ. ತಂದೆ-ತಾಯಿಗಳಲ್ಲಿ ಭಕ್ತಿ-ಗೌರವ ನೀಡದ ಮಕ್ಕಳು ಅವಿಧೇಯರಾಗಿದ್ದಾರೆ. ಕೆಟ್ಟ ಬುದ್ಧಿ ಕಲಿತು ವಿದ್ಯಾಭ್ಯಾಸದ ಕಡೆ ಗಮನ ಕೊಡುತ್ತಿಲ್ಲ. ಕೆಟ್ಟ ಚಟಗಳಿಂದ ಚಿಕ್ಕ ವಯಸ್ಸಲ್ಲೇ ರೋಗಿಷ್ಠರಾಗಿ ನರಳುತ್ತಿದ್ದಾರೆ ಅಂತ ಪ್ರಯಾಗದ ಋಷಿಮುನಿಗಳು ಸಮಾಜ ಹಾಳಾಗುತ್ತಿರುವುದನ್ನು ಸೂತಮುನಿಗೆ ತಿಳಿಸುತ್ತಾರೆ. ಬುದ್ಧಿಯಿಲ್ಲದೆ ಹಾಳಾಗಿರುವ ಜನರನ್ನು ಸರಿದಾರಿಗೆ ತರುವುದು ಹೇಗೆ? ಇವರಿಗೆ ಪರಲೋಕದಲ್ಲಿ ಸದ್ಗತಿ ಹೇಗೆ ಸಿಗುತ್ತದೆ? ಇಂಥ ವಿಧ-ವಿಧವಾದ ಚಿಂತೆಗಳಿಂದ ನಮ್ಮ ಮನಸ್ಸು ವ್ಯಾಕುಲವಾಗಿದೆ. ಪರಿಹಾರೋಪಾಯವನ್ನು ದಯವಿಟ್ಟು ಈಗಲೇ ಹೇಳಿ – ಎಂದು ಋಷಿಮುನಿಗಳು ಕೇಳುವುದರೊಂದಿಗೆ ಶಿವಮಹಾಪುರಾಣದ ವಿದ್ಯೇಶ್ವರ ಸಂಹಿತೆಯ ಮೊದಲ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಎರಡು ಮಾದರಿಗಳು

ತನ್ನ ಬೆವರಿನ ಕೊಳದಿ ತಾಂ ಮುಳುಗಿ ತೇಲುತ್ತೆ |
ಧನ್ಯನಾನೆನ್ನುವನದೊರ್ವ ಸ್ವತಂತ್ರನ್ ||
ಪುಣ್ಯತೀರ್ಥದೊಳಿಳಿದು ಕರಗಲ್ ಸ್ವತಂತ್ರ ತಾನ್ |
ಎನ್ನುವವನಿನ್ನೊರ್ವ – ಮಂಕುತಿಮ್ಮ || 538 ||

ಪದ-ಅರ್ಥ: ಧನ್ಯನಾನೆನ್ನುವನದೊರ್ವ = ಧನ್ಯ + -ನಾನು + ಎನ್ನುವನು + ಅದು + ಒರ್ವ (ಒಬ್ಬ), ಕರಗಲ್ = ಕರಗಲು, ಎನ್ನುವವನಿನ್ನೊರ್ವ = ಎನ್ನುವವನು + ಇನ್ನೊರ್ವ (ಇನ್ನೊಬ್ಬ)

ವಾಚ್ಯಾರ್ಥ: ತನ್ನ ಪರಿಶ್ರಮದ ಬೆವರಿನ ಕೊಳದಲ್ಲಿ ಮುಳುಗಿ, ತೇಲುತ್ತ, ತಾನು ಧನ್ಯನಾದೆ ಎನ್ನುವವನೊಬ್ಬ ಸ್ವತಂತ್ರ. ಪುಣ್ಯತೀರ್ಥಗಳಲ್ಲಿ ಇಳಿದು ಕರಗಿ ತಾನು ಸ್ವತಂತ್ರ ಎನ್ನುವವನು ಮತ್ತೊಬ್ಬ.

ವಿವರಣೆ: ಬದುಕಿನಲ್ಲಿ ತಮ್ಮ ಗಮ್ಯವನ್ನು ಪಡೆಯಲು ಜನರಿಗೆ ಅನೇಕ ದಾರಿಗಳಿವೆ. ರಾಮಣ್ಣ ಹುಟ್ಟಿದ್ದೇ ಬಡತನದ ಕುಲುಮೆಯಲ್ಲಿ. ಬೆಳೆದದ್ದೇ ಪೆಟ್ಟು ತಿನ್ನುತ್ತ. ರಾಮಣ್ಣನ ತಂದೆ ಎರಡೆಕರೆ ಜಮೀನಿನ ಯಜಮಾನ. ಮಳೆಯ ಮೇಲೆ ಬೆಳೆ. ಹೀಗಾಗಿ ಉಪವಾಸ ತಪ್ಪಿದ್ದಲ್ಲ. ಆದರೆ ತಂದೆ ಮಗನಿಗೆ ನೀತಿ, ನ್ಯಾಯಗಳ ಬೋಧನೆ ಮಾಡಿದರು. ಅದು ರಾಮಣ್ಣನ ಬದುಕಿನಲ್ಲಿ ನೆಲೆಯಾಗಿ ನಿಂತಿತು. ರಾಮಣ್ಣ ಕಷ್ಟಪಟ್ಟು ಓದಿದ. ಶಾಲಾ ಶಿಕ್ಷಣ ಮುಗಿದ ಮೇಲೆ ಮುಂದೆ ಕಲಿಯಲಾಗದೆ ಕೆಲಸಕ್ಕೆ ಸೇರಿದ. ಅತ್ಯಂತ ಪರಿಶ್ರಮದಿಂದ, ಬೇರೆಯವರಿಗೆ ತನ್ನಿಂದ ಅನ್ಯಾಯವಾಗದಂತೆ ಬದುಕಿದ. ದುಡ್ಡು ದುಡ್ಡು ಕೂಡಿಟ್ಟ. ಮಕ್ಕಳಿಗೆ ತನ್ನ ಶಕ್ತಿಯಂತೆ ಶಿಕ್ಷಣ ಕೊಟ್ಟ. ಅವರನ್ನು ಬೆಳೆಸಿ ಒಂದು ನೆಲೆಗೆ ತಂದ. ಪುಟ್ಟ ಮನೆ ಕಟ್ಟಿಸಿದ. ಮಕ್ಕಳಿಗೆ ಮದುವೆ ಮಾಡಿದ. ಇಡೀ ಜನ್ಮ ಸವೆದು ಹೋಯಿತು, ಮನೆಯನ್ನು ಒಂದು ಹಂತಕ್ಕೆ ತರಲು. ನಿವೃತ್ತಿ ಪಡೆದು ಮನೆಯಲ್ಲಿ ಕುಳಿತ ರಾಮಣ್ಣ ತನ್ನ ಹಿಂದಿನ ಬದುಕನ್ನು ನೆನೆಸಿಕೊಂಡು ಸಂತೋಷಪಟ್ಟ, ಮಕ್ಕಳೀಗ ಸಮರ್ಥರಾಗಿ ಬೆಳೆಯುತ್ತಿದ್ದಾರೆ. ಈಗ ತಾನು ಸ್ವತಂತ್ರ. ಯಾರ ಹಂಗಿಗೂ ಬೀಳದೆ, ಯಾವ ಊರ ಉಸಾಬರಿಗೂ ಹೋಗದೆ, ತನ್ನ ಬದುಕನ್ನು ಮಾತ್ರ ವ್ರತದಂತೆ ನಡೆಸಿದ ರಾಮಣ್ಣ ಧನ್ಯತೆಯನ್ನು ಅನುಭವಿಸಿದ.

ಭೀಮಣ್ಣನ ಮನೆ ಸ್ಥಿತಿ ಇದಕ್ಕಿಂತ ಬೇರೆಯಾಗಿರಲಿಲ್ಲ. ಅವನಿಗೂ ಎರಡು ಹೊತ್ತಿನ ಊಟ ಖಾತ್ರಿ ಇರಲಿಲ್ಲ. ಅವನೂ ಹಳ್ಳಿಯ ಶಾಲೆಗೆ ಹೋದ. ಶಾಲೆಯ ಪಕ್ಕದಲ್ಲಿ ಒಂದು ದೇವಸ್ಥಾನ. ಅವನಿಗೆ ಅರ್ಚಕರ ಜೊತೆ ಇಷ್ಟವಾಯಿತು. ಅವರು ಭೀಮಣ್ಣನಿಗೆ ರಾಮಾಯಣದ, ಮಹಾಭಾರತದ ಕಥೆಗಳನ್ನು ಹೇಳಿದರು. ಮಹಾನ್ ವ್ಯಕ್ತಿಗಳ ಜೀವನ ಸಾಧನೆಗಳನ್ನು ವರ್ಣಿಸಿದರು. ಭೀಮಣ್ಣನಿಗೆ ತಾನೂ ಅವರಂತಾಗುವ ಆಸೆ ಮೊಳೆಯಿತು. ಸಮಾಜ ಸೇವೆಗೆ ಮುಖ ಮಾಡಿದ, ಮತ್ತೊಬ್ಬರ ನೋವಿಗೆ ಧ್ವನಿಯಾದ. ಅವನು ಬೆಳೆದಂತೆ ಅಹಂಕಾರ ಕರಗಿ ಹೋಗಿ, ತಾನು ಇರುವುದೇ ಸಮಾಜಕಾರ್ಯಕ್ಕಾಗಿ ಎಂದು ದುಡಿದ. ಜನರನ್ನು, ಮನಗಳನ್ನು ಕೂಡಿಸಿದ, ಮನಸ್ಥಿತಿ ಭೇದಗಳನ್ನು ತೊಡೆಯಲು ಪ್ರಯತ್ನಿಸಿದ, ಅವನಿಗೆ ನಲವತ್ತು ವರ್ಷ ವಯಸ್ಸಾಗುವುದರೊಳಗೆ ಜನಮಾನ್ಯನಾಗಿದ್ದ, ತರುಣರಿಗೆ ಮಾರ್ಗದರ್ಶಿ, ಆದರ್ಶವಾಗಿದ್ದ. ದಿನದಿಂದ ದಿನಕ್ಕೆ ಊರೂರು ಸುತ್ತುತ್ತ ಜನಜಾಗೃತಿ ಮಾಡಿದ. ಅವನಿಗೆ ವೈಯಕ್ತಿಕವಾಗಿ ಯಾವ ಆಸೆಗಳೂ ಇಲ್ಲ. ಅವನ ಜೀವನ ಧನ್ಯ ಎಂದರು ಜನರು.

ಪ್ರಪಂಚದಲ್ಲಿ ಎರಡು ಬಗೆಯ ಜನರೂ ಇದ್ದಾರೆ. ಯಾರು ಸರಿ, ಯಾರು ತಪ್ಪು? ಕಗ್ಗ ತೀರ್ಮಾನ ಕೊಡುವುದಿಲ್ಲ. ಎರಡು ಬಗೆಯ ಜನರೂ ಇದ್ದಾರೆಂದು ವಾಸ್ತವವನ್ನು ಹೇಳುತ್ತದೆ. ರಾಮಣ್ಣನಂತಹ ಜನರೇ ಪ್ರಪಂಚದಲ್ಲಿ ಹೆಚ್ಚು. ಅವರದು ವ್ಯಷ್ಟಿಜೀವನ, ಸ್ವಕೇಂದ್ರಿತವಾದದ್ದು. ಭೀಮಣ್ಣನಂತಹವರು ಅಪರೂಪ. ಅವರದು ಸಮಷ್ಟಿ ಜೀವನ, ಸಮಾಜ ಕೇಂದ್ರಿತವಾದದ್ದು. ಇಬ್ಬರೂ ಸ್ವತಂತ್ರರು, ತಮ್ಮ ದಾರಿ ತುಳಿಯಲು. ಇವು ಎರಡು ಮಾದರಿಗಳು. ಆಯ್ಕೆ ನಮ್ಮದೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಮಂಗಳವಾರ ಜನವರಿ 11, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ –ಹೇಮಂತ ಋತು ಧನುರ್ಮಾಸದ 26 ನೇ ದಿನ
ತಿಥಿ: (ಪೌಷ ಶುಕ್ಲ) ನವಮಿ ಗಂ. 14-22 ನಕ್ಷತ್ರ: ಅಶ್ವಿನಿ ಗಂ. 11-10 ಯೋಗ: ಸಿದ್ಧ ಗಂ. 10-55, ಕರಣ: ಕೌಲವ ಗಂ. 14-22, ತೈತಿಲ ಗಂ. 27-33. ರಾಹುಕಾಲ : ಮಧ್ಯಾಹ್ನ 03:00 –04:30 ಸೂರ್ಯೋದಯ : 07-00 ಸೂರ್ಯಾಸ್ತ : 06-17 ಮುಸ್ಲಿಂ ದಿನಾಂಕ : 07 ಜುಮಾದುಸ್ಸಾನಿ ದಿನ ವಿಶೇಷ : ಅಮೃತಸಿದ್ಧಿಯೋಗ ಅದೃಷ್ಟ ಸಂಖ್ಯೆ: 6,9

ಮೇಷ: ಕಾರ್ಯಕ್ಷೇತ್ರದಲ್ಲಿ ಆಗಾಗ ಪ್ರಯತ್ನಬಲಕ್ಕೆ ಅಡ್ಡಿ ಆತಂಕಗಳಿದ್ದರೂ ಈ ದಿನ ನಿಮ್ಮ ಕಾರ್ಯ ಸಾಧನೆಯಲ್ಲಿ ಜಯ ಕಾಣುವುದರ ಬಗ್ಗೆ ಸಂದೇಹವಿಲ್ಲ. ಯಾವುದೇ ವ್ಯಕ್ತಿಗಳ ಹೊಗಳಿಕೆಯ ಮಾತುಗಳಿಗೆ ಮರಳಾಗಬೇಡಿ.

ವೃಷಭ: ಇಂದು ವೃತ್ತಿ ಬದುಕಿನಲ್ಲಿ ಅಪೂರ್ವ ಅವಕಾಶಗಳು ನಿಮ್ಮದಾಗಲಿವೆ. ಧನಾಗಮನಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಅನುಕೂಲವು ಆಗುತ್ತದೆ. ಶ್ರೀ ಮಹಾಲಕ್ಷ್ಮಿಯನ್ನು ಆರಾಧಿಸಿದಲ್ಲಿ ಎಲ್ಲವೂ ಶುಭದತ್ತ ಸಾಗುವುದು.

ಮಿಥುನ: ವಾದ-ವಿವಾದಗಳನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿದಲ್ಲಿ ನಿಧಾನವಾದರೂ ಜಯ ನಿಮ್ಮದಾಗುವುದು. ಅನಾವಶ್ಯಕವಾದ ಖರ್ಚುಗಳು ಸಂಭವಿಸಬಹುದು.

ಕರ್ಕಾಟಕ: ಮನೆಯವರೆಲ್ಲರೂ ನಿಮ್ಮೆಲ್ಲ ಕೆಲಸ–ಕಾರ್ಯಗಳಲ್ಲಿ ನಿಮ್ಮಿಚ್ಛೆಯಂತೆ ನಡೆದುಕೊಳ್ಳುವರು. ಚಿನ್ನ, ಬೆಳ್ಳಿ ವ್ಯಾಪಾರಿಗಳು ಈ ದಿನ ಹೆಚ್ಚಿನ ಅಭಿವೃದ್ಧಿ ಹೊಂದುವರು. ಷೇರು ಪೇಟೆಯಲ್ಲಿ ಹಣ ಹೂಡಲು ಸೂಕ್ತ ಸಮಯವಾಗಿದೆ.

ಸಿಂಹ: ರಾಜಕಾರಣಿಗಳಿಗೆ ನಾಯಕತ್ವದಲ್ಲಿ ಬದಲಾವಣೆ ಸಂಭವ. ಸಗಟು ವ್ಯಾಪಾರಿಗಳಿಗೆ ಖರ್ಚು-ವೆಚ್ಚಗಳು ಮಿತಿಯೊಳಗಿರುವುದು. ರೇಷ್ಮೆ ನೇಕಾರರು ತಮ್ಮ ಉತ್ತಮ ಮಟ್ಟದ ನೇಯ್ಗೆಯಿಂದ ಏಳಿಗೆ ಹೊಂದುವ ಸಾಧ್ಯತೆಗಳಿವೆ.

ಕನ್ಯಾ: ನಿಮ್ಮ ಅನ್ವೇಷಣೆಯ ಸ್ವಭಾವ ನಿಮ್ಮ ವೃತ್ತಿ ಬದುಕಿಗೆ ಉತ್ತಮ ತಿರುವು ನೀಡಲಿದೆ. ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವಕಾಶ. ವೈವಾಹಿಕ ಜೀವನದಲ್ಲಿ ಪರಸ್ಪರ ಹೊಂದಾಣಿಕೆಯಿದ್ದು ಸಂತೋಷದಿಂದಿರುವಿರಿ.

ತುಲಾ: ನೂತನವಾಗಿ ನಿರ್ಮಿಸಿರುವ ಮನೆಗಾಗಿ ಅಲಂಕಾರಿಕ ವಸ್ತುಗಳ ಖರೀದಿ ನಡೆಯುವುದು. ಆಕಸ್ಮಿಕ ಖರ್ಚು ವೆಚ್ಚಗಳ ಮೇಲೆ ನಿಗಾ ವಹಿಸುವಿರಿ. ಹೊಸ ವ್ಯವಹಾರವೊಂದರ ಪ್ರಾರಂಭಕ್ಕೆ ಮಾಹಿತಿಗಳ ಸಂಗ್ರಹಣೆಯು ನಡೆಯುವುದು.

ವೃಶ್ಚಿಕ: ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಯು ಅನುಭವಕ್ಕೆ ಬಂದಲ್ಲಿ ತಕ್ಷಣವೇ ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆಯನ್ನು ಪಡೆಯಿರಿ. ಬದಲಾದ ಸನ್ನಿವೇಷಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಯ ಸ್ಥಿತಿಯು ಎದುರಾಗುತ್ತದೆ.

ಧನು: ಆಟೊಮೊಬೈಲ್ ಎಂಜಿನಿಯರ್‌ಗಳಿಗೆ ವಿಶೇಷ ಲಾಭ ಪ್ರಾಪ್ತಿಯಾಗಲಿದೆ. ಕೆಲಸದಲ್ಲಿ ಅಪ್ರಾಮಾಣಿಕತೆ ಹಾಗು ದುಡುಕಿನ ನಿರ್ಧಾರ ತೆಗೆದುಕೊಂಡಲ್ಲಿ ಪಶ್ಚಾತಾಪ ಪಡಬೇಕಾದ ಸಂದರ್ಭ ಅನಿವಾರ್ಯವಾಗಿ ಒದಗಿಬರುತ್ತದೆ.

ಮಕರ: ನೀವು ಎಲ್ಲವನ್ನೂ ಕಷ್ಟಪಟ್ಟು ಸಂಪಾದಿಸಿಕೊಳ್ಳಬೇಕಾಗುತ್ತದೆ. ಮಾನಸಿಕ ಖಿನ್ನತೆ ದೂರಮಾಡಿ. ಉದ್ಯೋಗದಲ್ಲಿ ಸಮಾಧಾನ ಸಿಗದಿದ್ದರೂ ಆರ್ಥಿಕವಾಗಿ ತೊಂದರೆಗಳಾಗುವುದಿಲ್ಲ. ಆಂಜನೇಯನನ್ನು ಭಜಿಸಿ.


ಕುಂಭ: ಮೋಸ ಮಾಡುವ ಬುದ್ಧಿ, ಅನ್ಯಾಯದ ಯೋಚನೆಗಳನ್ನು ಕಡಿಮೆ ಮಾಡಿಕೊಳ್ಳಿ. ಎಂಜಿನಿಯರಿಂಗ್ ಶಿಕ್ಷಣದಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ವಿಶೇಷ ಸಾಧನೆ ತೋರಿರುವುದರಿಂದ ವಿದೇಶಕ್ಕೆ ತೆರಳುವ ಸಂಭವವಿದೆ.

ಮೀನ: ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳಿಂದ ಆದಾಯದಲ್ಲಿ ಗಣನೀಯ ಸುಧಾರಣೆ ಕಾಣಲಿದೆ. ನಿಮ್ಮೆಲ್ಲಾ ಪ್ರಮುಖ ಗುರಿ ಸಾಧನೆಗಳಿಗೆ ಇಂದಿನಿಂದ ಒಳ್ಳೆಯ ಬೇಡಿಕೆ ಸಿಗುವುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿರಿ.

ಪದಬಂಧ 4835 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೇರವಲ್ಲದ ರಸ್ತೆಯಿದು (5)
4.ಮಾತಿನ ಚಾತುರ್ಯ (3)
5.ಪಾಯಸ ನೆಕ್ಕುತ್ತಿರುವ ಕಾಗೆ! (3)
6.ಭಾವ ಅಥವಾ ಮೈದುನನ ಹೆಂಡತಿ (3)
8.ನೂಲು ಅಥವಾ ಎಳೆ (2)
9.ಹರಸುವಾಗ ಆಕಳು ಬಂದಿತಲ್ಲಾ! (2)
11.ಇದು ಒಳ್ಳೆಯ ದಿನ (3)
14.ಹಾಸ್ಯ ಈ ವಿಧವಾಗಿ ಬಂದಿದೆ (3)
15.ಆಮೇಲೂ ಇಳಿಯದ ಮತ್ತು! (3)
16.ಬೆಂಗಳೂರಿನ ಭವ್ಯ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ
1.ಅನೇಕ ವಿಷಯ ಅರಿತವನು (4)
2.ಅತ್ಯಂತ ಚೆಲುವಾದುದು (5)
3.ರೀತಿಯೊಡಗೂಡುವ ಸಂಪ್ರದಾಯ! (3)
4.ಒಳ್ಳೆಯ ಅಥವಾ ಕೆಟ್ಟ ನಾತ (3)
7.ಇದೊಂದು ಕಂದಮೂಲ (3)
8.ಆಸ್ತಿಯಲ್ಲಿ ಪಾಲು ಪಡೆಯುವವನು (3)
9.ಕುದುರೆ ಮುಖವಿದು (5)
10.ಬಂಧದಲ್ಲಿ ಕೊನೆಗೊಂಡಿರುವ ಸ್ನೇಹ (4)
12.ನಮ್ಮ ರಾಷ್ಟ್ರ ಪಕ್ಷಿ (3)
13.ಪದ ಹೇಳಿ ಪಡೆದ ಡಿಗ್ರಿ (3)



4834ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರಜಾತ 3.ಉಸ್ತುವಾರಿ 5. ರುಧಿರ 6.ಸುಮಬಾಣ 8.ಗಹ್ವರ 10.ನಕಾರ 12.ತರತಮ 15.ಮಸೂರ 16.ಅರಿಷಿಣ 17.ಗುಡಿಕಾರ
ಮೇಲಿಂದ ಕೆಳಕ್ಕೆ: 1.ಕಡಸು 2.ತರುಣ 3.ಉರಗ 4.ರಿಕ್ತ 7.ಮನೋರಂಜನ 9.ರತ್ನಖಚಿತ 11.ರಮಣ 12.ತರಗು 13.ಮತ್ಸರ 14.ತೈಲ

ಸುಡೊಕು 5221

			4		2		7	
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5220 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಮುಂಬೈ ಧಾರಣೆ

ಶೇಂಗಾ

10-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1150 (1152)
ಪಾಮ್ ವಾರದ ಡೆಲಿವರಿ	1165 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,350 (47,450)
ಬೆಳ್ಳಿ ಕೆ.ಜಿ	60,300 (60,200)

ಆವರಣದಲ್ಲಿ ಶನಿವಾರದ ಧಾರಣೆ

ಬ್ಯಾಡಗಿ ಮೆಣಸಿನಕಾಯಿ: ದಾಖಲೆಯ ಆವಕ


ಪ್ರಜಾವಾಣಿ ವಾರ್ತೆ

ಬ್ಯಾಡಗಿ: ಇಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸೋಮವಾರ 52,738 ಕ್ವಿಂಟಲ್ ಮೆಣಸಿನಕಾಯಿ ಮಾರಾಟಕ್ಕೆ ತರಲಾಗಿದ್ದು, ಪ್ರಸಕ್ತ ಹಂಗಾಮಿನ ದಾಖಲೆಯ ಪ್ರಮಾಣದ ಆವಕ ಇದು.

ರಾಜ್ಯದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಸಾಗಿರುವ ಕಾರಣ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ವಹಿವಾಟು ಸ್ಥಗಿತಗೊಳ್ಳಬಹುದು ಎನ್ನುವ ಆತಂಕ ಕೆಲವು ರೈತರಲ್ಲಿ ಇದೆ. ಅಲ್ಲದೆ, ಸಂಕ್ರಾಂತಿ ಪ್ರಯುಕ್ತ ಗುರುವಾರ ಮತ್ತು ಶುಕ್ರವಾರ ಮಾರುಕಟ್ಟೆಗೆ ರಜೆ ಘೋಷಿಸುವ ಸಾಧ್ಯತೆ ಇದೆ. ಹಾಗಾಗಿ, ರೈತರು ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನಕಾಯಿ ಮಾರಾಟಕ್ಕೆ ತಂದಿದ್ದಾರೆ. ಕಳೆದ ಗುರುವಾರ ಮಾರುಕಟ್ಟೆಗೆ 42,290 ಕ್ವಿಂಟಲ್ ಆವಕವಾಗಿತ್ತು.

ಗದಗ ಜಿಲ್ಲೆ ಕರ್ತಕೋಟಿ ಭಾಗದಲ್ಲಿ ಬೆಳೆದ 1 ಚೀಲ ಡಬ್ಬಿ ಮೆಣಸಿನಕಾಯಿ ಗರಿಷ್ಠ ₹ 61,669ರಂತೆ ಮಾರಾಟವಾಗಿದೆ. ಉತ್ತಮ ಗುಣಮಟ್ಟದ ಮೆಣಸಿನಕಾಯಿಗೆ ಬೇಡಿಕೆ ಹೆಚ್ಚಿದ್ದು, ಡಬ್ಬಿ ಮೆಣಸಿನಕಾಯಿಯ ಸರಾಸರಿ ದರದಲ್ಲಿಯೂ ಏರಿಕೆ ಕಂಡುಬಂದಿದೆ. ಬೆಲೆಯಲ್ಲಿ ಸ್ಥಿರತೆ ಇದೆ. ಪ್ರತಿ ಕ್ವಿಂಟಲ್ ಕಡ್ಡಿ ಮೆಣಸಿನಕಾಯಿ ₹ 17,869, ಡಬ್ಬಿ ತಳಿ ₹ 20,269 ಹಾಗೂ ಗುಂಟೂರು ತಳಿ ₹ 6,529ರಂತೆ ಮಾರಾಟವಾಗಿದೆ.

ಷೇರುಪೇಟೆ ವಹಿವಾಟು ▲651



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,812
ಇಂದಿನ ಅಂತ್ಯ	18,003
▲	191
ದಿನದ ಗರಿಷ್ಠ	18,017

ವಿನಿಮಯ ದರ

$ ಡಾಲರ್	74.05
£ ಪೌಂಡ್	100.76
€ ಯುರೊ	84.02
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1205 (1200)
ಸೂರ್ಯಕಾಂತಿ (ರಿಫೈನ್ಡ್)	₹1240 (1245)
ಪಾಮೋಲಿನ್	₹1167 (1165)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹1800-2400
ಮಧ್ಯಮ	₹1200-1800
ಸಣ್ಣ	₹500-1200

ಕಳೆದ ತಿಂಗಳಿನಲ್ಲಿ ಹೂಡಿಕೆಗೆ ಮುಕ್ತವಾಗಿದ್ದ 20 ಹೊಸ ಫಂಡ್‌ಗಳು

ಈಕ್ವಿಟಿ ಫಂಡ್: ಡಿಸೆಂಬರ್‌ನಲ್ಲಿ ₹ 25 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ಡಿಸೆಂಬರ್ ತಿಂಗಳಿನಲ್ಲಿ ಆಗಿರುವ ನಿವ್ವಳ ಹೂಡಿಕೆಯ ಮೊತ್ತವು ₹ 25 ಸಾವಿರ ಕೋಟಿ ದಾಟಿದೆ. ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಹೆಚ್ಚಿನ ಹೂಡಿಕೆ ಆಗಿದೆ. ಮಲ್ಟಿಕ್ಯಾಪ್ ಫಂಡ್‌ಗಳಲ್ಲಿ ದೊಡ್ಡ ಮಟ್ಟದಲ್ಲಿ ಹಣದ ಒಳಹರಿವು ಕಂಡುಬಂದಿದೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಸೋಮವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಈ ವಿವರ ನೀಡಿವೆ. ನವೆಂಬರ್‌ನಲ್ಲಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಲ್ಲಿ ₹ 11,615 ಕೋಟಿ, ಅಕ್ಟೋಬರ್‌ನಲ್ಲಿ ₹ 5,215 ಕೋಟಿ ಒಳಹರಿವು ಆಗಿತ್ತು.



ಡಿಸೆಂಬರ್‌ನಲ್ಲಿನ ಒಳಹರಿವು ₹ 25,077 ಕೋಟಿ ಆಗಿದೆ. 2021ರ ಮಾರ್ಚ್‌ನಿಂದಲೂ ಈಕ್ವಿಟಿ ಆಧಾರಿತ ಫಂಡ್‌ಗಳಲ್ಲಿ ಹೂಡಿಕೆ ಆಗುತ್ತಿರುವ ಮೊತ್ತವು ಹಿಂದಕ್ಕೆ ಪಡೆಯಲಾಗುತ್ತಿರುವ ಮೊತ್ತಕ್ಕಿಂತ ಹೆಚ್ಚಿನದಾಗಿದೆ. ಆದರೆ, 2020ರ ಜುಲೈನಿಂದ 2021ರ ಫೆಬ್ರುವರಿವರೆಗಿನ ಅವಧಿಯಲ್ಲಿ ಹೂಡಿಕೆ ಆದ ಮೊತ್ತಕ್ಕಿಂತ, ಹಿಂದಕ್ಕೆ ಪಡೆದ ಮೊತ್ತವೇ ಹೆಚ್ಚಿನದಾಗಿತ್ತು.

ಮುಖ್ಯಾಂಶಗಳು

- ಮಲ್ಟಿಕ್ಯಾಪ್ ಫಂಡ್‌ಗಳಲ್ಲಿ ಹೆಚ್ಚಿನ ಹೂಡಿಕೆ
- ‘ಮಾರುಕಟ್ಟೆ ಅಸ್ಥಿರತೆ ನಿಭಾಯಿಸಲು ಎಸ್‌ಐಪಿ ಮಾರ್ಗ’

ಡಿಸೆಂಬರ್ ಕೊನೆಯ ವೇಳೆಗೆ ದೇಶದ ಮ್ಯೂಚುವಲ್ ಫಂಡ್ ಉದ್ಯಮದ ಮೂಲಕ ಹೂಡಿಕೆ ಆಗಿರುವ ಹಣದ ಒಟ್ಟು ಮೊತ್ತ ₹ 37.72 ಲಕ್ಷ ಕೋಟಿ ಆಗಿತ್ತು. ಡಿಸೆಂಬರ್‌ನಲ್ಲಿ ಮಾಸಿಕ ಎಸ್‌ಐಪಿ ಮೊತ್ತವು ₹ 11,305 ಕೋಟಿಗೆ ಹೆಚ್ಚಳ ಆಗಿದೆ. ಅಲ್ಲದೆ, ಎಸ್‌ಐಪಿ ಖಾತೆಗಳ ಸಂಖ್ಯೆಯು 4.91 ಕೋಟಿಗೆ ಏರಿಕೆ ಆಗಿದೆ.

ಹಣಕಾಸಿನ ಸಾಕ್ಷರತೆಗೆ ಸಂಬಂಧಿಸಿದ ಕಾರ್ಯಕ್ರಮಗಳಿಂದಾಗಿ ಸಣ್ಣ ಹೂಡಿಕೆದಾರರು ಈಕ್ವಿಟಿ ಮಾರುಕಟ್ಟೆಯ ಅಸ್ಥಿರತೆಗಳನ್ನು ಎಸ್‌ಐಪಿ ಮೂಲಕ ನಿಭಾಯಿಸುವುದು ಹೇಗೆ ಎಂಬುದನ್ನು ಕಲಿಯುತ್ತಿದ್ದಾರೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಡಿಸೆಂಬರ್ ತಿಂಗಳಿನಲ್ಲಿ ಒಟ್ಟು 20 ಹೊಸ ಫಂಡ್‌ಗಳು ಹೂಡಿಕೆಗೆ ಮುಕ್ತವಾಗಿವೆ. ಚಿನ್ನದ ವಿನಿಮಯ ವಹಿವಾಟು ನಿಧಿಗಳು ಡಿಸೆಂಬರ್‌ನಲ್ಲಿ ₹ 313 ಕೋಟಿ ಹೂಡಿಕೆಯನ್ನು ಆಕರ್ಷಿಸಿವೆ. ನವೆಂಬರ್‌ನಲ್ಲಿನ ₹ 682 ಕೋಟಿ ಹೂಡಿಕೆಗೆ ಹೋಲಿಸಿದರೆ ಇದು ಕಡಿಮೆ.

ಸುದ್ದಿ 2 ನಿಮಿಷ

ತಂಬಾಕು ಉತ್ಪನ್ನಗಳಿಗೆ ಸುಂಕ: ಅರ್ಜಿ ವಜಾ ಮಾಡಿದ ಹೈಕೋರ್ಟ್

ಬೆಂಗಳೂರು: ತಂಬಾಕು ಉತ್ಪನ್ನಗಳ ಮೇಲೆ ಏಕಕಾಲಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ ಟಿ), ಅಬಕಾರಿ ಸುಂಕ ಹಾಗೂ ರಾಷ್ಟ್ರೀಯ ವಿಪತ್ತು ಸಂಕಷ್ಟ ಸುಂಕ ವಿಧಿಸುವ ಕೇಂದ್ರ ಸರ್ಕಾರದ ಕಾನೂನನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಈ ಕುರಿತಂತೆ ಮೆಸರ್ಸ್ ವಿ.ಎಸ್.ಪ್ರಾಡಕ್ಟ್ಸ್ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ವಜಾಗೊಳಿಸಿದೆ.

‘ಕೇಂದ್ರ ಸರ್ಕಾರವು, 246ನೇ ವಿಧಿಯಡಿ ತಂಬಾಕು ಮತ್ತು ತಂಬಾಕು ಉತ್ಪನ್ನಗಳು ಸೇರಿದಂತೆ ಹಲವು ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿದೆ. ಹಾಗಾಗಿ, ತಂಬಾಕು ಉತ್ಪನ್ನಗಳ ಮೇಲೆ ಮೂಲ ಅಬಕಾರಿ ಸುಂಕದ ಜೊತೆಗೆ ಎನ್‌ಸಿಸಿಡಿ ಶುಲ್ಕ ಹೇರುತ್ತಿರುವುದು ಸಮಾನತೆಯ ಹಕ್ಕಿಗೆ ವಿರುದ್ಧವಾದದ್ದು ಎಂಬ ಅರ್ಜಿದಾರರ ವಾದವನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸ್ಕೋಡಾ ಕೋಡಿಯಾಕ್‌ನ ಹೊಸ ಆವೃತ್ತಿ ಬಿಡುಗಡೆ



ನವದೆಹಲಿ (ಪಿಟಿಐ): ಸ್ಕೋಡಾ ಕಂಪನಿಯು ತನ್ನ ಪ್ರೀಮಿಯಂ ಎಸ್‌ಯುವಿ ಕೋಡಿಯಾಕ್‌ನ ಹೊಸ ಆವೃತ್ತಿಯನ್ನು ದೇಶದ ಮಾರುಕಟ್ಟೆಗೆ ಸೋಮವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 34.99 ಲಕ್ಷದಿಂದ ₹ 37.49 ಲಕ್ಷದವರೆಗೆ ಇದೆ.

ಏಳು ಆಸನಗಳ ಹೊಸ ಆವೃತ್ತಿಯು 2 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದೆ ಎಂದು ಕಂಪನಿಯು ತಿಳಿಸಿದೆ.

‘ವಿಶೇಷ ವೈಶಿಷ್ಟ್ಯಗಳು ಮತ್ತು ಸಾಟಿಯಿಲ್ಲದ ಸುರಕ್ಷತೆಯ ಕಾರಣದಿಂದ ನಿತ್ಯದ ಸವಾರಿಗೆ ಅಥವಾ ಆಫ್ ರೋಡ್ ಸಾಹಸಗಳಿಗಾಗಿ ಈ ಎಸ್‌ಯುವಿ ಪರಿಪೂರ್ಣವಾದ ವಾಹನವಾಗಿದೆ’ ಎಂದು ಸ್ಕೋಡಾ ಆಟೊ ಇಂಡಿಯಾದ ಬ್ರ್ಯಾಂಡ್ ನಿರ್ದೇಶಕ ಜಾಕ್ ಹಾಲಿಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

9 ಏರ್‌ಬ್ಯಾಗ್, ಅಡಾಪ್ಟಿವ್ ಫ್ರಂಟ್ ಹೆಡ್‌ಲೈಟ್ಸ್, ಎಲೆಕ್ಟ್ರಾನಿಕ್, ಮೆಕ್ಯಾನಿಕಲ್ ಮತ್ತು ಹೈಡ್ರಾಲಿಕ್ ಬ್ರೇಕ್ ಅಸಿಸ್ಟ್, ಪಾರ್ಕ್ ಅಸಿಸ್ಟ್ ವಿತ್ ಹ್ಯಾಂಡ್‌ಫ್ರೀ ಪಾರ್ಕಿಂಗ್ ಸೇರಿದಂತೆ ಹಲವು ಸುರಕ್ಷತಾ ವೈಶಿಷ್ಟ್ಯಗಳನ್ನು ಇದು ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಎಂಒಪಿ ರಸಗೊಬ್ಬರ: ಪ್ರತಿ ಚೀಲದ ಬೆಲೆ ₹ 1,700 ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ವಸ್ತುಗಳ ಬೆಲೆ ಏರಿಕೆ ಮತ್ತು ಬಂದರಿನಲ್ಲಿ ರಸಗೊಬ್ಬರ ನಿರ್ವಹಣಾ ವೆಚ್ಚ ಹೆಚ್ಚಾದ ಕಾರಣ ಪೊಟ್ಯಾಷ್ ರಸಗೊಬ್ಬರ ಬೆಲೆ ಏರಿಕೆಯಾಗಿದ್ದು, ಪ್ರತಿ ಚೀಲದ ಬೆಲೆ ₹1,700 ನಿಗದಿಯಾಗಿದೆ ಎಂದು ಕೃಷಿ ಇಲಾಖೆ ಹೇಳಿದೆ.

ದೇಶದಲ್ಲಿ ಎಂಒಪಿ ರಸಗೊಬ್ಬರವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ರಸಗೊಬ್ಬರದ ಗರಿಷ್ಠ ಮಾರಾಟದ ದರವನ್ನು ಸರಬರಾಜು ಸಂಸ್ಥೆಗಳೇ ನಿಗದಿ ಮಾಡುತ್ತವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಳೆದ ನಾಲ್ಕು ತಿಂಗಳಿಂದ ಅಂತರರಾಷ್ಟ್ರೀಯ ರಸಗೊಬ್ಬರ ಮಾರುಕಟ್ಟೆಯಲ್ಲಿ ಕಚ್ಚಾವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದಂತೆ ಎಂಒಪಿ ರಸಗೊಬ್ಬರದ ದರವೂ ಏರಿಕೆಯಾಗಿದೆ. ಇದರಿಂದ ಎಂಒಪಿ ರಸಗೊಬ್ಬರದ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಆದರೂ ಇಂಡಿಯನ್ ಪೊಟ್ಯಾಷ್ ಲಿಮಿಟೆಡ್ ಸಂಸ್ಥೆಯು ಅಂತರರಾಷ್ಟ್ರೀಯ ಸರಬರಾಜುದಾರರೊಂದಿಗೆ ಎಂಒಪಿ ರಸಗೊಬ್ಬರ ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿದೆ ಎಂದೂ ಹೇಳಿದೆ.

ಈಗ ರಸಗೊಬ್ಬರದ ವಿನಿಮಯ ದರ, ಹೊಸ ಆಮದು ಬೆಲೆ. ಕಸ್ಟಮ್ಸ್ ಸುಂಕ ಹಾಗೂ ಜಿಎಸ್‌ಟಿ ಬಂದರಿನಲ್ಲಿ ರಸಗೊಬ್ಬರದ ನಿರ್ವಹಣೆಯ ಇತರ ವೆಚ್ಚಗಳೂ ಸೇರಿ ಒಟ್ಟು ದರವು ಪ್ರತಿ ಟನ್‌ಗೆ ₹40,147 ಎಂದು ನಿಗದಿಪಡಿಸಲಾಗಿದೆ.

ಇದರಲ್ಲಿ ಕೇಂದ್ರ ಸರ್ಕಾರವು ಪ್ರತಿ ಟನ್ ಎಂಒಪಿಗೆ ನೀಡುವ ರಿಯಾಯಿತಿ ದರ ₹6,070 ಹೊರತುಪಡಿಸಿದಲ್ಲಿ ಪ್ರತಿ ಟನ್ನಿನ ಮಾರಾಟ ದರವು ₹34,000 ಆಗುತ್ತದೆ. ಹೀಗಾಗಿ ಪ್ರತಿ ಚೀಲದ ದರವು ₹1,700 ಆಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಜುಲೈ–ಸೆಪ್ಟೆಂಬರ್ ಅವಧಿ: 3.10 ಕೋಟಿ ಉದ್ಯೋಗ ಸೃಷ್ಟಿ

ನವದೆಹಲಿ (ಪಿಟಿಐ): ತಯಾರಿಕೆ, ನಿರ್ಮಾಣ ಸೇರಿದಂತೆ ಆಯ್ದ ಒಂಭತ್ತು ವಲಯಗಳಲ್ಲಿ 2021ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಒಟ್ಟಾರೆ 3.10 ಕೋಟಿ ಉದ್ಯೋಗಗಳು ಸೃಷ್ಟಿಯಾಗಿವೆ. ಈ ಸಂಖ್ಯೆಯು ಏಪ್ರಿಲ್–ಜೂನ್ ಅವಧಿಯಲ್ಲಿ ಸೃಷ್ಟಿಯಾದ ಉದ್ಯೋಗಗಳ ಸಂಖ್ಯೆಗಿಂತ 2 ಲಕ್ಷ ಅಧಿಕ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಅವರು ತ್ರೈಮಾಸಿಕ ಉದ್ಯೋಗ ಸಮೀಕ್ಷೆಯ (ಕ್ಯುಇಎಸ್) ವರದಿಯನ್ನು ಸೋಮವಾರ ಬಿಡುಗಡೆ ಮಾಡಿದ್ದಾರೆ.

ತಯಾರಿಕೆ, ನಿರ್ಮಾಣ, ವ್ಯಾಪಾರ, ಸಾರಿಗೆ, ಶಿಕ್ಷಣ, ಆರೋಗ್ಯ, ಆತಿಥ್ಯ ಮತ್ತು ರೆಸ್ಟೋರೆಂಟ್, ಐ.ಟಿ./ಬಿಪಿಒ ಮತ್ತು ಹಣಕಾಸು ಸೇವೆಗಳ ವಲಯಗಳಲ್ಲಿ 2021ರ ಏಪ್ರಿಲ್–ಜೂನ್ ಅವಧಿಯಲ್ಲಿ 3.08 ಕೋಟಿ ಉದ್ಯೋಗಗಳು ಸೃಷ್ಟಿಯಾಗಿವೆ.

651 ಅಂಶ ಜಿಗಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಐ.ಟಿ. ಮತ್ತು ಹಣಕಾಸು ವಲಯದ ಷೇರುಗಳ ಖರೀದಿಗೆ ಹೂಡಿಕೆದಾರರು ಆಸಕ್ತಿ ತೋರಿಸಿದ್ದರಿಂದ ದೇಶದ ಷೇರುಪೇಟೆಗಳ ವಹಿವಾಟು ಸೋಮವಾರ ಸಕಾರಾತ್ಮಕವಾಗಿ ಅಂತ್ಯವಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 651 ಅಂಶ ಏರಿಕೆ ಕಂಡು 60,395 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 191 ಅಂಶ ಹೆಚ್ಚಾಗಿ 18,003 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.

ಮೂರನೇ ತ್ರೈಮಾಸಿಕದಲ್ಲಿ ಕಂಪನಿಗಳ ಫಲಿತಾಂಶವು ಉತ್ತಮವಾಗಿರುವ ನಿರೀಕ್ಷೆಯಿಂದ ದೇಶಿ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 29 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.05ರಂತೆ ವಿನಿಮಯಗೊಂಡಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.51ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 82.17 ಡಾಲರ್‌ಗಳಿಗೆ ತಲುಪಿದೆ.

ಹೂಡಿಕೆಯಲ್ಲಿನ ಸಾಮಾನ್ಯ ತಪ್ಪುಗಳು

ಷೇರು ಮಾತು

ಶರತ್ ಎಂ.ಎಸ್.



ಷೇರು ಹೂಡಿಕೆಯಲ್ಲಿ ಆಗುವ ತಪ್ಪುಗಳನ್ನು ಕಡಿಮೆ ಮಾಡಿಕೊಳ್ಳಲು ಎರಡು ಮಾರ್ಗಗಳಿವೆ. ಒಂದನೆಯದ್ದು ನಾವೇ ತಪ್ಪು ಮಾಡಿ, ಹಣ ನಷ್ಟ ಮಾಡಿಕೊಂಡು ಅದರಿಂದ ಪಾಠ ಕಲಿಯುವುದು! ಎರಡನೆಯದ್ದು, ಬೇರೆಯವರು ಮಾಡಿದ ತಪ್ಪುಗಳಿಂದ ಪಾಠ ಕಲಿಯುವುದು. ಆದರೆ, ಷೇರು ಹೂಡಿಕೆಯಲ್ಲಿ ನಾವೇ ನಮ್ಮ ತಪ್ಪುಗಳಿಂದ ಪಾಠ ಕಲಿಯುತ್ತೇವೆ ಎಂದರೆ ಅದು ದುಬಾರಿಯಾಗುತ್ತದೆ. ಷೇರು ಹೂಡಿಕೆ ವೇಳೆ ಆಗುವ ಸಾಮಾನ್ಯ ತಪ್ಪುಗಳ ಬಗ್ಗೆ ಒಂದಿಷ್ಟು ಅರಿಯೋಣ.

1) ಅರ್ಥ ಮಾಡಿಕೊಳ್ಳದೆ ಹೂಡಿಕೆ ಮಾಡುವುದು: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ನಷ್ಟ ಮಾಡಿಕೊಂಡೆ ಎಂದು ಹಲವರು ಹೇಳುತ್ತಾರೆ. ಅಂಥವರಿಗೆ ನಾನು, ‘ನೀವು ಯಾವ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಿದ್ರಿ? ಅದರ ಬಗ್ಗೆ ಅಧ್ಯಯನ ಮಾಡಿದ್ರಾ? ಆ ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ? ಈ ಹಿಂದೆ ಕಂಪನಿ ಎಷ್ಟು ಲಾಭ ಗಳಿಸಿತ್ತು? ಕಂಪನಿ ಯಾವ ವಲಯಕ್ಕೆ ಸೇರಿದ್ದು ಮತ್ತು ಯಾವ ಉತ್ಪನ್ನ- ಸೇವೆ ಒದಗಿಸುತ್ತಿದೆ’ ಎಂದು ಪ್ರಶ್ನಿಸುತ್ತೇನೆ. ಬಹುತೇಕರಿಗೆ ಆ ಕಂಪನಿಯ ಹೆಸರು ಬಿಟ್ಟರೆ ಮತ್ತೇನೂ ಗೊತ್ತಿರುವುದಿಲ್ಲ. ಪೂರ್ವಾಪರ ಅರಿಯದೆ, ಯಾರೋ ಹೇಳಿದರು ಎಂಬ ಕಾರಣಕ್ಕೆ ಹೂಡಿಕೆ ಮಾಡಿದರೆ ಲಾಭ ಗಳಿಸುವುದಕ್ಕೆ ಹೇಗೆ ಸಾಧ್ಯ? ಹೂಡಿಕೆದಾರ ವಾರನ್ ಬಫೆಟ್ ಮತ್ತು ಭಾರತದ ವಾರನ್ ಬಫೆಟ್ ಎನಿಸಿಕೊಂಡಿರುವ ರಾಕೇಶ್ ಜುನ್‌ಜುನ್‌ವಾಲಾ ಯಾವುದೇ ಷೇರಿನಲ್ಲಿ ಹೂಡಿಕೆ ಮಾಡುವ ಮುನ್ನ ಬಹಳಷ್ಟು ಅಧ್ಯಯನ ಮಾಡುತ್ತಾರೆ. ಅವರ ಹಿಂದೆ ತಜ್ಞರ ಒಂದು ತಂಡವೇ ಇರುತ್ತದೆ. ಅಷ್ಟೆಲ್ಲಾ ಪರಿಣತಿ ಹೊಂದಿರುವವರೇ ಲೆಕ್ಕಾಚಾರ ಮಾಡಿ ಹೂಡಿಕೆ ಮಾಡುತ್ತಾರೆ ಎಂದಾದರೆ ನಾವು ಅಧ್ಯಯನ ಮಾಡದೆ ಷೇರಿನಲ್ಲಿ ಹೂಡಿಕೆ ಮಾಡುವುದು ತಪ್ಪಲ್ಲವೇ?

2) ಸಾಲ ಮಾಡಿ ಷೇರುಗಳಲ್ಲಿ ಹೂಡಿಕೆ: ಇತ್ತೀಚೆಗೆ ಸ್ನೇಹಿತರೊಬ್ಬರು ಕರೆ ಮಾಡಿದ್ದರು. ‘ನನ್ನ ಹಣಕಾಸಿನ ಸ್ಥಿತಿ ಅಷ್ಟು ಚೆನ್ನಾಗಿಲ್ಲ. ಆದರೂ ನನಗೆ ಕ್ರೆಡಿಟ್ ಸ್ಕೋರ್ ಆಧಾರದಲ್ಲಿ ₹ 9 ಲಕ್ಷ ವೈಯಕ್ತಿಕ ಸಾಲ ಸಿಗುತ್ತಿದೆ. ಶೇಕಡ 14ರಷ್ಟು ಬಡ್ಡಿ ಕಟ್ಟಬೇಕಂತೆ. ಸಾಲ ತಗೊಂಡು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬಹುದೇ’ ಎಂದು ಕೇಳಿದರು. ಕೂಡಲೇ ನಾನು ‘ಅಂತಹ ತಪ್ಪನ್ನು ಯಾವತ್ತಿಗೂ ಮಾಡಬೇಡಿ. ವೈಯಕ್ತಿಕ ಸಾಲವನ್ನು ತುರ್ತು ಪರಿಸ್ಥಿತಿಗಳಲ್ಲಿ ಮಾತ್ರ ತೆಗೆದುಕೊಳ್ಳಬೇಕು’ ಎಂದು ಮನದಟ್ಟು ಮಾಡಿದೆ.

‘ಷೇರು ಮಾರುಕಟ್ಟೆಯಂತಹ ಹೆಚ್ಚು ರಿಸ್ಕ್ ಇರುವ ಹೂಡಿಕೆಗೆ ವೈಯಕ್ತಿಕ ಸಾಲದ ಹಣ ತೊಡಗಿಸಿ ನಷ್ಟವಾದರೆ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತೀರಿ. ನೀವೇ ಯೋಚನೆ ಮಾಡಿ. ಷೇರು ಮಾರುಕಟ್ಟೆಯಲ್ಲಿ ದೀರ್ಘಾವಧಿಯಲ್ಲಿ ಸರಾಸರಿ ಶೇ 14ರಿಂದ ಶೇ 16ರಷ್ಟು ಲಾಭ ಸಿಗಬಹುದು. ಅಂಥದ್ದರಲ್ಲಿ ಶೇ 14ರ ಬಡ್ಡಿ ದರದಲ್ಲಿ ವೈಯಕ್ತಿಕ ಸಾಲ ಪಡೆದು ಹೂಡಿಕೆ ಮಾಡುವುದು ತಪ್ಪಲ್ಲವೇ’ ಎಂದು ಕೇಳಿದೆ. ಅವರು ತಮ್ಮ ನಿರ್ಧಾರದಿಂದ ಹಿಂದೆ ಸರಿದರು.

3) ಹೂಡಿಕೆ ಮಾಡಿ ತಾಳ್ಮೆ ಕಳೆದುಕೊಳ್ಳುವುದು: ಶ್ರೀಮಂತಿಕೆಯತ್ತ ನಿಧಾನಗತಿಯ ನಡಿಗೆಯೇ ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಅನುಸರಿಸಿದ ಮಾರ್ಗ. ಸಂಪತ್ತು ವೃದ್ಧಿಗೆ ಸಮಯ ಬೇಕು ಎನ್ನುವ ಸರಳ ಸತ್ಯ ನಮಗೆ ಗೊತ್ತಿರಬೇಕು. ನೀವೇ ಒಂದು ಬಿಸಿನೆಸ್‌ಅನ್ನು ಇವತ್ತು ಆರಂಭ ಮಾಡಿದರೆ, ಅದು ಲಾಭ ಗಳಿಸಿ ಉತ್ತಮ ಸ್ಥಿತಿಗೆ ಬರಲು ಒಂದೆರಡು ವರ್ಷಗಳು ಬೇಕು. ಆದರೆ, ಷೇರು ಖರೀದಿ ಮಾಡುವವರು ಮಾತ್ರ ಇವತ್ತು ಖರೀದಿಸಿದ ಷೇರು ನಾಳೆಯೇ ಹೆಚ್ಚು ಲಾಭ ಕೊಡಬೇಕು ಎಂದು ಬಯಸುತ್ತಾರೆ. ದಿಢೀರ್ ಲಾಭ ಸಿಗದಿದ್ದಾಗ ಆ ಷೇರುಗಳನ್ನು ಕೊಂಡ ಬೆಲೆಗಿಂತ ಕಡಿಮೆಗೆ ಮಾರಾಟ ಮಾಡಿ ಕೈಸುಟ್ಟುಕೊಳ್ಳುತ್ತಾರೆ. ಶೇ 90ರಷ್ಟು ಸಣ್ಣ ಹೂಡಿಕೆದಾರರು ಷೇರು ಹೂಡಿಕೆಯಲ್ಲಿ ನಷ್ಟ ಮಾಡಿಕೊಳ್ಳುವುದು ಹೀಗಿಯೇ.

ನ್ಯೂಯಾರ್ಕ್ ಅಪಾರ್ಟ್‌ಮೆಂಟ್‌ನಲ್ಲಿ ಬೆಂಕಿ ಅವಘಡ: 19 ಜನರ ಸಾವು

ನ್ಯೂಯಾರ್ಕ್ (ಪಿಟಿಐ): ನ್ಯೂಯಾರ್ಕ್ ನಗರದ 19 ಅಂತಸ್ತಿನ ಅಪಾರ್ಟ್‌ಮೆಂಟ್‌ನಲ್ಲಿ ಭೀಕರ ಬೆಂಕಿ ಅವಘಡ ಸಂಭವಿಸಿದ್ದು, 9 ಮಕ್ಕಳೂ ಸೇರಿದಂತೆ 19 ಜನರು ಮೃತಪಟ್ಟಿದ್ದಾರೆ.

‘ಎಲೆಕ್ಟ್ರಿಕ್ ಸ್ಪೇಸ್ ಹೀಟರ್’ ಅಸಮರ್ಪಕವಾಗಿ ಕಾರ್ಯ ನಿರ್ವಹಿಸಿದ್ದರಿಂದ ಈ ಅವಘಡ ಸಂಭವಿಸಿದೆ ಎಂದು ಹೇಳಲಾಗಿದೆ.

ಈ ದುರಂತ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸಂಭವಿಸಿದ್ದು, 32 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಗ್ನಿಶಾಮಕ ದಳದ ಸುಮಾರು 200 ಸಿಬ್ಬಂದಿ ಬೆಂಕಿ ನಂದಿಸುವ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು.

ಸೂಕಿಗೆ ಮತ್ತೆ ನಾಲ್ಕು ವರ್ಷ ಸಜೆ

ಬ್ಯಾಂಕಾಕ್ (ರಾಯಿಟರ್ಸ್): ಪರವಾನಗಿ ಇಲ್ಲದ ವಾಕಿ- ಟಾಕಿಗಳನ್ನು ಹೊಂದಿರುವ ಆರೋಪದ ಮೇಲೆ ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರಿಗೆ ಅಲ್ಲಿನ ಮಿಲಿಟರಿ ಆಡಳಿತದ ನ್ಯಾಯಾಲಯವು 4 ವರ್ಷಗಳ ಜೈಲು ಶಿಕ್ಷೆಯನ್ನು ಸೋಮವಾರ ವಿಧಿಸಿದೆ.

ಕೋವಿಡ್ ನಿಯಮ ಉಲ್ಲಂಘಟನೆ ಮತ್ತು ಶಾಂತಿ ಭಂಗ ಉಂಟು ಮಾಡಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸೂಕಿ ಅವರಿಗೆ ಡಿಸೆಂಬರ್ 6ರಂದು ನಾಲ್ಕು ವರ್ಷಗಳ ಶಿಕ್ಷೆಯನ್ನು ನ್ಯಾಯಾಲಯ ವಿಧಿಸಿತ್ತು. ಬಳಿಕ ಶಿಕ್ಷೆಯ ಅವಧಿಯನ್ನು 2 ವರ್ಷಗಳಿಗೆ ಇಳಿಸಲಾಗಿತ್ತು. ಇದೀಗ ಮತ್ತೆ 4 ವರ್ಷಗಳ ಶಿಕ್ಷೆಯೂ ಪ್ರಕಟವಾಗಿರುವುದರಿಂದ ಜೈಲುವಾಸದ ಅವಧಿ ಆರು ವರ್ಷಗಳಿಗೆ ವಿಸ್ತರಣೆಯಾದಂತಾಗಿದೆ ಎಂದು ಮೂಲಗಳು ಹೇಳಿವೆ.


ಅವರ ಮೇಲಿನ ಸುಮಾರು 12 ಪ್ರಕರಣಗಳ ವಿಚಾರಣೆ ನಡೆಯುತ್ತಿದ್ದು, ಗರಿಷ್ಠ 100 ವರ್ಷಗಳಿಗಿಂತ ಹೆಚ್ಚು ಅವಧಿಯ ಸೆರೆವಾಸದ ಶಿಕ್ಷೆಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಚಿಪ್ಪು	24509-35019	ರಾಶಿ	42599-47499
ಬಂಟ್ವಾಳ		ಕೋಕ	18019-27589	ತಟ್ಟಿಬೆಟ್ಟೆ	30699-46399
ಕೋಕ	12500-25000	ಫ್ಯಾಕ್ಟರಿ	13019-18589	**ಶಿರಸಿ**	
ಹೊಸತು	27500-45000	ಹಳೆಚಾಲಿ	45589-49599	ಬೆಟ್ಟೆ	35109-45400
ಹಳತು	46000-53000	ಹೊಸಚಾಲಿ	36509-40609	ಬಿಳಿಗೋಟು	20899-41299
ಚಿತ್ರದುರ್ಗ		**ಪುತ್ತೂರು**		ಚಾಲಿ	32099-49093
ಆಪಿ	45600-46000	ಕೋಕ	11000-26000	ರಾಶಿ	41909-48299
ಬೆಟ್ಟೆ	37639-38069	ಹೊಸತು	27500-45000	**ಸಿದ್ದಾಪುರ**	
ಕೆಂಪುಗೋಟು	29829-30279	**ಸಿದ್ದಾಪುರ**		ಬಿಳಿಗೋಟು	26899-32051
ರಾಶಿ	45100-45500	ಬಿಳಿಗೋಟು	22199-33218	ಚಾಲಿ	37601-48851
ಕಾರ್ಕಳ		ಚಾಲಿ	44689-48099	ಕೋಕ	23051-28989
ಹೊಸತು	40000-45000	ಕೋಕ	21899-34112	ಕೆಂಪುಗೋಟು	32242-37842
ಹಳತು	46000-53000	ಹೊಸಚಾಲಿ	32699-39569	ರಾಶಿ	45560-52900
ಕುಮಟ		ಕೆಂಪುಗೋಟು	26689-33799	ತಟ್ಟಿಬೆಟ್ಟೆ	37899-44865


ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಬಿ. ವಿ. ರಘೋತ್ತಮ ರಾವ್
ಪಟೇಲರು, ಚಿಕ್ಕಪ್ಪನಹಳ್ಳಿ
ಇವರು ದಿನಾಂಕ 09.01.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಡಾ|| ತಿರುಮಲ ರಾವ್, ದಂತವೈದ್ಯರು, ಮಡಿಕೇರಿ.
ಮೊಬೈಲ್ : 98865 25601

13 ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ವಿ.ಎಸ್. ಮುನಿರೆಡ್ಡಿ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ ಶ್ರೀಮತಿ ರತ್ನಮ್ಮ
ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ಅನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business Offers
Business For Sale
ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ: 9008151027

ಉದ್ಯೋಗಾವಕಾಶ
General
BANKING, TELLCALLERS, Work from Home, Field Executive, Accountants, Salary16000/- - 26000/-. SSLC, PUC, Degree. 8951939589.

Hospital & Medical Jobs
WANTED D PHARMA completed candidates (both male and female) for outlet incharge In RR Nagar Bangalore Contact :- Goutham kumar 7338133755, 7829689303
WANTED Lab analysists and lab technician (for diagnostics) (both male and female) location RR Nagar Bangalore contact :7338133755, 7829689303

Part-Time Jobs
Situation Required
Wanted

EDUCATION CORNER
SVR College of Commerce and Management Studies
PGCET Code: B375MB
Affiliated to Bangalore University and Approved by AICTE, New Delhi.
ADMISSION OPEN 2021-22
M.Com Master of Commerce
MBA Master of Business Administration
Deepashree M Reg. No.: 18ZFCOM006
Thanushree H D Reg. No.: 18ZFCMD048
www.svrinstitutions.com
HSR Layout, 2nd Sector, Bengaluru 560102
+91 97397 17000

ಭವಿಷ್ಯ
Astrology

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col	Double Col	Multi Col	
	430	450	475	

SPECIAL OFFER
PAY 2 And GET 1 Free
PAY 3 And GET 2 Free
PAY 5 And GET 5 Free
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಕೋವಿಡ್: ಪರಿಸ್ಥಿತಿ ತೀವ್ರಗತಿಯಲ್ಲಿ ಬದಲಾಗಬಹುದು –ಕೇಂದ್ರ ಸರ್ಕಾರದ ಎಚ್ಚರಿಕೆ

ಆಸ್ಪತ್ರೆಗೆ ದಾಖಲು ಪ್ರಮಾಣ ಶೇ 5ರಿಂದ10ರಷ್ಟು

ನವದೆಹಲಿ (ಪಿಟಿಐ): ಕೊರೊನಾ ಸೋಂಕು ಪ್ರಕರಣದ ತೀವ್ರ ಏರಿಕೆ ಇದ್ದರೂ ಪ್ರಸ್ತುತ, ದೇಶದಲ್ಲಿ ಶೇ 5 ರಿಂದ 10ರಷ್ಟು ಪ್ರಕರಣಗಳಲ್ಲಿ ಮಾತ್ರ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿದೆ. ಆದರೆ, ಈ ಪರಿಸ್ಥಿತಿ ತೀವ್ರಗತಿಯಲ್ಲಿ ಬದಲಾಗಬಹುದು ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ.



ಈ ಹಿನ್ನೆಲೆಯಲ್ಲಿ ಪ್ರಸ್ತುತ ಹೋಂ ಐಸೋಲೇಷನ್ ಮತ್ತು ಆಸ್ಪತ್ರೆಗಳಲ್ಲಿ ಇರುವ ಕೋವಿಡ್ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು ಎಂದು ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ಕೋವಿಡ್ ಎರಡನೇ ಅಲೆಯಲ್ಲಿ ಶೇ 20ರಿಂದ 23ರಷ್ಟು ಪ್ರಕರಣಗಳಲ್ಲಿ ಆಸ್ಪತ್ರೆಗೆ ದಾಖಲಿಸಬೇಕಾಗಿತ್ತು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೆಲವೊಂದು ರಾಜ್ಯಗಳಲ್ಲಿ ಬೃಹತ್ ಆರೋಗ್ಯ ಸೌಲಭ್ಯ ಸಜ್ಜುಗೊಳಿಸಲಾಗಿದೆ. ಮೂಲಸೌಲಭ್ಯ, ಮಾನವ ಸಂಪನ್ಮೂಲದ ಲಭ್ಯತೆ ಎರಡಕ್ಕೂ ಮಿತಿಯಿದೆ. ಹೀಗಾಗಿ, ಸಮರ್ಪಕ ನಿರ್ವಹಣೆಯ ಮೂಲಕ ಆಸ್ಪತ್ರೆಗಳಲ್ಲಿ ಅಗತ್ಯ ಸಿಬ್ಬಂದಿ ಲಭ್ಯವಿರುವಂತೆ ನೋಡಿಕೊಳ್ಳಬೇಕಾಗಿದೆ ಎಂದು ಸಲಹೆ ಮಾಡಿದ್ದಾರೆ.

ಎಲ್ಲ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು ಎಷ್ಟು ಸಕ್ರಿಯ ಪ್ರಕರಣಗಳು ಇವೆ, ಎಷ್ಟು ಮಂದಿ ಹೋಂ ಐಸೋಲೇಷನ್‌ನಲ್ಲಿ ಇದ್ದಾರೆ, ಆಮ್ಲಜನಕ ಸಹಿತ ಹಾಸಿಗೆಗಳು, ಐಸಿಯು ಹಾಸಿಗೆಗಳು, ವೆಂಟಿಲೇಟರ್ ನೆರವಿನಲ್ಲಿ ಇರುವ ರೋಗಿಗಳ ಪರಿಸ್ಥಿತಿ ಎಲ್ಲವನ್ನೂ ಗಮನಿಸಬೇಕು. ಇದರ ಆಧಾರದಲ್ಲಿ ಲಭ್ಯವಿರುವ ಸಿಬ್ಬಂದಿಯನ್ನು ಸೇವೆಗೆ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದಾರೆ.

ದರ ನ್ಯಾಯಯುತವಾಗಿರಲಿ: ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ವಿಧಿಸುವ ದರವು ನ್ಯಾಯಯುತವಾಗಿದೆ ಎಂದು ನೋಡಿಕೊಳ್ಳಬೇಕು. ಹೆಚ್ಚು ವಿಧಿಸಿದ್ದಲ್ಲಿ ಗಮನಿಸಿ, ಕ್ರಮ ಜರುಗಿಸುವ ವ್ಯವಸ್ಥೆಯೂ ಇರಬೇಕು ಎಂದು ಭೂಷಣ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ವೈದ್ಯರು, ಎಂಬಿಬಿಎಸ್ ವಿದ್ಯಾರ್ಥಿಗಳ ನೆರವನ್ನು ಟೆಲಿಸಂಪರ್ಕ ಸೇವೆಗಾಗಿ ಬಳಸಿಕೊಳ್ಳಬಹುದು. ಸಮುದಾಯ ಕಾರ್ಯಕರ್ತರಿಗೆ ಕೌಶಲ ತರಬೇತಿಯನ್ನು ನೀಡಬಹುದು ಎಂದು ತಿಳಿಸಿದ್ದಾರೆ.

ಎಲ್ಲ ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜು ಆಸ್ಪತ್ರೆಗಳನ್ನು ಇ–ಸಂಜೀವಿನಿ ಟೆಲಿಸಂಪರ್ಕ ಕೇಂದ್ರಗಳಾಗಿ ಬಳಸಬೇಕು. ಇದಕ್ಕೆ ಅಗತ್ಯವಿರುವ ಆರ್ಥಿಕ ನೆರವನ್ನು ಈಗಾಗಲೇ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒದಗಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚೀನಾ: ಓಮೈಕ್ರಾನ್ ಹೆಚ್ಚಳ, ಇನ್ನಷ್ಟು ನಿರ್ಬಂಧ

ಬೀಜಿಂಗ್ (ಎಎಫ್‌ಪಿ): ವೇಗವಾಗಿ ಹಬ್ಬುತ್ತಿರುವ ಓಮೈಕ್ರಾನ್‌ನ ಹೆಚ್ಚಿನ ಪ್ರಕರಣಗಳು ಚೀನಾದಲ್ಲಿ ಪತ್ತೆಯಾಗಿವೆ. ಹಲವು ನಗರಗಳಲ್ಲಿ ನಿರ್ಬಂಧ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಬೀಜಿಂಗ್‌ನಲ್ಲಿ ಚಳಿಗಾಲದ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆದಿದ್ದು, ಕೆಲವೇ ವಾರ ಇರುವಾಗಲೇ ಈ ಬೆಳವಣಿಗೆ ನಡೆದಿದೆ.

ಕ್ಸಿಯಾನ್‌ನಲ್ಲಿ ಲಾಕ್‌ಡೌನ್ ಜಾರಿಯಲ್ಲಿದೆ. ಹೆಚ್ಚಿನ ನಗರಗಳಲ್ಲಿ ನಿರ್ಬಂಧ ಕ್ರಮಗಳನ್ನು ಮುಂದುವರಿಸಲಾಗಿದೆ. ತುರ್ತು ಸಂದರ್ಭ ಹೊರತುಪಡಿಸಿ ಜನರು ಹೊರಗಡೆ ಹೋಗಬಾರದು ಎಂದು ತಿಳಿಸಿದೆ.

- ಕೋವಿಡ್ ಪರಿಸ್ಥಿತಿ ಹಿನ್ನೆಲೆಯಲ್ಲಿ ತಮಿಳುನಾಡಿನಲ್ಲಿ ಮಾಸಾಂತ್ಯಕ್ಕೆ ಆರಂಭವಾಗಬೇಕಿದ್ದ ವಿಶ್ವವಿದ್ಯಾಲಯಗಳ ಸೆಮಿಸ್ಟರ್ ಪರೀಕ್ಷೆಯನ್ನು ಸರ್ಕಾರ ಅನಿರ್ದಿಷ್ಟಾವಧಿಗೆ ಮುಂದೂಡಿದೆ. ಮುಖ್ಯಮಂತ್ರಿ ಜೊತೆಗೆ ಚರ್ಚಿಸಿದ ಬಳಿಕ ಶಿಕ್ಷಣ ಸಚಿವ ಕೆ.ಪೊನ್ಮುಡಿ ಈ ವಿಷಯ ಪ್ರಕಟಿಸಿದರು.
- ಉತ್ತರ ಪ್ರದೇಶದಲ್ಲಿ ಸರ್ಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಹಾಜರಾತಿ ಪ್ರಮಾಣವನ್ನು ಶೇ 50ಕ್ಕೆ ಸೀಮಿತಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರಿ ನೌಕರರಿಗೆ ಸೋಂಕು ದೃಢಪಟ್ಟಲ್ಲಿ ಏಳು ದಿನ ವೇತನಸಹಿತ ರಜೆ ನೀಡಬೇಕು, ಸರ್ಕಾರಿ ಕಚೇರಿಗಳಲ್ಲಿ ಸಹಾಯವಾಣಿ ಆರಂಭಿಸಬೇಕು ಎಂದು ಆದೇಶಿಸಿದೆ.
- ಸೋಂಕು ಪ್ರಕರಣಗಳ ಏರಿಕೆ ಹಿನ್ನೆಲೆಯಲ್ಲಿ ರಾತ್ರಿ 11ರಿಂದ ಬೆಳಿಗ್ಗೆ 5 ಗಂಟೆಯವರೆಗೂ ರಾತ್ರಿ ಕರ್ಫ್ಯೂ ಜಾರಿಗೊಳಿಸಲು ಆಂಧ್ರಪ್ರದೇಶ ಸರ್ಕಾರ ನಿರ್ಧರಿಸಿದೆ. ಅಲ್ಲದೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ 200ಕ್ಕೂ ಹೆಚ್ಚು ಜನರು ಸೇರಬಾರದು ಎಂದು ಆದೇಶಿಸಿದೆ.
- ರಾಜಧಾನಿ ದೆಹಲಿಯಲ್ಲಿ ಲಾಕ್‌ಡೌನ್ ಜಾರಿಗೊಳಿಸದಿರಲು ದೆಹಲಿ ಪ್ರಾಕೃತಿಕ ವಿಕೋಪ ನಿಯಂತ್ರಣ ಪ್ರಾಧಿಕಾರ (ಡಿಡಿಎಂಎ) ನಿರ್ಧರಿಸಿದೆ. ಆದರೆ, ರೆಸ್ಟೋರಂಟ್‌ಗಳ ಮೇಲೆ ನಿರ್ಬಂಧ, ಮೆಟ್ರೊದಲ್ಲಿ ಆಸನ ಸಾಮರ್ಥ್ಯ ಕುಗ್ಗಿಸುವುದು ಸೇರಿದಂತೆ ಸೋಂಕು ನಿಯಂತ್ರಣ ಕ್ರಮವಾಗಿ ಇನ್ನಷ್ಟು ಕಟ್ಟುನಿಟ್ಟಿನ ಕ್ರಮಗಳ ಜಾರಿಗೆ ತೀರ್ಮಾನಿಸಿದೆ.
- ದೆಹಲಿಯಲ್ಲಿ ಹೆಚ್ಚುವರಿ ಪೊಲೀಸ್ ಕಮಿಷನರ್ ಸೇರಿದಂತೆ ಸುಮಾರು 1,000 ಪೊಲೀಸ್ ಸಿಬ್ಬಂದಿ ಸೋಂಕು ಪೀಡಿತರಾಗಿದ್ದಾರೆ ಅಧಿಕಾರಿಗಳು ತಿಳಿಸಿದ್ದಾರೆ. ಸಾರ್ವಜನಿಕ ಸಂಪರ್ಕಾಧಿಕಾರಿ ಅನಿಲ್ ಮಿತ್ತಲ್ ಅವರು, ಸೋಂಕು ಪೀಡಿತರು ಕ್ವಾರಂಟೈನ್‌ನಲ್ಲಿದ್ದು, ಚೇತರಿಸಿಕೊಂಡ ನಂತರವೇ ಕರ್ತವ್ಯಕ್ಕೆ ಮರಳಲಿದ್ದಾರೆ ಎಂದರು. ದೆಹಲಿಯ ಪೊಲೀಸ್ ಬಲ ಸುಮಾರು 80,000.
- ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಸೇರಿದಂತೆ ಹಲವರಿಗೆ ಕೋವಿಡ್ ದೃಢ

‘ಲಸಿಕೆ ಕೇಂದ್ರಗಳ ಕಾರ್ಯ –ಸಮಯ ನಿಗದಿಪಡಿಸಿಲ್ಲ’

ನವದೆಹಲಿ (ಪಿಟಿಐ):ಕೋವಿಡ್ ಲಸಿಕೆ ಕೇಂದ್ರಗಳ ಕಾರ್ಯನಿರ್ವಹಣೆಗೆ ಕಾಲಮಿತಿ ನಿಗದಿಪಡಿಸಿಲ್ಲ. ಸಿಬ್ಬಂದಿ, ಸೌಲಭ್ಯ ಆಧರಿಸಿ ರಾತ್ರಿ 10ರವರೆಗೆ ಕಾರ್ಯನಿರ್ವಹಿಸಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಈ ಕುರಿತು ಪತ್ರ ಬರೆದಿರುವ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮನೋಹರ ಅಘ್ನಾನಿ ಅವರು, ‘ಯಾವುದೇ ಕಾಲ ಮಿತಿ ನಿಗದಿಪಡಿಸಿಲ್ಲ. ನಿರ್ದಿಷ್ಟ ಕೇಂದ್ರದ ಸಿಬ್ಬಂದಿ, ಸೌಲಭ್ಯ ಆಧರಿಸಿ ಕಾರ್ಯನಿರ್ವಹಿಸಬಹುದು. ಕೆಲಸದ ಒತ್ತಡ ಹೆಚ್ಚಿದ್ದಲ್ಲಿ ಹೆಚ್ಚುವರಿ ತಂಡಗಳನ್ನು ನಿಯೋಜಿಸಬಹುದು’ ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಕೋವಿಡ್ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದಿದ್ದಾರೆ.

ಪಾಲಿಟೆಕ್ನಿಕ್ ಕಾಲೇಜಿನ 21 ವಿದ್ಯಾರ್ಥಿಗಳಿಗೆ ಕೋವಿಡ್

ಹಾಸನ/ಮಂಡ್ಯ: ನಗರದ ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ 21 ವಿದ್ಯಾರ್ಥಿನಿಯರಿಗೆ ಕೋವಿಡ್ ದೃಢಪಟ್ಟಿದೆ.

ಕಾಲೇಜಿನಲ್ಲಿರುವ 320 ವಿದ್ಯಾರ್ಥಿನಿಯರ ಪೈಕಿ 214 ಮಂದಿಯನ್ನು ರ‍್ಯಾಂಡಮ್ ಪರೀಕ್ಷೆಗೆ ಒಳಪಡಿಸಲಾಗಿತ್ತು. ವಿದ್ಯಾರ್ಥಿನಿಯರಿಗೆ ಪಾಸಿಟಿವ್ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಕಾಲೇಜು ಬಂದ್ ಮಾಡಲಾಗಿದೆ. ಜಿಲ್ಲಾಸ್ಪತ್ರೆಯ ಇಬ್ಬರು ವೈದ್ಯರು, ಇಬ್ಬರು ನರ್ಸ್ ಹಾಗೂ ಇಬ್ಬರು ‘ಡಿ’ ಗ್ರೂಪ್ ನೌಕರರಿಗೆ ಸೋಂಕು ತಗುಲಿದೆ.

13 ವಿದ್ಯಾರ್ಥಿಗಳಿಗೆ ಕೋವಿಡ್: ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಸರ್ಕಾರಿ ಪ್ರೌಢಶಾಲೆಯ 13 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಸೋಂಕಿತ ವಿದ್ಯಾರ್ಥಿಗಳನ್ನು ಪಟ್ಟಣದ ಕೋವಿಡ್ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗಿದೆ. ಶಾಲೆಗೆ ಮೂರು ದಿನ ರಜೆ ಘೋಷಿಸಲಾಗಿದೆ.

ಸೈನಿಕ ಶಾಲೆ: ಮತ್ತೆ 68 ವಿದ್ಯಾರ್ಥಿನಿಯರಿಗೆ ಕೋವಿಡ್

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಇಲ್ಲಿನ ಕಿತ್ತೂರು ರಾಣಿ ಚನ್ನಮ್ಮ ಸ್ಮಾರಕ ವಸತಿ ಸೈನಿಕ ಶಾಲೆಯ 10 ಸಿಬ್ಬಂದಿ ಸೇರಿ 78 ವಿದ್ಯಾರ್ಥಿನಿಯರಿಗೆ ಸೋಮವಾರ ಕೋವಿಡ್ ದೃಢಪಟ್ಟಿದೆ. ಇದರೊಂದಿಗೆ ಅಲ್ಲಿನ ಸೋಂಕಿತರ ಸಂಖ್ಯೆ 90ಕ್ಕೆ ಏರಿಕೆಯಾಗಿದೆ.

600 ವಿದ್ಯಾರ್ಥಿನಿಯರನ್ನು ರಾಪಿಡ್ ಆ್ಯಂಟಿಜನ್ ಪರೀಕ್ಷೆಗೆ ಒಳಪಡಿಸಿದಾಗ ಅವರಲ್ಲಿ 104 ಮಂದಿಗೆ ಕೋವಿಡ್ ಲಕ್ಷಣಗಳಿರುವುದು ಕಂಡುಬಂದಿತ್ತು. ಅವರಲ್ಲಿ 12 ವಿದ್ಯಾರ್ಥಿನಿಯರಿಗೆ ಶನಿವಾರ ಸೋಂಕು ದೃಢಪಟ್ಟಿತ್ತು.

ಕೋವಿಡ್‌ನ ಲಕ್ಷಣಗಳಿರದ 7 ಮತ್ತು 8ನೇ ತರಗತಿ ವಿದ್ಯಾರ್ಥಿನಿಯರನ್ನು ಆಡಳಿತ ಮಂಡಳಿಯವರು ಮನೆಗೆ ಕಳುಹಿಸಿದರು. ಹೀಗಾಗಿ ಶಾಲೆಯ ಮುಖ್ಯದ್ವಾರದಲ್ಲಿ ವಾಹನಗಳ ಜಾತ್ರೆಯೇ ಸೋಮವಾರ ನೆರೆದಿತ್ತು.

1ರಿಂದ 9ನೇ ತರಗತಿ ಶಾಲೆ ಬಂದ್: ‘ಬೆಳಗಾವಿ ಜಿಲ್ಲೆಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಜ.11ರಿಂದ 18ರವರೆಗೆ ವಸತಿ ಶಾಲೆಗಳೂ ಸೇರಿದಂತೆ ಎಲ್ಲ ಮಾಧ್ಯಮಗಳ 1ರಿಂದ 9ನೇ ತರಗತಿ ಶಾಲೆಗಳನ್ನು ಬಂದ್ ಮಾಡುವಂತೆ ಸೋಮವಾರ ಆದೇಶ ಹೊರಡಿಸಿದ್ದೇನೆ’ ಎಂದು ಜಿಲ್ಲಾಧಿಕಾರಿ ಎಂ.ಜಿ. ಹಿರೇಮಠ ತಿಳಿಸಿದರು.



ಅಂತರ ಮರೆತ ಜನರು

ಕೋವಿಡ್ -19 ಪ್ರಕರಣಗಳು ರಾಷ್ಟ್ರವ್ಯಾಪಿ ಉಲ್ಬಣಗೊಳ್ಳುತ್ತಿರುವ ಹೊತ್ತಿನಲ್ಲಿ ಕೋಲ್ಕತ್ತದ ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿ ಸೋಮವಾರ ಅಂತರ ಮರೆತು ಕಿಕ್ಕಿರಿದು ಸೇರಿದ್ದ ಪ್ರಯಾಣಿಕರು – ಪಿಟಿಐ ಚಿತ್ರ

ಶೇ 50ರಷ್ಟು ಮಕ್ಕಳಿಗೆ ಮೊದಲ ಡೋಸ್

ಬೆಂಗಳೂರು: ರಾಜ್ಯದಲ್ಲಿ ಇದುವರೆಗೆ 15ರಿಂದ 18 ವರ್ಷದ ಒಳಗಿನ ಶೇ 50ರಷ್ಟು ಮಕ್ಕಳಿಗೆ ಕೋವಿಡ್ ವಿರುದ್ಧ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಈ ವಯೋಮಾನದ 31.75 ಲಕ್ಷ ಮಕ್ಕಳಲ್ಲಿ 15.60 ಲಕ್ಷ ಮಕ್ಕಳಿಗೆ ಮೊದಲ ಡೋಸ್ ನೀಡಲಾಗಿದೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಸೋಮವಾರ ಟ್ವೀಟ್ ಮಾಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯ 4.42 ಲಕ್ಷ ಮಕ್ಕಳಲ್ಲಿ 1.53 ಲಕ್ಷ ಮಕ್ಕಳಿಗೆ ಲಸಿಕೆ ನೀಡಲಾಗಿದ್ದು, ಶೇ 35ರಷ್ಟು ಗುರಿ ಸಾಧಿಸಲಾಗಿದೆ. ಕೊಡಗಿನಲ್ಲಿ 23,115 ಮಕ್ಕಳಲ್ಲಿ 16,216 ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಶೇ70ರಷ್ಟು ಹಾಗೂ ಯಾದಗಿರಿಯಲ್ಲಿ 73,965 ಮಕ್ಕಳಲ್ಲಿ 21,360 ಮಕ್ಕಳಿಗೆ ನೀಡಿ ಕೇವಲ ಶೇ29ರಷ್ಟು ಗುರಿ ಸಾಧಿಸಲಾಗಿದೆ. ರಾಜ್ಯದಲ್ಲಿ ಶನಿವಾರ 2660 ಮಕ್ಕಳಿಗೆ ಮಾತ್ರ ಮೊದಲ ಡೋಸ್ ನೀಡಲಾಗಿದೆ.

‘ತಿಂಗಳಾಂತ್ಯಕ್ಕೆ ಶೇ 100ರಷ್ಟು ಲಸಿಕೆ ಪೂರ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಮೊದಲ ಲಸಿಕೆ ನೀಡುವ ಕೆಲಸ ಶೇ 99ರಷ್ಟು ಪೂರ್ಣಗೊಂಡಿದೆ. ಜ.31 ರೊಳಗೆ ಶೇ 100ರಷ್ಟು ಲಸಿಕೆ ಸಾಧಿಸಲಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಆರೋಗ್ಯ ಇಲಾಖೆಯು ಶಿವಾಜಿ ನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸೋಮವಾರಹಮ್ಮಿಕೊಂಡಿದ್ದಆರೋಗ್ಯಕಾರ್ಯಕರ್ತರು ಹಾಗೂ ಹಿರಿಯ ನಾಗರಿಕರಿಗೆ ಕೋವಿಡ್ ಲಸಿಕೆಯ ಮೂರನೇ ಡೋಸ್ (ಬೂಸ್ಟರ್) ನೀಡುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಶೇ 77ರಷ್ಟಿರುವ ಎರಡನೇ ಲಸಿಕೆ ಪ್ರಮಾಣವನ್ನು ಶೇ 80ಕ್ಕೆ ಹೆಚ್ಚಿಸಲಿದ್ದೇವೆ. ದೇಶದಲ್ಲಿ 115 ಕೋಟಿಯಷ್ಟು ಮೊದಲ ಲಸಿಕೆ ನೀಡಲಾಗಿದೆ. ಎರಡನೇ ಲಸಿಕೆ ಶೇ 75ರಷ್ಟು ಪೂರ್ಣಗೊಂಡಿದೆ. ಅಮೆರಿಕ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಸಂಶೋಧನೆಗಳಲ್ಲಿ ತೊಡಗಿರುವ ಹಾಗೂ ಅಭಿವೃದ್ಧಿಯಲ್ಲಿ ಮುಂದಿರುವ ದೇಶ. ಆದರೆ, ಅಮೆರಿಕಕ್ಕಿಂತ ಮೂರು ಪಟ್ಟು ಲಸಿಕೆಯನ್ನು ಭಾರತದಲ್ಲಿ ಯಶಸ್ವಿಯಾಗಿ ನೀಡಲಾಗಿದೆ’ ಎಂದರು.

‘ಕೋವಿಡ್‌ನ ಪ್ರಾರಂಭದ ದಿನಗಳಲ್ಲಿ ಕೆಲ ದೇಶಗಳು ಲಸಿಕೆ ಬಗ್ಗೆ ಉಡಾಫೆ ತೋರಿದವು. ಇದರಿಂದ ಕೋವಿಡ್‌ನ 2 ಮತ್ತು 3ನೇ ಅಲೆಗಳು ತೀವ್ರಗೊಂಡವು. ಈಗ ಅಲ್ಲಿಯೂ ಲಸಿಕೆ ಕಡ್ಡಾಯ ಮಾಡಲಾಗಿದೆ’ ಎಂದರು.



ಕೋವಿಡ್ ಲಸಿಕೆಯ ಮೂರನೇ ಡೋಸ್ (ಬೂಸ್ಟರ್) ನೀಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಸಚಿವ ಕೆ.ಸುಧಾಕರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

ಕೊರೊನಾ ಸೋಂಕಿನಿಂದ ಕರ್ನಾಟಕವನ್ನು ಸುರಕ್ಷತಾ ಚಕ್ರದೊಳಗೆ ತರುವುದೇ ನಮ್ಮ ಸರ್ಕಾರದ ಗುರಿ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಸಿಯುಕೆ: 16 ವಿದ್ಯಾರ್ಥಿಗಳಿಗೆ ಕೋವಿಡ್

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) 16 ವಿದ್ಯಾರ್ಥಿಗಳಿಗೆ ಸೋಮವಾರ ಕೋವಿಡ್ ದೃಢಪಟ್ಟಿದೆ. ಅವರಲ್ಲಿ ಬಹುತೇಕ ವಿದ್ಯಾರ್ಥಿಗಳು ಕೇರಳದವರು.

ಶನಿವಾರ ಇದೇ ವಿಶ್ವವಿದ್ಯಾಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿ ಏಳು ಮಂದಿಗೆ ಸೋಂಕು ತಗುಲಿತ್ತು. ಅವರ ನೇರ ಸಂಪರ್ಕಕ್ಕೆ ಬಂದವರ ಗಂಟಲು ದ್ರವದ ಮಾದರಿ ತಪಾಸಣೆ ಮಾಡಿದಾಗ ಮತ್ತೆ 16 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ. ಇನ್ನೂ ಹಲವರ ಮಾದರಿಗಳ ಪರೀಕ್ಷಾ ವರದಿ ಬರಬೇಕಿದೆ.

ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೇರಿ 600ಕ್ಕೂ ಹೆಚ್ಚು ಜನ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಇದ್ದಾರೆ.

ಪಡಿತರ ವಿತರಣೆ: ವಸ್ತುಸ್ಥಿತಿ ವರದಿ ಸಲ್ಲಿಸದ ಪಶ್ಚಿಮ ಬಂಗಾಳ ಸರ್ಕಾರಕ್ಕೆ ‘ಸುಪ್ರೀಂ’ ತರಾಟೆ

ನವದೆಹಲಿ (ಪಿಟಿಐ): ಲೈಂಗಿಕ ಕಾರ್ಯಕರ್ತೆಯರಿಗೆ ಪಡಿತರ ನೀಡುತ್ತಿರುವ ಕುರಿತಂತೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿತು. ಮೂಲಭೂತ ಹಕ್ಕುಗಳು ಎಲ್ಲ ವೃತ್ತಿಯವರಿಗೂ ಖಾತರಿಯಾಗಿವೆ ಎಂದು ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಮತ್ತು ಬಿ.ಆರ್.ಗವಾಯಿ ಅವರಿದ್ದ ನ್ಯಾಯಪೀಠವು, ದೇಶದಲ್ಲಿ ಈಗ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿವೆ. ಜೀವರಕ್ಷಕ ಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಆದರೆ, ರಾಜ್ಯ ಸರ್ಕಾರ ಈ ವಿಷಯವನ್ನು ಹಗುರವಾಗಿ ಪರಿಗಣಿಸಿದೆ ಎಂದು ಹೇಳಿತು.

‘ನಿಮಗೆ ಎಷ್ಟು ಬಾರಿ ಹೇಳಬೇಕು? ನಾವು ನಿಮಗೆ ಕಟ್ಟುಪಾಡುಗಳನ್ನು ವಿಧಿಸುತ್ತೇವೆ. ಕಳೆದ ಬಾರಿ ನೀಡಿದ್ದ ಆದೇಶವನ್ನು ನೋಡಿದ್ದೀರಾ? ಏಕೆ ಪ್ರಮಾಣಪತ್ರವನ್ನು ಸಲ್ಲಿಸಿಲ್ಲ? ಇತರ ಎಲ್ಲ ರಾಜ್ಯಗಳು ಪ್ರಮಾಣಪತ್ರ ಸಲ್ಲಿಸುತ್ತಿರುವಾಗ, ಪಶ್ಚಿಮ ಬಂಗಾಳ ಏಕೆ ಆ ಕೆಲಸ ಮಾಡುತ್ತಿಲ್ಲ’ ಎಂದೂ ಪೀಠ ಪ್ರಶ್ನಿಸಿತು.

ನಾವು ಕಠಿಣ ನಿಲುವು ತೆಗೆದುಕೊಳ್ಳುತ್ತಿಲ್ಲ ಎಂಬುದರ ಅರ್ಥ ನೀವು ಹಗುರವಾಗಿ ಪರಿಗಣಿಸಬಹುದು ಎಂದಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿರುವ ಉದ್ದೇಶ, ಇದು ಅಸ್ತಿತ್ವದ ಪ್ರಶ್ನೆ ಮತ್ತು ಪಡಿತರ ವಿತರಣೆ ಆಗುತ್ತಿಲ್ಲ ಎಂಬುದೇ ಆಗಿದೆ ಎಂದು ಹೇಳಿತು.

ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲರು, ರಾಜ್ಯ ಸರ್ಕಾರ ‘ಖಾದ್ಯ ಸಾಥಿ’ ಯೋಜನೆ ಪ್ರಕಟಿಸಿದ್ದು, ಅಗತ್ಯವುಳ್ಳವರಿಗೆ ಪಡಿತರ ವಿತರಿಸುತ್ತಿದೆ ಎಂದು ತಿಳಿಸಿದರು. ಆದರೆ, ಇದು ಪೀಠಕ್ಕೆ ಸಮಾಧಾನ ತರಲಿಲ್ಲ. ಎರಡು ವಾರದಲ್ಲಿ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಬೇಕು ಎಂದು ತಾಕೀತು ಮಾಡಿತು.

ಎಲ್ಲ ವೃತ್ತಿಯವರಿಗೂ ಮೂಲಭೂತ ಹಕ್ಕು ಇರುತ್ತದೆ. ಲೈಂಗಿಕ ಕಾರ್ಯಕರ್ತೆಯರಿಗೆ ಪಡಿತರ, ಮತದಾರರ ಗುರುತು ಚೀಟಿ, ಆಧಾರ್ ಕಾರ್ಡ್ ವಿತರಿಸುವಂತೆ ಸುಪ್ರೀಂ ಕೋರ್ಟ್ ಈಗಾಗಲೇ ಕೇಂದ್ರ, ಎಲ್ಲ ರಾಜ್ಯ ಸರ್ಕಾರಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ ಎಂದು ತಿಳಿಸಿತು.

ಕೋವಿಡ್ ವೇಳೆ ಲೈಂಗಿಕ ಕಾರ್ಯಕರ್ತೆಯರು ಎದುರಿಸುತ್ತಿರುವ ಸಮಸ್ಯೆ ಕುರಿತ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದ್ದು, ಕಳೆದ ವರ್ಷ ಸೆಪ್ಟೆಂಬರ್ 29ರಂದು ಈ ಬಗ್ಗೆ ಆದೇಶ ಹೊರಡಿಸಿತ್ತು.

ಓಂಶಕ್ತಿ: 22 ಯಾತ್ರಿಕರಿಗೆ ಕೋವಿಡ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ತಮಿಳುನಾಡಿಗೆ ಓಂಶಕ್ತಿ ಯಾತ್ರೆ ಹೋಗಿದ್ದ ತಾಲ್ಲೂಕಿನ ಕಣ್ಣೇಗಾಲ ಗ್ರಾಮದ 22 ಮಂದಿಗೆ ಕೋವಿಡ್ ಇರುವುದು ಸೋಮವಾರ ದೃಢಪಟ್ಟಿದೆ.

ಯಾತ್ರೆಗೆ ಹೋಗಿದ್ದ ತಂಡದಲ್ಲಿದ್ದ ಬಾಲಕನೊಬ್ಬ ದಾರಿಮಧ್ಯೆ ಅನಾರೋಗ್ಯದಿಂದ ಮೃತಪಟ್ಟಿದ್ದು, ಆತನೂ ಸೋಂಕಿಗೆ ಒಳಗಾಗಿರುವುದು ಅಂತ್ಯಕ್ರಿಯೆಯ ನಂತರ ದೃಢಪಟ್ಟಿದೆ.

ಕಣ್ಣೇಗಾಲ ಗ್ರಾಮದಿಂದ 55 ಮಂದಿ ಓಂಶಕ್ತಿ ಯಾತ್ರೆ ಹೋಗಿದ್ದರು. ಊರಿಗೆ ವಾಪಸ್ ಆಗುತ್ತಿದ್ದ ಅವರನ್ನು ಆರೋಗ್ಯ ಇಲಾಖೆ ಸಿಬ್ಬಂದಿ ದಾರಿ ಮಧ್ಯೆಯೇ ಕೋವಿಡ್ ಪರೀಕ್ಷೆಗೆ ಒಳಪಡಿಸಿದ್ದರು.

ಶುಭಾರಂಭದ ನಿರೀಕ್ಷೆಯಲ್ಲಿ ಸಿಂಧು

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ: ಶ್ರೀಕಾಂತ್ ಕಣಕ್ಕೆ

ನವದೆಹಲಿ (ಪಿಟಿಐ): ಕೋವಿಡ್–19 ಕಾರಣದಿಂದ ಎರಡು ಬಾರಿ ರದ್ದಾಗಿದ್ದ ಇಂಡಿಯಾ ಓಪನ್ ಟೂರ್ನಿಯು ಮತ್ತೆ ಆರಂಭವಾಗಲಿದೆ. ಮಂಗಳವಾರ ಟೂರ್ನಿಗೆ ಚಾಲನೆ ಸಿಗಲಿದ್ದು, ತಾರಾ ಆಟಗಾರ ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ.ಸಿಂಧು ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ.

ಹೊಸ ರೂಪಾಂತರ ಓಮೈಕ್ರಾನ್ ಪ್ರಕರಣಗಳು ಸೇರಿದಂತೆ ದೇಶದಲ್ಲಿ ತ್ವರಿತ ವೇಗದಲ್ಲಿ ಹೆಚ್ಚುತ್ತಿರುವ ಕೋವಿಡ್ ಮೂರನೇ ಅಲೆಯ ಕರಿನೆರಳಿನಲ್ಲಿ ಟೂರ್ನಿ ನಡೆಯುತ್ತಿದೆ. ಅಂದಾಜು ₹ 2.90 ಕೋಟಿ ಬಹುಮಾನ ಮೊತ್ತದ ಸೂಪರ್ 500 ಟೂರ್ನಿಯಲ್ಲಿ ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸುವ ಅವಕಾಶವೂ ಆಟಗಾರರಿಗಿದೆ. ಪ್ರೇಕ್ಷಕರಿಗೆ ಅವಕಾಶ ನೀಡಲಾಗಿಲ್ಲ. ಕೊರೊನಾ ಕಾರಣದಿಂದಾಗಿ 2020 ಮತ್ತು 2021ರ ಆವೃತ್ತಿಗಳು ನಡೆದಿರಲಿಲ್ಲ.

ಭಾರತದ ಬಿ. ಸಾಯಿ ಪ್ರಣೀತ್ ಮತ್ತು ಡಬಲ್ಸ್ ಆಟಗಾರ ಧ್ರುವ ರಾವತ್ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಈಗಾಗಲೇ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಭಾರತದ ಇನ್ನೂ ಕೆಲವು ಆಟಗಾರರು ಆರ್‌ಟಿ-ಪಿಸಿಆರ್ ಪರೀಕ್ಷೆಗಳ ವರದಿಗಾಗಿ ಕಾಯುತ್ತಿದ್ದಾರೆ. ಕೋವಿಡ್ ಭೀತಿಯ ಮಧ್ಯೆಯೂ ಭಾರತ ಮತ್ತು ವಿದೇಶದ ಪ್ರಮುಖ ಆಟಗಾರರು ಕಣಕ್ಕಿಳಿಯಲು ರಾಷ್ಟ್ರ ರಾಜಧಾನಿ ತಲುಪಿದ್ದಾರೆ.



ಪಿ.ವಿ.ಸಿಂಧು– ಪಿಟಿಐ ಚಿತ್ರ

ಹಾಲಿ ವಿಶ್ವ ಚಾಂಪಿಯನ್ ಸಿಂಗಪುರದ ಲೋಹ್ ಕೀನ್ ಯೂ, ಮೂರು ಬಾರಿಯ ವಿಶ್ವ ಚಾಂಪಿಯನ್ ಇಂಡೋನೇಷ್ಯಾದ ಜೋಡಿ ಮೊಹಮ್ಮದ್ ಎಹಸಾನ್ ಮತ್ತು ಹೆಂಡ್ರಾ ಸೆತಿಯಾವಾನ್ ಸೇರಿದಂತೆ ಪ್ರಮುಖ ಆಟಗಾರರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, 2017ರಲ್ಲಿ ಮೊದಲ ಬಾರಿ ಈ ಟೂರ್ನಿಯಲ್ಲಿ ಪ್ರಶಸ್ತಿ ಒಲಿಸಿಕೊಂಡಿದ್ದರು. ಈ ಬಾರಿ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಅವರು ಸ್ವದೇಶದ ಆಟಗಾರ್ತಿ ಶ್ರೀಕೃಷ್ಣಪ್ರಿಯಾ ಕುದರವಳ್ಳಿ ಅವರನ್ನು ಎದುರಿಸಲಿದ್ದಾರೆ. ಲಂಡನ್ ಒಲಿಂಪಿಕ್ಸ್ ಕಂಚು ವಿಜೇತೆ ಸೈನಾ ನೆಹ್ವಾಲ್ ಅವರು ಅಮೆರಿಕದ ಐರಿಸ್ ವಾಂಗ್ ಅವರಿಗೆ ಎದುರಾಗುವ ಸಾಧ್ಯತೆಯಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್ ಅವರು ಮೊದಲ ಪಂದ್ಯದಲ್ಲಿ ಭಾರತದ ಸಿರಿಲ್ ವರ್ಮಾ ಸವಾಲು ಮೀರಬೇಕಿದೆ. ಲಕ್ಷ್ಯ ಸೇನ್, ಎಚ್.ಎಸ್.ಪ್ರಣಯ್, ಸಮೀರ್ ವರ್ಮಾ, ಸೌರಭ್ ವರ್ಮಾ ಕೂಡ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ–ಎನ್.ಸಿಕ್ಕಿರೆಡ್ಡಿ ಕಣಕ್ಕಿಳಿಯಲಿದ್ದಾರೆ.

ಪ್ರತಿದಿನ ಕೋವಿಡ್ ಪರೀಕ್ಷೆ: ಆಟಗಾರರು, ಪಂದ್ಯದ ಅಧಿಕಾರಿಗಳು, ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಮತ್ತು ಬಿಡಬ್ಲ್ಯುಎಫ್ ಅಧಿಕಾರಿಗಳು, ನೆರವು ಸಿಬ್ಬಂದಿ ಸೇರಿದಂತೆ ಟೂರ್ನಿಯಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಪ್ರತಿದಿನ ಕೋವಿಡ್ ಪರೀಕ್ಷೆ ಕಡ್ಡಾಯ ಎಂದು ಬಿಎಐ ಹೇಳಿದೆ.

ಕೂಚ್ ಬೆಹಾರ್ ಟ್ರೋಫಿ: ನಾಕೌಟ್ ಪಂದ್ಯಗಳು ಮುಂದಕ್ಕೆ

ಮುಂಬೈ (ಪಿಟಿಐ): ಆಟಗಾರರು ಮತ್ತು ಸಿಬ್ಬಂದಿಯಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) 19 ವರ್ಷದೊಳಗಿನವರ ಕೂಚ್ ಬೆಹಾರ್ ಟ್ರೋಫಿ ಟೂರ್ನಿಯ ನಾಕೌಟ್ ಪಂದ್ಯಗಳನ್ನು ಸೋಮವಾರ ಮುಂದೂಡಿದೆ.

8 ತಂಡಗಳ 32 ಆಟಗಾರರು ಮತ್ತು ಆರು ಮಂದಿ ನೆರವು ಸಿಬ್ಬಂದಿಯಲ್ಲಿ ಕೊರೊನಾ ದೃಢಪಟ್ಟಿದೆ ಎಂದು ತಿಳಿದುಬಂದಿದೆ. ಪುಣೆಯಲ್ಲಿ ಮಂಗಳವಾರದಿಂದ ನಾಕೌಟ್ ಪಂದ್ಯಗಳು ನಡೆಯಬೇಕಿದ್ದವು. ‘ನಾಕೌಟ್ ಪಂದ್ಯಗಳನ್ನು ಮುಂದಿನ ಸೂಚನೆಯವರೆಗೆ ಮುಂದೂಡಲಾಗಿದೆ. ಪರಿಸ್ಥಿತಿ ಸಹಜಸ್ಥಿತಿಗೆ ಬಂದ ಬಳಿಕ ಪರಿಷ್ಕೃತ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗುವುದು’ ಎಂದು ಬಿಸಿಸಿಐ ತಿಳಿಸಿದೆ.

ಕಾಶಿ ವಿಶ್ವನಾಥ ಧಾಮದ ಕಾರ್ಮಿಕರಿಗೆ ಸೆಣಬಿನ ಪಾದರಕ್ಷೆ ಕಳುಹಿಸಿದ ಮೋದಿ

ನವದೆಹಲಿ: ಕಾಶಿ ವಿಶ್ವನಾಥ ಧಾಮದ ಆವರಣದಲ್ಲಿ ಚರ್ಮ ಅಥವಾ ರಬ್ಬರ್ ಚಪ್ಪಲಿ ಧರಿಸುವುದನ್ನು ನಿಷೇಧಿಸಿರುವುದರಿಂದ, ಬರಿಗಾಲಿನಲ್ಲೇ ಕೆಲಸ ಮಾಡುವ ಸಿಬ್ಬಂದಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು 100 ಜೊತೆ ಸೆಣಬಿನ ಪಾದರಕ್ಷೆಗಳನ್ನು ಕಳುಹಿಸಿಕೊಟ್ಟಿದ್ದಾರೆ.

ಅರ್ಚಕರು, ರಕ್ಷಣಾ ಸಿಬ್ಬಂದಿ, ಸ್ವಚ್ಛತಾ ಕಾರ್ಯಕರ್ತರು ಮತ್ತು ಇತರರಿಗಾಗಿ ಇವುಗಳನ್ನು ಕಳುಹಿಸಲಾಗಿದೆ ಎಂದು ಸರ್ಕಾರದ ಮೂಲಗಳು ಸೋಮವಾರ ತಿಳಿಸಿವೆ. ಕೊರೆಯುವ ಚಳಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಸಿಬ್ಬಂದಿ ಬರಿಗಾಲಿನಲ್ಲಿ ಇರಬೇಕಾಗಿಲ್ಲ ಎಂದು ಮೋದಿ ಅವರು ಸೆಣಬಿನ ಪಾದರಕ್ಷೆಗಳನ್ನು ಖರೀದಿಸಿ ಕಳುಹಿಸಿಕೊಟ್ಟಿದ್ದಾರೆ.

'ಪ್ರಧಾನಿ ಮೋದಿ ಅವರು ಕಾಶಿ ವಿಶ್ವನಾಥ ಧಾಮ, ವಾರಾಣಸಿಯ ಆಗು-ಹೋಗುಗಳು ಮತ್ತು ಅಭಿವೃದ್ಧಿ ವಿಚಾರದಲ್ಲಿ ನಿಗಾ ಇರಿಸಿದ್ದಾರೆ. ಅವರು, ಸೂಕ್ಷ್ಮ ವಿಚಾರಗಳತ್ತ ಗಮನಹರಿಸುವುದಕ್ಕೆ ಮತ್ತು ಬಡವರ ಬಗ್ಗೆ ಹೊಂದಿರುವ ಕಾಳಜಿಗೆ ಇದು ಮತ್ತೊಂದು ಉದಾಹರಣೆಯಾಗಿದೆ' ಎಂದು ಮೂಲಗಳು ತಿಳಿಸಿವೆ. ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯ ವ್ಯಾಪ್ತಿಯಲ್ಲಿರುವ ಕಾಶಿ ವಿಶ್ವನಾಥ ಧಾಮ ಯೋಜನೆಯ (ಕಾರಿಡಾರ್) ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಉದ್ಘಾಟಿಸಿದ್ದರು.

ಐ.ಟಿ ದಾಳಿ: ದಾಖಲೆರಹಿತ ₹ 800 ಕೋಟಿ ವಹಿವಾಟು ಪತ್ತೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಆಂಧ್ರಪ್ರದೇಶ ಮತ್ತು ತೆಲಂಗಾಣ ಮೂಲದ ಮೂರು ರಿಯಲ್ ಎಸ್ಟೇಟ್ ಸಮೂಹಗಳ ಮೇಲೆ ಈಚೆಗೆ ದಾಳಿ ನಡೆಸಿದ್ದು, ಸುಮಾರು ₹ 800 ಕೋಟಿ ಮೊತ್ತದ ನಿಯಮಬಾಹಿರ ವಹಿವಾಟು ನಡೆದಿರುವುದನ್ನು ಪತ್ತೆ ಹಚ್ಚಿದ್ದಾರೆ.

ಈ ಸಮೂಹಗಳು ಭೂಮಿ ಅಭಿವೃದ್ಧಿ ಮತ್ತು ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿದ್ದವು. ಜನವರಿ 5ರಂದು ಕರ್ನೂಲ್, ಅನಂತಪುರ, ಕಡಪ, ನಂದ್ಯಾಲ್ ಸೇರಿದಂತೆ ವಿವಿಧೆಡೆ ಈ ಸಮೂಹಗಳಿಗೆ ಸೇರಿದ 24ಕ್ಕೂ ಅಧಿಕ ತಾಣಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದರು. ಅಧಿಕಾರಿಗಳು ಈ ಸಮೂಹಗಳ ಹೆಸರು ಬಹಿರಂಗಪಡಿಸಿಲ್ಲ.

ಕೈನಲ್ಲಿ ಬರೆದಿದ್ದ ಪುಸ್ತಕಗಳು, ಒಪ್ಪಂದಗಳು, ಡಿಜಿಟಲ್ ಡಾಟಾ ಸೇರಿದಂತೆ ವಿವಿಧ ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ಪೈಕಿ ಒಂದು ಸಮೂಹವು ದಾಖಲೆಯಿಲ್ಲದ ಹಣ ಕುರಿತ ಮಾಹಿತಿಯನ್ನು ಅಳಿಸಿಹಾಕುವಂತೆ ಸಾಫ್ಟ್‌ವೇರ್ ಅನ್ನು ತಿರುಚಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಮೂಹಗಳು ನೋಂದಣಿಯಾದ ಮೊತ್ತಕ್ಕಿಂತಲೂ ಹೆಚ್ಚಿನ ಹಣವನ್ನು ಸ್ವೀಕರಿಸುತ್ತಿದ್ದವು. ಈ ಮೊತ್ತವನ್ನೇ ಬಳಸಿ ಆಸ್ತಿ ಖರೀದಿಸುತ್ತಿದ್ದವು. ಹೀಗೆ ನಡೆದಿರುವ ವಹಿವಾಟಿನ ಮೊತ್ತ ₹ 800ಕೋಟಿಗೂ ಅಧಿಕ ಎಂದು ಇಲಾಖೆಯ ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಆಸ್ಟ್ರೇಲಿಯಾದಲ್ಲಿ ಉಳಿಯಲು ಅಭ್ಯಂತರವಿಲ್ಲ’

ನ್ಯಾಯದಂಗಣದಲ್ಲಿ ನೊವಾಕ್‌ಗೆ ಗೆಲುವು

ಮೆಲ್ಬರ್ನ್ (ಎಪಿ): ವಿಶ್ವದ ಅಗ್ರಕ್ರಮಾಂಕದ ಆಟಗಾರ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಕೋವಿಡ್ ಲಸಿಕೆ ಪ್ರಕರಣಕ್ಕೆ ಸಂಬಂಧಿಸಿ ಆಸ್ಟ್ರೇಲಿಯಾ ಸರ್ಕಾರದ ವಿರುದ್ಧ ನ್ಯಾಯಾಲಯದಲ್ಲಿ ಜಯ ಸಾಧಿಸಿದ್ದಾರೆ. ಆಸ್ಟ್ರೇಲಿಯಾದಲ್ಲಿ ಉಳಿದುಕೊಳ್ಳಲು ಮತ್ತು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡಲು ಅವರಿಗೆ ಅವಕಾಶ ನೀಡುವಂತೆ ನ್ಯಾಯಾಧೀಶರು ಸೋಮವಾರ ಸೂಚಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಕೋವಿಡ್ ಲಸಿಕೆ ಪಡೆದಿರುವುದು ಕಡ್ಡಾಯ. ಆದರೆ ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕಿದ್ದ ಜೊಕೊವಿಚ್ ವೈದ್ಯಕೀಯ ವಿನಾಯಿತಿ ಪಡೆದುಕೊಂಡು ಬಂದಿದ್ದರು. ಅವರನ್ನು ವಶಕ್ಕೆ ಪಡೆದುಕೊಂಡಿದ್ದ ಅಧಿಕಾರಿಗಳು ವೀಸಾ ತಡೆ ಹಿಡಿದು ಹೋಟೆಲ್‌ನಲ್ಲಿ ಇರಿಸಿದ್ದರು. ಇದರ ವಿರುದ್ಧ ಜೊಕೊವಿಚ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈಗ ಅವರು ಬಿಡುಗಡೆಗೊಂಡಿದ್ದಾರೆ.

ಫೆಡರಲ್ ಸರ್ಕಿಟ್ ಕೋರ್ಟ್‌ನ ನ್ಯಾಯಾಧೀಶ ಆ್ಯಂಟನಿ ಕೆಲಿ ಅವರು ವೀಸಾ ಮರಳಿಸುವಂತೆ ಸೂಚಿಸಿದರು. ತೀರ್ಪು ನೀಡಿದ 30 ನಿಮಿಷಗಳ ಒಳಗೆ ಅವರನ್ನು ಹೋಟೆಲ್‌ನಿಂದ ಬಿಡುಗಡೆ ಮಾಡುವಂತೆಯೂ ತಿಳಿಸಿದರು. ವಿಶ್ವದ ಶ್ರೇಷ್ಠ ಆಟಗಾರನಿಗೆ ತಮ್ಮ ವಕೀಲರ ಜೊತೆ ಮಾತನಾಡುವುದಕ್ಕೂ ಸಾಕಷ್ಟು ಅವಕಾಶ ನೀಡಿರಲಿಲ್ಲ ಎಂದು ಅವರು ಖಾರವಾಗಿ ನುಡಿದರು. ಜೊಕೊವಿಚ್ ಲಸಿಕೆ ಹಾಕಿಸಿಕೊಂಡಿರಲಿಲ್ಲ ಎಂದು ಅವರ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ಸ್ಪಷ್ಟವಾಗಿದೆ. ಲಸಿಕೆ ಹಾಕಿಸಿಕೊಳ್ಳದ ಆಸ್ಟ್ರೇಲಿಯನ್ನರ ಓಡಾಟಕ್ಕೆ ಕಠಿಣ ನಿರ್ಬಂಧಗಳು ಇವೆ. ಹೀಗಿರುವಾಗ ಜೊಕೊವಿಚ್ ಅವರಿಗೆ ವಿನಾಯಿತಿ ನೀಡಿರುವುದು ಸರಿಯಲ್ಲ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ.

ಇದೇ ವೇಳೆ ಅವರನ್ನು ನಡೆಸಿಕೊಂಡ ವಿಧಾನದ ಬಗ್ಗೆ ತಾಯ್ನಾಡಿನಲ್ಲೂ ಆಸ್ಟ್ರೇಲಿಯಾದಲ್ಲೂ ಪ್ರತಿಭಟನೆಗಳು ನಡೆದಿವೆ.



ಜೊಕೊವಿಚ್

ಆಟ ಇನ್ನೂ ಬಾಕಿ ಇದೆ

ನ್ಯಾಯಾಲಯದ ಆದೇಶ ಹೊರಬಿದ್ದರೂ ಜೊಕೊವಿಚ್ ಪ್ರಕರಣಕ್ಕೆ ಸದ್ಯ ತೆರೆ ಬೀಳುವ ಸಾಧ್ಯತೆಗಳು ಇಲ್ಲ. ಆದ್ದರಿಂದ ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡುವುದರ ಮೇಲೆಯೂ ಕರಿನೆರಳು ಬಿದ್ದಿದೆ. ಅವರ ವೀಸಾವನ್ನು 2ನೇ ಬಾರಿ ರದ್ದುಪಡಿಸುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದ್ದು ಈ ಬಗ್ಗೆ ಸ್ಪಷ್ಟ ಸಂದೇಶವನ್ನೂ ರವಾನಿಸಿದೆ.

ವೀಸಾ ಮತ್ತೊಮ್ಮೆ ರದ್ದು ಮಾಡಿದರೆ 9 ಬಾರಿಯ ಚಾಂಪಿಯನ್‌ಗೆ ಈ ಸಲ ಮಾತ್ರವಲ್ಲ, ಇನ್ನೂ ಮೂರು ವರ್ಷ ಇಲ್ಲಿ ಆಡಲು ಸಾಧ್ಯವಾಗಲಾರದು.

ಭಾರತಕ್ಕೆ ಕಾಮನ್‌ವೆಲ್ತ್ ಕ್ವೀನ್ಸ್ ಬೇಟನ್ ರಿಲೆ

ನವದೆಹಲಿ (ಪಿಟಿಐ): ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ಈ ವರ್ಷ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಕ್ವೀನ್ಸ್ ಬೇಟನ್ ಮಂಗಳವಾರ ರಾಷ್ಟ್ರದ ರಾಜಧಾನಿಗೆ ಬಂದಿತು.

ಜನವರಿ 12ರಂದು ದೆಹಲಿ, 14ರಂದು ಬೆಂಗಳೂರು ಮತ್ತು 15ರಂದು ಭುವನೇಶ್ವರದಲ್ಲಿ ಬೇಟನ್ ರಿಲೆ ಸಂಚರಿಸಲಿದೆ.

ಜುಲೈ 28ರಿಂದ ಆಗಸ್ಟ್ 8ರವರೆಗೆ ಕಾಮನ್‌ವೆಲ್ತ್ ಗೇಮ್ಸ್ ನಿಗದಿಯಾಗಿವೆ.

‘2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನ ಕ್ವೀನ್ಸ್ ಬೇಟನ್ ರಿಲೆಯು ಜನವರಿ 10ರಂದು ದೆಹಲಿಗೆ ಆಗಮಿಸಿದೆ. ಬಾಂಗ್ಲಾದೇಶ ಒಲಿಂಪಿಕ್ ಸಂಸ್ಥೆಯ ಪ್ರಧಾನ ನಿರ್ದೇಶಕ ಶ್ರೀ ಹಮೀದ್ ಬೇಟನ್‌ಅನ್ನು ತಮ್ಮ ದೇಶದಿಂದ ಅದನ್ನು ತಂದರು’ ಎಂದು ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ನರೀಂದರ್ ಬಾತ್ರಾ ಹೇಳಿದ್ದಾರೆ.

ಪಂಕಜ್‌ಗೆ ಸೋಂಕು

ಮುಂಬೈ (ಪಿಟಿಐ): ಹಲವು ಬಾರಿ ವಿಶ್ವ ಸ್ನೂಕರ್ ಮತ್ತು ಬಿಲಿಯರ್ಡ್ಸ್ ಚಾಂಪಿಯನ್ ಆಗಿರುವ, ಕರ್ನಾಟಕದ ಪಂಕಜ್ ಅಡ್ವಾಣಿ ಅವರಿಗೆ ಕೋವಿಡ್ ದೃಢಪಟ್ಟಿದೆ. ಸೋಮವಾರ ಅವರು ಈ ವಿಷಯವನ್ನು ಖಚಿತಪಡಿಸಿದ್ದಾರೆ.

‘ ಕೋವಿಡ್‌ನ ಎಲ್ಲ ಮಾರ್ಗಸೂಚಿಗಳನ್ನು ನಾನು ಪಾಲಿಸುತ್ತಿದ್ದೆ. ಆದರೂ ಸೋಂಕು ಇರುವುದು ದೃಢಪಟ್ಟಿದೆ’’ ಎಂದು ಪಂಕಜ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತಮಿಳುನಾಡು: 11 ವೈದ್ಯಕೀಯ ಕಾಲೇಜು ಉದ್ಘಾಟನೆ ನಾಳೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ (ಜ.12) ತಮಿಳುನಾಡಿನಲ್ಲಿ 11 ನೂತನ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ತಮಿಳು ಶಾಸ್ತ್ರೀಯ ಅಧ್ಯಯನದ ಕೇಂದ್ರೀಯ ಸಂಸ್ಥೆಯ ಕ್ಯಾಂಪಸ್ ಅನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದ್ದಾರೆ.

ಸರ್ಕಾರಿ ಕಾಲೇಜುಗಳ ನಿರ್ಮಾಣಕ್ಕೆ ₹ 4,000 ಕೋಟಿ ವೆಚ್ಚವಾಗಿದೆ. ಇದರಲ್ಲಿ ₹2,145 ಕೋಟಿಯನ್ನು ಕೇಂದ್ರ ಸರ್ಕಾರ ಭರಿಸಿದ್ದು ಉಳಿದ ಹಣವನ್ನು ತಮಿಳುನಾಡು ಸರ್ಕಾರ ವೆಚ್ಚ ಮಾಡಿದೆ ಎಂದು ಪ್ರಧಾನ ಮಂತ್ರಿ ಕಚೇರಿ ಹೇಳಿಕೆಯೊಂದರಲ್ಲಿ ತಿಳಿಸಿದೆ.

ನಾಳೆ ರಾಷ್ಟ್ರೀಯ ಯುವ ಉತ್ಸವ

ನವದೆಹಲಿ (ಪಿಟಿಐ): ಜನವರಿ 12ರಂದು ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರು ಪುದುಚೇರಿಯಲ್ಲಿ 25ನೇ ರಾಷ್ಟ್ರೀಯ ಯುವ ಉತ್ಸವವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಲಿದ್ದಾರೆ. ಸ್ವಾಮಿ ವಿವೇಕಾನಂದರ ಜನ್ಮದಿನವಾದ ಈ ದಿನವನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತದೆ. ‘ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಜೊತೆಗೆ ಉತ್ತಮ ಮೌಲ್ಯಗಳನ್ನು ಹಂಚಿಕೊಳ್ಳುವಂತೆ ನನ್ನ ಯುವ ಸ್ನೇಹಿತರಿಗೆ ಸಲಹೆ ನೀಡುತ್ತೇನೆ. ಭಾರತದ ಪ್ರತಿಭಾವಂತ ಯುವ ಜನತೆಯನ್ನು ಕಂಡಾಗ ಹರ್ಷವಾಗುತ್ತದೆ’ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಬುಲ್ಲಿ ಬಾಯಿ: ಆರೋಪಿಗಳ ಪೊಲೀಸ್ ಕಸ್ಟಡಿ ವಿಸ್ತರಣೆ

ಮುಂಬೈ (ಪಿಟಿಐ): ಬುಲ್ಲಿ ಬಾಯಿ ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಶ್ವೇತಾ ಸಿಂಗ್ ಮತ್ತು ಮಯಂಕ್ ರಾವಲ್ ಅವರು ಈ ತಿಂಗಳ 14ರವರೆಗೂ ಪೊಲೀಸ್ ಕಸ್ಟಡಿಯಲ್ಲಿಯೇ ಇರಲಿದ್ದಾರೆ.

ಪ್ರಕರಣದ ತನಿಖೆಯು ನಿರ್ಣಾಯಕ ಹಂತದಲ್ಲಿದ್ದು ಆರೋಪಿಗಳ ಹೆಚ್ಚಿನ ವಿಚಾರಣೆ ಅಗತ್ಯವಿದೆ. ಆದ್ದರಿಂದ ಆರೋಪಿಗಳಾದ ಶ್ವೇತಾ ಸಿಂಗ್ (18) ಮತ್ತು ರಾವಲ್ (21) ಅವರನ್ನು ಇನ್ನೂ ಸ್ವಲ್ಪ ಕಾಲ ತಮ್ಮ ವಶಕ್ಕೆ ನೀಡಬೇಕು ಎಂದು ಬಾಂದ್ರಾ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ಗೆ ಪೊಲೀಸರು ಸೋಮವಾರ ಮನವಿ ಮಾಡಿದರು. ನ್ಯಾಯಾಲಯ ಇದನ್ನು ಮಾನ್ಯಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಬಂಧನಕ್ಕೆ ಒಳಗಾಗಿರುವ ಮೊದಲ ಆರೋಪಿ ವಿಶಾಲ್ ಕುಮಾರ್ ಝಾಗೆ ಜನವರಿ 24ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಅವರಿಗೆ ಕೋವಿಡ್ ದೃಢಪಟ್ಟಿದೆ.

ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಟೆಸ್ಟ್ ಪಂದ್ಯ ಇಂದಿನಿಂದ; ಮೊಹಮ್ಮದ್ ಸಿರಾಜ್ ಅಲಭ್ಯ

ಭಾರತಕ್ಕೆ ಐತಿಹಾಸಿಕ ಜಯದ ತವಕ

ಕೇಪ್‌ಟೌನ್, ದಕ್ಷಿಣ ಆಫ್ರಿಕಾ (ಪಿಟಿಐ): ಮೊದಲ ಪಂದ್ಯದಲ್ಲಿ ಅಧಿಕಾರಯುತ ಜಯ ಗಳಿಸಿ ಎರಡನೇ ಹಣಾಹಣಿಯಲ್ಲಿ ಮುಗ್ಗರಿಸಿರುವ ಭಾರತ ತಂಡ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ತಿರುಗೇಟು ನೀಡುವ ನಿರೀಕ್ಷೆಯೊಂದಿಗೆ ಮಂಗಳವಾರ ಕಣಕ್ಕೆ ಇಳಿಯಲಿದೆ. ಈ ಪಂದ್ಯದಲ್ಲಿ ಗೆದ್ದರೆ ದಕ್ಷಿಣ ಆಫ್ರಿಕಾದಲ್ಲಿ ಭಾರತಕ್ಕೆ ಮೊದಲ ಸರಣಿ ಜಯ ತಂದುಕೊಟ್ಟ ಶ್ರೇಯಸ್ಸು ವಿರಾಟ್ ಕೊಹ್ಲಿ ಪಡೆಗೆ ಸಿಗಲಿದೆ.

ಬೆನ್ನುನೋವಿನಿಂದಾಗಿ ಎರಡನೇ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಆಡಿರಲಿಲ್ಲ. ವೃತ್ತಿಜೀವನದ 99ನೇ ಟೆಸ್ಟ್ ಆಡಲು ಈಗ ಅವರು ಸಿದ್ಧವಾಗಿದ್ದಾರೆ. 1–1ರಲ್ಲಿ ಸಮಬಲ ಸಾಧಿಸಿರುವ ಉಭಯ ತಂಡಗಳು ನ್ಯೂಲ್ಯಾಂಡ್ಸ್‌ನಲ್ಲಿ ನಡೆಯಲಿರುವ 'ಫೈನಲ್' ಪಂದ್ಯದಲ್ಲಿ ಜಿದ್ದಾಜಿದ್ದಿಯ ಪೈಪೋಟಿಗೆ ಸಜ್ಜಾಗಿವೆ. ಎರಡನೇ ಪಂದ್ಯದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗಗಳಲ್ಲಿ ನಿರೀಕ್ಷಿತ ಮಟ್ಟಕ್ಕೇರಲಾಗದ ಭಾರತ ತಂಡ ಈಗ ಹೊಸ ಹುಮ್ಮಸ್ಸಿನಲ್ಲಿ ಆಡಬೇಕಾಗಿದೆ. ವಿರಾಟ್ ಕೊಹ್ಲಿ ಈ ಹುಮ್ಮಸ್ಸಿಗೆ ಬಲ ತುಂಬಲಿದ್ದಾರೆ.

ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಕಳೆದ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅರ್ಧಶತಕಗಳನ್ನು ಸಿಡಿಸಿರುವುದು ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಭರವಸೆ ಮೂಡಿಸಿದೆ. ಅವಕಾಶ ಪಡೆಯುವ ಹನುಮ ವಿಹಾರಿ ಅವರ ಆಸೆಗೆ ಕಮರಿದೆ. ರಿಷಭ್ ಪಂತ್ ಕೂಡ ತಂಡದ ಭರವಸೆ ಎನಿಸಿದ್ದಾರೆ. ಆದರೆ ಚೆಂಡು ಬೌನ್ಸ್ ಆಗುವ ನ್ಯೂಲ್ಯಾಂಡ್ಸ್ ಪಿಚ್‌ನಲ್ಲಿ ಕಗಿಸೊ ರಬಾಡ, ಲುಂಗಿ ಗಿಡಿ, ಡ್ವಾನೆ ಒಲಿವಿಯರ್ ಹಾಗೂ ಮಾರ್ಕೊ ಜ್ಯಾನ್ಸೆನ್ ಅವರ ಎಸೆತಗಳನ್ನು ಎದುರಿಸಲು ಭಾರತದ ಬ್ಯಾಟರ್‌ಗಳು ಯಾವ ತಂತ್ರ ಬಳಸುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ. ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ತಂಡಕ್ಕೆ ಉತ್ತಮ ಆರಂಭ ಒದಗಿಸುವರೇ ಎಂಬುದು ಕೂಡ ಕೂತೂಹ ಕೆರಳಿಸಿರುವ ಮತ್ತೊಂದು ಪ್ರಶ್ನೆ.

ಸಿರಾಜ್‌ಗಿಲ್ಲ ಸ್ಥಾನ; ಇಶಾಂತ್ ಮೇಲೆ ನಿರೀಕ್ಷೆ: ಅಂತರರಾಷ್ಟ್ರೀಯ ಕ್ರಿಕೆಟ್‌ನ ನಿರ್ಣಾಯಕ ಘಟ್ಟದಲ್ಲಿರುವ ವೇಗಿ ಇಶಾಂತ್ ಶರ್ಮಾ ಅವರಿಗೆ ಈ ಪಂದ್ಯದಲ್ಲಿ ಮರುಪ್ರವೇಶಕ್ಕೆ ಅವಕಾಶ ಸಿಗುವ ಸಾಧ್ಯತೆ ಇದೆ. ಹಿಂದಿನ ಪಂದ್ಯದಲ್ಲಿ ಮಿಂಚಲು ವಿಫಲರಾಗಿರುವ ಜಸ್‌ಪ್ರೀತ್ ಬೂಮ್ರಾ ಬೌಲಿಂಗ್‌ಗೆ ಮೊನಚು ತುಂಬಲು ಪ್ರಯತ್ನಿಸಲಿದ್ದಾರೆ. ಮಂಡಿರಜ್ಜು ನೋವಿನಿಂದ ಬಳಲುತ್ತಿರುವ ಮೊಹಮ್ಮದ್ ಸಿರಾಜ್‌ಗೆ ವಿಶ್ರಾಂತಿ ನೀಡುವ ಸಾಧ್ಯತೆ ಇದೆ.

ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ವಿಭಾಗದಲ್ಲಿ ಡೀನ್ ಎಲ್ಗರ್, ರಸೀ ವ್ಯಾನ್ ಡೆರ್ ಸಸೆನ್ ಹಾಗೂ ತೆಂಬಾ ಬವುಮಾ ಅವರು ದಕ್ಷಿಣ ಆಫ್ರಿಕಾ ತಂಡದಲ್ಲಿ ಮಿಚುತ್ತಿದ್ದಾರೆ.


ವಿರಾಟ್ ಕೊಹ್ಲಿ –ಟ್ವಿಟರ್ ಚಿತ್ರ

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ಕೆ.ಎಲ್.ರಾಹುಲ್, ಮಯಂಕ್ ಅಗರವಾಲ್, ಚೇತೇಶ್ವರ್ ಪೂಜಾರ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಅಜಿಂಕ್ಯ ರಹಾನೆ, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಜಯಂತ್ ಯಾದವ್, ಪ್ರಿಯಾಂಕ್ ಪಾಂಚಾಲ್, ಉಮೇಶ್ ಯಾದವ್, ಹನುಮ ವಿಹಾರಿ, ಇಶಾಂತ್ ಶರ್ಮಾ.

ದಕ್ಷಿಣ ಆಫ್ರಿಕಾ: ಡೀನ್ ಎಲ್ಗರ್ (ನಾಯಕ), ತೆಂಬಾ ಬವುಮಾ, ಕಗಿಸೊ ರಬಾಡ, ಸರೆಲ್ ಎರ್ವಿ, ಬ್ಯೂರನ್ ಹೆನ್ರಿಕ್ಸ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಲುಂಗಿ ಗಿಡಿ, ಏಡನ್ ಮರ್ಕರಮ್, ವಿಯಾನ್ ಮುಲ್ಡರ್, ಕೀಗನ್ ಪೀಟರ್ಸನ್, ರಸಿ ವ್ಯಾನ್ ಡೆರ್ ಡುಸೆನ್, ಕೈಲ್ ವೆರೇನಿ, ಮಾರ್ಕೊ ಜ್ಯಾನ್ಸೆನ್, ಗ್ಲೆಂಟನ್ ಸ್ಟರ್‌ಮ್ಯಾನ್, ಪ್ರೆನೆಲನ್ ಸುಬ್ರಯೆನ್, ಸಿಸಾಂಡ ಮಗಲ, ರಿಯಾನ್ ರಿಕೆಲ್ಟನ್, ಡ್ವಾನೆ ಒಲಿವಿಯರ್.

ಪಂದ್ಯ ಆರಂಭ: ಮಧ್ಯಾಹ್ನ 1.30 (ಭಾರತೀಯ ಕಾಲಮಾನ)


ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನ್ಯೂಲ್ಯಾಂಡ್ಸ್‌ನಲ್ಲಿ ಗರಿಷ್ಠ ಮೊತ್ತ

ತಂಡ	ರನ್	ಎದುರಾಳಿ	ವರ್ಷ
ದಕ್ಷಿಣ ಆಫ್ರಿಕಾ	651	ಆಸ್ಟ್ರೇಲಿಯಾ	2009
ಇಂಗ್ಲೆಂಡ್	6ಕ್ಕೆ629 ಡಿಕ್ಲೇರ್	ದಕ್ಷಿಣ ಆಫ್ರಿಕಾ	2016

ನ್ಯೂಲ್ಯಾಂಡ್ಸ್‌ನಲ್ಲಿ ಉತ್ತಮ ಬೌಲಿಂಗ್

ಬೌಲರ್	ತಂಡ	ಸಾಧನೆ	ಎದುರಾಳಿ	ವರ್ಷ
ಜಾನ್ ಬ್ರಿಗ್ಸ್	ಇಂಗ್ಲೆಂಡ್	11ಕ್ಕೆ8	ದಕ್ಷಿಣ ಆಫ್ರಿಕಾ	1889
ಜಾನ್ ಬ್ರಿಗ್ಸ್	ಇಂಗ್ಲೆಂಡ್	17ಕ್ಕೆ7	ದಕ್ಷಿಣ ಆಫ್ರಿಕಾ	1889
ಜಾನ್ ವಾರ್ಡ್ಲಿ	ಇಂಗ್ಲೆಂಡ್	36ಕ್ಕೆ7	ದಕ್ಷಿಣ ಆಫ್ರಿಕಾ	1957


ಇಶಾಂತ್ ಶರ್ಮಾ –ಟ್ವಿಟರ್ ಚಿತ್ರ

ನ್ಯೂಲ್ಯಾಂಡ್ಸ್‌ನಲ್ಲಿ ಭಾರತ

ಪಂದ್ಯ	ಡ್ರಾ	ಸೋಲು
5	2	3

ನ್ಯೂಲ್ಯಾಂಡ್ಸ್‌ನಲ್ಲಿ ದಕ್ಷಿಣ ಆಫ್ರಿಕಾ

ಪಂದ್ಯ	ಜಯ	ಸೋಲು	ಡ್ರಾ
58	26	21	11

ತಲೈವಾಸ್, ಪ್ಯಾಂಥರ್ಸ್‌ಗೆ ಗೆಲುವು

ಪ್ರೊ ಕಬಡ್ಡಿ ಲೀಗ್: ಮಂಜೀತ್ 'ಸೂಪರ್ 10' ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡ್ ಆಟವಾಡಿದ ತಮಿಳ್ ತಲೈವಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಸೋಮವಾರ ಭರ್ಜರಿ ಜಯ ಗಳಿಸಿತು. ವೈಟ್‌ಫೀಲ್ಡ್‌ನ ಹೋಟೆಲ್ ಶೆರಟಾನ್ ಗ್ರ್ಯಾಂಡ್‌ನಲ್ಲಿ ನಡೆದ ಹಣಾಹಣಿಯಲ್ಲಿ ತಮಿಳ್ ತಲೈವಾಸ್, ಹರಿಯಾಣ ಸ್ಟೀಲರ್ಸ್ ತಂಡವನ್ನು 45–26ರಲ್ಲಿ ಮಣಿಸಿತು.

ರೇಡರ್ ಮಂಜೀತ್ ಸೂಪರ್ 10 ಮೂಲಕ ಮಿಂಚಿದರೆ ರಕ್ಷಣಾ ವಿಭಾಗದ ಇಬ್ಬರು ಸಮರ್ಥ ಆಟಗಾರರಾದ ಸುರ್ಜೀತ್ ಸಿಂಗ್ ಮತ್ತು ಸಾಗರ್ ಅವರು 'ಹೈ ಫೈವ್' ಸಾಧನೆ ಮಾಡಿದರು. ಇವರಿಬ್ಬರೂ ಕ್ರಮವಾಗಿ 8 ಮತ್ತು 7 ಪಾಯಿಂಟ್ ಕಲೆ ಹಾಕಿದರು.

ಮೊದಲಾರ್ಧದಲ್ಲೇ ತಮಿಳ್ ತಲೈವಾಸ್ ಬಿಗಿ ಹಿಡಿತ ಸಾಧಿಸಿತ್ತು. 10 ರೇಡಿಂಗ್ ಪಾಯಿಂಟ್ ಮತ್ತು 9 ಟ್ಯಾಕ್ಲಿಂಗ್ ಪಾಯಿಂಟ್‌ಗಳೊಂದಿಗೆ ತಂಡ 24–18ರ ಮುನ್ನಡೆ ಸಾಧಿಸಿತು. ಸುರ್ಜೀತ್ ಮತ್ತು ಸಾಗರ್ ಮೋಹಕ ಟ್ಯಾಕ್ಲಿಂಗ್ ಮೂಲಕ ಮೊದಲ 5 ನಿಮಿಷಗಳಲ್ಲೇ ಎದುರಾಳಿ ತಂಡವನ್ನು ಆಲ್‌ಔಟ್ ಮಾಡಲು ನೆರವಾದರು. ಮೊದಲಾರ್ಧದ ಮುಕ್ತಾಯಕ್ಕೆ 8 ನಿಮಿಷಗಳು ಉಳಿದಿರುವಾಗ ಹರಿಯಾಣ ಮತ್ತೊಮ್ಮೆ ಆಲೌಟಾಯಿತು. ನಂತರ ವಿಕಾಸ್ ಖಂಡೋಲಾ ಅವರ ಆಟದ ಮೂಲಕ ತಮಿಳ್ ತಲೈವಾಸ್ ಕೂಡ ಆಲೌಟಾಯಿತು. ದ್ವಿತೀಯಾರ್ಧದಲ್ಲೂ ತಲೈವಾಸ್ ಆಧಿಪತ್ಯ ಮುಂದುವರಿಸಿತು. 3ನೇ ನಿಮಿಷದಲ್ಲೇ ಎದುರಾಳಿಗಳ ಅಂಗಣ ಖಾಲಿಯಾಯಿತು. ಪಂದ್ಯದ ಮುಕ್ತಾಯಕ್ಕೆ 5 ನಿಮಿಷಗಳು ಇರುವಾಗ ಸ್ಟೀಲರ್ಸ್ ಅಂಗಣ ಮತ್ತೊಮ್ಮೆ ಖಾಲಿಯಾಯಿತು. ಹೀಗಾಗಿ ತಲೈವಾಸ್ ಜಯ ಖಚಿತವಾಯಿತು.

ಜೈಪುರಕ್ಕೆ ರೋಚಕ ಗೆಲುವು: ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 30–28ರಲ್ಲಿ ದಬಂಗ್ ಡೆಲ್ಲಿಯನ್ನು ಮಣಿಸಿತು. ದೀಪಕ್ ಹೂಡಾ (9 ಪಾಯಿಂಟ್), ಸಾಹುಲ್ ಕುಮಾರ್ (8 ಪಾಯಿಂಟ್) ಮತ್ತು ಅರ್ಜುನ್ ದೇಶ್ವಾಲ್ (7 ಪಾಯಿಂಟ್) ಜೈಪುರ್ ಪರವಾಗಿ ಮಿಂಚಿದರೆ ಡೆಲ್ಲಿಗಾಗಿ ಆಶು ಮಲಿಕ್ 8, ನವೀನ್ ಕುಮಾರ್ 7 ಮತ್ತು ಮಂಜೀತ್ ಚಿಲ್ಲಾರ್ 4 ಪಾಯಿಂಟ್ ತಂದುಕೊಟ್ಟರು.


ತಮಿಳ್ ತಲೈವಾಸ್‌ನ ಮಂಜೀತ್ ಅವರು ಪಾಯಿಂಟ್ ಗಳಿಸಲು ಪ್ರಯತ್ನಿಸಿದರು

ಇಂದಿನ ಪಂದ್ಯ (ರಾತ್ರಿ)

ಪಟ್ನಾ ಪೈರೇಟ್ಸ್ Vs ಯು ಮುಂಬಾ – 7.30

ತೆಲುಗು ಟೈಟನ್ಸ್ Vs ಗುಜರಾತ್ ಜೈಂಟ್ಸ್ – 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	8	5	1	2	32
ಪಟ್ನಾ ಪೈರೇಟ್ಸ್	7	5	1	1	29
ಬೆಂಗಳೂರು ಬುಲ್ಸ್	8	5	2	1	28
ತಮಿಳ್ ತಲೈವಾಸ್	8	3	1	4	27
ಯು ಮುಂಬಾ	7	3	1	3	25
ಜೈಪುರ್ ಪಿಂಕ್ ಪ್ಯಾಂಥರ್ಸ್	8	4	4	-	23
ಯುಪಿ ಯೋಧಾ	8	2	4	2	20
ಹರಿಯಾಣ ಸ್ಟೀಲರ್ಸ್	8	3	4	1	20
ಬೆಂಗಾಲ್ ವಾರಿಯರ್ಸ್	8	3	5	-	17
ಪುಣೇರಿ ಪಲ್ಟನ್	8	3	5	-	16
ಗುಜರಾತ್ ಜೈಂಟ್ಸ್	7	1	4	2	15
ತೆಲುಗು ಟೈಟನ್ಸ್	7	-	5	2	10

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಬೌಲ್ಟ್ ದಾಳಿಗೆ ಬಾಂಗ್ಲಾ ತತ್ತರ

ಕ್ರೈಸ್ಟ್ ಚರ್ಚ್, ನ್ಯೂಜಿಲೆಂಡ್ (ಎಎಫ್‌ಪಿ): ವೇಗದ ಬೌಲರ್ ಟ್ರೆಂಟ್ ಬೌಲ್ಟ್ (43ಕ್ಕೆ5) ಅವರ ಭರ್ಜರಿ ದಾಳಿಗೆ ಬಾಂಗ್ಲಾದೇಶ ಬ್ಯಾಟರ್‌ಗಳು ನಿರುತ್ತರ-ರಾದರು. ಇದರ ಪರಿಣಾಮ, ಎರಡನೇ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ಭರ್ಜರಿ ಮುನ್ನಡೆ ಸಾಧಿಸಿತು. 5 ವಿಕೆಟ್ ಉರುಳಿಸಿದ ಬೌಲ್ಟ್ ದಾಳಿಯಿಂದಾಗಿ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 126 ರನ್‌ಗಳಿಗೆ ಆಲೌಟಾಯಿತು. ಈ ಮೂಲಕ ಆತಿಥೇಯ ತಂಡಕ್ಕೆ 395 ರನ್‌ಗಳ ಮುನ್ನಡೆ ಬಿಟ್ಟುಕೊಟ್ಟಿತು.

ಟಾಮ್ ಲಥಾಮ್ (252; 373 ಎಸೆತ, 34 ಬೌಂಡರಿ, 2 ಸಿಕ್ಸರ್) ಅವರ ದ್ವಿಶತಕ ಮತ್ತು ಡೇವಾನ್ ಕಾನ್ವೆ (109; 166 ಎ, 12 ಬೌಂ, 1 ಸಿ) ಅವರ ಭರ್ಜರಿ ಆಟವಾಡಿದರು. ಹೀಗಾಗಿ ನ್ಯೂಜಿಲೆಂಡ್ 6 ವಿಕೆಟ್‌ಗಳಿಗೆ 521 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿತು.

ಬಾಂಗ್ಲಾದೇಶದ ಪರ ಯಾಸಿರ್ ಅಲಿ (55; 95 ಎ, 7 ಬೌಂ) ಮತ್ತು ನೂರುಲ್ ಹಸನ್ (41, 62 ಎ, 6 ಬೌಂ) ಸ್ವಲ್ಪ ಪ್ರತಿರೋಧ ಒಡ್ಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 128.5 ಓವರ್‌ಗಳಲ್ಲಿ 6ಕ್ಕೆ 521 ಡಿಕ್ಲೇರ್ (ಟಾಮ್ ಲಥಾಮ್ 252, ಡೇವಾನ್ ಕಾನ್ವೆ 109, ರಾಸ್ ಟೇಲರ್ 28, ಟಾಮ್ ಬ್ಲಂಡೆಲ್ ಔಟಾಗದೆ 57; ಷರೀಫುಲ್ ಇಸ್ಲಾಂ 79ಕ್ಕೆ2, ಇಬಾದತ್ ಹೊಸೇನ್ 143ಕ್ಕೆ2, ಮೊಮಿನುಲ್ ಹಕ್ 34ಕ್ಕೆ1); ಬಾಂಗ್ಲಾದೇಶ: 41.2 ಓವರ್‌ಗಳಲ್ಲಿ 126 (ಯಾಸಿರ್ ಅಲಿ 55, ನೂರುಲ್ ಇಸ್ಲಾಂ 41; ಟಿಮ್ ಸೌಥಿ 28ಕ್ಕೆ3, ಟ್ರೆಂಟ್ ಬೌಲ್ಟ್ 43ಕ್ಕೆ5, ಕೈಲ್ ಜೆಮೀಸನ್ 32ಕ್ಕೆ2).

ಮುಂಬೈ ಮಣಿಸಿದ ಬಿಎಫ್‌ಸಿ

ಫತೋರ್ಡ, ಗೋವಾ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಭರ್ಜರಿ ಜಯ ಗಳಿಸಿತು.

ಪ್ರಿನ್ಸ್ ಇಬಾರ ಗಳಿಸಿದ 2 ಗೋಲುಗಳ ಬಲದಿಂದ ತಂಡ 3–0ಯಿಂದ ಮುಂಬೈ ಎದುರು ಗೆದ್ದಿತು. ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವ ಮುಂಬೈ ಕನಸು ಭಗ್ನಗೊಂಡಿತು.

ಬಿಎಫ್‌ಸಿಗೆ 8ನೇ ನಿಮಿಷದಲ್ಲಿ ಡ್ಯಾನಿಷ್ ಫಾರೂಕ್ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಪ್ರಿನ್ಸ್ ಇಬಾರ 23ನೇ ನಿಮಿಷದಲ್ಲಿ ರೋಷನ್ ನೌರೆಮ್ ನೀಡಿದ ಸುಂದರ ಪಾಸ್‌ನಲ್ಲಿ ಗೋಲು ಗಳಿಸಿದರು ಮೊದಲಾರ್ಧದ ಮುಕ್ತಾಯದ ಕೊನೆಯ ನಿಮಿಷದಲ್ಲಿ ಮತ್ತೊಮ್ಮೆ ಯಶಸ್ಸು ಕಂಡರು.

ಫಿಫಾ: ಕಿರಣ ಕುಲಕರ್ಣಿ ನೇಮಕ

ಬೆಂಗಳೂರು: ಕತಾರ್‌ನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಏಷ್ಯಾ ವಲಯ ಮೂರನೇ ಸುತ್ತಿನ ಅರ್ಹತಾ ಪಂದ್ಯಕ್ಕೆ ವೈದ್ಯಾಧಿ-ಕಾರಿಯಾಗಿ ಧಾರವಾಡದ ಡಾ.ಕಿರಣ ಕುಲಕರ್ಣಿ ಅವರನ್ನು ನೇಮಕ ಮಾಡಲಾಗಿದೆ.

ಪಂದ್ಯ ಇದೇ 27ರಂದು ಸೌದಿ ಅರೇಬಿಯದ ಕಿಂಗ್ ಅಬ್ದುಲ್ಲ ಸ್ಪೋರ್ಟ್ಸ್ ಸಿಟಿ ಕ್ರೀಡಾಂಗಣ-ದಲ್ಲಿ ನಡೆಯಲಿದೆ. 'ಬಿ' ಗುಂಪಿನ ಈ ಪಂದ್ಯದಲ್ಲಿ ಸೌದಿ ಅರೇಬಿಯಾ ಮತ್ತು ಒಮಾನ್ ಸೆಣಸಲಿವೆ.


ಕಿರಣ ಕುಲಕರ್ಣಿ

ಕೆಪಿಎಲ್ ಬೆಟ್ಟಿಂಗ್: ದೋಷಾರೋಪ ಪಟ್ಟಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ನಡೆದಿದೆ ಎನ್ನಲಾದ ಮ್ಯಾಚ್ ಫಿಕ್ಸಿಂಗ್ ಆರೋಪಕ್ಕೆ ಸಂಬಂಧಿಸಿ ಬೆಳಗಾವಿ ಪ್ಯಾಂಥರ್ಸ್ ಮಾಲೀಕ ಅಷ್ಫಾಕ್ ಅಲಿ ವಿರುದ್ಧದ ದೋಷಾರೋಪ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದೆ. ಅಲಿ ಅಷ್ಫಾಕ್ ಅಲಿಯಾಸ್ ಅಷ್ಫಾಕ್ ಹನೀಫ್ ತಾರಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮಾನ್ಯ ಮಾಡಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ, 'ಅಷ್ಫಾಕ್ ವಿರುದ್ಧ ಹೊರಿಸಲಾದ ಆರೋಪ ಆಧಾರರಹಿತ. ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ ಸಿಸಿಬಿ ಪೊಲೀಸರು ವಿಫಲವಾಗಿದ್ದಾರೆ. ಇಂತಹ ಆರೋಪಗಳಿಗೆ ಸಂಬಂಧಿಸಿದಂತೆ ಈತನಕ ಕಾನೂನು ರಚನೆಯಾಗಿಲ್ಲ. ಆದ್ದರಿಂದ, ಈ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಕೋರಿದ್ದರು.

ಪ್ರಕರಣವೇನು?: 2019ರಲ್ಲಿ ನಡೆದ ಬಳ್ಳಾರಿ ಟಸ್ಕರ್ಸ್ ಮತ್ತು ಹುಬ್ಬಳ್ಳಿ ಟೈಗರ್ಸ್ ತಂಡಗಳ ನಡುವಿನ ಫೈನಲ್‌ನಲ್ಲಿ ಬೆಟ್ಟಿಂಗ್ ನಡೆಸಲಾದ ಆರೋಪಕ್ಕೆ ಸಂಬಂಧಿಸಿ ಆರೋಪ ಹೊರಿಸಲಾಗಿತ್ತು. ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು ಭಾರತೀಯ ದಂಡ ಸಂಹಿತೆ–1860ರ ಕಲಂ 420, 120–ಬಿ ಅಡಿಯಲ್ಲಿ ತನಿಖೆ ನಡೆಸಿದ್ದರು. 2020ರ ಫೆ. 5ರಂದು 1ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಹಾಕಿ: ಟಾಪ್‌ಗೆ ರಾಜ್ಯದ 6 ಆಟಗಾರ್ತಿಯರು ಆಯ್ಕೆ

ಬೆಂಗಳೂರು: ಕರ್ನಾಟಕದ ಆರು ಆಟಗಾರ್ತಿಯರು ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಂ ಯೋಜನೆಯಡಿ (ಟಾಪ್) ಮಹಿಳಾ ಜೂನಿಯರ್ ಹಾಕಿ ತರಬೇತಿಗೆ ಆಯ್ಕೆಯಾಗಿದ್ದಾರೆ. ಹಾಕಿ ಕರ್ನಾಟಕ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದೆ. ಇವರೆಲ್ಲರೂ ರಾಜ್ಯದ 19 ವರ್ಷದೊಳಗಿನವರ ತಂಡದ ಆಟಗಾರ್ತಿಯರು.

ಬೆಂಗಳೂರಿನಲ್ಲಿ ಭಾರತ ಕ್ರೀಡಾ ಪ್ರಾಧಿಕಾರದ ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿಯು ಇದೇ 17ರಿಂದ 29ರವರೆಗೆ ನಡೆಯಲಿದೆ. ಆಯ್ಕೆಯಾದವರು ಹಾಕಿ ಇಂಡಿಯಾ ಆಯೋಜಿಸಿದ್ದ ರಾಷ್ಟ್ರೀಯ ಜೂನಿಯರ್ ಟೂರ್ನಿಯಲ್ಲಿ ಆಡಿದ್ದರು. ದೇಶದ ಒಟ್ಟು 60 ಆಟಗಾರ್ತಿಯರನ್ನು ಆಯ್ಕೆ ಮಾಡಲಾಗಿದ್ದು ಇವರ ಪೈಕಿ 33 ಮಂದಿಯನ್ನು ಆರಿಸಿ ವಿಶೇಷ ತರಬೇತಿ ನೀಡಲಾಗುತ್ತದೆ.

ತರಬೇತಿಗೆ ಆಯ್ಕೆಯಾದವರು: ಜೆ.ಚಂದನಾ, ಡಿ.ಎನ್.ತೇಜಸ್ವಿನಿ, ಎಸ್. ಆದಿರಾ (ಡಿವೈಇಎಸ್ ಮೈಸೂರು), ಬಿ.ಎ. ಶಾಯ ಕಾವೇರಮ್ಮ, ಎಸ್.ಪಿ. ಲಿಖಿತಾ ಮತ್ತು ದೇಚಮ್ಮ ಗಣಪತಿ (ಸಾಯ್, ಎಸ್‌ಟಿಸಿ ಮಡಿಕೇರಿ).


ಎಸ್. ಆದಿರಾ


ಚಂದನಾ


ದೇಚಮ್ಮ


ಶಾಯ


ತೇಜಸ್ವಿನಿ


ಲಿಖಿತಾ

ಬೆಂಗಳೂರು ರೇಸ್

ಅಲಿಸಿಯಾ ಗೆಲ್ಲುವ ನಿರೀಕ್ಷೆ

ಬೆಂಗಳೂರು ಓಕ್ಸ್ ಮಂಗಳವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಲಿಸಿಯಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಓಷನ್ ಡ್ಯೂನ್ಸ್ 2, ಅಹರ್ನೆ 3, ರೇವನ್ ರಾಕ್ 5
2ನೇ ರೇಸ್: ಪ್ರಿನ್ಸೆಸ್ ಗ್ಲೋರಿಯಾ 3, ಸೀಕ್ರೆಟ್ ಆಫ್ ಲೈಫ್ 4, ಅಕಸ್ಟರ್ 2
3ನೇ ರೇಸ್: ರಿಕಾಲ್ ಆಫ್ ಯೂ 7, ಏಸೆರಾಸ್ 10, ಸಿಲ್ವರ್ ಡ್ಯೂ 1
4ನೇ ರೇಸ್: ಶೀ ಈಸ್ ಮೈ ಸ್ಕ್ರಿಪ್ಟ್ 3, ಬೆಲ್ಲಾಟರ್ 1
5ನೇ ರೇಸ್: ಅಲಿಸಿಯಾ 1, ಎಟರ್ನಲ್ ಬ್ಲೇಜ್ 3, ಟೆರೆಸಿಟಾ 9
6ನೇ ರೇಸ್: ವಿಂಡ್‌ಸ್ಟಾರ್ಮ್ 3, ಆರ್ಮರಿ 2, ಪ್ರಿನ್ಸ್ ಅಭೀರ್ 1
7ನೇ ರೇಸ್: ಗ್ಯಾಲಕ್ಟಿಕಲ್ 1, ಮಿಲ್‌ಬ್ರೂಕ್ 5, ಶನಾನೇ 6

ಉತ್ತಮ ಬೆಟ್: ಶೀ ಈಸ್ ಮೈ ಸ್ಕ್ರಿಪ್ಟ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	2,3,4	5,6,7

ಅಹಮದಾಬಾದ್‌ಗೆ ಹಾರ್ದಿಕ್ ನಾಯಕ?

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಹೊಸದಾಗಿ ಸೇರ್ಪಡೆಗೊಂಡಿರುವ ಸಿವಿಸಿ ಮಾಲೀಕತ್ವದ ಅಹಮದಾಬಾದ್ ತಂಡವನ್ನು ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ ಮುನ್ನಡೆಸುವ ಸಾಧ್ಯತೆ ಇದೆ. ಹಾರ್ದಿಕ್ ತಂಡವನ್ನು ಸೇರಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಹಸಿರು ನಿಶಾನೆ ತೋರಿದೆ. ಹರಾಜಿಗಿಂತ ಮೊದಲು ಲಭ್ಯ ಇರುವ ಆಟಗಾರರ ಪೈಕಿ ತಲಾ ಮೂವರನ್ನು ಸೇರಿಸಿಕೊಳ್ಳಲು ಈ ಬಾರಿ ಹೊಸದಾಗಿ ಸೇರಿಕೊಂಡಿರುವ ಅಹಮದಾಬಾದ್ ಮತ್ತು ಲಖನೌ ತಂಡಗಳಿಗೆ ಅವಕಾಶ ನೀಡಲಾಗಿದೆ.


ಹಾರ್ದಿಕ್ ಪಾಂಡ್ಯ

ಬಾಗಿಲು ಮುಚ್ಚಲಿರುವ ಸಾಯ್ ಕೇಂದ್ರಗಳು

ನವದೆಹಲಿ (ಪಿಟಿಐ): ದೇಶದಾದ್ಯಂತ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ 67 ತರಬೇತಿ ಕೇಂದ್ರಗಳನ್ನು ಮುಚ್ಚಲು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ನಿರ್ಧರಿಸಿದೆ. ಆದರೆ ಎಲೀಟ್ ಅಥ್ಲೀಟ್‌ಗಳ ರಾಷ್ಟ್ರೀಯ ಶಿಬಿರಗಳು ಬಯೋಬಬಲ್ ವ್ಯವಸ್ಥೆಯಲ್ಲಿ ಮುಂದುವರಿಯಲಿವೆ.

ಪರಿಸ್ಥಿತಿಯನ್ನು ಅವಲೋಕಿಸಿ ಸೂಕ್ತ ಸಮಯದಲ್ಲಿ ತರಬೇತಿ ಕೇಂದ್ರಗಳನ್ನು ಪುನರಾರಂಭಿಸಲಾಗುತ್ತದೆ.

ಹರಿತ್‌ಗೆ 26ನೇ ಸ್ಥಾನ

ವಾಡಿ ಅಡ್ ದವಾಸಿರ್, ಸೌದಿ ಅರೇಬಿಯಾ (ಪಿಟಿಐ): ಭಾರತದ ಹರಿತ್ ನೋಹ್, ಡಕಾರ್ ರ್‍ಯಾಲಿಯ 8 ಸುತ್ತುಗಳ ಮುಕ್ತಾಯಕ್ಕೆ 26ನೇ ಸ್ಥಾನ ಗಳಿಸಿದ್ದಾರೆ. 8ನೇ ಸುತ್ತನ್ನು 4 ತಾಸು 12.30 ನಿಮಿಷಗಳಲ್ಲಿ ಪೂರ್ಣಗೊಳಿಸಿದ ಅವರು ಒಟ್ಟಾರೆ 29 ತಾಸು 50 ನಿ. 47 ಸೆಕೆಂಡುಗಳ ಸಾಧನೆ ಮಾಡಿದ್ದಾರೆ. ರ್‍ಯಾಲಿಯಲ್ಲಿ ಪಾಲ್ಗೊಂಡಿರುವ ಭಾರತದ ಏಕೈಕ ಚಾಲಕ ಹರಿತ್.





